ಕರ್ನಾಟಕ ಸರ್ಕಾರ

# ಮೈಸೂರು ಚಾಮುಂಡೇಶ್ವರಿ ದೇವಸ್ಥಾನ

## ಒಂದು ಸಾಮಾಜಿಕ ಅಧ್ಯಯನ

ಲೇಖಕರು

**ಬಿ.ಬಿ.ಗೋಸ್ವಾಮಿ, ಎಸ್.ಜಿ.ಮೊರಬ**

ಅನುವಾದ

**ಮಹೇಶ ತಿಪ್ಪಶೆಟ್ಟಿ**



ಕನ್ನಡ ಪುಸ್ತಕ ಪ್ರಾಧಿಕಾರ

# ಮೈಸೂರು ಚಾಮುಂಡೇಶ್ವರಿ ದೇವಸ್ಥಾನ

ಒಂದು ಸಾಮಾಜಿಕ ಅಧ್ಯಯನ

ಲೇಖಕರು

**ಬಿ.ಬಿ. ಗೋಸ್ವಾಮಿ, ಎಸ್.ಜಿ. ಮೊರಬ**

ಅನುವಾದ

**ಮಹೇಶ ತಿಪ್ಪಶೆಟ್ಟಿ**

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು-18

**MYSORU CHAMUNDESWARI DEVASTHANA :**
–A note on Chamundeswari temple of Mysore-by B.B. Goswami and S.G. Moraba, Translated by Mahesh Thippasetty and Publishere by : Administrative Officer, **Kannada Pustaka Pradhikara,** Kannada Bhavana, J.C. Road, Bangalore-560 002.

ಪ್ರಥಮ ಮುದ್ರಣ : 2001

ಪ್ರತಿಗಳು : 1000

ವರ್ಷ : 2001

ಪುಟಗಳು : 88

ಈ ಆವೃತ್ತಿಯ ಗ್ರಂಥ ಸ್ವಾಮ್ಯ : **ಕನ್ನಡ ಪುಸ್ತಕ ಪ್ರಾಧಿಕಾರ**

ಬೆಲೆ : 25/-

ಐ.ಎಸ್.ಬಿ.ಎನ್. : 81-7713-072-2

ಮುಖಪುಟ ವಿನ್ಯಾಸ : ಯು.ಟಿ. ಸುರೇಶ್

ಮುದ್ರಣ :

**ರಶ್ಮಿ ಮುದ್ರಣ,**
ಸುಧಾಮನಗರ,
ಬೆಂಗಳೂರು-560 027.

**ಸಂಪಾದಕ ಸಮಿತಿ**

| | | |
|---|---|---|
| ಡಾ॥ ಎಚ್.ಜೆ. ಲಕ್ಕಪ್ಪಗೌಡ | : | ಅಧ್ಯಕ್ಷರು |
| ಪ್ರೊ॥ ಎಂ.ಎಚ್. ಕೃಷ್ಣಯ್ಯ | : | ಸಂಪಾದಕರು |
| ಪ್ರೊ॥ ಸಿ. ವೀರಣ್ಣ | : | ಸಂಪಾದಕರು |
| ವಿ.ಎನ್. ಮಲ್ಲಿಕಾರ್ಜುನಸ್ವಾಮಿ | : | ಸಂಚಾಲಕರು |

# ಮುನ್ನುಡಿ

ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆಗಳಿಂದಾಗಿ ಜಗತ್ತು ಕಿರಿದಾಗುತ್ತಾ ಬರುತ್ತಿದೆ. ಆಧುನಿಕ ಸಂಪರ್ಕ ಮಾಧ್ಯಮಗಳು ಅಸ್ತಿತ್ವದಲ್ಲಿಲ್ಲದಿದ್ದ ಕಾಲದಲ್ಲಿ ಮತ್ತು ರಾಜಕೀಯ ಹಾಗೂ ಸಾಂಸ್ಕೃತಿಕ ನಾಗರಿಕತೆಗಳು ಮತ್ತು ಭಾಷೆಗಳು ಪ್ರತ್ಯೇಕವಾಗಿಯೇ ಬೆಳೆಯುತ್ತ ಒಂದಕ್ಕೊಂದು ಸಂಬಂಧ ಮತ್ತು ಸಾಹಚರ್ಯಗಳನ್ನು ಅಷ್ಟಾಗಿ ಹೊಂದದೆ ದುರವಗಾಹ್ಯವಾದ ದ್ವೀಪಗಳಾಗಿ ಪರಿಣಮಿಸಿದ್ದವು. ಒಂದು ರಾಷ್ಟ್ರದ ಭಾಷೆ, ಸಾಹಿತ್ಯ, ಸಂಸ್ಕೃತಿಗಳು ಬೇರೊಂದು ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೇಲೆ ಪ್ರಭಾವ ಬೀರುವುದಾಗಲೀ ಅಥವಾ ಪ್ರಭಾವವನ್ನು ಪಡೆಯುವುದಾಗಲೀ ಬಹುಮಟ್ಟಿಗೆ ಅಸಾಧ್ಯವಾಗಿದ್ದುದರಿಂದ ಆಯಾ ಭಾಷೆ ಮತ್ತು ಸಂಸ್ಕೃತಿಗಳಲ್ಲಿ ಮೈವೆತ್ತ ಸಾಹಿತ್ಯಕೃತಿಗಳು ತಮಗೆ ತಾವೇ ಸ್ವಾತಂತ್ರವೂ, ಪ್ರತ್ಯೇಕವೂ ಆಗಿ ಬೆಳೆಯುತ್ತಿದ್ದುದರಿಂದ ಅವುಗಳ ಮೌಲ್ಯಮಾಪನ ಮತ್ತು ವಿಮರ್ಶೆ ಕೂಡ ಆ ಭಾಷೆ ಮತ್ತು ಸಂಸ್ಕೃತಿಗಳಿಗೆ ಮಾತ್ರ ನಿಟ್ಟಿನಲ್ಲಿ ಅವುಗಳನ್ನು ಅಭ್ಯಸಿಸುವುದು, ಗುಣದೋಷಗಳನ್ನು ಮತ್ತು ವಿಶಿಷ್ಟತೆಗಳನ್ನು ನಿರ್ದಿಷ್ಟವಾಗಿ ವಿಶ್ಲೇಷಿಸುವುದು ಅಸಾಧ್ಯವಾಗಿತ್ತು. ಆದರೆ ವಿಜ್ಞಾನ ಮತ್ತು ನಾಗರಿಕತೆಗಳು ಬೆಳೆಬೆಳೆದಂತೆಲ್ಲ ಈ ಸಂಪರ್ಕ ಸಾಹಿತ್ಯ ಸ್ಥಿತಿ ಕೊನೆಗೊಳ್ಳುತ್ತ ಒಂದು ರಾಷ್ಟ್ರದ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ನಾಗರಿಕತೆಗಳಲ್ಲಾದ ತೀವ್ರ ಮಾರ್ಪಾಡು ಬಲುಬೇಗನೆ ಪ್ರಪಂಚದ ಇತರ ರಾಷ್ಟ್ರಗಳ ವಿವಿಧ ರಂಗಗಳ ಮೇಲೂ ತನ್ನ ನೆರಳು– ಬೆಳಕುಗಳನ್ನು ಬೀರಿದ ಕಾರಣದಿಂದಾಗಿ ಸೀಮಿತ ವಲಯದಲ್ಲಿ ಮೋಕ್ಷ ಕಾಣುತ್ತಿದ್ದ ಈ ಕ್ಷೇತ್ರಗಳು ಪ್ರಪಂಚದ ಗಮನ ಗೌರವಗಳನ್ನು ತಮ್ಮತ್ತ ಸೆಳೆದುಕೊಳ್ಳತೊಡಗಿದವು. ಹೀಗಾಗಿ ಒಂದು ದೇಶದ ವಿವಿಧ ಕ್ಷೇತ್ರಗಳಲ್ಲಿ ಆದ ಮಹತ್ವದ ಸಾಧನೆಗಳನ್ನು ಮತ್ತೊಂದು ರಾಷ್ಟ್ರದ ಸಾಧನೆಗಳ ಜೊತೆಯಲ್ಲಿಟ್ಟು ಪರಸ್ಪರ ತುಲನೆ ಮಾಡುವ, ಮತ್ತು ಆ ಮೂಲಕ ಆಯಾ ದೇಶದ ವಿಶಿಷ್ಟತೆಯ ಜೊತೆಗೆ ಅದರ ಸಾಧನೆಗಳ ಎತ್ತರ ಬಿತ್ತರಗಳನ್ನು ಸಾಪೇಕ್ಷ ದೃಷ್ಟಿಕೋನದಿಂದ ಅಳೆಯುವ ಪ್ರವೃತ್ತಿ ಆರಂಭವಾಯಿತು; ಈ ಕಾರಣದಿಂದ ಸೀಮಿತವಾದ ಮನುಷ್ಯನ ದೃಷ್ಟಿಕೋನ ವಿಶಾಲವಾಗಿ ಬೆಳೆಯತೊಡಗಿತು. ಪ್ರಾದೇಶಿಕವಾಗಿ ಮಹತ್ವವೆನಿಸಿದ್ದು ಜಾಗತಿಕವಾಗಿಯೂ ಮಹತ್ವಪೂರ್ಣವಾದದ್ದೇ ? ಅಥವಾ ಮಹತ್ವಪೂರ್ಣವಾಗಲು ಸಾಧ್ಯವೇ ? ಮತ್ತು ಆ ಮಹತ್ತನ್ನು ನಿರ್ಧರಿಸುವ ಲೋಕಸಾಮಾನ್ಯ ಮಾನದಂಡಗಳು ಯಾವುವು ಎಂಬುದನ್ನು ಕಂಡುಕೊಳ್ಳುವ ಜಿಜ್ಞಾಸೆ ಆರಂಭವಾಯಿತು. ಇದು ಜಗತ್ತಿನ ಜ್ಞಾನದ ಪರಿಧಿಯನ್ನು ಅದ್ಭುತವಾಗಿ ವಿಸ್ತರಿಸಿತು.

ಈ ಹಿನ್ನೆಲೆಯಲ್ಲಿ ಒಂದು ದೇಶದ ಒಂದು ಭಾಷೆಯ ಸಾಹಿತ್ಯ ಕೃತಿ ಇನ್ನೊಂದು ದೇಶದ ಇನ್ನೊಂದು ಭಾಷೆಯ ಸಾಹಿತ್ಯಕೃತಿಯೊಡನೆ ತುಲನೆಗೆ ನಿಂತಾಗ ಅದರ ಸ್ಥಾನಮಾನಗಳು ಏರುಪೇರಾದವು. ಓದುಗನ ಸಾಹಿತ್ಯ ದೃಷ್ಟಿ ವಿಕಾಸವಾಯಿತು. ಇದರಿಂದ ಓದುಗರಲ್ಲಿ ಮತ್ತು ವಿಮರ್ಶಕರಲ್ಲಿ ತೌಲನಿಕ ದೃಷ್ಟಿ ವಿಕಸಿತವಾಗಿ ಭಿನ್ನಭಿನ್ನ ಸಂಸ್ಕೃತಿ ಮತ್ತು ಸಾಹಿತ್ಯಗಳನ್ನು ಈ ತೌಲನಿಕ ಅಭ್ಯಾಸದಿಂದ ಪಕ್ವ ವಿಮರ್ಶನ ದೃಷ್ಟಿಯಿಂದ ಅಭ್ಯಾಸ ಮಾಡುವುದು ಮತ್ತು ಅವುಗಳ ಸಹಜವಾದ ನೆಲೆ– ಬೆಲೆಗಳನ್ನು ನಿರ್ಧರಿಸುವುದು ಸಾಧ್ಯವಾಯಿತು. ಏಕಮುಖವಾದ ಮತ್ತು

ಏಕಭಾಷೆಯ ಸೀಮಿತ ದೃಷ್ಟಿಕೋನ ಬಹುಮುಖೀಯ ಮತ್ತು ಬಹುಭಾಷೀಯ ದೃಷ್ಟಿಕೋನವಾಗಿ ವಿಸ್ತಾರಗೊಂಡಿತು. ಈ ಅನುಭವ ಮತ್ತು ದೃಷ್ಟಿ ವಿಸ್ತಾರಗೊಳ್ಳಬೇಕಾದರೆ ಒಂದು ಭಾಷೆಯ ಪ್ರಮುಖ ಕೃತಿಗಳಾದರೂ ಇನ್ನೊಂದು ಭಾಷೆಗೆ ಅನುವಾದಗೊಳ್ಳುವುದು ಅನಿವಾರ್ಯ. ಒಂದು ಭಾಷೆಗಿಂತ ಎರಡು ಭಾಷೆಯ, ಎರಡು ಭಾಷೆಗಿಂತ ಬಹುಭಾಷೆಯ ಅರಿವು ಸಾಧ್ಯವಾದಾಗ ಆ ಭಾಷೆಗಳಲ್ಲಿ ಸೃಷ್ಟಿಯಾಗುವ ಸಾಹಿತ್ಯ ಕ್ರಮಕ್ರಮೇಣ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಪ್ರಪಂಚ ವ್ಯಾಪಕವಾಗಿ ಬೆಳೆಯುತ್ತದೆ. ಇಂತಹ ವ್ಯಾಪಕವಾದ ಅರಿವಿಗೆ ಅನುವಾದ ಕಾರ್ಯ ಮಹತ್ವದ ಕಾಣಿಕೆಯನ್ನು ನೀಡುತ್ತದೆ.

ಭಾರತದ ರಾಮಾಯಣ, ಭಾರತ ಮುಂತಾದ ಮಹಾಕೃತಿಗಳು ಜಗತ್ತಿನ ಇತರ ರಾಷ್ಟ್ರಗಳ ಗಮನ ಗೌರವಗಳನ್ನು ಸೆಳೆದುಕೊಂಡಿದ್ದರೆ, ಅದಕ್ಕೆ ಕಾರಣ ಜಗತ್ತಿನ ಬಹುಭಾಷೆಗಳಿಗೆ ಇವು ಅನುವಾದಗೊಂಡಿರುವುದು. ಹಾಗೆಯೇ ಬೈಬಲ್, ಖುರಾನ್ ಮುಂತಾದ ಧರ್ಮಗ್ರಂಥಗಳಾಗಲೀ ಜಗತ್ತಿನ ಬೇರೆ ಬೇರೆ ಭಾಷೆಗಳ ವಿವಿಧ ಲ;ಪ್ರಕಾರದ ಸಾಹಿತ್ಯವಾಗಲೀ ಭಾರತೀಯರ ಅರಿವಿಗೆ ಬಂದದ್ದೂ ಕೂಡ ಅನುವಾದಗಳ ಮೂಲಕವಾಗಿಯೇ. ಅನುವಾದದ ಮೂಲಕ ಜಗತ್ತಿನ ಇತರ ಭಾಗಗಳಲ್ಲಿ ಜ್ಞಾನ, ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಸಾಧನೆಗಳನ್ನು ತಿಳಿದುಕೊಂಡು ನಮ್ಮ ಜ್ಞಾನದ ದಿಗಂತವನ್ನು ವಿಸ್ತರಿಸಿಕೊಳ್ಳಬಹುದಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರವು ಈ ತೌಲನಿಕ ಅಭ್ಯಾಸ ಮತ್ತು ಅನುವಾದದ ಫಲಿತವಾಗಿ ಕಾಲದಿಂದ ಕಾಲಕ್ಕೆ ಅರ್ಥಪೂರ್ಣವಾಗಿ ಬೆಳೆಯುತ್ತ ತನ್ನ ಪಾತ್ರವನ್ನು ವಿಸ್ತರಿಸಿಕೊಳ್ಳುತ್ತ ಬಂದಿದೆ. ಇಂಗ್ಲಿಷ್, ಫ್ರೆಂಚ್, ರಷ್ಯನ್ ಮುಂತಾದ ಅನ್ಯರಾಷ್ಟ್ರೀಯ ಭಾಷೆಗಳ ಹಾಗೂ ತನ್ನ ಕೃತಿಗಳನ್ನು ಬೇರೆ ಬೇರೆ ಭಾಷೆಗಳ ಮಾಧ್ಯಮದಲ್ಲಿ ಪ್ರಕಟಪಡಿಸುವ ಮೂಲಕ ಪರಸ್ಪರ ಸಂಬಂಧಗಳನ್ನು ಗಟ್ಟಿಗೊಳಿಸಿಕೊಂಡು ಬೆಳೆದಿದೆ. ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ, ದಲಿತ ಮುಂತಾದ ಸಾಹಿತ್ಯಕ ಚಟುವಟಿಕೆಗಳು ಆಂದೋಲನಗಳು, ಅನ್ಯ ಭಾಷೆಗಳ ಸಂಪರ್ಕ ಮತ್ತು ಅಧ್ಯಯನ ಹಾಗೂ ಅನುವಾದಗಳಿಂದ ಪುಷ್ಟಿಗೊಂಡಿವೆ ಎಂಬುದನ್ನು ಮರೆಯುವಂತಿಲ್ಲ. ಆದ್ದರಿಂದ ಅನ್ಯ ಭಾಷೆಗಳ ಮಹತ್ವದ ಕೃಷಿಗಳನ್ನು ಕನ್ನಡದಲ್ಲಿ ಅನುವಾದ ಮಾಡಿಸಿ ಪ್ರಕಟಿಸುವ, ಆ ಮೂಲಕ ತೌಲನಿಕ ಸಾಹಿತ್ಯದ ಗಾಢವಾದ ಅಧ್ಯಯನಕ್ಕೆ ಎಡೆ ಮಾಡಿಕೊಡುವ ದೃಷ್ಟಿಯಿಂದ ಪುಸ್ತಕ ಪ್ರಾಧಿಕಾರವು "ಅನುವಾದ ಮಾಲೆ" ಎಂಬ ಹೊಸ ಪುಸ್ತಕ ಮಾಲೆಯೊಂದನ್ನು ಆರಂಭಿಸುತ್ತಿದೆ. ಇದುವರೆಗೆ ಪ್ರಾಧಿಕಾರವು ಪ್ರಕಟಿಸಿರುವ ಅನುವಾದ ಗ್ರಂಥಗಳನ್ನು ಸಹ ಈ ಮಾಲೆಯ ಚೌಕಟ್ಟಿನಲ್ಲಿ ಅಳವಡಿಸಲಾಗುವುದು.

ಈ ಮಾಲೆಯಲ್ಲಿ ಇದೀಗ 'ಮೈಸೂರು ಚಾಮುಂಡೇಶ್ವರಿ ದೇವಸ್ಥಾನ– ಒಂದು ಸಾಮಾಜಿಕ ಅಧ್ಯಯನ' ಎಂಬ ಈ ಕೃತಿ ಪ್ರಕಟವಾಗುತ್ತಿರುವುದು ತುಂಬಾ ಹರ್ಷದ ಸಂಗತಿ. ಭಾರತೀಯ ಮಾನವಶಾಸ್ತ್ರೀಯ ಸರ್ವೇಕ್ಷಣ ಇಲಾಖೆಯು ಸಂಕೀರ್ಣ ಧಾರ್ಮಿಕ ಸಂಸ್ಥೆಗಳ ಅಧ್ಯಯನಕ್ಕೆ ಸಂಬಂಧಿಸಿದ ಹಾಗೆ ಕೈಗೊಂಡ ವಿವಿಧ ಸಂಶೋಧನಾ ಯೋಜನೆಗಳಿಗೆ ಅನುಗುಣವಾಗಿ ಈ ಕೃತಿಯ ಇಂಗ್ಲೀಷ್ ಮೂಲವನ್ನು ಸಿದ್ಧಪಡಿಸಲಾಗಿದೆ. ಈ ಯೋಜನೆಯಲ್ಲಿ ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಾಲಯಕ್ಕೆ ಸಂಬಂಧಿಸಿದ ಇತಿಹಾಸ, ಸಂಪ್ರದಾಯ, ಕ್ರಿಯಾವಿಧಿ, ಸ್ಥಳಪುರಾಣ ಮತ್ತು ಈ ದೇವಾಲಯ ಹಾಗೂ ಇದರ ಉಪಕ್ಷೇತ್ರಗಳಿಗೆ ಸಂಬಂಧಿಸಿದ ವಿವರವಾದ ಅಧ್ಯಯನವನ್ನು ಮಾಡುವ ಹೊಣೆಯನ್ನು ಇಲಾಖೆಯು ಶ್ರೀ ಬಿ.ಬಿ. ಗೋಸ್ವಾಮಿ ಹಾಗೂ ಶ್ರೀ ಎಸ್.ಜೆ. ಮೊರಬ ಅವರಿಗೆ ವಹಿಸಲಾಗಿತ್ತು. ಈ ಇಬ್ಬರು ವಿದ್ವಾಂಸರು ಆಗಿನ ಮೈಸೂರು ಪ್ರಾಂತದ ಪರಮಪವಿತ್ರವೆನಿಸಿದ ಶ್ರೀ ಚಾಮುಂಡೇಶ್ವರಿಯ ದೇವಾಲಯದ ಬಗ್ಗೆ ವ್ಯಾಪಕವಾದ ಸಂಶೋಧನೆಯನ್ನು ಕೈಗೊಂಡರು. ಈ ಪ್ರಧಾನ ದೇವಾಲಯ ಹಾಗೂ ಉಪ ದೇವಾಲಯಗಳನ್ನು ಕುರಿತು ವಿವರವಾಗಿ ಅಭ್ಯಸಿಸಿದರು. ಪರಂಪರಾಗತವಾದ ಮತ್ತು ಸಾಂಪ್ರದಾಯಕವಾದ ಹಿನ್ನೆಲೆಯ ಸಂಶೋಧನೆ ಮತ್ತು ಅಧ್ಯಯನದ ಜೊತೆಗೆ ಅದಕ್ಕೆ ಸಂಬಂಧಿಸಿದ ದೇಶೀ ಸಂಪ್ರದಾಯಗಳನ್ನು ಕೂಡ ಇವರು ವ್ಯಾಪಕವಾಗಿ ಅಧ್ಯಯನ ಮಾಡಿದರು. ಪ್ರಧಾನ ದೇವಾಲಯಕ್ಕೆ ಸಂಬಂಧಿಸಿದ ಸಂಗತಿಗಳು ಬಹು ಮುಖ್ಯವಾಗಿ ಪೌರಾಣಿಕ ಸಂಗತಿಗಳ ಕಡೆಗೆ ಹಾಗೂ ಶಿಷ್ಟಸಂಸ್ಕೃತಿಯ ಕಡೆಗೆ ಒತ್ತುಕೊಟ್ಟಿದ್ದರೆ ಈ ಉಪದೇವಾಲಯಗಳ ಅಧ್ಯಯನ ದೇಶೀ ಸಂಸ್ಕೃತಿಯ ಚಿಂತನ ಮತ್ತು ವಿಶ್ಲೇಷಣೆ ಕಡೆಗೆ ಒತ್ತುಕೊಟ್ಟಿದೆ. ಹೀಗಾಗಿ ಸಾಂಪ್ರದಾಯಿಕ ವರ್ಗಕ್ಕೆ ಚಾಮುಂಡೇಶ್ವರಿ ಶಕ್ತಿಸ್ವರೂಪಿಣಿಯಾದರೆ ಸಾಮಾನ್ಯ ಜನಕ್ಕೆ ಈಕೆ ತಮ್ಮ ಜೀವನದ ಆಗುಹೋಗುಗಳನ್ನು ನಿರ್ಧರಿಸುವ ಪ್ರಾದೇಶಿಕ ಅಧಿದೇವತೆಯಾಗಿದ್ದಾಳೆ. ಹೀಗೆ ಶಿಷ್ಟ ಮತ್ತು ಜಾನಪದ ಸಂಸ್ಕೃತಿಯ ವಿಶಿಷ್ಟವಾದ ದೃಷ್ಟಿಕೋನದಿಂದ ಚಾಮುಂಡೇಶ್ವರಿ ದೇವಾಲಯವನ್ನು ಇಲ್ಲಿ ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಚಾಮುಂಡೇಶ್ವರಿ ದೇವಸ್ಥಾನದ ಬಗ್ಗೆ ವಿಶೇಷ ಮಾಹಿತಿಗಳನ್ನು ತಿಳಿಯಬಯಸುವವರಿಗೆ ಇದೊಂದು ವಿಶಿಷ್ಟವಾದ ಆಕರ ಗ್ರಂಥವಾಗಿದೆ.

ಇತಿಹಾಸ, ಜಾನಪದ ಮತ್ತು ಪೌರಾಣಿಕ ಅಂಶಗಳ ಸಮ್ಮಿಲನವಾಗಿರುವ ಈ ಕೃತಿಯನ್ನು ಕನ್ನಡಕ್ಕೆ ಶ್ರೀ ಮಹೇಶ ತಿಪ್ಪಶೆಟ್ಟಿ ಅವರು ತುಂಬಾ ಸರಳವಾಗಿ ಮತ್ತು ಆಕರ್ಷಕವಾಗಿ ಅನುವಾದ ಮಾಡಿಕೊಟ್ಟಿದ್ದಾರೆ. ಯಾಂತ್ರಿಕ ಅನುವಾದದ ಕೃತಕತೆ ಇಲ್ಲಿ ತಲೆಹಾಕದೆ, ಇದೊಂದು ಸ್ವತಂತ್ರ ಗ್ರಂಥವೆಂಬಂತೆ ಓದಲು ಅನುವು ಮಾಡಿಕೊಟ್ಟಿರುವುದು ಮೆಚ್ಚಬೇಕಾದ ಸಂಗತಿ. ಇಂಥ ಕೃತಿಯನ್ನು ಪ್ರಾಧಿಕಾರದ ಮೂಲಕ ಪ್ರಕಟಿಸಲು ಒದಗಿಸಿರುವ ಶ್ರೀ ಮಹೇಶ ತಿಪ್ಪಶೆಟ್ಟಿ ಅವರಿಗೆ ಮತ್ತು ಈ ಗ್ರಂಥವನ್ನು ಅನುವಾದಿಸಿ ಪ್ರಕಟಿಸಲು ಅನುಮತಿಸಿರುವ ಭಾರತ ಸರ್ಕಾರದ ಮಾನವಶಾಸ್ತ್ರ ಸಮೀಕ್ಷಾ ಇಲಾಖೆಗೆ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳು. ಇದನ್ನು ಪ್ರಕಟಿಸಲು ಅನುಮರಿಸಿರುವ ಪ್ರಾಧಿಕಾರದ ಸದಸ್ಯ ಮಿತ್ರರಿಗೆ ಹಾಗೂ ಆಸಕ್ತಿಯಿಂದ ಅಚ್ಚುಕಟ್ಟಾಗಿ ಅಚ್ಚಿಸಿ ಕೊಟ್ಟಿರುವ ಶ್ರೀ ಕೀರ್ತಿ ಪ್ರಿಂಟರ್ಸ್‌ರವರಿಗೆ ವಿಶೇಷ ಧನ್ಯವಾದಗಳು.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ದಿನಾಂಕ: 20.2.2001.

# ಅನುವಾದಕರ ಮಾತು

ಇದೊಂದು ತ್ರಿವಿಕ್ರಮ ಸಾಹಸ ಪುರಾಣ ಪ್ರಸಂಗ. ಆಸಕ್ತಿ ಹಾಗೂ ವ್ಯವಸ್ಥೆಗೆ ಇರುವ ವೈರುದ್ಧ್ಯ ಈ ಪುಸ್ತಕದ ಪ್ರಕಟಣೆಯಲ್ಲಿ ಕಾಣಿಸಿಕೊಂಡಿತು. ಕಳೆದ ಶತಮಾನದ ಕೊನೆಯ ಪಾದದಲ್ಲಿ ವೈಯಕ್ತಿಕ ಆಸಕ್ತಿಯ ಹಿನ್ನಲೆಯಲ್ಲಿ ಕನ್ನಡಕ್ಕೆ ಈ ಪುಸ್ತಕ ಬಾಷಾಂತರಿಸಿದೆ. ನಾನೇ ಪ್ರಕಟಿಸಬೇಕೆಂದು ಮಾನವ ಸರ್ವೇಕ್ಷಣ ಸಂಸ್ಥೆಗೆ ಪತ್ರ ಬರೆದೆ. ವ್ಯಕ್ತಿಗಳಿಗೆ ಪ್ರಕಾಶನದ ಅವಕಾಶವಿಲ್ಲ. ಸಂಸ್ಥೆಗಳಿಗೆ ಒಪ್ಪಿಗೆ ಕೊಡಬಹುದು ಎಂದು ಕಲ್ಕತ್ತೆಯ ಮಾನವ ಸರ್ವೇಕ್ಷಣ ಸಂಸ್ಥೆ ತಿಳಿಸಿತು. ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳಿಗೆ ಪತ್ರ ಬರೆದೆ. ವಾಡಿಕೆಯಂತೆ ಅವು ಕಿವುಡತನ, ಮೂಕತನ ಪ್ರದರ್ಶಿಸಿದವು. ಆಕಸ್ಮಿಕವಾಗಿ ಹಾಮಾನಾ ಒಂದು ಕಾರ್ಯಕ್ರಮದಲ್ಲಿ ಭೆಟ್ಟಿಯಾಗಿದ್ದರು. ಅವರಿಗೆ ವಿಷಯ ಪ್ರಸ್ತಾಪಿಸಿದೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸುವ ಭರವಸೆ ನೀಡಿ ಹಸ್ತಪ್ರತಿ ಕಳಿಸಲು ಹೇಳಿದರು, ಕಳಿಸಿದೆ. ಅಷ್ಟರಲ್ಲಿ ಅವರು ಕುಲಪತಿಯಾಗಿ ಕಲಬುರ್ಗಿಗೆ ಹೋದರು. ಎಷ್ಟೋ ವರ್ಷದ ನಂತರ ಹಣಕಾಸಿನ ಮುಗ್ಗಟ್ಟು ಎಂಬ ಕಾರಣದಿಂದ ಹಸ್ತಪ್ರತಿ ಮೈಸೂರಿನಿಂದ ವಾಪಸ್ಸು ಬಂದಿತು.

ಪ್ರೊ. ಹೆಚ್. ಜೆ. ಲಕ್ಕಪ್ಪಗೌಡರು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಮೇಲೆ ಮತ್ತೆ ಆಸೆ ಚಿಗುರಿತು. ವಿಷಯ ಪ್ರಸ್ತಾಪಿಸಿ ಪತ್ರ ಬರೆದೆ. ಪರಿಣಿತರ ಸಲಹೆ ಪಡೆದು ಪ್ರಕಟಣೆಗೆ ಸ್ವೀಕರಿಸಬಹುದೆಂದು ತಿಳಿಸಿ ಹಸ್ತಪ್ರತಿ ಕಳಿಸಲು ಹೇಳಿದರು. ಈಗ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಈ ಪುಸ್ತಕ ಹೊರಬರುತ್ತಿದೆ. ಸಂಬಂಧಿಸಿದ ಎಲ್ಲರಿಗೂ ಧನ್ಯವಾದಗಳು.

ಈ ಪುಸ್ತಕ ಅನುವಾದಿಸಲು ಕಾರಣ ಎಂದರೆ ಭಾರತೀಯ ಸಂಸ್ಕೃತಿಯ ಪದರುಗಳನ್ನು ವಿವರಸಲು ಸಮಾಜ ಶಾಸ್ತ್ರದಲ್ಲಿ Tradition-Little Tradition, Learned Popular, Classical-Folk, High-Low, University-Parochial, Hieratic-lay, Aristrocratic-peasant ಮುಂತಾದ ಪರಿಕಲ್ಪನೆಗಳನ್ನು ಬಳಸುತ್ತಾರೆ.

ಕನ್ನಡದಲ್ಲಿ ಇದನ್ನು ಮಾರ್ಗ ಹಾಗೂ ದೇಶಿ ಪರಂಪರೆ ಎಂದು ಕರೆಯಬಹುದು. ಗ್ರಾಮದೇವತೆಯಾಗಿದ್ದ ಚಾಮುಂಡಿ ಚಾಮುಂಡೇಶ್ವರಿಯಾಗಿ ವೈದಿಕ ಪರಂಪರೆ ಸೇರಿದ ಬಗೆಯನ್ನು ಇಲ್ಲಿ ವಸ್ತಿನಿಷ್ಠವಾಗಿ ದಾಖಲಿಸಲಾಗಿದೆ. ಸಂಸ್ಕೃತಿಗಳ ನಡುವಿನ ಸಂಚಲನೆಗೆ ಪ್ರಭುತ್ವ ಹಾಗೂ ಆರ್ಥಿಕ ಅಂಶಗಳು ಹೇಗೆ ಪೋಷಕವಾಗುತ್ತಿವೆ ಂಬುದು ಗಮನಿಸಬೇಕಾದ ಅಂಶ. ಇಂತಹ ಸಮಾಜ ಶಾಸ್ತ್ರೀಯ ಬರವಣೆಗೆ ಕನ್ನಡದಲ್ಲಿ ಕಡಿಮೆ ಎಂಬ ಅಂಶ ಅನುವಾದಕ್ಕೆ ಕಾರಣವಾಗಿದೆ.

ಅನುವಾದ ಕಾರ್ಯದಲ್ಲಿ ಸಹೋದ್ಯೋಗಿ ಕೆ. ಬಿ. ಸಹಾಯ ಮಾಡಿದ್ದಾರೆ. ಹಸ್ತಪ್ರತಿ ರೂಪಿಸಲು ಮಿತ್ರರಾದ ಶ್ರೀ ಮಲ್ಲಿಕಾರ್ಜುನ ಹಿರೇಮಠ, ಶ್ರೀ ಎನ್. ಹೆಚ್. ಹಿರೇಮಠ ಹಾಗೂ ಶ್ರೀ ಎಸ್ಕೇ ಸಹಕರಿಸಿದ್ದಾರೆ. ಈ ಪುಸ್ತಕ ಪ್ರಕಟಣೆಗೆ ಕಾರಣವಾದ ಶ್ರೀ ಲಕ್ಕಪ್ಪಗೌಡರು ಹಾಗೂ ಸದಸ್ಯರಿಗೆ, ಕನ್ನಡದಲ್ಲಿ ಪ್ರಕಟಿಸಲು ಒಪ್ಪಿಗೆ ನೀಡಿದ ಕೊಲ್ಕತ್ತೆಯ ಮಾನವ ಸರ್ವೇಕ್ಷಣ ಇಲಾಖೆ, ಎಲ್ಲರಿಗೂ ಧನ್ಯವಾದಗಳು.

**ಮಹೇಶ ತಿಪ್ಪಶೆಟ್ಟಿ**

# ಮೊದಲ ಮಾತು

1967ರಲ್ಲಿ ಕಲ್ಕತ್ತಾದಲ್ಲಿ ಭಾರತೀಯ ಮಾನವಶಾಸ್ತ್ರೀಯ ಸರ್ವೇಕ್ಷಣ ಇಲಾಖೆ ನಡೆಸಿದ ಮಾನವಶಾಸ್ತ್ರ ಹಾಗೂ ಸಂಬಂಧಿತ ಶಿಸ್ತುಗಳ ಬಗೆಗಿನ ಸಂಶೋಧನಾ ಕಾರ್ಯಕ್ರಮಗಳು ಎಂಬ ವಿಚಾರ ಸಂಕಿರಣದಲ್ಲಿ, ಭಾರತೀಯ ನಾಗರಿಕತೆಯಲ್ಲಿ ಬದಲಾಗುತ್ತಿಯ್ಳಿರುವ ಸಾಮಾಜಿಕ ವ್ಯವಸ್ಥೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ, ಸರ್ವೇಕ್ಷಣ ಇಲಾಖೆಯು ಸಂಕೀರ್ಣ ಧಾರ್ಮಿಕ ಸಂಸ್ಥೆಗಳ ಅಭ್ಯಾಸಕ್ಕೆ ಸಂಬಂಧಿಸಿದ ಹಾಗೆ ವಿವಿಧ ಸಂಶೋಧನ ಯೋಜನೆಗಳನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಆ ರೀತಿ ಚಾಮುಂಡೇಶ್ವರಿ ದೇವಾಲಯಕ್ಕೆ ಸಂಬಂಧಿಸಿದ ಅಧಿಕಾರ ವರ್ಗದ ಸಂಘಟನೆ, ಸಂಪ್ರದಾಯಗಳು, ಕ್ರಿಯಾವಿಧಿಗಳು ಇತ್ಯಾದಿಗಳನ್ನು ವಿವರವಾಗಿ ಅಭ್ಯಸಿಸುವ ಹೊಣೆಯನ್ನು ಶ್ರೀ ಬಿ.ಬಿ. ಗೋಸ್ವಾಮಿ ಹಾಗೂ ಶ್ರೀ ಎಸ್.ಜಿ. ಮೊರಬ ಇವರಿಗೆ ವಹಿಸಲಾಯಿತು. ಅವರು ಚಾಮುಂಡೇಶ್ವರಿಯ ಪವಿತ್ರ ದೇವಾಲಯ ಸಂಕೀರ್ಣದ ತಮ್ಮ ಅಭ್ಯಾಸದಲ್ಲಿ ಮುಖ್ಯ ದೇವಾಲಯವನ್ನಷ್ಟೇ ಅಲ್ಲ, ದೇಶಿ (ಸ್ಥಾನಿಕ) ಹಾಗೂ ಮಾರ್ಗ (ವಿಶಾಲ) ಸಂಪ್ರದಾಯಗಳನ್ನು ಗುರುತಿಸುವ ಉದ್ದೇಶದಿಂದ ಚಾಮುಮಡಿ ಬೆಟ್ಟಗಳ ಮೇಲಿನ ಮೂವತ್ತೆರಡು ಪವಿತ್ರ ಗುಡಿ ಗುಂಡಾರಗಳನ್ನೂ ಸಮೀಕ್ಷಿಸಿದ್ದಾರೆ. ಚಾಮುಂಡೇಶ್ವರಿಯನ್ನು ಮೈಸೂರಿನ ಜನಸಾಮಾನ್ಯರು– ವಿಶೇಷತಃ ಬ್ರಾಹ್ಮೇತರರು– ಮೈಸೂರಿನ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಅಧಿದೇವತೆ ಎಂದು ಭಾವಿಸಿದರೆ, ಪಂಡಿತ ವರ್ಗದ ಜನ ಆಕೆಯನ್ನು ಸಂಸ್ಕೃತ ಗ್ರಂಥಗಳಲ್ಲಿ ವರ್ಣಿತವಾದ ಶಕ್ತಿ ಸ್ವರೂಪಿಣಿ ಎಂದು ಭಾವಿಸುತ್ತಾರೆ.

ಚಾಮುಂಡೇಶ್ವರಿ ದೇವಾಲಯ ಸಂಕೀರ್ಣದ ಉಪಾಸನಾ ಪಂಥವು ವಿವಿಧ ಜಾತಿಗಳ ಸಂಬಂಧದಿಂದ ಮೇಲಾಗಿ ಹಿಂದಿನ ಮೈಸೂರು ಅರಸು ಮನೆತನದ ರಾಜಾಶ್ರಯದಿಂದ ಹೇಗೆ ಪೋಷಣೆ ಪಡೆದಿದೆ ಎಂಬುದನ್ನು ಈ ವರದಿ ವ್ಯಕ್ತಪಡಿಸುತ್ತದೆ.

**ಸುರಜಿತಚಂದ್ರ ಸಿನ್ಹಾ**

ನಿರ್ದೇಶಕರು

ಭಾರತೀಯ ಮಾನವಶಾಸ್ತ್ರೀಯ ಸರ್ವೇಕ್ಷಣ ಇಲಾಖೆ

# ಪರಿವಿಡಿ


| ಸಂಖ್ಯೆ | ವಿವರ | ಪುಟ ಸಂಖ್ಯೆ |
|---|---|---|
| 01. | ಅಧ್ಯಾಯ ಒಂದು<br>ಸ್ಥಳ ಪುರಾಣ | |
| 02. | ಅಧ್ಯಾಯ ಎರಡು<br>ದೇವಸ್ಥಾನದ ಘಟನೆ ಮತ್ತು ಸಂಪ್ರದಾಯಗಳು | |
| 03. | ಅಧ್ಯಾಯ ಮೂರು<br>ಚಾಮುಂಡೇಶ್ವರಿ ದೇವಿಯ ಆರಾಧನೆ | |
| 04. | 'ಅ' ಅನುಬಂಧ<br>ಉತ್ತನಹಳ್ಳಿ ದೇವಿಯ ಸಮ್ಮಿಶ್ರ ಕ್ರಿಯಾವಿಧಿ | |
| 05. | 'ಬ' ಅನುಬಂಧ<br>ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ಉತ್ಸವದ ಆಚರಣೆ | |

Size : Dy 1/8 : 135 x 210

## ಅಧ್ಯಾಯ - ಒಂದು

ಚಾಮುಂಡೇಶ್ವರಿ ದೇವಾಲಯವು[1] ಮೈಸೂರು ನಗರದ ಚಾಮುಂಡಿ ಬೆಟ್ಟದ ನೆತ್ತಿಯ ಮೇಲೆ ಸ್ಥಾಪಿತವಾಗಿದೆ. ಚಾಮುಂಡಿ ಬೆಟ್ಟದ ಅಡಿಯಲ್ಲಿರುವ ಮೈಸೂರು ನಗರ ಮೈಸೂರು ಮಹಾರಾಜರ ರಾಜಧಾನಿಯಾಗಿತ್ತು. ಮೈಸೂರಿನ ಒಡೆಯರ ಮನೆತನದವರು ತಮ್ಮ ಮೂಲ ವನ್ನು ಗುಜರಾತಿನ ಯಾದವವಂಸದಲ್ಲಿ ಗುರುತಿಸುತ್ತಾರೆ. ನಂಜುಂಡಯ್ಯ ಹಾಗೂ ಅಯ್ಯರ ಬರೆದಿರುವಂತೆ "ಮೂತ್ರಾ ಎಂಬಲ್ಲಿ ರಾಜ್ಯವಾಳುತ್ತಿದ್ದ ಯಾದವ ವಂಶದ ಭೋಜರಾಯನ ಸಂತತಿಯವನಾದ ಸುರದೇವರಾಯನೆಂಬೊಬ್ಬನು ಕರ್ನಾಟಕ ದೇಶಕ್ಕೆ ಬಂದು, ಚಾಮುಂಡೇಶ್ವರಿ ದೇವಿಯ ಅನುಗ್ರಹದಿಂದ ಮೈಸೂರಿನಲ್ಲಿ ರಾಜ್ಯಸ್ಥಾಪನೆ ಮಾಡಿದ. ಪ್ರಸ್ತುತ ರಾಜಕುಮಾರ ಆ

ವಂಶಕ್ಕೆ ಸೇರಿದವನು.... (ರಾಮಕೃಷ್ಣರಾಯ ಆ್ಯನಲ್ಸ್ ಆಫ್ ಮೈಸೂರ್, ಭಾಗ-1, ಪುಟ 6-7, 1928: 1 : 48) ಚಾಮುಂಡೇಶ್ವರಿಯು ಮೈಸೂರು ಮಹಾರಾಜರ ರಕ್ಷಾ ದೇವತೆಯಾಗಿದ್ದಾಳೆ.

ಚಾಮುಂಡಿ ಬೆಟ್ಟವು ಸಮುದ್ರ ಮಟ್ಟದಿಂದ 3489 ಅಡಿ ಎತ್ತರವಿದ್ದು ಮೈಸೂರು ನಗರಕ್ಕೆ ಭವ್ಯತೆಯ ರೂಪವನ್ನು ತಂದುಕೊಟ್ಟಿದೆ. ಶಿಲಾವೃತವಾದ ಇಂಡಿಯ ಗ್ರಾನೈಟ್ ಬೆಟ್ಟವೆ ಮೈಸೂರು ನಗರದ ಹಾಗೂ ಸತ್ತಮುತ್ತಲಿನ ಹಳ್ಳಿಗಳ ಜನರಿಂದ ಪವಿತ್ರವೆಂದು ಪರಿಗಣಿಸಲ್ಪಡುತ್ತದೆ. ಸ್ಕಂದ ಪುರಾಣದಂಥ ಪ್ರಾಚೀನ ಪುರಾಣ ಗ್ರಂಥಗಳು ಎಂಟು ಬೆಟ್ಟಗಳಿಂದ ಸುತ್ತುವರಿದ 'ತ್ರಿಮುಕುಟ ಕ್ಷೇತ್ರ' ಎಂಬ ಪವಿತ್ರ ಕ್ಷೇತ್ರವನ್ನು ಉಲ್ಲೇಖಿಸುತ್ತವೆ. ಅದರ ಪಶ್ಚಿಮ ಭಾಗದಲ್ಲಿರುವ ಚಾಮುಂಡಿ ಬೆಟ್ಟವು ಆ ಎಂಟರಲ್ಲಿ ಒಂದಾಗಿದೆ. ವಾಸ್ತವವಾಗಿ, ವರ್ಣನೆಗಳಲ್ಲಿ ಚಾಮುಂಡಿ ಬೆಟ್ಟವನ್ನು 'ಮಹಾಬಲಾದ್ರಿ' ಎಂದರೆ ಮಹಾಬಳೇಶ್ವರ ವಾಸಸ್ಥಾನ ಎಂದು ಉಲ್ಲೇಖಿಸಲಾಗಿದೆ. ಮಹಾಬಳೇಶ್ವರ ಲಿಂಗ ದೇವಾಲಯವು ಬೆಟ್ಟದ[2] ಮೇಲಿರುವ ರಚನೆಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದೆಂದು ಭಾವಿಸಲ್ಪಟ್ಟಿದೆ.

ಚಾಮುಂಡೇಶ್ವರಿಯು ಪುರಾಣಕಥೆಯ ಹಿನ್ನೆಲೆ ಹಾಗೂ ಆಕೆ, ಬೆಟ್ಟದ ಮೇಲೆ ವಾಸವಾಗಿದ್ದನೆಂದು ಹೇಳಲಾಗುವ ಮಹಿಷಾಸುರನನ್ನು ಕೊಂದ ಕಥೆಗಳಿಗೆ ಪೌರಾಣಿಕ ಹಿನ್ನೆಲೆಯಿದ್ದು ಅವು "ದೇವಿಮಹಾತ್ಮೆ" ಪುರಾಣದ ಮುಖ್ಯ ವಸ್ತುವಾಗಿದೆ. (ಹೇಸ್ಟಿಂಗ್ಸ್: 1960 : 117-119). ಚಾಮುಂಡೇಶ್ವರಿಗೆ ಸಂಬಂಧಿಸಿದ ಈ ಕಥೆ ಮತ್ತು ಇತರ ಕಥೆಗಳು ಈ ಭಾಗದ ಜನರಲ್ಲಿ ಪ್ರಚಲಿತವಾಗಿವೆ. ಸಾಮಾನ್ಯವಾಗಿ, "ದೇವಿಮಹಾತ್ಮೆ"ಯ ಕನ್ನಡ ಅನುವಾದ, ದೇವದೇವತೆಗಳ ಕಥೆಗಳನ್ನು ಹಾಡುತ್ತ ತಿರುಗುವ ದಾಸಯ್ಯಗಳು, (ಚಾಮುಂಡೇಶ್ವರಿ ಮತ್ತು

---

1. ಇನ್ನು ಮೇಲೆ ದೇವಸ್ಥಾನ ಎಂದರೆ ಚಾಮುಂಡೇಶ್ವರಿ ದೇವಸ್ಥಾನ.
2. 'ಬೆಟ್ಟಗಳು' ಎಂದರೆ ಚಾಮುಂಡಿ ಬೆಟ್ಟ.

ಆಕೆಯ ತಂಗಿ ಉತ್ತನಹಳ್ಳಿಯಮ್ಮ ಇಂಥ ದೇವತೆಗಳಲ್ಲಿ ಇಬ್ಬರು) ಹಳ್ಳಿಗಳಲ್ಲಿ ಶಾಲಾ ಶಿಕ್ಷಕ ಮಾರ್ಗದರ್ಶನದಲ್ಲಿ ಹಬ್ಬ-ಹುಣ್ಣಿಮೆಗಳ ಕಾಲಕ್ಕೆ ಅಭಿನಯಿಸಲಾಗುವ ಪೌರಾಣಿಕ ನಾಟಕಗಳು ಇತರ ಪುರೋಹಿತರ ಮತ್ತು ಕ್ರಿಯಾವಿಧಿ ಪರಿಣತರು ಮೊದಲಾದ ಮೂಲಗಳಿಂದ ಜನರು ಈ ಕಥೆಗಳನ್ನು ಕಲಿಯುತ್ತಾರೆ. ಇತ್ತೀಚೆಗೆ "ಮಹಿಷಾಸುರ ಮರ್ದಿನಿ" ಎಂಬ ಕನ್ನಡ ಚಲನಚಿತ್ರವು ಚಾಮುಂಡೇಶ್ವರಿಯ ಪ್ರಸಿದ್ಧ ಮಹಿಮೆಗಳನ್ನು ಕನ್ನಡ ಭಾಷಿಕ ಪ್ರದೇಶಗಳಲ್ಲಿ ಜನಪ್ರಿಯಗೊಳಿಸುವಲ್ಲಿ ಸಹಾಯಕವಾಗಿದೆ.

ಹಿಂದಿನ ಕಾಲದಲ್ಲಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗುವ ದಾರಿಯು ಅಷ್ಟು ಸುಲಭವಾಗಿರಲಿಲ್ಲ. ಅವಳ ದರ್ಶನ ಪರಿಶ್ರಮದಾಯಕವಾಗಿತ್ತು. ಕ್ರಿ.ಶ. 1664ರಲ್ಲಿ ದೊಡ್ಡ ದೇವರಾಜ ಒಡೆಯರು ದೇವಸ್ಥಾನಕ್ಕೆ ಹೋಗಲು ಸಾವಿರ ಮೆಟ್ಟಿಲುಗಳ ಮಾರ್ಗ ಕಟ್ಟಿಸಿ, ದರ್ಶನ ಸೌಕರ್ಯ ಸುಗಮಗೊಳಿಸಿದರು. ಈಗ ದೇವಸ್ಥಾನವು ನಗರ ಹಾಗೂ ಮೈಸೂರು-ನಂಜನಗೂಡು ಮಾರ್ಗಗಳ ಸಂಪರ್ಕ ಪಡೆದಿದೆ.

ಚಾಮುಂಡೇಶ್ವರಿ ಕ್ಷೇತ್ರದ ನಿಜವಾದ ಅಭಿವೃದ್ಧಿಯು ಮುಮ್ಮಡಿ ಕೃಷ್ಣರಾಜ ಒಡೆಯರರಿಂದ ಪ್ರಾರಂಭವಾಯಿತು. 1827ರಲ್ಲಿ ಅವರು ದೇವಸ್ಥಾನ ಜೀರ್ಣೋದ್ಧಾರ ಮಾಡಿಸಿ ಗೋಪುರ ಕಟ್ಟಿಸಿದರು ಕ್ರಿ.ಶ. 1848ರಲ್ಲಿ ಅವರು ಉತ್ಸವಕ್ಕಾಗಿ ಸಿಂಹವಾಹನ ಹಾಗೂ ಇತರ ರಥಗಳನ್ನು ದೇವಸ್ಥಾನಕ್ಕೆ ಕಾಣಿಕೆಯಾಗಿ ಕೊಟ್ಟರು. ಅವರು ಕಾಣಿಕೆಯಾಗಿ ಕೊಟ್ಟ ಚಿನ್ನದ ಆಭರಣಗಳಲ್ಲಿ ನಕ್ಷತ್ರ ಮಾಲಿಕೆ ಒಂದಾಗಿದ್ದು ಅದರ ಮೇಲೆ 30 ಸಂಸ್ಕೃತ ಶ್ಲೋಕಗಳನ್ನು ಕೆತ್ತಲಾಗಿರುವುದು ಅದರ ವೈಶಿಷ್ಟ್ಯವಾಗಿದೆ. ಅದೇ ಕಾಲದಲ್ಲಿ ಬ್ರಾಹ್ಮಣೇತರ ಪೂಜಾರಿಗಳ ಸ್ಥಾನದಲ್ಲಿ ದೀಕ್ಷಿತ ಬ್ರಾಹ್ಮಣರನ್ನು ತರಲಾಯಿತು.

ಚಾಮುಂಡಿ ಬೆಟ್ಟದಲ್ಲಿ ಅಸ್ತಿತ್ವಕ್ಕೆ ಬಂದ ಧಾರ್ಮಿಕ ಅಥವಾ ಲೌಕಿಕ ಕೇಂದ್ರಗಳು ದೇಶೀ ಹಾಗೂ ಮಾರ್ಗ ಸಂಸ್ಕೃತಿಯ ಅಂಶಗಳನ್ನು ಗುರುತಿಸುವಲ್ಲಿ ಸಹಕಾರಿಯಾಗಿವೆ. ಹಲವಾರು ಕಾರಣಗಳಿಗಾಗಿ ಚಾಮುಂಡಿ ಬೆಟ್ಟವು ಅಡಿಯಿಂದ ಮುಡಿಯವರೆಗೆ ಜನಪ್ರಿಯ ಧಾರ್ಮಿಕ ಸ್ಥಳಗಳನ್ನು ಹೊಂದಿದೆ. ಬೆಟ್ಟದಲ್ಲಿ ಧಾರ್ಮಿಕ ಮಠ, ಗುಡಿ, ವೃಕ್ಷ, ಜಕಣಿಗಳು ಇವೆ. ಪುರಾಣ ಹಾಗೂ ಪೌರಾಣಿಕ ಕಥೆಯ ಸಂಬಂಧಿಸಿದ ಸ್ಥಳಗಳಿವೆ; ಮಂಟಪ ಛತ್ರಗಳಿವೆ. ಮಂಟಪಗಳು ಲೌಕಿಕ ಹಾಗೂ ಧಾರ್ಮಿಕ ಕ್ರಿಯಾವಿಧಿ ಸ್ಥಾನಗಳಾಗಿವೆ. ಇದಲ್ಲದೆ ಪ್ರವಾಸಿಗರನ್ನು, ವಿಹಾರಿಗಳ ಲಕ್ಷ್ಯಗಳನ್ನು ಸೆಳೆಯುವ ಕೆಲವು ಖಾಸಗಿ ಹಾಗೂ ಸಾರ್ವಜನಿಕ ಸ್ಥಳಗಳಿವೆ. ಚಾಮುಂಡೇಶ್ವರಿ ದೇವಸ್ಥಾನದ ಪಕ್ಕದಲ್ಲಿಯೇ 'ಚಾಮುಂಡಿ ಬೆಟ್ಟ' ಎಂಬ ಗ್ರಾಮ ಇದೆ. ಈ ಕೇಂದ್ರಗಳು ಹೊಂದಿರುವ ಬದಲಾವಣೆಗಳನ್ನು ವಿವರವಾಗಿ ತಿಳಿಯಲು ಕೂಲಂಕಷವಾಗಿ ಪರೀಕ್ಷಿಸೋಣ.

## ದೇವಾಲಯ ಹಾಗೂ ಇತರ ಉಪಕ್ಷೇತ್ರಗಳು :

ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಸ್ಥಾನವಲ್ಲದೆ ಸುಮಾರು ಮುವ್ವತ್ತೆರಡು ಧಾರ್ಮಿಕ ಕ್ಷೇತ್ರಗಳು ಹಾಗೂ ದೇವಾಲಯಗಳು ಇವೆ. ಇವುಗಳಲ್ಲಿ ಬ್ರಾಹ್ಮಣೇತರರಿಗೆ ಸೇರಿದ ಇತರ ಖಾಸಗಿ



ಧರ್ಮಕ್ಷೇತ್ರಗಳು ಸೇರಿಲ್ಲ. ಮಹಾಬಲೇಶ್ವರ ಹಾಗೂ ನಾರಾಯಣಸ್ವಾಮಿ ದೇವಾಲಯಗಳು ಚಾಮುಂಡೇಶ್ವರಿ ದೇವಸ್ಥಾನದ ಸಮೀಪದಲ್ಲಿ ಇವೆ. ಪ್ರಮುಖವಾದ ಮಹಾಬಲೇಶ್ವರ ದೇವಾಲಯಕ್ಕೆ ಹೊಯ್ಸಳ ರಾಜನಾದ ವಿಷ್ಣುವರ್ಧನನು 1128ರಲ್ಲಿ ಹಾಗೂ ವಿಜಯನಗರ ಸಾಮ್ರಾಜ್ಯದ ವಂಶಸ್ಥರು 1626ರಲ್ಲಿ ದತ್ತಿ ಕೊಟ್ಟರು. ಒಡೆಯರ ಅರಸರಿಂದ ಹತನಾದ ನಾಯಕ ಜಾತಿಯ ಮಾರನಾಕನೆಂಬ ಚಿಕ್ಕ ಪಾಳೆಗಾರನೂ ಈ ದೇವಾಲಯದ ಪೋಷಕನಾಗಿದ್ದನೆಂದು ಹೇಳಲಾಗುತ್ತದೆ. ಈ ದೇವಾಲಯವು ಮೈಸೂರು ಅರಮನೆಯ ಆಡಳಿತದಲ್ಲಿ ಇದ್ದರೂ, ಇದು ಮೈಸೂರಿನ ಜನಸಾಮಾನ್ಯರಲ್ಲಿ ಜನಪ್ರಿಯವಾಗಿಲ್ಲ; ಅಲ್ಲದೆ ಸಂಬಂಧಿಸಿದ ಆಡಳಿತ ವರ್ಗವು ಇದನ್ನು ಜನಪ್ರಿಯಗೊಳಿಸಲು ಯತ್ನಿಸಿಲ್ಲ. ನಾರಾಯಣಸ್ವಾಮಿ ದೇವಾಲಯವು ಇತ್ತೀಚಿನದು. ಈ ಎರಡು ದೇವಾಲಯದ ಪುರೋಹಿತರು ಬ್ರಾಹ್ಮಣರಾಗಿದ್ದಾರೆ.

ಇನ್ನುಳಿದ ದೇವಾಲಯಗಳಾದ ಚಿದಂಬರ, ಮಹದೇಶ್ವರ, ಸುಬ್ರಹ್ಮಣ್ಯ, ಭೈರವ, ಆಂಜನೇಯ, ಮಾರಮ್ಮ, ಗಣಪತಿ ಮುಂತಾದ ದೇವಾಲಯಗಳ ಅರ್ಚಕರು ಬ್ರಾಹ್ಮಣ ಹಾಗೂ ಶಿವಾರ್ಚಕ[3] ಜಾತಿಯವರಾಗಿದ್ದಾರೆ ಎಂಬು ಕಂಡುಬಂದಿತು. ಎರಡು ಕ್ಷೇತ್ರಗಳಲ್ಲಿ ಇಬ್ಬರು ಮಲಯಾಳಿಗಳು ಅರ್ಚಕರಾಗಿದ್ದಾರೆ. ಆದರೆ ಅವರ ಜಾತಿಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಬ್ರಾಹ್ಮಣ ಪುರೋಹಿತರು ಕನ್ನಡ ಹಾಗೂ ತಮಿಳು ಭಾಷಾ ಪ್ರದೇಶದವರಾಗಿದ್ದಾರೆ, ಆದರೆ ಶಿವಾರ್ಚಕರು ಕೇವಲ ಕನ್ನಡ ಭಾಷೆಯವರಾಗಿದ್ದಾರೆ.

ದೇವತೆಗಳನ್ನು ವಿವಿಧ ರೂಪಗಳಲ್ಲಿ ಸಂಕೇತಿಸಲಾಗಿದೆ. ಉದಾಹರಣೆಯಾಗಿ: ಈಶ್ವರನನ್ನು ಲಿಂಗದ ರೂಪದಲ್ಲಿ, ಮಾರಮ್ಮನನ್ನು ಕಲ್ಲುಬಂಡೆಯ ರೂಪದಲ್ಲಿ, ನಾರಾಯಣ ಸ್ವಾಮಿಯನ್ನು ಮೂರ್ತಿಯ ರೂಪದಲ್ಲಿ ಮಲಯಾಳಿ ಅರ್ಚಕರು ಶಿವ ಹಾಗೂ ಕೃಷ್ಣನ ಭಾವಚಿತ್ರಗಳನ್ನು ಪೂಜಿಸುತ್ತಾರೆ.

ಈ ದೇವಾಲಯಗಳ ಭಕ್ತರು ಲಿಂಗಾಯತ, ಒಕ್ಕಲಿಗ, ರಾಜಪರಿವಾರ ಹಾಗೂ ಇತರ ಬ್ರಾಹ್ಮಣೇತರ ಜಾತಿಗೆ ಸೇರಿದವರಾಗಿದ್ದಾರೆ. ಅವರು ಹೆಚ್ಚಾಗಿ ಚಾಮುಂಡಿ ಬೆಟ್ಟ ಹಾಗೂ ಸುತ್ತಲಿನ ಗ್ರಾಮದವರಾಗಿದ್ದಾರೆ. ಕುಂಚಟಿಗರ (ಒಕ್ಕಲಿಗರ) ಪೋಷಣೆಯಲ್ಲಿದ್ದ ಆಂಜನೇಯ ಕ್ಷೇತ್ರವು ಈಗ ಅಲಕ್ಷಿಸಲ್ಪಟ್ಟಿದೆ. ಚಿದಂಬರೇಶ್ವರ ದೇವಾಲಯವು ಸಂಪೂರ್ಣವಾಗಿ ತಮಿಳು ಮಾತನಾಡುವ ದೀಕ್ಷಿತ ಬ್ರಾಹ್ಮಣರ ರಕ್ಷಣೆಯಲ್ಲಿದೆ. ಅವರೇ ಚಾಮುಂಡಿ ಬೆಟ್ಟದ ಊರಿನ ಗ್ರಾಮದೇವತೆ ಪ್ರಭಾವಕ್ಕೆ ಎಷ್ಟರಮಟ್ಟಿಗೆ ಒಳಗಾಗಿದ್ದಾರೆಂದರೆ ಗ್ರಾಮದೇವತೆ ಮಾರಮ್ಮನ ನಿಜವಾದ ಪಾಲಕರು ಅವರೇ ಆಗಿದ್ದಾರೆ. ಮೇಲೆ ಹೇಳಿದ ಜಾತಿಯವರಲ್ಲದೆ ಮೈಸೂರಿನ ಆಳರಸರ ಮನೆತನದವರು ಈ ದೇವಾಲಯಗಳ ಪೋಷಕರು, ಭಕ್ತರೂ ಆಗಿದ್ದಾರೆ. ಉದಾಹರಣೆಯಾಗಿ:

---

3. ನಂಜುಂಡಯ್ಯ ಹಾಗೂ ಅಯ್ಯರ ಎಂಬುವರು (1931 : 605-608 ಶಿವಾರ್ಚಕರನ್ನು ತಮ್ಮಡಿ ಜಾತಿಯವರೆಂದು ಹೆಸರಿಸಿದ್ದಾರೆ. ಕನ್ನಡದಲ್ಲಿ ತಮ್ಮಡಿ ಪದವು ಜಾತಿ ಸೂಚಕವಾಗಿದೆ. ಅರ್ಚಕ ವೃತ್ತಿ ಸೂಚಕವಾಗಿದೆ. ಆದ್ದರಿಂದ ನಾವು ಅವರನ್ನು ಶಿವಾರ್ಚಕರೆಂದೇ ಸಂಬೋಧಿಸಿದ್ದೇವೆ. ಶಿವಾರ್ಚಕ ಎಂಬ ಪದವನ್ನು ಅವರೇ ಹೆಚ್ಚಾಗಿ ಬಳಸುತ್ತಾರೆ.

ಮಹದೇಶ್ವರ ದೇವಾಲಯಕ್ಕೆ ಈಗಿನ ಮಹಾರಾಜರ ಸಹೋದರಿ ಪೋಷಕರಾಗಿದ್ದು ನಿತ್ಯ ಅರ್ಚನೆಗಾಗಿ ಅವರು ವ್ಯವಸ್ಥೆ ಮಾಡಿದ್ದಾರೆ. ಎಷ್ಟೋ ದೇವಾಲಯಗಳಿಗೆ ವೈದಿಕ (ಸಂಸ್ಕೃತ) ದೇವರ ಹೆಸರಿದ್ದರೂ ಕೂಡ ಅವುಗಳಿಗೆ ನಿಜವಾಗಿ ಸ್ಥಾನಿಕ ಮಹತ್ವ ಇದೆ. ತಮ್ಮ ದನಗಳಿಗೆ ಏನಾದರೂ ರೋಗ ರುಜಿನಗಳು ಬಂದರೆ ಚಾಮುಂಡಿ ಬೆಟ್ಟದ ಜನರು ಅಲ್ಲಿಯ ಶಿವ ದೇವಾಲಯಕ್ಕೆ ನಡೆದುಕೊಳ್ಳುತ್ತಾರೆ.

ಬೆಟ್ಟದಲ್ಲಿ ಸುಮಾರು ಹತ್ತು ನಂದಿ ಮೂರ್ತಿಗಳಿವೆ. ಇವುಗಳಲ್ಲಿ ಎಂಟು ನೂರನೇ ಪಾವಟಿಗೆಯ ಹತ್ತಿರ ಇರುವ ಹದಿನಾರು ಅಡಿ ಎತ್ತರದ ಬೃಹದಾಕಾರದ ನಂದಿಯು ಐತಿಹಾಸಿಕವಾಗಿದೆ. ಧಾರ್ಮಿಕ ಹಾಗೂ ಪ್ರವಾಸಿಗರ ದೃಷ್ಟಿಯಿಂದ ಹೆಚ್ಚು ಜನಪ್ರಿಯವಾಗಿದೆ. ಆಗಿನ ಮೈಸೂರು ಮಹಾರಾಜರ ಆಜ್ಞೆಯ ಮೇರೆಗೆ ಇದನ್ನು ನಿರ್ಮಿಸಲಾಗಿದೆ.

ಶಿವಾರ್ಚಕ ಜಾತಿಗೆ ಸೇರಿದ ವ್ಯಕ್ತಿಯೇ ನಂದಿ ಪೂಜೆ ಮಾಡುತ್ತಾನೆ. ಈ ಪೂಜಾ ವೃತ್ತಿಯು ಅನುವಂಶಿಕವಾಗಿದೆ. ಕಾರ್ತಿಕ ಮಾಸದಲ್ಲಿ (ಅಕ್ಟೋಬರ್-ನವಂಬರ್) ಮಹಾರಾಜರು ಪೂಜೆಗಾಗಿ ಈ ಕ್ಷೇತ್ರವನ್ನು ಸಂದರ್ಶಿಸುತ್ತಾರೆ. ಬರ ಬಿದ್ದಾಗ ಮೈಸೂರಿನ ಮಹಾರಾಜರಿಂದ ಈ ಕ್ಷೇತ್ರಕ್ಕೆ ವಿಶೇಷ ಕಾಣಿಕೆ ಪೂಜೆಗಳು ಸಲ್ಲುತ್ತವೆ.

ಇನ್ನುಳಿದ ನಂದಿಕ್ಷೇತ್ರಗಳಿಗೆ ಈ ಪ್ರಾಮುಖ್ಯತೆ ಇಲ್ಲ. ಇದ್ದ ಸಂಗತಿ ಎಂದರೆ ಈ ಕ್ಷೇತ್ರಗಳ ಎಲ್ಲ ಪೂಜಾರಿಗಳು ಶಿವಾರ್ಚಕರಾಗಿದ್ದಾರೆ ಹಾಗೂ ಭಕ್ತರು ಬ್ರಾಹ್ಮಣೇತರರಾಗಿದ್ದಾರೆ. ಮಳೆ ಬಾರದಿದ್ದಾಗ ನಂದಿಕ್ಷೇತ್ರಗಳಿಗೆ ಮೊರೆ ಹೋಗುವ ಪರಿಪಾಠ ಇದೆ. ಈ ಬೃಹತ್ ನಂದಿ ಮತ್ತು ಮಳೆಗೆ ಇರುವ ಸಂಬಂಧವನ್ನು ಉಳಿದ ನಂದಿಗಳ ವಿಷಯದಲ್ಲಿಯೂ ಕಾಣಬಹುದು. ಉದಾಹರಣೆಯಾಗಿ: ನೀರುಕಲ್ಲಹಟ್ಟಿ ಬಸವ ಕ್ಷೇತ್ರ ನೆರೆಹೊರೆಯ ನಾಲ್ಕು ಗ್ರಾಮಗಳ ಲಿಂಗಾಯತ ಭಕ್ತರು ಬರಬಿದ್ದಾಗ ಪೂಜೆ ಸಲ್ಲಿಸಿದ್ದಿದೆ. ಈ ಕ್ಷೇತ್ರವು ತನ್ನ ಹಳೆಯ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದರೂ ಸಹಿತ ರಾಜ ಪರಿವಾರ ಜಾತಿಗೆ ಸೇರಿದವವನು ಇದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಾನೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಬೆಟ್ಟದ ಅಡಿಯ ಮೂರು ದಿಕ್ಕುಗಳಿಗೆ ಚಾಮುಂಡೇಶ್ವರಿ ಪಾದಕ್ಷೇತ್ರಗಳು ಸ್ಥಾಪಿತವಾದವು. ಕುತೂಹಲದ ವಿಷಯವೆಂದರೆ ಚಾಮುಂಡೇಶ್ವರಿಯ ಅರ್ಚನೆಯು ಬ್ರಾಹ್ಮಣರಿಂದ ನಡೆದರೆ ಮೂರು ಪಾದಗಳ ಪೂಜೆಯ ಅಧಿಕಾರವನ್ನು ಬ್ರಾಹ್ಮಣೇತರರಾದ ಶಿವಾರ್ಚಕರಿಗೆ ವಹಿಸಲಾಗಿದೆ. ಬೆಟ್ಟದ ಪೂರ್ವದ ಅಡಿಯಲ್ಲಿರುವ "ಕಿಬ್ಬಿ ಪಾದವು" ಈ ಮೂರು ಪಾದಕ್ಷೇತ್ರಗಳಲ್ಲಿ ಮಹತ್ವದ್ದಾಗಿದೆ. ಈ ಪಾದಕ್ಷೇತ್ರಕ್ಕೆ ಮೂರು ನಗರದ ಹಾಗೂ ನೆರೆಹೊರೆಯ ಗ್ರಾಮಗಳ ಜನರು ನಡೆದುಕೊಳ್ಳುತ್ತಾರೆ. ಮೂಲ ದೇವಾಲಯದಷ್ಟೇ ಈ ಪಾದಕ್ಷೇತ್ರವು ಪವಿತ್ರವೆಂದು ಭಕ್ತರಿಂದ ಪರಿಗಣಿಸಲ್ಪಟ್ಟಿದೆ. ವಿವಿಧ ಜಾತಿಯವರು, ತಮ್ಮ ಗ್ರಾಮ ಹಾಗೂ ಓಣಿಗಳಲ್ಲಿ ಈ ಸ್ಥಳದ ಪೂಜೆ ಮಾಡುವುದನ್ನು ಹಾಗೂ ಸಾಮೂಹಿಕ ಪೂಜೆಯ ಮಹತ್ವವನ್ನು ಮುಂದೆ ವಿವೇಚಿಸೋಣ. ಮೂಲ ದೇವತೆಯೊಂದಿಗೆ ಸಂಬಂಧ ಹೊಂದಲು ಹಾಗೂ ಅನುಗ್ರಹ ಪಡೆಯಲು ಜನರಿಗೆ ಈ ಪಾದಕ್ಷೇತ್ರಗಳು ಮುಖ್ಯ



ಮಾಧ್ಯಮಗಳಾಗಿವೆ. ಜಾತಿಗಳು, ಪರಂಪರಾಗತವಾಗಿ ಬಂದ ತಮ್ಮ ಸಂಪ್ರದಾಯಗಳನ್ನು ಉಳಿಸಿಕೊಳ್ಳಲೂ ಸಹಿತ ಈ ಕ್ಷೇತ್ರಗಳು ನೆರವಾಗಿವೆ.

ಅಷ್ಟೇ ಪವಿತ್ರವೆಂದು ಪರಿಗಣಿಸಲಾಗಿರುವ ಕೆಲವು ಜಕಣಿ ಹಾಗೂ ವೃಕ್ಷಗಳು ಇದ್ದು ಚಾಮುಂಡೇಶ್ವರಿ ದೇವಸ್ಥಾನದ ಕೆಲವು ಕ್ರಿಯಾವಿಧಿಗಳು ಅಲ್ಲಿಯೇ ನಡೆಯುತ್ತವೆ.

**ಮಠಗಳು :**

ಮೆಟ್ಟಿಲು ದಾರಿಯ ಸಮೀಪದಲ್ಲಿ ಆರು ಮಠಗಳಿವೆ. ಅವುಗಳಲ್ಲಿ ನಾಲ್ಕು ಸುಮಾರು ನೂರು ವರ್ಷ ಇಲ್ಲವೆ ಅದಕ್ಕೂ ಹೆಚ್ಚು ಹಳೆಯದಾಗಿವೆ. ಆದರೆ ಈ ಹಳೆಯ ಮಠಗಳು ಅಲಕ್ಷಿಸಲ್ಪಟ್ಟಿವೆ. ಇವುಗಳಲ್ಲಿ ಮೂರು ಮಠಗಳ ಆವರಣದಲ್ಲಿ ಈಶ್ವರನನ್ನು ಲಿಂಗದ ರೂಪದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇವುಗಳು ಒಂದು ಕುರುಬನಿಂದ ಇನ್ನೊಂದು ಕುಂಚಟಿಗನಿಂದ ಹಾಗೂ ಮತ್ತೊಂದು ಲಿಂಗಾಯತನಿಂದ ನಿರ್ಮಿಸಲ್ಪಟ್ಟಿವೆ. ಮೊದಲನೇ ಮಠವು ಪ್ರಾರಂಭದಲ್ಲಿ ಒಬ್ಬ ಸಾಧುವಿನ ಪೋಷಣೆಯಲ್ಲಿತ್ತು. ಆದರೆ ಅವನ ಮರಣದ ನಂತರ ಕ್ರಮೇಣವಾಗಿ ಮೂಲೆ ಗುಂಪಾಗಿವೆ. ಎರಡನೇ ಹಾಗೂ ಮೂರನೇ ಮಠಗಳಿಗೂ ಅದೇ ದುಸ್ಥಿತಿ ಬಂದಿದೆ.

ಆದಾಗ್ಯೂ ಕ್ರಿ.ಶ. 1846ರ ಸುಮಾರಿಗೆ ಲಿಂಗಾಯಿತನೊಬ್ಬನಿಂದ ಸ್ಥಾಪಿತವಾಗಿ ಮೈಸೂರು ದೊರೆಗಳ ಆಶ್ರಯ ಪಡೆದ ಮಠವೊಂದು ಇನ್ನೂ ಜನಪ್ರಿಯವಾಗಿದೆ. ಇದು ಸ್ಥಾಪಿತವಾದಾಗಿನಿಂದ ನಿರಂತರವಾಗಿ ಒಂದೇ ಕುಟುಂಬದ ನಾಲ್ಕು ಗುರುಗಳ ಅಧಿಪತ್ಯದಲ್ಲಿ ಇತ್ತು. ಈ ಮಠವು ಮಹಾರಾಜರ ಆಶ್ರಯ ಪಡೆಯುವಲ್ಲಿ ಯಶಸ್ವಿಯಾಯಿತು. ಉದಾಹರಣೆಗೆ : ಮುಮ್ಮಡಿ ಕೃಷ್ಣರಾಜ ಒಡೆಯರು ದಯಪಾಲಿಸಿದ ಸುಮಾರು ಮುವ್ವತ್ತೇಳು ಎಕರೆಯಷ್ಟು ಇನಾಮಿ ಭೂಮಿಯನ್ನು ಈ ಮಠವು ಇನ್ನೂ ಉಳಿಸಿಕೊಂಡಿದೆ. ನಾಲ್ಕನೇ ಕೃಷ್ಣರಾಜ ಒಡೆಯರ ಹಾಗೂ ಅವರ ಪತ್ನಿಯವರು ಈ ಮಠದ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ ತೋರಿಸುತ್ತಿದ್ದು ಆಗಾಗ ಸಂದರ್ಶಿಸುತ್ತಿದ್ದರು.

ಇನ್ನುಳಿದ ಎರಡು ಮಠಗಳು ತೀರ ಇತ್ತೀಚಿನವು. ಈ ಮಠಗಳ ಸ್ಥಾಪನೆಯ ಇತಿಹಾಸವು (ವಾಡಿಕೆಯಲ್ಲಿ ಆಶ್ರಮಗಳೆಂದು ಕರೆಯಲಾಗುವ) ಮಠಗಳ ಸ್ಥಾಪನೆ, ಸ್ಥಳೀಯ ಜನರೊಂದಿಗೆ ಅವುಗಳ ಸಂಬಂಧ ಮತ್ತು ಬದಲಾದ ಪರಿಸರದೊಡನೆ ಅವು ಹೊಂದಿಕೊಳ್ಳುವ ವಿಷಯದಲ್ಲಿ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ.

**ಶಾಂತಾಶ್ರಮ :**

ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗುವ ಸಾವಿರದಯ್ದನೆಯ ಮೆಟ್ಟಿಲಿನ ಬಳಿಯಲ್ಲಿ ಶಾಂತಾಶ್ರಮ ಎಂಬ ಹೆಸರಿನ ಆಶ್ರಮ ಬಂದಿದೆ. ಅದ್ವೈತ ಮತದ ಸಂಚಾರಿ ತಮಿಳು ಬ್ರಾಹ್ಮಣ ಸಾಧುವಿನಿಂದ ಇದು ಸ್ಥಾಪಿತವಾಯಿತು. ಪಾರಿಜಾತವನೇಶ್ವರ (ಲಿಂಗ) ದೇವರನ್ನು ಅವನು ಅಲ್ಲಿ ಪ್ರತಿಷ್ಠಾಪಿಸಿದನು. ಸುಮಾರು ಒಂಭತ್ತು ವರ್ಷಗಳ ಹಿಂದೆ ಆತನು ನಿಧನ ಹೊಂದಿದನು.

ಆಶ್ರಮದ ಈಗಿನ ಮುಖ್ಯಸ್ಥ ಹೆಚ್ಚಾಗಿ ಬೆಂಗಳೂರು ಬಳಿಯಲ್ಲಿರುವ ಕೆಂಚನಹಳ್ಳಿ ಕೈಲಾಸ ಆಶ್ರಮದಲ್ಲಿ ಇರುತ್ತಾನೆ. ಆಶ್ರಮವು ಕಾಣಿಕೆ ಹಾಗೂ ದೇಣಿಗೆಗಳಿಂದಲೇ ನಡೆಯುತ್ತದೆ. ಇದು ಶ್ರೀರಂಗಪಟ್ಟಣ, ಮೈಸೂರು ಹಾಗೂ ಬೆಂಗಳೂರು ತಾಲ್ಲೂಕಿನ ಕೆಲವು ಗ್ರಾಮಗಳೊಂದಿಗೆ ವಿಶೇಷ ಸಂಬಂಧವಿರಿಸಿಕೊಂಡಿದ್ದಾರೆ. ಉದಾಹರಣೆಗೆ : ಉತ್ತರ ಭಾರತದ ಉದ್ಯಮಿಯೊಬ್ಬರು ಈ ಆಶ್ರಮದ ಪ್ರಮುಖ ಪೋಷಕರಾಗಿದ್ದಾರೆ. ಆಶ್ರಮದ ಕಾರ್ಯಕರ್ತರಲ್ಲಿ ಒಬ್ಬ ಮಹಿಳೆಯೂ ಇದ್ದು ಅವರು ಪೋಷಕರನ್ನು ವರ್ಷದ ವಿವಿಧ ಕಾಲಗಳಲ್ಲಿ ಕಾರ್ಯಕರ್ತನೊಬ್ಬ ಕಳೆದ ಒಂದು ದಶಕದಿಂದ ಆಶ್ರಮದ ಮುಖ್ಯಸ್ಥನು ಬೆಂಗಳೂರು, ಮದ್ರಾಸ್ ಹಾಗೂ ತಿರುವನಮಲೈ ನಗರಗಳಲ್ಲಿರುವ ಕೆಲವು ಅದ್ವೈತ ಮಠಗಳೊಂದಿಗೆ ಸಂಬಂಧ ಹೊಂದಿದ್ದಾನೆ.

ಆಶ್ರಮದ ಮಹತ್ವದ ಕಾರ್ಯಕ್ರಮಗಳಿಗೆ ಶಿಕ್ಷಣವೇತ್ತರನ್ನು ವೃತ್ತಿನಿರತರು ಹಾಗೂ ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರನ್ನು ನೈತಿಕ ಹಾಗೂ ಧಾರ್ಮಿಕ ಭಾಷಣ ನೀಡಲು ಆಮಂತ್ರಿಸುತ್ತಾರೆ. ಆಶ್ರಮದ ಗೋಡೆಗಳನ್ನು ಅಚ್ಚುಕಟ್ಟಾದ ಭಾವಚಿತ್ರಗಳಿಂದ ಅಲಂಕರಿಸಲಾಗಿದೆ. ಸ್ವಾಮಿ ವಿವೇಕಾನಂದರ, ಕೊವಿಲೂರು ಮಠದ ವೀರಜ್ಞಾನ ದೇಶಿಕ (ತಮಿಳುನಾಡು) ಶಂಕರಾಚಾರ್ಯ, ಗುರುನಾನಕ (ಮುಸ್ಲಿಂ ಮತಾಂತರದಿಂದ ಹಿಂದು ಧರ್ಮದವರನ್ನು ರಕ್ಷಿಸಿದ ಮಹಾನ್ ಹಿಂದು ಎಂದು ಅವರನ್ನು ಪರಿಗಣಿಸಲಾಗಿದೆ. ಚಾಮುಂಡೇಶ್ವರಿ, ಮಧುರೆಯ ಮೀನಾಕ್ಷಿ ಮುಂತಾದವರ ಭಾವಚಿತ್ರಗಳು ಅಲ್ಲಿವೆ.

## ಶಿವಾನಂದ ಆಶ್ರಮ :

ಶಿವಾನಂದಾಶ್ರಮವು ತೀರ ಇತ್ತೀಚಿನದು. ಉತ್ತರ ಭಾರತದ ಹೃಷಿಕೇಶದಲ್ಲಿರುವ ಮೂಲ ಶಿವಾನಂದಾಶ್ರಮದೊಂದಿಗೆ ಇದು ಸಹ ಸಂಬಂಧ ಹೊಂದಿದೆ. ಕ್ರಿ.ಶ. 1961ರಿಂದ ಕಾರ್ಯಾಚರಣೆಯಲ್ಲಿರುವ ಈ ಆಶ್ರಮವು ಮೈಸೂರು ಸಹಕಾರಿ ಸಂಘಗಳ ನೋಂದಣಿ ಕಾನೂನಿಗೆ ಒಳಪಟ್ಟಿದೆ. ಆಶ್ರಮವಿರುವ ನಿವೇಶನವು ಸ್ಥಳೀಯ ಉದ್ದಿಮೆಗಾರರೊಬ್ಬರಿಂದ ಕಾಣಿಕೆಯಾಗಿ ಬಂದಿದೆ. ಮರಾಠ ಜಾತಿಗೆ ಸೇರಿದ ಒಂದು ಕುಟುಂಬದ ಪ್ರಯತ್ನದ ಫಲವಾಗಿ ಇದು ಸ್ಥಾಪಿತವಾಗಿದೆ. ಹೃಷಿಕೇಶದ ಶ್ರೀ ಶಿವಾನಂದರಿಂದ ಆಶೀರ್ವಾದ ಪಡೆದು ಮರಾಠ ಕುಟುಂಬದ ಸಹೋದರರಿಬ್ಬರು ಈ ಸಾಹಸ ಕಾರ್ಯಕ್ಕೆ ಕೈ ಹಾಕಿದರು. ಇವರಲ್ಲೊಬ್ಬ ಸಾಧು ಎಂದು ಘೋಷಿಸಿಕೊಂಡಿದ್ದಾನೆ. ಇನ್ನೊಬ್ಬ ಬ್ರಹ್ಮಚಾರಿಯಾದ ಮಾಜಿ ರೈಲ್ವೆ ನೌಕರ. ಆಶ್ರಮದ ವಿಶಾಲ ಸಭಾಂಗಣದ ಮಧ್ಯಭಾಗದಲ್ಲಿ ಸ್ವಾಮಿ ಶಿವಾನಂದರ ದೊಡ್ಡ ಭಾವಚಿತ್ರವಿದೆ. ಪಕ್ಕದಲ್ಲಿಯೇ ಪ್ರತಿಷ್ಠಾಪಿತ ಲಿಂಗವೊಂದಿದ್ದು ಇವೆರಡರ ಪೂಜೆ ನಿತ್ಯ ನಡೆಯುತ್ತಿದೆ. ಆಶ್ರಮವು ನಗರದಿಂದ ದೂರದಲ್ಲಿ ಏಕೆ ಸ್ಥಾಪಿತವಾಗಿದೆ ಎಂಬ ಪ್ರಶ್ನೆಗೆ ದೊರೆತ ಆದರ್ಶಮಯ ಉತ್ತರ ಇದು-- "ಅಧ್ಯಾತ್ಮಿಕ ಬೆಳವಣಿಗೆಗೆ ಉದ್ಧಾರಗಳಿಗೆ ಬೆಟ್ಟ ಕಣಿವೆಗಳು ಅತ್ಯಂತ ಸೂಕ್ತವಾದ ಸ್ಥಳಗಳೆಂದು ವೇದಾಂತ ದೃಷ್ಟಿಕೋನವು ಒತ್ತುಕೊಟ್ಟು ಹೇಳುತ್ತದೆ. ನಮ್ಮ ಪರಂಪರೆಯಲ್ಲಿ ದೇವಾಲಯಗಳು ಬೆಟ್ಟದ ಮೇಲೆ' ಆಶ್ರಮಗಳು ಕಣಿವೆಗಳಲ್ಲಿ ಇರುವುದು ಸಾಮಾನ್ಯ. ಮೈಸೂರಿನ ಸುತ್ತಲೂ ಆಧ್ಯಾತ್ಮಿಕ ಬೆಳವಣಿಗೆಗೆ ಚಾಮುಂಡಿ ಬೆಟ್ಟವು ಸುಂದರ ಪರಿಸರವನ್ನು ಒದಗಿಸಿ ಕೊಡುತ್ತದೆ."



ಈ ಆಶ್ರಮದ ಅನುಯಾಯಿಗಳು ವಿಶೇಷವಾಗಿ ಮೈಸೂರು ನಗರದ ವಿದ್ಯಾವಂತರು, ವಿಶ್ವವಿದ್ಯಾಲಯದ ಕೆಲವು ಪ್ರಾಧ್ಯಾಪಕರು, ಉದ್ಯಮಿಗಳು ಆಶ್ರಮದ ಚಟುವಟಿಕೆಗಳಲ್ಲಿ ಹೆಚ್ಚು ಆಸ್ಥೆ ವಹಿಸುತ್ತಾರೆಂದು ಹೇಳಲಾಗುತ್ತಿದೆ. ಈ ಆಶ್ರಮವು ಕಾಲ ಕಾಲಕ್ಕೆ ಭಜನೆ, ಪ್ರವಚನ ನಡೆಸುವುದಲ್ಲದೆ ಹದಿನೆಂಟನೆ ಅಖಿಲ ದಿವ್ಯಜ್ಞಾನ ಸಮ್ಮೇಳನವನ್ನು ಸಂಘಟಿಸುವಲ್ಲಿ ಮತ್ತು 1965ರಲ್ಲಿ ಸರ್ವಧರ್ಮ ಮಹಾಸಭೆಯನ್ನು ಸಂಘಟಿಸಲು ಸಹಭಾಗಿಯಾಗಿತ್ತು. ಶಿವಾನಂದರ ಉಪದೇಶಗಳನ್ನು ಜನಪ್ರಿಯಗೊಳಿಸಲು ಕನ್ನಡದಲ್ಲಿ ಕಿರುಹೊತ್ತಿಗೆಗಳನ್ನು ಪ್ರಕಟಿಸಿದೆ. ಪ್ರಾರ್ಥನಾ ಮಂದಿರದ ಗೋಡೆಗಳನ್ನು ರಾಮಕೃಷ್ಣ ವಿವೇಕಾನಂದ, ಏಸುಕ್ರಿಸ್ತ, ರಾಮದಾಸಸ್ವಾಮಿ (ಗೌಡಸಾರಸ್ವತ ಬ್ರಾಹ್ಮಣ ಸಾಧು) ಹಾಗೂ ಇತರರ ಭಾವಚಿತ್ರಗಳಿಂದ ಅಲಂಕಾರಿಸಲಾಗಿದೆ. ಈ ಎಲ್ಲ ಮಹಾಪುರುಷರು ತಮ್ಮದೇ ಆದ ರೀತಿಯಲ್ಲಿ ವಿಶ್ವದ ಜನತೆಗೆ ಸಂತೋಷ ಕೊಡಲು ಪ್ರಯತ್ನಿಸಿದವರೆಂದು  ಆಶ್ರಮದ ಸಂಘಟನಕಾರರು ಭಾವಿಸುತ್ತಾರೆ. ದಸರಾ ಉತ್ಸವದಲ್ಲಿ ವಿಶೇಷತಃ ರಥೋತ್ಸವದ ದಿನ ಅವರು ಪ್ರಾರ್ಥನೆ, ಕೆಲವೊಮ್ಮೆ ಅಖಂಡ ಭಜನೆಗಳನ್ನು ಏರ್ಪಡಿಸುತ್ತಾರೆ. ರಥೋತ್ಸವದ ದಿನ ಸಂಘಟಕರ ಕುಟುಂಬದ ಜನರಿಂದ  ತಯಾರಿಸಿದ ಸಸ್ಯಾಹಾರಿ ಅನ್ನಸಂತರ್ಪಣೆ ಭಕ್ತರಿಗೆಲ್ಲ ನಡೆಯುತ್ತದೆ.  ಆಶ್ರಮವು ಭವಿಷ್ಯದಲ್ಲಿ ಮಾಧ್ಯಮಿಕ ಶಾಲೆಯನ್ನು ಸ್ಥಾಪಿಸುವ ಯೋಜನೆಯೊಂದನ್ನು ಹೊಂದಿದೆ. ಅದಕ್ಕಾಗಿ ಪ್ರಮುಖ ನಾಗರಿಕರನ್ನು ಸಂಪರ್ಕಿಸುತ್ತಿದೆ.

## ಪೌರಾಣಿಕ  ಹಿನ್ನಲೆಯುಳ್ಳ ಸ್ಥಳಗಳು:

ಮೈಸೂರು 'ಮಹಾಭಾರತ'ದ ಪಾಂಡವರ ಕತೆಯೊಂದಿಗೆ ಸಂಬಂಧ ಹೊಂದಿದೆ. (ರೈಸ:1897:278) ಚಾಮುಂಡಿ ಬೆಟ್ಟದ ಮೇಲೆ 'ಕುಂತಿಕಲ್ಲು' ಎಂಬ ಬಂಡೆಗಲ್ಲೊಂದು ಇದೆ. ಪಾಂಡವರ ತಾಯಿ ಕುಂತಿಯು ಮಕ್ಕಳಿಂದ ದೂರವಿದ್ದಾಗ ಆ ಕಲ್ಲಿನ ಮೇಲೆ ಹೆಣ್ಣು ಮಕ್ಕಳ ಆಟ ಆಡುತ್ತಿದ್ದಳು ಎಂದು ಪ್ರತೀತಿ ಇದೆ. ದೇವಸ್ಥಾನದ ಅಧಿಕಾರಿಗಳು ಹಾಗೂ ಎಷ್ಟೋ ಸ್ಥಳೀಯ ಜನರು ಮಾರ್ಕಂಡೇಯ ಪುರಾಣ ಬರೆದ ಮಾರ್ಕಂಡೇಯ   ಷಿಯು ಚಾಮುಂಡಿಬೆಟ್ಟದ ಮೇಲೆಯೇ ತಪಸ್ಸು ಮಾಡಿದನೆಂದು ಹೇಳುತ್ತಾರೆ.

ಪೌರಾಣಿಕ ಕಥೆಗಳಲ್ಲಿ ಬರುವ ಚಾಮುಂಡೇಶ್ವರಿಯಿಂದ ಸಂಹರಿಸಲ್ಪಟ್ಟ ಮಹಿಷಾಸುರನಿಗೆ ಸಂಬಂಧಿಸಿದ ಅನೇಕ ಸ್ಥಳಗಳು ಇವೆ.  ಉದಾಹರಣೆಗೆ: ಕುಂತಿಕಲ್ಲಿನ ಸಮ್ಮುಖದಲ್ಲಿಯೆ ಕೋಣನ ಕೊಟ್ಟಿಗೆ ಎಂಬ ಗವಿ ಇದೆ. ಈ ಗವಿಯಲ್ಲಿ ಮಹಿಷಾಸುರನು ತನ್ನ ಕೋಣವನ್ನು ಕಟ್ಟುತ್ತಿದ್ದನೆಂದು ಹೇಳುತ್ತಾರೆ. ಬೆಟ್ಟದ ಉತ್ತರಕ್ಕೆ ಕಲ್ಲುಬಂಡೆಯ ದಿಣ್ಣೆಯೊಂದಿದೆ. ಅದಕ್ಕೆ ಕೋಣನರೆ ಎಂದು ಹೆಸರು. ಚಾಮುಂಡೇಶ್ವರಿಯು ಮಹಿಷಾಸುರನನ್ನು ಕೊಂದ ಅವಶೇಷವೆಂದು ಭಾವಿಸಲಾಗುವ ಈ ದಿಣ್ಣೆಯ ಮೇಲೆಯೇ ರಾಕ್ಷಸನು ಕೋಣದ ಮೇಲಿದ್ದಾಗಲೇ ಆಕೆಯು ಅವನನ್ನು ಸಂಹರಿಸಿದಳೆಂದು ಹೇಳಲಾಗುತ್ತದೆ. ಬಂಡೆಗಲ್ಲಿನ ಮೇಲಿರುವ ಕೆಲವು ಗುರುತುಗಳು ಕೋಣದ ಹೆಜ್ಜೆಯ ಗುರುತಳೆಂದು ಹೇಳಲಾಗುತ್ತಿದೆ. ಬಂಡೆಗಲ್ಲಿನ ಮೇಲೆ ವಿಶೇಷವಾಗಿ ತಗ್ಗು ಸ್ಥಳಗಳಲ್ಲಿ ಅಲ್ಲಲ್ಲಿ ಹರಡಿರುವ ಕೆಲವು ಕಲೆಗಳಿದ್ದು ಅವುಗಳನ್ನು ರಾಕ್ಷಸನ ರಕ್ತದ ಕಲೆಗಳೆಂದು ಹೇಳುತ್ತಾರೆ.

ಇವೆಲ್ಲವುಗಳಿಂದ ಹಾಗೂ ಮಹಾಭಾರತ, ಪುರಾಣಗಳ ಸಂಬಂಧಗಳಿಂದ ಚಾಮುಂಡಿಬೆಟ್ಟವನ್ನು ಸ್ಥಳೀಯ ಜನರು ಅಖಿಲ ಭಾರತ ಮಟ್ಟದ ಪವಿತ್ರಸ್ಥಳಗಳಲ್ಲಿ ಒಂದೊಂದು ಮನ್ನಿಸುತ್ತಾರೆ.

**ಮಂಟಪ:**

ಚಾಮುಂಡಿಬೆಟ್ಟದ ಮೇಲೆ ಮತ್ತು ಸುತ್ತಮುತ್ತಲೂ, ವಿವಿಧ ಜಾತಿಗಳಿಗೆ ಸೇರಿದ ಚಾಮುಂಡೇಶ್ವರಿ ಭಕ್ತರು ಭಕ್ತಿಯಿಂದ ಕಟ್ಟಿಸಿದ ಅನೇಕ ಮಂಟಪಗಳಿವೆ. ಸಾಮಾನ್ಯವಾಗಿ ಕಲ್ಲಿನಿಂದ ರಚಿತವಾದ ಈ ಮಂಟಪಗಳಗೆ ಕಾಂಕ್ರಿಟ್ ಅಥವಾ ಕಲ್ಲಿನ ಮೇಲ್ಹಾವಣಿ ಇದೆ. ಬೆಟ್ಟದ ಅಡಿಯಲ್ಲಿರುವ ಈ ಮಂಟಪಗಳನ್ನು ಕಟ್ಟಿಸಿದವರೂ ಕೂಡ ಸ್ವಜಾತಿಯವರಿಗೆ ಅನ್ನಸಂತರ್ಪಣೆ ಅರವಟ್ಟಿಗೆ ಇಡುವುದರ ಮುಖಾಂತರವಾಗಿ ದೇವಿಯ ಸೇವೆ ಸಲ್ಲಿಸುತ್ತಾರೆ. ಚಾಮುಂಡೇಶ್ವರಿ ದೇವಸ್ಥಾನದ ರಥೋತ್ಸವದ ದಿನದಂದು ಮಾತ್ರ ಅನ್ನಸಂತರ್ಪಣೆ ಇತ್ಯಾದಿ ನಡೆಯುತ್ತದೆ. ಅಂದು ಪ್ರತಿಯೊಂದು ಮಂಟಪದಲ್ಲಿಯೂ ಆ ಮಂಟಪದ ದಾನಿ ಅಥವಾ ಅವನ ವಂಶಜರು ಚಾಮುಂಡೇಶ್ವರಿ ಭಾವಚಿತ್ರವನ್ನು ಇಟ್ಟು ನಿರಾಡಂಬರ ಪೂಜೆ ನೆರವೇರಿಸುತ್ತಾರೆ. ಬೆಟ್ಟದ ಮೇಲಿದ್ದ ಮಂಟಪಕ್ಕೆ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯೊಂದಿಗೆ ಇತರ ದೇವತೆಗಳ ಉತ್ಸವದ ಮೂರ್ತಿಗಳನ್ನು ಕೊಂಡೊಯ್ಯುತ್ತಾರೆ. ಇಲ್ಲಿ ದಾನಿಗಳು ಹಾಗೂ ಅವರ ಜಾತಿಬಾಂಧವರ ದೇವತೆಗೆ ವಿಶೇಷ ಪೂಜೆ ಸಲ್ಲಿಸುವ ಅವಕಾಶ ಇರುತ್ತದೆ. ಸುಮಾರು 25 ರಷ್ಟು ಇರುವ ಈ ಮಂಟಪಗಳು ಲೌಕಿಕ ಹಾಗೂ ಧಾರ್ಮಿಕ ಕಾರ್ಯ ಪೂರೈಸುತ್ತವೆ. ಮೂರು ಮಂಟಪಗಳು ಸಂಪೂರ್ಣವಾಗಿ ವಿಶ್ರಾಂತಿ ಧಾಮಗಳಾಗಿವೆ. ಐದು ಮಂಟಪಗಳು ರಥೋತ್ಸವ ಕಾಲಕ್ಕೆ ಧಾರ್ಮಿಕ ಚಟುವಟಿಕೆಗಳಿಗೆ ಮೀಸಲಾಗಿದ್ದು ಉಳಿದ ಅವಧಿಯಲ್ಲಿ ಲೌಕಿಕ ಸ್ವರೂಪ ತಾಳುತ್ತವೆ. ಉದಾಹರಣೆಗೆ: ಸುಮಾರು ಎಪ್ಪತ್ತು-ಎಂಭತ್ತು ವರ್ಷಗಳ ಹಿಂದೆ ಕುಂಚಟಿಗ ಜಾತಿಯವರಿಂದ ಬೆಟ್ಟದ ಅಡಿಯ ಮೆಟ್ಟಿಲುಗಳ ಬಳಿ ಒಂದು ಮಂಟಪ ಕಟ್ಟಿಸಿದರು. ಈ ಮಂಟಪ ಇಡೀ ವರ್ಷ ನಾವು ನೋಡಿದಂತೆ ಸೈಕಲ್ ನಿಲ್ಲಿಸುವ ಸ್ಥಳಕ್ಕಾಗಿಯೇ ಕ್ರಿಶ್ಚಿಯನ್‌ನ ರಕ್ಷಣೆಯಲ್ಲಿ ತಮ್ಮ ಸೈಕಲ್ ಇಟ್ಟು ಹೋಗುತ್ತಾರೆ. ಚಾಮುಂಡಿ ಬೆಟ್ಟದ ಪಂಚಾಯಿತಿಗೆ ಒಪ್ಪಿಗೆ ಪಡೆದುಕೊಂಡು ಅವನು ಈ ಕೆಲಸದಲ್ಲಿ ತೊಡಗಿದ್ದಾನೆ. ರಥೋತ್ಸವದ ದಿನದಂದು ಆ ಭಾರತೀಯ ಕ್ರೈಸ್ತನು ಮಂಟಪವನ್ನು ತೆರವು ಮಾಡುತ್ತಾನೆ. ಮಂಟಪದ ಒಡೆಯನಾದ ಕುಂಚಟಿಗನು ಅದನ್ನು ಸ್ವಚ್ಛಗೊಳಿಸಿ ಚಾಮುಂಡೇಶ್ವರಿ ಭಾವಚಿತ್ರ ಇರಿಸುತ್ತಾನೆ.

ಮಂಟಪಗಳ ಗಣತಿಯ ಪ್ರಕಾರ ಭಾವಸಾರ ಕ್ಷತ್ರಿಯ, ವಿಶ್ವಕರ್ಮರು, ಜೆಟ್ಟಿ, ಲಾಡ, ಕುಂಚಟಿಗ, ಯಾದವ, ವಡ್ಡ, ಬ್ರಾಹ್ಮಣ ಹಾಗೂ ಇತರ ಜಾತಿಯವರು, ಇದಲ್ಲದೇ ಮೈಸೂರಿನ ಮಹಾರಾಜರು ಇವುಗಳ ನಿರ್ಮಾಣದಲ್ಲಿ ಭಾಗವಹಿಸಿದ್ದಾರೆ. (ಆದರೆ ಎರಡು ಮಂಟಪಗಳ ಬಗ್ಗೆ ಖಚಿತವಾದ ಮಾಹಿತಿ ನಮಗೆ ಸಿಕ್ಕಿಲ್ಲ) ಐತಿಹಾಸಿಕವಾಗಿ ನೋಡಲಾಗಿ, ಮೈಸೂರು ರಾಜರಿಂದ ಕಟ್ಟಿಸಲಾದ ಒಂದೇ ಒಂದು ಮಂಟಪವು ಇರುವುದು ನಮ್ಮ ಗಮನಕ್ಕೆ ಬಂತು. ಆದರೆ

---

4. ಲೋಹದಿಂದ ಮಾಡಿದ ಮೂಲದೇವತೆಯ ಪ್ರತಿರೂಪ.



ಶಿವಾರ್ಚಕರು ತಾವು ಸುಮರು 200 ವರ್ಷಗಳ ಹಿಂದೆ ಈಶ್ವರ ದೇವಾಲಯದ ಬಳಿ ಮಂಟಪ ಒಂದನ್ನು ಕಟ್ಟಿಸಿದ್ದಾಗಿ ಹೇಳಿಕೊಳ್ಳುತ್ತಾರೆ. ಈಗ ಅದು ನಾಮಶೇಷವಾಗಿದೆ. ನಮಗೆ ದೊರೆತ ಮಾಹಿತಿಯಂತೆ ವಡ್ಡರ ಜಾತಿಯ ಗುತ್ತೆದಾರನೊಬ್ಬನು ಇನ್ನೊಂದು ಮಂಟಪ ಕಟ್ಟಿಸುವ ವಿಚಾರದಲ್ಲಿ ಇದ್ದಾನೆ.

ಕುಂಚಟಿಗ ಹಾಗೂ ಲಾಡ ಜಾತಿಯ ಜನರು ಮಂಟಪ ಕಟ್ಟಿಸುವ ಕಾರ್ಯದಲ್ಲಿ ಅತಿ ಹೆಚ್ಚು ಭಾಗಿಯಾಗಿದ್ದಾರೆ. ಸುಮಾರು ತೊಂಭತ್ತೈದು ವರ್ಷಗಳ ಹಿಂದೆ ಕುಂಚಟಿಗ ಜಾತಿಯವನು ಯತ್ರಾರ್ಥಿಗಳು ವಿಶ್ರಾಂತಿ ಪಡೆಯುವುದಕ್ಕಾಗಿ ಛತ್ರವೊಂದನ್ನು ಕಟ್ಟಿಸಿದನು. ಇನ್ನೂ ಜನಪ್ರಿಯವಾದ ಈ ಛತ್ರದ ಆಡಳಿತವ್ನು ರಾಜ್ಯ ಸರಕಾರದ ಮುಜರಾಯಿ ಇಲಾಖೆ ವಹಿಸಿಕೊಂಡಿದೆ. ಸಂಕ್ಷಿಪ್ತವಾಗಿ : ಮೈಸೂರು ಮಹಾರಾಜರ ಕುಲದೇವತೆ ಚಾಮುಂಡೇಶ್ವರಿ ದೇವಿಯ ಹೆಸರನ್ನೇ ಪಡೆದ ಚಾಮುಂಡಿ ಬೆಟ್ಟವು ಧಾರ್ಮಿಕ ಕ್ಷೇತ್ರವಾಗುವ ಪ್ರಕ್ರಿಯೆಯಲ್ಲಿ ಒಂದು ಆಶ್ರಮ, ತೀರ ಇತ್ತೀಚೆಗೆ ಗುರುಪೂಜೆ ಸಮಾರಂಭ ಸಂದರ್ಭದಲ್ಲಿ (21-23 ಮಾರ್ಚ್ 1968) ಪ್ರಕಟಿಸಿದ ಕರಪತ್ರದಲ್ಲಿ ಚಾಮುಂಡೇಶ್ವರಿ ಪದದ ಹಿಂದೆ 'ಶ್ರೀ' ಪ್ರತ್ಯಯವು ಗೌರವ ಸೂಚಕವಾಗಿ ಪೂರ್ವ ಪ್ರತ್ಯಯ ಜೋಡಿಸಲಾಗಿದೆ. ಸಾಮಾನ್ಯವಾಗಿ 'ಶ್ರೀ' ಪ್ರತ್ಯಯವು ಗೌರವ ಸೂಚಕ ಪದವಾಗಿದೆ. ಈ ಸಂದರ್ಭದಲ್ಲಿ ಬೆಟ್ಟವನ್ನು ವೈಭವೀಕರಿಸಲು ಆಡಳಿತ ವರ್ಗವು ನಿರಂತರವಾಗಿ ಪ್ರಯತ್ನಿಸುತ್ತಿದೆ. ಉದಾಹರಣೆಗಾಗಿ : ಪದತಲ ಎಂಬ ಶಬ್ದವನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಲಾಗುತ್ತದೆ. ದೇವಾಲಯ ಹಾಗೂ ಮಠಗಳ ಜನರ ಈ ಬಗೆಯ ಪ್ರವೃತ್ತಿ ಅರ್ಥಪೂರ್ಣವಾಗಿದೆ.

ದೂರದ ಸ್ಥಳಗಳಿಂದ ಮೈಸೂರಿಗೆ ಬರುವ ಪ್ರವಾಸಿಗರಿಗೆ ಚಾಮುಂಡಿ ಬೆಟ್ಟವೆಂದರೆ ಚಾಮುಂಡಿ ದೇವಸ್ಥಾನ ಇರುವ ಸ್ಥಳ ಎಂದಷ್ಟೇ ಅರ್ಥ. ಪ್ರವಾಸಿ ಬಸ್ಸುಗಳು, ಕರಪತ್ರಗಳು, ಚಿತ್ರಗಳು ಹಾಗೂ ಪ್ರವಾಸಿಗರಿಗೆ ಸುಲಭವಾಗಿ ದೊರಕುವ ಇತರ ಪ್ರಚಾರ ಸಾಹಿತ್ಯ ಇತ್ಯಾದಿಗಳು ಚಾಮುಂಡಿ ಬೆಟ್ಟ ಅದರ ಭೌಗೋಳಿಕ ಪರಿಸರ ದೇವಸ್ಥಾನದ ಕಾರ್ಯಕಲಾಪಗಳು ಸುಗಮವಾಗಿ ನಡೆಯುವಲ್ಲಿ ಮೈಸೂರ ಮಹಾರಾಜರ ಪಾತ್ರ, ಉತ್ತಮ ರಸ್ತೆ, ಪ್ರತಿಮೆ, ಬೃಹದಾಕಾರದ ನದಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನತೆಗೆ ಚಾಮುಂಡಿ ಬೆಟ್ಟ ಎಂದರೆ ತಮ್ಮ ಹಳೆಯ ವೈಭವ ಕಳೆದುಕೊಂಡ, ಕೆಲವು ಇನ್ನೂ ಪ್ರಗತಿಪಥದಲ್ಲಿರುವ, ಕೆಲವು ಯಥಾಸ್ಥಿತಿಯಲ್ಲಿರುವ ಮಠ, ಕ್ಷೇತ್ರ, ದೇವಾಲಯ, ಮಂಟಪ ಮುಂತಾದವುಗಳನ್ನು ಒಳಗೊಂಡಿರುವ ಧಾರ್ಮಿಕ ಕ್ಷೇತ್ರ.

ಸ್ಥಳೀಯ ವಿದ್ಯಾವಂತ ಹಿಂದೂಗಳ ದೃಷ್ಟಿಯಲ್ಲಿ ಚಾಮುಂಡಿ ಬೆಟ್ಟವು ಪವಿತ್ರ ಗ್ರಂಥಗಳಲ್ಲಿ ಹಾಗೂ ಪುರಾಣ ಕಥೆಗಳಲ್ಲಿ ಉಲ್ಲೇಖಿತವಾದ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾಗಿದೆ. ಹಲವಾರು ಧಾರ್ಮಿಕ ಕ್ಷೇತ್ರಗಳ ಸಮೀಕ್ಷೆಯಿಂದ ತಿಳಿದುಬಂದ ಅಂಶವೆಂದರೆ ಬಹುಸಂಖ್ಯಾತ ಹಾಗೂ ಬಲಿಷ್ಠ ಜಾತಿಯವರಾದ ಬ್ರಾಹ್ಮಣ, ಶಿವಾರ್ಚಕ ಪೂಜಾರಿಗಳು ಮೂಲದವರು ಮತ್ತು ಸಂಖ್ಯೆಯ ದೃಷ್ಟಿಯಿಂದ ಪ್ರಬಲವಾಗಿದ್ದಾರೆ. ಬ್ರಾಹ್ಮಣ ಪುರೋಹಿತರು ಹೊರಗಿನಿಂದ ತರಲ್ಪಟ್ಟವರು. ಕಳೆದ ಒಂದುನೂರು ಐವತ್ತು ವರ್ಷಗಳ ಅವಧಿಯಲ್ಲಿ "ಬ್ರಾಹ್ಮಣ" ಹಾಗೂ "ಶಿವಾರ್ಚಕರು" ತಮ್ಮ

ಸ್ಥಾನಗಳಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ದೇವಸ್ಥಾನದ ಕ್ರಿಯಾವಿಧಿಗಳಲ್ಲಿಯೂ ಗಮನಾರ್ಹವಾದ ಬದಲಾವಣೆ ಆಗಿದೆ. ಆದರೆ ಮೊದಲಿನ ಪದ್ಧತಿಯ ಪೂಜೆ, ಬಲಿಗಳು ದೇವಸ್ಥಾನದ ಹೊರಗೆ ಈಗಲೂ ಆಚರಿಸಲ್ಪಡುತ್ತಿವೆ. ಇವುಗಳ ಬಗ್ಗೆ ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸೋಣ. ಬ್ರಾಹ್ಮಣರು ವೈದಿಕ ವಿಧಾನದ ಮೂಲಕ ಪೂಜಿಸುವ ನಾಲ್ಕು ದೇವಸ್ಥಾನಗಳನ್ನು ಬಿಟ್ಟು ಉಳಿದೆಲ್ಲ ಧಾರ್ಮಿಕ ಕ್ಷೇತ್ರಗಳಲ್ಲಿ ಬ್ರಾಹ್ಮಣೇತರರಿಂದ ಸ್ಥಾನಿಕ ಜನರ ಸಂಪ್ರದಾಯದಂತೆ ಪೂಜೆಯನ್ನೂ ನಡೆಸಲಾಗುತ್ತಿದೆ. ನಿತ್ಯ ಪೂಜೆಯಿಂದ ಹಿಡಿದು ವರ್ಷಕ್ಕೊಮ್ಮೆ ಪೂಜಿಸಿಕೊಳ್ಳುವ ಧಾರ್ಮಿಕ ಕ್ಷೇತ್ರಗಳೂ ಇವೆ. ವರ್ಷಕ್ಕೊಮ್ಮೆ ಪೂಜಿಸುವ ಪದ್ಧತಿಯಲ್ಲಿ ಕ್ಷೇತ್ರವನ್ನು ಸ್ವಚ್ಛಗೊಳಿಸುವುದು, ನಂದಾದೀಪವನ್ನು ಹಚ್ಚುವುದು, ಧೂಪ ಹಾಕುವುದು, ದೇವತೆಗಳನ್ನು ಪುಷ್ಪಪತ್ರಗಳಿಂದ ಅಲಂಕರಿಸುವುದು, ತೆಂಗಿನಕಾಯಿ ಒಡೆಯುವುದು ಮುಂತಾದವುಗಳು ಅವಶ್ಯಕ ಆಚರಣೆಯ ವಿಧಾನಗಳಾಗಿವೆ. ಈ ಪೂಜೆಗಳಲ್ಲಿ ಪವಿತ್ರ ಗ್ರಂಥ ಹಾಗೂ ಮಂತ್ರಗಳನ್ನು ಪಠಿಸಲಾಗುವುದಿಲ್ಲ. ಆದಾಗ್ಯೂ, ಈ ಎಷ್ಟೋ ಕ್ಷೇತ್ರಗಳ ಮೇಲೆ ಮಾರ್ಗಸಂಸ್ಕೃತಿಯ ಪ್ರಭಾವ ಹೆಚ್ಚುತ್ತಿರುವುದು ಗಮನಾರ್ಹವಾದ ಅಂಶವಾಗಿದೆ. ವೈದಿಕ ವಿಧಾನಗಳ ಪ್ರಭಾವಕ್ಕೆ ಒಳಗಾಗದೇ ವಿವಿಧ ಜಾತಿಯ ಜನರು ತಮ್ಮದೇ ಆದ ಸಾಂಪ್ರದಾಯಕ ವಿಧಾನಗಳಿಂದ ಚಾಮುಂಡೇಶ್ವರಿಯನ್ನು ಪೂಜಿಸುವ ಸ್ಥಳಗಳೆಂದರೆ ಮೂರು ಪಾದಕ್ಷೇತ್ರಗಳು.

ಬ್ರಾಹ್ಮಣರನ್ನು ಬಿಟ್ಟು ಉಳಿದ ಜಾತಿಯ ಜನರು ಎಲ್ಲಾ ಕ್ಷೇತ್ರಗಳ ಆರಾಧನೆಯಲ್ಲಿ ಭಾಗಿಯಾಗುವುದನ್ನು ಕಾಣಬಹುದು. ಸುತ್ತಲಿನ ಗ್ರಾಮಗಳು ಉಪಕ್ಷೇತ್ರಗಳೊಡನೆಯೂ ಸಹಿತ ನಿಕಟ ಸಂಬಂಧ ಹೊಂದಿವೆ. ಆದರೆ ಪ್ರಸಿದ್ಧ ದೇವಾಲಯಗಳ ಹಾಗೂ ಜನಪ್ರಿಯ ಮಠಗಳಿಗೆ ದೂರದ ಭಕ್ತರು ಸಹಿತ ಇದ್ದಾರೆ. ಚಾಮುಂಡಿ ಬೆಟ್ಟದ ಪವಿತ್ರ ಕ್ಷೇತ್ರದಲ್ಲಿ ವಿಷ್ಣುವಿನ ಆರಾಧಕರ ಕೇಂದ್ರಗಳಿರುವುದನ್ನು ಕಾಣಬಹುದು. ಆದರೂ ಶಿವಲಿಂಗ ಹಾಗೂ ನಂದಿಯ ಕ್ಷೇತ್ರಗಳು ಇನ್ನುಳಿದವುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿವೆ.

ಮಠ ದೇವಾಲಯ ಹಾಗೂ ಇತರ ಕ್ಷೇತ್ರಗಳ ಚರ್ಚೆಯು ಕ್ಷೇತ್ರದ ಸ್ಥಳ ಮಹಾತ್ಮೆ ಬೆಳೆಯುವ ಪ್ರಕ್ರಿಯೆಯನ್ನು ತೋರಿಸುತ್ತದೆ. ನಿರಂತರ ಪೋಷಣೆ ಪಡೆದ ಕ್ಷೇತ್ರಗಳು ಪ್ರಗತಿ ಹೊಂದಿವೆ. ಬದಲಾಗುವ ಕಾಲ ಮತ್ತು ಪೋಷಕರೊಂದಿಗೆ ಹೊಂದಿಕೊಳ್ಳಲಾರದ ಕ್ಷೇತ್ರಗಳ ಅವಜ್ಞೆಗೊಳಗಾಗಿವೆ. ಮಠಗಳ ವಿಷಯದಲ್ಲಿ ಈ ಅಂಶ ಹೆಚ್ಚು ಸ್ಪಷ್ಟವಾಗಿದೆ. ಮೈಸೂರು ಮಹಾರಾಜರ ಕುಟುಂಬದವರು ವಿವಿಧ ಕ್ಷೇತ್ರಗಳಿಗೆ ಸಹಾಯ ಸಲ್ಲಿಸುವಲ್ಲಿ ಪ್ರಮುಖ ಆಶ್ರಯದಾತರಾಗಿದ್ದಾರೆ. ತದನಂತರ ಕುಂಚಟಿಗ, ಲಾಡ, ಲಿಂಗಾಯಿತ ಸಮಾಜದ ಜನರು ತಮ್ಮ ಆಶ್ರಯ ನೀಡಿದ್ದಾರೆ. ಆದರೂ ಅವರ ಸ್ಥಳ ಪುರಾಣ ಉಪಕ್ಷೇತ್ರಗಳೊಡನೆ ಹೊಂದಿ ಸಂಬಂಧವು ಹೆಚ್ಚು ನಿಕಟವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣತಜ್ಞರು ಹಾಗೂ ಇತರ ಪ್ರಮುಖ ನಾಗರಿಕರು ಎಷ್ಟೋ ಪವಿತ್ರ ಕ್ಷೇತ್ರಗಳ ಮುಖ್ಯ ಆಶ್ರಯದಾತರಾಗಿ ಮುಂದೆ ಬಂದಿದ್ದಾರೆ.



# ಅಧ್ಯಾಯ - ಎರಡು

## ದೇವಸ್ಥಾನದ ನೌಕರರ ಸಂಘಟನೆ ಮತ್ತು ಸಂಪ್ರದಾಯಗಳು :

ಹಿಂದಿನ ಅಧ್ಯಾಯದಲ್ಲಿ 1819ರ[1] ಸುಮಾರಿಗೆ ಆಗಿನ ಮೈಸೂರು ಮಹಾರಾಜ 3ನೇ ಕೃಷ್ಣರಾಜ ಒಡೆಯರ ಆಜ್ಞೆಯ ಮೇರೆಗೆ, ವೈದಿಕ ವಿಧಿಗಳನ್ನು ಪೂರೈಸುವ ವಿಶೇಷ ಬ್ರಾಹ್ಮಣ ಪುರೋಹಿತ ಪರಿಣತರನ್ನು ತರುವ ಮೊದಲು ಶಿವಾರ್ಚಕರೇ ಚಾಮುಂಡಿ ದೇವಸ್ಥಾನದ ಹಾಗೂ ಇತರ ಪವಿತ್ರಕ್ಷೇತ್ರಗಳ ಅರ್ಚಕರಾಗಿದ್ದರೆಂದು ಉಲ್ಲೇಖಿಸಿದ್ದೇವೆ. ಈ ಬದಲಾವಣೆಯ ನಂತರ ದೇಶೀ ಸಂಸ್ಕೃತಿ ಮತ್ತು ಮಾರ್ಗ ಸಂಸ್ಕೃತಿಗಳು ಪರಸ್ಪರ ಪ್ರಭಾವಕ್ಕೆ ಒಳಗಾದವು. ಇದು ಹೇಗೆ ಸಂಭವಿಸಿತು ? ಭಿನ್ನಸಂಸ್ಕೃತಿಗಳು ಒಂದನ್ನೊಂದು ಪ್ರಭಾವಿಸಿದ್ದರೂ ವ್ಯಾಪ್ತಿ, ಆಳಗಳೆಷ್ಟು ಎಂಬುದು ಈ ಅಧ್ಯಾಯದ ವಿಷಯವಾಗಿದೆ.

ಸುಮಾರು ಇನ್ನೂರು ವರ್ಷಗಳ ಹಿಂದೆ ಬೆಟ್ಟದ ಮೇಲಿನ ದೇವಸ್ಥಾನ ಹಾಗೂ ಇತರ ಪವಿತ್ರ ಕ್ಷೇತ್ರಗಳು ಸಾಮಾನ್ಯ ಜನರಿಗೆ ದುರ್ಗಮವಾಗಿದ್ದವು. ಮೈಸೂರಿನ ಸುಲ್ತಾನ ಟಿಪ್ಪುವಿನ ಮರಣ ಮತ್ತು ಬ್ರಿಟಿಷರ ಮಧ್ಯ ಪ್ರವೇಶದಿಂದಾಗಿ ಮೈಸೂರು ದೇಶದಲ್ಲಿ ಉತ್ತಮ ರಾಜಕೀಯ ಪರಿಸ್ಥಿತಿ ತಲೆದೋರಿದಾಗ 3ನೇ ಕೃಷ್ಣರಾಜ ಒಡೆಯರು ಸಿಂಹಾಸನ ಏರಿದರು. ಅವರು ತಮ್ಮ ಆಳ್ವಿಕೆಯಲ್ಲಿ ದೇವಸ್ಥಾನಕ್ಕೆ ದತ್ತಿಯನ್ನು ಹಾಕಿಕೊಟ್ಟು ಭವ್ಯಗೋಪುರವನ್ನು ಕಟ್ಟಿಸಿ ದೇವಸ್ಥಾನವನ್ನು ನವೀಕರಿಸಿದರು.

### ಆಡಳಿತ :

ಸುಮಾರು 1851ರಿಂದ ದೇವಸ್ಥಾನವು ಮೈಸೂರು (ಮಹಾರಾಜರ) ಅರಮನೆಯ ಆಡಳಿತದ ನೇರವಾದ ನಿಯಂತ್ರಣದಲ್ಲಿದೆ. ದೇವಸ್ಥಾನದ ಜೊತೆಗೆ ಇತರೆ ದೇವಾಲಯಗಳಾದ ಮಹಾಬಲೇಶ್ವರ, ನಾರಾಯಣಸ್ವಾಮಿ ಹಾಗೂ ಇನ್ನುಳಿದ ಪವಿತ್ರ ಕ್ಷೇತ್ರಗಳೂ ಮಹಾರಾಜರ ಅರಮನೆಯ ಆಡಳಿತದ ನಿಯಂತ್ರಣದಲ್ಲಿವೆ. ಚಾಮುಂಡೇಶ್ವರಿ ದೇವಸ್ಥಾನದಿಂದ ಸುಮಾರು ನಾಲ್ಕು ಮೈಲಿನಾಚೆ ಉತ್ತನಹಳ್ಳಿ ದಿನ್ನೆಯ ಮೇಲೆ ಜ್ವಾಲಾ ತ್ರಿಪುರಸುಂದರಿ ದೇವಿಯ ದೇವಾಲಯ ಇದೆ. ಈ ದೇವತೆಯನ್ನು ಚಾಮುಂಡೇಶ್ವರಿಯ ತಂಗಿಯೆಂದು ಭಾವಿಸಲಾಗಿದೆ. ಈ ದೇವಾಲಯವೂ ಸಹಿತ ಅರಮನೆಯ ಆಡಳಿತದ ನಿಯಂತ್ರಣದಲ್ಲಿದೆ. ಈ ದೇವಾಲಯಗಳಲ್ಲದೆ

---

1. ಈ ವರ್ಷವನ್ನು ಖಚಿತವಾಗಿ ಹೇಳಬಹುದಾಗಿದೆ. ಯಾಕೆಂದರೆ 1819ರಲ್ಲಿ ಇಂದಿನ ಪುರೋಹಿತರ ಪೂರ್ವಜರಿಗೆ ಕೊಟ್ಟ ಸನದು, ಪೂರ್ವದ ಶಿವಾರ್ಚಕರ ಪೂಜಾದಿಗಳು ಉಪಭೋಗಿಸುತ್ತಿದ್ದ ಭೂಮಿಗಳನ್ನು ಚಾಮುಂಡೇಶ್ವರಿ ದೇವಿಗೆ 'ಅಷ್ಟಬಂಧನ ಸಂಪ್ರೋಕ್ಷಣ' ವಿಧಿಯನ್ನು ನೆರವೇರಿಸುವುದಕ್ಕಾಗಿ ಬ್ರಾಹ್ಮಣ ಪುರೋಹಿತರಿಗೆ ಭೂದಾನವಾಗಿ ವರ್ಗಾಯಿಸಿದ್ದನ್ನು ತಿಳಿಸುತ್ತದೆ.

ಗದ್ದಿಗೆಯಮ್ಮನ[2] ಕ್ಷೇತ್ರ ಇದೆ. ಇದು ಮೊದಲು ಬೆಟ್ಟದ ಮೇಲೆಯೇ ಪ್ರತ್ಯೇಕವಾದ ಗೃಹದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತ್ತು ಎನ್ನಲಾಗಿದೆ. ಈ ದೇವಾಲಯಗಳ ಮೇಲ್ವಿಚಾರಣೆಗೆ ಒಬ್ಬ 'ಪೇಶಕರ್' (ಮೇಲ್ವಿಚಾರಕ)ನನ್ನು ಇಡಲಾಗಿದೆ. ಅವನ ಸಹಾಯಕ್ಕೆ ಮೂರು ಜನ ಗುಮಾಸ್ತರಿದ್ದು, ಅವರು ದಿನನಿತ್ಯದ ಹಣದ ವ್ಯವಹಾರ, ಅವಶ್ಯವಾದ ವಸ್ತುಗಳ ಪೂರೈಕೆ ಹಾಗೂ ದೇವಾಲಯಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ಪೇಶಕರ್‌ನ ಹುದ್ದೆಗಳಲ್ಲಿ ಬ್ರಾಹ್ಮಣರೇ ಇದ್ದಾರೆ.

1851ರ ಪೂರ್ವದಲ್ಲಿ ಆಗಿನ ಮಹಾರಾಜರ ಸರಕಾರವು ಕಂದಾಯ ಇಲಾಖೆಯ ಮೂಲಕ ದೇವಸ್ಥಾನದ ಆಡಳಿತವನ್ನು ನೋಡಿಕೊಳ್ಳುತ್ತಿತ್ತು. ಆದರೆ 1951ರ ಸುಮಾರಿಗೆ ದೇವಸ್ಥಾನದ ಆಡಳಿತವನ್ನು 11,748 ರೂಪಾಯಿಗಳ ವಾರ್ಷಿಕ ಅನುದಾನದೊಂದಿಗೆ ಮಹಾರಾಜರಿಗೆ ವರ್ಗಾಯಿಸಲಾಯಿತೆಂದು ಮುಜಾರಾಯಿ ಕೈಪಿಡಿ (1934:592) ತಿಳಿಸುತ್ತದೆ.

**ಹಣಕಾಸು :**

ದೇವಸ್ಥಾನಕ್ಕೆ ಭೂಮಿಯ ಅನುದಾನ ಇರಲಿಲ್ಲ. ದೇವಸ್ಥಾನದ ಸಿಬ್ಬಂದಿಗೆ ವಸ್ತು ಹಾಗೂ ಹಣದ ರೂಪದಲ್ಲಿ ಸಂಭಾವನೆ ಕೊಡಬೇಕೆಂದು ನಿರ್ಣಯಿಸಲಾಗಿತ್ತು. ಇಂದಿಗೂ ಮುಂದುವರಿಸಿಕೊಂಡು ಬಂದಿರುವ ಸರಕಾರದ ಸಹಾಯಧನದ ಹೊರತಾಗಿ ದೇವಸ್ಥಾನಕ್ಕೆ ಬೇರೆ ಆದಾಯದ ಮೂಲ ಇರಲಿಲ್ಲ. ಆದ್ದರಿಂದ ಅರಮನೆಯ ಆಡಳಿತವು ಭಕ್ತರ ವಿನಂತಿಯ ಮೇರೆಗೆ ನಡೆಸುವ ವಿವಿಧ ಸೇವೆಗಳ ಮೇಲೆ ವಿಧಿಸುವ ಶುಲ್ಕಗಳ ಒಂದು ಭಾಗ ದೇವಸ್ಥಾನದ ನಿಧಿಯಲ್ಲಿ ತೆಗೆದಿಡುವ ವ್ಯವಸ್ಥೆ ಮಾಡಿತು. ಉದಾಹರಣೆಗೆ : ಭಕ್ತರು ತರುವ ಪ್ರತಿ ತೆಂಗಿನಕಾಯಿಗೆ ಎರಡು ಪೈಸೆ ತೆರಿಗೆ ಹಾಕಲಾಗುತ್ತಿತ್ತು ಮತ್ತು ಆ ಹಣವನ್ನು ದೇವಸ್ಥಾನದ ನಿಧಿಗೆ ಠೇವಣಿ ಮಾಡಲಾಗುತ್ತಿತ್ತು 'ಗೋಲಕ' (ಕಾಣಿಕೆ ಪೆಟ್ಟಿಗೆ)ಗಳು ದೇವಸ್ಥಾನಕ್ಕೆ ಪ್ರಮುಖ ಆದಾಯ ಮೂಲಗಳಾಗಿದ್ದವು.

**ದೇವಸ್ಥಾನದ ಸೇವಕ ವರ್ಗ :**

ಬೆಟ್ಟದಲ್ಲಿಯ ದೇವಸ್ಥಾನದ ಕ್ರಿಯಾವಿಧಿಗಳನ್ನು ನೆರವೇರಿಸಲು ದೊಡ್ಡ ಸಂಖ್ಯೆಯ ಸಿಬ್ಬಂದಿಯಿದ್ದು, ಅವರು ಬೇರೆ ಬೇರೆ ಕಾರ್ಯಗಳನ್ನು ನೆರವೇರಿಸುತ್ತಾರೆ. ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸಂಬಂಧಿಸಿದ ಕ್ರಿಯಾವಿಧಿ ಪರಿಣತರಲ್ಲಿ ಎರಡು ವರ್ಗದವರಿದ್ದಾರೆ – ಬ್ರಾಹ್ಮಣ ಮತ್ತು ಬ್ರಾಹ್ಮಣೇತರ. ಬ್ರಾಹ್ಮಣ ಪುರೋಹಿತರು ತಮ್ಮ ಪವಿತ್ರ ಕ್ರಿಯಾವಿಧಿಗಳಿಂದ ಮಾರ್ಗ ಸಂಸ್ಕೃತಿಯ ವಾಹಕರಾಗಿದ್ದಾರೆ. ಬ್ರಾಹ್ಮಣೇತರ ಕ್ರಿಯಾವಿಧಿ ಪರಿಣತರಾದ ಶಿವಾರ್ಚಕರು ತಮ್ಮ ಕ್ರಿಯಾವಿಧಿಗಳಲ್ಲಿ ದೇಶೀ ಸಂಸ್ಕೃತಿಯ ಅಂಶಗಳನ್ನು ಮೈಗೂಡಿಸಿಕೊಂಡಿದ್ದಾರೆ. ದೇವತೆಯ

2. 'ಗದ್ದಿಗೆ' ಎಂದರೆ ಕನ್ನಡದಲ್ಲಿ ಆಸನ (ಪೀಠ) ಎಂದು ಅರ್ಥ. ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿಯಮ್ಮನವರನ್ನು ಗದ್ದಿಗೆಯ ಮೇಲೆ ಪ್ರತಿಷ್ಠಾಪಿಸಿದ್ದಾರೆ. ಅವರನ್ನು ಗದ್ದಿಗೆಯಮ್ಮನವರೆಂದು ಪ್ರಸ್ತಾಪಿಸಲಾಗುತ್ತಿದೆ. ಆದ್ದರಿಂದ ಈ ವರದಿಯಲ್ಲಿ ಗದ್ದಿಗೆ ದೇವತೆ ಎಂದರೆ ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿಯಮ್ಮ ಎಂದು ಅರ್ಥ.



ಮೊದಲಿನ ಪೂಜಾರಿಗಳೆಂದು ಪರಿಗಣಿತರಾಗಿರುವರಿಂದ ಮೊದಲು ಬ್ರಾಹ್ಮಣೇತರ ಪೂಜಾರಿಗಳನ್ನೂ, ನಂತರ ಅವರ ಸ್ಥಾನಕ್ಕೆ ಬಂದ ಬ್ರಾಹ್ಮಣ ಪುರೋಹಿತರನ್ನು ಚರ್ಚಿಸೋಣ.

**ಬ್ರಾಹ್ಮಣೇತರ ಕ್ರಿಯಾವಿಧಿ ಪರಿಣಿತರು :**

ಶಿವಾರ್ಚಕರೆಂದು ಹೇಳಿಕೊಳ್ಳುವ ಬ್ರಾಹ್ಮಣೇತರ ಜಾತಿಯವರು ಸಾಂಪ್ರಾದಾಯಕವಾಗಿ ಶಿವದೇವಾಲಯಗಳ[3] ಪೂಜಾರಿಗಳಾಗಿದ್ದಾರೆ. ಶಿವಾರ್ಚಕರು ತಮ್ಮಲ್ಲೇ ಒಳ ಬಾಂಧವ್ಯ ಹೊಂದಿದ ಒಂದು ಪ್ರತ್ಯೇಕ ಗುಂಪು. ಅವರಿಗೆ ಬ್ರಾಹ್ಮಣರೊಂದಿಗೆ ಸಹ ಪಂಕ್ತಿ ಭೋಜನ ಬಳಕೆ ಇಲ್ಲವಾದರೂ ಲಿಂಗಾಯಿತ ಮತದವರೊಂದಿಗೆ ಇಂಥ ಸಂಬಂಧ ಇಟ್ಟಿಕೊಳ್ಳಲು ಯಾವುದೇ ನಿಷೇಧವಿಲ್ಲ. ಶಿವಾರ್ಚಕರು ಶಾಕಾಹಾರಿಗಳು. ಲಿಂಗವನ್ನು ಧರಿಸುತ್ತಾರೆ. ಜೊತೆಗೆ ಜನಿವಾರವನ್ನೂ ಧರಿಸುತ್ತಾರೆ, ಸತ್ತವರನ್ನು ಹೂಳುತ್ತಾರೆ.

ಶಿವಾರ್ಚಕರ ಮಹತ್ವದ ಧಾರ್ಮಿಕ ವಿಧಾನಗಳಲ್ಲಿ ಪೌರೋಹಿತ್ಯ ವಹಿಸಲು ಅದೇ ಜಾತಿಗೆ ಸೇರಿದ ಮನೆ ಪೂಜಾರಿಗಳಿದ್ದಾರೆ. ಆದರೆ ಲಿಂಗಾಯಿತರಿಗಿರುವಂತೆ ಅವರಿಗೆ ಧರ್ಮಬೋಧಕ ಗುರುವಿಲ್ಲ ಎಂಬುದು ಕಂಡುಬಂದಿದೆ. ಲಿಂಗಾಯಿತರು ಇವರನ್ನು ತಮಗಿಂತ ಕೆಳಗಿನವರೆಂದು ಪರಿಗಣಿಸುತ್ತಾರೆ. ಏಕೆಂದರೆ ಶಿವಾರ್ಚಕರು ಸ್ಥಾವರಲಿಂಗ ಪೂಜಿಸಿದರೆ ಲಿಂಗಾಯಿತರು ಇಷ್ಟಲಿಂಗ ಪೂಜಿಸುತ್ತಾರೆ. ವಿಶೇಷ ಅಂಶವೆಂದರೆ, ಬೆಟ್ಟದ ಮೇಲಿನ ಶಿವಾರ್ಚಕರು ತಮ್ಮನ್ನು ಲಿಂಗಾಯಿತರೆಂದೇ ಭಾವಿಸುತ್ತಾರೆ. ಬ್ರಾಹ್ಮಣ ಮತ್ತು ರಾಜ ಪರಿವಾರದಂಥ ಇತರ ಜಾತಿಯವರೂ ಬಳಕೆ ಮಾತಿನಲ್ಲಿ ಅವರನ್ನು ಲಿಂಗಾಯಿತರೆಂದೇ ಸಂಬೋಧಿಸುತ್ತಾರೆ.

ಬೆಟ್ಟದಲ್ಲಿನ ಲೌಕಿಕ ಶಿವಾರ್ಚಕರಿಗೆ ಧಾರ್ಮಿಕ ವಿಧಿಗಳನ್ನು ಪೂರೈಸಲು ಶಿವಾರ್ಚಕರ ಗುರು ಒಬ್ಬನಿದ್ದಾನೆ. ಅವಶ್ಯಕತೆ ಇದ್ದಾಗ ಈ ಶಿವಾರ್ಚಕ ಗುರು ನೆರೆ–ಹೊರೆ ಹಳ್ಳಿಗಳ ಲೌಕಿಕ ಶಿವಾರ್ಚಕರಿಗೂ ಸೇವೆ ಸಲ್ಲಿಸುತ್ತಾನೆ. ಈತನಿಗೆ 'ಪುರೋಹಿತ' ಎಂದೇ ಹೆಸರಿದೆ. ಈತ ಜ್ಯೋತಿಷ್ಯ ಶಾಸ್ತ್ರವನ್ನು ಬಲ್ಲವನೆಂದೂ ಸಂಸ್ಕೃತದ ಜ್ಞಾನ ಉಳ್ಳವನೆಂದೂ ಹೇಳುತ್ತಾರೆ. ಬೆಟ್ಟದ ಮೇಲಿನ ಶಿವಾರ್ಚಕರ ವಿವಾಹ ಸಮಾರಂಭಗಳನ್ನು ಸಂಸ್ಕೃತದ ಮಂತ್ರ ಪಠಿಸುತ್ತ ವೈದಿಕ ವಿಧಾನದಂತೆ ನೆರವೇರಿಸುತ್ತಾರೆ. ಆತನು ಕೆಲವು ಕ್ರಿಯಾಚರಣೆಗಳನ್ನು ತನ್ನ ತಂದೆಯಿಂದ ಕಲಿತಿರುವುದಾಗಿಯೂ, ಜೊತೆಗೆ ಪುಸ್ತಕಗಳ ಅಭ್ಯಾಸ ಹಾಗೂ ಬ್ರಾಹ್ಮಣ ಪಂಡಿತರ ಸಲಹೆಗಳಿಂದ ತನ್ನ ಜ್ಞಾನವನ್ನು ಹೆಚ್ಚಿಸಿಕೊಂಡಿರುವುದಾಗಿಯೂ ಆತನೇ ತಿಳಿಸಿದ.

ಶಿವಾರ್ಚಕ ಪುರೋಹಿತನ ಪ್ರಕಾರ ಅವರಿಗೆ ಬ್ರಾಹ್ಮಣರಿಗಿರುವಂತೆ ಗೋತ್ರ ಹಾಗೂ ಸೂತ್ರಗಳಿವೆ. ತನ್ನ ಜಾತಿಯ ಗೋತ್ರ–ಸೂತ್ರಗಳ ಬಗ್ಗೆ ಅಧಿಕಾರಯುತವಾಗಿ ಹೇಳಬಲ್ಲವನು ಬೆಟ್ಟದಲ್ಲಿ ತಾನೊಬ್ಬನೇ ಎಂಬುದಾಗಿ ಆತ ಆತ್ಮವಿಶ್ವಾಸದಿಂದ ಹೇಳಿದ. ತನ್ನ ವಾದವನ್ನು ವಿವರಿಸಲು

3. ಶಿವಾರ್ಚಕರು ಸುಮಾರು 200 ವರ್ಷಗಳ ಹಿಂದೆ ಮೈಸೂರು ಜಿಲ್ಲೆಯ ನಂಜನಗೂಡಿನ ಪ್ರಸಿದ್ಧ ಈಶ್ವರ ದೇವಾಲಯದ ಅರ್ಚಕರು ತಮ್ಮ ಜಾತಿಯವರೇ ಆಗಿದ್ದರೆಂದು ಪ್ರತಿಪಾದಿಸುತ್ತಾರೆ. ನಂಜನಗೂಡಿನ ಹಾಗೂ ಮೈಸೂರಿನ ವಿಶೇಷ ಪರಿಣತ ಬ್ರಾಹ್ಮಣರು ಅವರ ನಿಲುವನ್ನು ಅಲ್ಲಗಳೆಯುವುದಿಲ್ಲ.

ಆತ ಸಂಸ್ಕೃತ ಶ್ಲೋಕವೊಂದನ್ನು ಉದ್ಧರಿಸಿದ. ಸದಾಶಿವ, ಈಶ್ವರ, ಮಹೇಶ್ವರ, ರುದ್ರಕ ಹಾಗೂ ವಿಶ್ವನಾಥ[4] ಎಂಬ 5 ಗೋತ್ರಗಳೂ ಇರುವುದಾಗಿ ಅವನ ಅಭಿಪ್ರಾಯ. ಮೇಲಿನ ಅನೇಕ ಶಿವಾರ್ಚಕರನ್ನು ವಿಚಾರಿಸಲಾಗಿ ಅವರಿಗೆ ಈ ಬಗ್ಗೆ ಹೆಚ್ಚು ತಿಳಿದಿಲ್ಲವೆಂಬುದು ಸ್ಪಷ್ಟವಾಯಿತು. ಮೂರು ಸಂದರ್ಭದಲ್ಲಿ ಪುರೋಹಿತನನ್ನೇ ಕೇಳಲು ಸೂಚಿಸಿದರು.

ಕೆಲವು ಶಿವಾರ್ಚಕರು ಬ್ರಾಹ್ಮಣರ ಜೊತೆಗೆ ಸಂಬಂಧ ಜೋಡಿಸಿಕೊಳ್ಳಲು ಕೆಲವೊಂದು ಕಟ್ಟುಕತೆಗಳನ್ನು ಹೇಳುತ್ತಾ ಬಂದಿದ್ದಾರೆ ಎಂಬುದನ್ನು ನೋಡಿದ್ದೇವೆ. ಈ ಪ್ರವೃತ್ತಿಯ ಬ್ರಾಹ್ಮಣೇತರ ಅರ್ಚಕ ವರ್ಗವು ಸಂಸ್ಕೃತಾನುಕರಣಕ್ಕೆ ಒಳಗಾಗುವ ಪ್ರಕ್ರಿಯೆಯ ಸೂಚಕವಾಗಿದೆ. ಉದಾಹರಣೆಗೆ : ಎಷ್ಟೋ ಶಿವಾರ್ಚಕರು ತಮ್ಮನ್ನು 'ಶುದ್ಧ' ಶೈವ ಶಿವಾರ್ಚಕರು ಎಂದು ತಿಳಿದುಕೊಂಡಿದ್ದಾರೆ (ಶಿವನ ಪೂಜಕರ ಜಾತಿ). ಶುದ್ಧ ಎಂಬ ಪೂರ್ವ ಪ್ರತ್ಯಯವು ಇನ್ನುಳಿದ ಸಾಮಾನ್ಯ ಶಿವಪೂಜಕರಿಗಿಂತ ತಾವು ಮೇಲಿನವರೆಂದು ಕಾಣಿಸಿಕೊಳ್ಳಬೇಕೆಂಬ ಪ್ರಯತ್ನದ ಸೂಚಕವಾಗಿದೆ. ಇದಕ್ಕಾಗಿ ಅವರ ಅನುಸರಿಸುವ ಮಾರ್ಗವು ಸ್ವಾರಸ್ಯಕರವಾಗಿದೆ. ಕೆಲವು ದೇವಸ್ಥಾನದ ಪುರೋಹಿತರಾದ ತಮಿಳು ಮಾತನಾಡುವ ದೀಕ್ಷಿತ ಬ್ರಾಹ್ಮಣರೊಂದಿಗೆ ರಕ್ತ ಸಂಬಂಧಕ್ಕೆ ಪ್ರಯತ್ನಿಸಿದ ಶಿವಾರ್ಚಕರೂ ಕೆಲವರಿದ್ದಾರೆ. ಹೆಚ್ಚುಕಡಿಮೆ ಒಂದೇ ರೀತಿಯಲ್ಲಿದ್ದ ಮೂರು ಜನ ಶಿವಾರ್ಚಕರ ಹೇಳಿಕೆಯ ಪ್ರಕಾರ ಸುಮಾರು 50 ವರ್ಷಗಳ ಹಿಂದೆ ಬೆಟ್ಟದ ಶಿವಾಚಕರು ದೀಕ್ಷಿತ ಬ್ರಾಹ್ಮಣರೊಂದಿಗೆ ಭೋಜನ ಹಾಗೂ ವೈವಾಹಿಕ ರಕ್ತ ಸಂಬಂಧ ಹೊಂದಿದ್ದರು. ಕೆಲವು ಕಾರಣಗಳಿಗಾಗಿ ಈ ಸಂಬಂಧ ನಿಂತುಹೋಯಿತು ಎಂದು ತಿಳಿದುಬಂತು. ಶಿವಾರ್ಚಕರು ಎಷ್ಟೋ ದಿನಗಳಿಂದ ನಡೆದು ಬಂದಿದ್ದ ದೀಕ್ಷಿತರ ಶವವನ್ನು ಹೊರುವ ಪದ್ಧತಿಯನ್ನು ನಿಲ್ಲಿಸಿಬಿಟ್ಟರು. ಈ ಬಿರುಕಿನಿಂದಾಗಿ ದೀಕ್ಷಿತರು ಉಳಿದ ಬ್ರಾಹ್ಮಣ ಪಕ್ಷಕ್ಕೆ ತಿರುಗುವಂತಗೆ ಮಾಡಿತು. ನಮಗೆ ಹೇಳಿಕೆ ಕೊಟ್ಟ ಮೂರು ಜನ ಶಿವಾರ್ಚಕರ ಅಭಿಪ್ರಾಯದ ತಿರುಳು ಇದೇ ಆಗಿದ್ದರೂ, ಉಳಿದ ಎಷ್ಟೋ ಜನ ಶಿವಾರ್ಚಕರು ಈ ಅಭಿಪ್ರಾಯವನ್ನು ಅನುಮೋದಿಸುವುದಿಲ್ಲ.

ಬೆಟ್ಟದ ಶಿವಾರ್ಚಕರ ವಿವಾಹ ಸಮಾರಂಭದಲ್ಲಿ ಶಿವಾರ್ಚಕ ಪುರೋಹಿತನೊಡನೆ ದೀಕ್ಷಿತ ಬ್ರಾಹ್ಮಣನೂ ಮಾಂಗಲ್ಯಧಾರಣ ಸಮಯದಲ್ಲಿ ಪೌರೋಹಿತ್ಯ ಮಾಡಿದರೂ, ಬ್ರಾಹ್ಮಣರ ಸೇವೆ ಯಾವಾಗಲೂ ಅನಿವಾರ್ಯ ವೆನಿಸುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು. ಚಾಮುಂಡೇಶ್ವರಿ, ಮಹಾಬಲೇಶ್ವರ ದೇವಾಲಯಗಳ ದೀಕ್ಷಿತ ಬ್ರಾಹ್ಮಣ ಪುರೋಹಿತರು ವಿವಾಹ ಸಮಾರಂಭಗಳಲ್ಲಿ ತಾಳಿ ಕಟ್ಟುವ ಕ್ರಿಯಾವಿಧಿಯಲ್ಲಿ ಮಾತ್ರವೇ ಅಲ್ಲದೆ, ಅಸ್ಪೃಶ್ಯ ಜಾತಿಯೊಂದನ್ನು ಬಿಟ್ಟು ಬೆಟ್ಟದ ಇತರೆ ಬ್ರಾಹ್ಮಣೇತರ ಜಾತಿಗಳ ವಿವಾಹ ಸಮಯದಲ್ಲಿಯೂ ಈ ಸಾಂಪ್ರದಾಯಿಕ ಸೇವೆ ಪೂರೈಸುತ್ತಾರೆ. ಬ್ರಾಹ್ಮಣೇತರ ಜಾತಿಗಳ ವಿಷಯದಲ್ಲಿ ದೀಕ್ಷಿತ ಬ್ರಾಹ್ಮಣರ ಪೌರೋಹಿತ್ಯ ಅವಶ್ಯಕ, ಆದರೆ ಶಿವಾರ್ಚಕರಲ್ಲಿ ಹಾಗಿಲ್ಲ. ನಾವು ನೋಡಿದ ಒಂದು ಶಿವಾರ್ಚಕ ವಿವಾಹ ಸಂದರ್ಭದಲ್ಲಿ ಪೌರೋಹಿತ್ಯಕ್ಕಾಗಿ ಆಮಂತ್ರಿಸಲ್ಪಟ್ಟಿದ್ದ ದೀಕ್ಷಿತ ಬ್ರಾಹ್ಮಣನಿಗೆ

4. ಸದಾಶಿವ, ಈಶ್ವರ, ಮಹೇಶ್ವರ, ರುದ್ರಕ, ವಿಶ್ವನಾಥ ಈ ಐವರಿಂದ ಐದು ಗೋತ್ರಗಳು ಉದ್ಭವಿಸಿವೆ.



ವೈಯಕ್ತಿಕ ತೊಂದರೆಗಳಿಂದಾಗಿ ಮಾಂಗಲ್ಯಧಾರಣ ವಿಧಿಯನ್ನು ನೆರವೇರಿಸಲು ಸಾಧ್ಯವಾಗದ ಕಾರಣ ಶಿವಾರ್ಚಕರ ಪುರೋಹಿತನೇ ಎಲ್ಲ ಅವಶ್ಯಕ ಕ್ರಿಯಾವಿಧಿಗಳನ್ನು ನೆರವೇರಿಸಿದ. ಕೇವಲ ಚಾಮುಂಡಿ ಬೆಟ್ಟದಲ್ಲಿ ಮಾತ್ರ ಶಿವಾರ್ಚಕರ ವಿವಾಹಕ್ಕೆ ಬ್ರಾಹ್ಮಣರನ್ನು ಆಮಂತ್ರಿಸುವ ಸಂಪ್ರದಾಯ ಇದೆಯೆಂದು ಶಿವಾರ್ಚಕನು ಒತ್ತಿ ಹೇಳಿದನು. ದೇವಸ್ಥಾನದ ಮರ್ಯಾದೆ ಕೊಡುವುದಕ್ಕಾಗಿ ಸ್ಥಳೀಯ ಬ್ರಾಹ್ಮಣರೊಂದಿಗೆ ಉದಾರತೆಯಿಂದ ಇರುವುದಾಗಿ ಅವರು ಹೇಳಿದರು.

## ಶಿವಾರ್ಚಕ ಪರಿಣಿತರ ಕಾರ್ಯಗಳು

### 1. ಕ್ರಿಯಾವಿಧಿ ಸೇವೆಯ ಪ್ರಕಾರಗಳು :

ದೇವಸ್ಥಾನದಲ್ಲಿ ಬ್ರಾಹ್ಮಣ ಪರಿಚಾರಕನಿಗೆ ಭಕ್ತರು ತಂದು ಪೂಜಾ ಸಾಮಗ್ರಿಗಳನ್ನು[5] ಗರ್ಭಗುಡಿಗೆ ಒಯ್ಯುವುದು ಮತ್ತು ದೇವತೆಗೆ ನಿವೇದಿಸಿದ ನಂತರ ಆಯಾ ಭಕ್ತರಿಗೆ ಹಿಂತಿರುಗಿಸುವ ಸಾಂಪ್ರದಾಯಕ ಹಕ್ಕಿದೆ. ಕಾಲಾಂತರದಲ್ಲಿ ಕಾವಲು ಕೆಲಸ ಮಾಡುವ ಶಿವಾರ್ಚಕರು ಸಹ ಕ್ರಮೇಣ ಪರಿಚಾರಕನ ಕೆಲಸ ಮಾಡಲು ಪ್ರಾರಂಭಿಸಿದರು. ಇಬ್ಬರು ಶಿವಾರ್ಚಕರು ನಿತ್ಯವೂ ಸರದಿಯಂತೆ ಕಾವಲು ಮಾಡುತ್ತಾರೆ. ಮುಂಗಳವಾರ ಹಾಗೂ ಶುಕ್ರವಾರ ಭಕ್ತರ ಸಂಖ್ಯೆ ಹೆಚ್ಚು ಇರುವುದರಿಂದ ಮತ್ತು ಬೇರೆ ಬ್ರಾಹ್ಮಣ ಸಿಬ್ಬಂದಿ ಈ ಕೆಲಸ ಮಾಡುವುದಿಲ್ಲವಾದ್ದರಿಂದ ಶಿವಾರ್ಚಕರ ಈ ಸೇವೆ ಅನಿವಾರ್ಯವಾಗುತ್ತದೆ. ಇಂತಹ ಸೇವೆಗಳಿಗಾಗಿ ಭಕ್ತರು ಹಣದ ರೂಪದಲ್ಲಿ ದಕ್ಷಿಣೆ ಸಲ್ಲಿಸುವುದರಿಂದ ಆ ಕೆಲಸ ಮಾಡುವ ಶಿವಾರ್ಚಕರಿಗೆ ಇದರಿಂದ ಆರ್ಥಿಕ ಲಾಭವಿದೆ.

ಶಿವಾರ್ಚಕರು ಒಪ್ಪಿಸುವ ಈ ಸೇವೆಗೆ ಸಾಮಾನ್ಯವಾಗಿ, ಬ್ರಾಹ್ಮಣ ಸಿಬ್ಬಂದಿಯೂ ಆಕ್ಷೇಪಿಸುವಂತೆ ಕಾಣುವುದಿಲ್ಲ. ಶಿವಾರ್ಚಕರು ತಮ್ಮ ಸಹಾಯ ಹಸ್ತ ನೀಡುತ್ತಿದ್ದಾರೆಂದೇ ಬ್ರಾಹ್ಮಣ ಪರಿಚಾರಕರು ಭಾವಿಸುತ್ತಾರೆ. ಶಿವಾರ್ಚಕ ಪರಿಣತರು ಈ ಸೇವೆ ಸಲ್ಲಿಸುವಾಗ ಉಡಿಗೆ ತೊಡಿಗೆ, ಜನಿವಾರ ಧರಿಸುವುದು, ಜುಟ್ಟು ಬಿಡುವುದು ಮುಂತಾದವುಗಳಲ್ಲಿ ಬ್ರಾಹ್ಮಣರನ್ನು ಅನುಕರಿಸುವುದು ಮೋಜಿನ ಸಂಗತಿಯಾಗಿದೆ. ಸಾಮಾನ್ಯವಾಗಿ ಶಿವಾರ್ಚಕರು ಜನಿವಾರ ಧರಿಸಿದರೂ ಅದಕ್ಕೆ ಲಿಂಗವನ್ನು ಕೂಡಾ ಕಟ್ಟಲಾಗಿರುತ್ತದೆ. ಆದರೆ ದೇವಸ್ಥಾನದಲ್ಲಿ ಕೆಲಸ ಮಾಡುವಾಗ ಲಿಂಗವನ್ನು ಸೊಂಟದ ಉಡಿಗೆಯಲ್ಲಿ ಎಚ್ಚರಿಕೆಯಿಂದ ಮುಚ್ಚಿಕೊಳ್ಳುತ್ತಾರೆ.

ಭಕ್ತರ ಸಂಖ್ಯೆ ಹೆಚ್ಚಾಗಿರುವ ಹಾಗೂ ಭಕ್ತರು ಬೇಗನೆ ಹಿಂತಿರುಗಲು ಆತುರವಾಗಿರುವ ಪ್ರಸಂಗದಲ್ಲಿ ಧ್ವಜಸ್ತಂಬದ ಹತ್ತಿರದ ದೇವಿ ಪಾದಗಟ್ಟೆಯ ಬಳಿ ಕಾಯುತ್ತಿರುವ ಇತರ ಸಿಬ್ಬಂದಿ, ಕಾಯಿ ಒಡೆಯುವ, ಬಾಳೆಹಣ್ಣು ಸುಲಿಯುವ, ಊದಿನಕಡ್ಡಿ ಹಚ್ಚು, ಕರ್ಪೂರ ಆರತಿ ಬೆಳಗುವ ವಿಧಿಗಳನ್ನು ಪೂರೈಸುತ್ತಾರೆ. ಮಧ್ಯಾಹ್ನ ಒಂದರಿಂದ ಸಾಯಂಕಾಲ ಐದು ಗಂಟೆಯವರೆಗೆ

5. ಕೈ ಬುಟ್ಟಿ ಪ್ಲಾಸ್ಟಿಕ್ ಚೀಲ ಅಥವಾ ಲೋಹದ ತಟ್ಟೆಗಳಲ್ಲಿ ತಂದ ತೆಂಗಿನಕಾಯಿ, ಬಾಳೆಹಣ್ಣು, ಊದಿನಕಡ್ಡಿ, ಕರ್ಪೂರವಡೆ, ಹೂವು ಮುಂತಾದವುಗಳಿಗೆ ಪೂಜಾ ಸಾಮಗ್ರಿ ಎಂದು ಹೇಳುತ್ತಾರೆ.

ದೇವಸ್ಥಾನದ ದ್ವಾರ ಮುಚ್ಚಿದಾಗ ಕಾವಲಿದ್ದ ಶಿವಾರ್ಚಕರು ಪೂಜಾರಿಯ ವಿಧಿಗಳನ್ನು ಪೂರೈಸಿ ದಕ್ಷಿಣೆ ಸ್ವೀಕರಿಸಿ, ಪೂಜಾ ಸಾಮಗ್ರಿ ಹಿಂತಿರುಗಿಸುತ್ತಾನೆ.

ಶಿವಾರ್ಚಕರು ಅಸ್ಪೃಶ್ಯ ಜಾತಿಯವರ ಸೇವೆಯನ್ನೂ ಪೂರೈಸುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಅಸ್ಪೃಶ್ಯ ಭಕ್ತರಿಗೆ ದೇವಾಲಯದಲ್ಲಿ ಪ್ರವೇಶ ಇರಲಿಲ್ಲ. ಆದ್ದರಿಂದ, ಅಂತಹ ಭಕ್ತರು ದೇವಸ್ಥಾನದ ಮಹಾದ್ವಾರದ ಹೊರಗೆ ನಿಂತು, ಕ್ರಿಯಾವಿಧಿಗಳ ಪೂರೈಕೆಗಾಗಿ ಶಿವಾರ್ಚಕ ಪರಿಣತರನ್ನೇ ಅವಲಂಬಿಸುತ್ತಿದ್ದರು. ಪೂಜಾ ಸಾಮಗ್ರಿಗಳನ್ನು ದೇವಸ್ಥಾನದಲ್ಲಿ ಒಯ್ದಾಗ ಬ್ರಾಹ್ಮಣ ಪುರೋಹಿತನು ತೀರ್ಥ ಪ್ರೋಕ್ಷಣೆ ಮಾಡಿ, ನಂತರ ಕ್ರಿಯಾವಿಧಿಯನ್ನು ಪೂರೈಸುತ್ತಿದ್ದ. ಆಮೇಲೆ ಶಿವಾರ್ಚಕರು ಪ್ರಸಾದವನ್ನು[6] ಒಯ್ದು ಅಸ್ಪೃಶ್ಯ ಭಕ್ತರಿಗೆ ಮರಳಿ ಕೊಡುತ್ತಿದ್ದರು. ಈಗ ಅಸ್ಪೃಶ್ಯ ಜಾತಿಯವರಿಗೆ ಕಾನೂನು ಪ್ರಕಾರ ದೇವಸ್ಥಾನದ ಪ್ರವೇಶಕ್ಕೆ ಯಾವುದೇ ನಿರ್ಬಂಧವಿರದಿದ್ದರೂ ಕೂಡ ಈ ಜಾತಿಯ ಎಷ್ಟೋ ಭಕ್ತರು ಸ್ವಂತ ಇಚ್ಛೆಯಿಂದಲೇ ದೇವಸ್ಥಾನದ ಪ್ರವೇಶದ ಗೊಡವೆಗೆ ಹೋಗದೆ ಶಿವಾರ್ಚಕರ ಸೇವೆಯನ್ನು ಅವಲಂಬಿಸಿರುವುದು ನಮ್ಮ ಗಮನಕ್ಕೆ ಬಂತು.

ಸ್ಥಳ ಮಹಾತ್ಮೆ ಅಧ್ಯಾಯದಲ್ಲಿ ಈಗಾಗಲೇ ಹೇಳಿದಂತೆ, ಶಿವಾರ್ಚಕರ ನಿಕಟ ಸಂಬಂಧವುಳ್ಳ ಅನೇಕ ಶೈವಕೇಂದ್ರಗಳಿವೆ. ಬ್ರಾಹ್ಮಣ ಪರಿಣಿತ ಶಿವಾರ್ಚಕರನ್ನು ಸ್ಥಾನ ಪಲ್ಲಟಗೊಳಿಸಿದ ನಂತರ ಶಿವಾರ್ಚಕರು ಕಾವಲು ಕಾರ್ಯವನ್ನು ಉಳಿಸಿಕೊಂಡರು. ಈಗ ಅನುವಂಶಿಕವಾಗಿ ಕಾವಲಿನ ಕಾರ್ಯ ನಿರ್ವಹಿಸುವ ಏಳು ಜನ ಶಿವಾರ್ಚಕ ಸಿಬ್ಬಂದಿಯವರಿದ್ದಾರೆ. ಈ ಶಿವಾರ್ಚಕರು ಕಾಯ್ದಿಟ್ಟ ಪೋಲೀಸರೊಂದಿಗೆ ದೇವಸ್ಥಾನದ ಕಾವಲು ಕಾರ್ಯವನ್ನು ನಡೆಸಬೇಕು. ಮ್ಯಾನೇಜರನ ಹುದ್ದೆಯೂ ಒಂದಿದ್ದು ಅನುವಂಶಿಕವಾಗಿ ಒಬ್ಬ ಶಿವಾರ್ಚಕನೇ ಅದನ್ನು ನಿರ್ವಹಿಸುತ್ತಾನೆ. ಅವನು ದೇವಸ್ಥಾನದ ವೇಳಾಪಟ್ಟಿಯಂತೆ ಶಿವಾರ್ಚಕ ಕಾವಲಿನವರಿಗೆ ಕೆಲಸ ಹಂಚಿಕೊಟ್ಟು ಮೇಲ್ವಿಚಾರಣೆ ಮಾಡುತ್ತಾನೆ. ಮಹಾಬಲೇಶ್ವರ ದೇವಾಲಯದಲ್ಲಿ ಅಂತಹುದೇ ಹುದ್ದೆಯಲ್ಲಿ ಇಬ್ಬರು ಶಿವಾರ್ಚಕರಿದ್ದಾರೆ. ಒಂದು ಹುದ್ದೆ ಅನುವಂಶಿಕವಾಗಿದ್ದರೆ ಇನ್ನೊಂದು ಅನುವಂಶಿಕ ವಾರಸುದಾರರು ಯಾರೂ ಲಭ್ಯವಿಲ್ಲದ್ದಕ್ಕಾಗಿ ತಾತ್ಕಾಲಿಕವಾಗಿದೆ. ನಾರಾಯಣಸ್ವಾಮಿ ದೇವಾಲಯದಲ್ಲಿ ಇಬ್ಬರು ಶಿವಾರ್ಚಕರು ಅನುವಂಶಿಕವಾಗಿ ಈ ಹುದ್ದೆಯಲ್ಲಿ ಇದ್ದಾರೆ. ಈ ಕಾರ್ಯಗಳ ಜೊತೆಗೆ ಶಿವಾರ್ಚಕರು ಬೆಟ್ಟದ ಹಲವು ಸಣ್ಣಪುಟ್ಟ ಗುಡಿಗಳಲ್ಲಿ ಅರ್ಚಕರಾಗಿದ್ದಾರೆ. ಕಾವಲಿನ ಕಾರ್ಯ, ಅರ್ಚಕ ವೃತ್ತಿಗಳ ಜೊತೆಗೆ ಶಿವಾರ್ಚಕ ಸಿಬ್ಬಂದಿಯು ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಹಾಗೂ ಈ ಮುಂದೆ ವರ್ಣಿಸಿದ ಕೆಲವು ಕ್ಷೇತ್ರಗಳಲ್ಲಿ ಕೆಲವು ಕ್ರಿಯಾವಿಧಿಗಳನ್ನು ಪೂರೈಸುತ್ತಾರೆ.

**2. ವಾಹನಗಳ ಪೂಜೆ :**

ಮೈಸೂರಿನ ಹಾಗೂ ಸುತ್ತಲಿನ ಪ್ರದೇಶದ ಎಷ್ಟೋ ಹಿಂದೂಗಳು ವಾಹನಗಳನ್ನು ಕೊಂಡಾಗ

6. ಪ್ರಸಾದವೆಂದರೆ ಭಕ್ತರಿಗೆ ಹಿಂದಿರುಗಿಸಿದ, ಬ್ರಾಹ್ಮಣ ಹಾಗೂ ಶಿವಾರ್ಚಕರ ಪರಿಣಿತರಿಂದ ದೇವಾಲಯದಲ್ಲಿ ನಿವೇದಿಸಿದ ಪೂಜಾ ಆಹಾರ ಸಾಮಗ್ರಿಗಳು.



(ಲಾರಿ, ಮೋಟಾರು, ಕಾರು, ಬಸ್ಸು, ಜೀಪು, ಸ್ಕೂಟರ್ ಇತ್ಯಾದಿ) ಪೂಜೆ ಸಲ್ಲಿಸಲು ಚಾಮುಂಡೇಶ್ವರಿ ದೇವಸ್ಥಾನಕ್ಕೆ ಒಯ್ಯುವುದು ರೂಢಿಯಲ್ಲಿದೆ. ದೇವಸ್ಥಾನದ ಎದುರು ದೇವತಾ ವಿಗ್ರಹದ ಕಡೆ ಮುಖ ಮಾಡಿ ವಾಹನಗಳನ್ನು ನಿಲ್ಲಿಸಲಾಗುತ್ತದೆ. ಶಿವಾರ್ಚಕನು ಪುರೋಹಿತನ ಪಾತ್ರ ವಹಿಸುತ್ತಾನೆ. ಮೊದಲೇ ತೊಳೆದ ವಾಹನದ ಮೇಲೆ ಅವನು ನೀರು ಚಿಮುಕಿಸಿ, ಅದರ ಎಲ್ಲ ಪ್ರಮುಖ ಭಾಗಗಳಿಗೆ ವಿಭೂತಿ, ಅರಿಶಿಣ, ಗಂಧ ಲೇಪಿಸುತ್ತಾನೆ. ಕುಂಕುಮ ಹಚ್ಚಿ ವಾಹನವನ್ನು ಪುಷ್ಪಗಳಿಂದ ಅಲಂಕರಿಸುತ್ತಾನೆ. ನಿಂಬೆ ಹಣ್ಣುಗಳನ್ನು ಎರಡು ಬದಿಗೆ ಚೆಲ್ಲಲಾಗುತ್ತದೆ. ನಂತರ ತೆಂಗಿನಕಾಯಿ ಒಡೆದು, ಬಾಳೆಹಣ್ಣನ್ನು ನಿವೇದಿಸಿ, ಊದಿನಕಡ್ಡಿ ಹಚ್ಚಿ, ಕರ್ಪೂರದ ಆರತಿಯನ್ನು ಬೆಳಗುತ್ತಾನೆ. ವಾಹನದ ಮಾಲೀಕನಿಗೆ ಪ್ರಸಾದ ವಿತರಣೆಯಾಗುತ್ತದೆ. ಚಕ್ರದ ಅಡಿಯಲ್ಲಿಟ್ಟ ನಿಂಬೆಹಣ್ಣನ್ನು ಅಡಿಯಲ್ಲಿ ತುಳಿಯುತ್ತ ವಾಹನ ಚಲಿಸುತ್ತದೆ. ಅರ್ಚಕನು ಹಣದ ರೂಪದಲ್ಲಿ ವಾಹನದವರಿಂದ ದಕ್ಷಿಣೆ ಪಡೆಯುತ್ತಾನೆ.

ವಿಶೇಷತಃ ಮಹದೇಶ್ವರ ಕ್ಷೇತ್ರದ ಶಿವಾರ್ಚಕರ ಪರಿಣಿತರ ಮಗನೊಬ್ಬನು ವಾಹನ ಪೂಜೆ ಮಾಡುವುದು ನಮ್ಮ ಗಮನಕ್ಕೆ ಬಂದಿದೆ. ಆದರೆ ಒಂದು ಸಂದರ್ಭದಲ್ಲಿ, ಶಿವಾರ್ಚಕ ಸಿಬ್ಬಂದಿ ಸಿಗಲಾರದ ಕಾರಣ ದೇವಸ್ಥಾನದ ಅಡಿಗೆ ಭಟ್ಟನೊಬ್ಬ ಈ ಕ್ರಿಯಾವಿಧಿಯನ್ನು ಪೂರೈಸುವುದನ್ನು ನೋಡಿದ್ದೇವೆ.

**3. ಪಾದಕ್ಷೇತ್ರದ ಪೂಜೆ :**

ಚಾಮುಂಡೇಶ್ವರಿ ದೇವಸ್ಥಾನದ ಧ್ವಜಸ್ಥಂಭದ ಹತ್ತಿರ ದೇವತೆಯ ಪಾದಕ್ಷೇತ್ರ ಇದೆ. ದೇವಸ್ಥಾನದ ಶಿವಾರ್ಚಕ ಸಿಬ್ಬಂದಿಯು ಈ ಕ್ಷೇತ್ರದ ಪರಿಚಾರಿಕೆಯ ಹಕ್ಕು ಪಾರಂಪರಾಗತವಾಗಿ ತನಗೆ ಸೇರಿದ್ದು ಎಂದು ಸಾಧಿಸುತ್ತಾರೆ. ಭಕ್ತರು ದೇವಸ್ಥಾನ ಪ್ರವೇಶಿಸುವ ಮೊದಲು ಈ ಪಾದಕ್ಷೇತ್ರಕ್ಕೆ ನಮಸ್ಕರಿಸಿ, ಅಲ್ಲಿ ಇಟ್ಟ ಕುಂಕುಮವನ್ನು ಹಣೆಗೆ ಹಚ್ಚಿಕೊಳ್ಳುತ್ತಾರೆ. ಕೆಲವೊಮ್ಮೆ ಇಲ್ಲಿದ್ದ ಶಿವಾರ್ಚಕನೇ ಭಕ್ತರ ಹಣೆಗೆ ಕುಂಕುಮ ಹಚ್ಚುತ್ತಾನೆ. ಔಪಚಾರಿಕ ಗೌರವಸೂಚಕ ರೂಢಿಯಾಗಿ ಭಕ್ತರು ಹಣದ ರೂಪದಲ್ಲಿ ಕಾಣಿಕೆ ಕೊಡಬೇಕಾಗುತ್ತದೆ.

ಮೊದಲು, ಪಾದಕ್ಷೇತ್ರಕ್ಕೆ ಬೆಳಿಗ್ಗೆ ಬಂದ ಶಿವಾರ್ಚಕನು ಇಡೀ ದಿವಸ ಅಲ್ಲಿ ಸೇವೆ ಸಲ್ಲಿಸುತ್ತಿದ್ದನು. ಆದರೆ ಪ್ರವಾಸಿಗರ ಸಂಖ್ಯೆ ಹಾಗೂ ಕಾಣಿಕೆ ಮೊತ್ತ ಹೆಚ್ಚಿದಂತೆ ಶಿವಾರ್ಚಕ ಸಿಬ್ಬಂದಿಯು ತಮ್ಮಲ್ಲಿಯೇ ಸರದಿಯ ಪ್ರಕಾರ ಸೇವೆಯಲ್ಲಿರುವ ಪದ್ಧತಿಯನ್ನು ಬಳಕೆಯಲ್ಲಿ ತಂದುಕೊಂಡರು. ಈ ವ್ಯವಸ್ಥೆಯ ಪ್ರಕಾರ, ಪ್ರತಿಯೊಬ್ಬ ಶಿವಾರ್ಚಕನು ಕ್ಷೇತ್ರದ ಸೇವೆಗೆ ಒಂದು ವಾರಕ್ಕೆ ಒಬ್ಬನಂತೆ ಮತ್ತು ದಸರಾ ಉತ್ಸವದ ಕಾಲದಲ್ಲಿ ದಿನಕ್ಕೆ ಒಬ್ಬನಂತೆ ಹೋಗಬೇಕಾಗುತ್ತದೆ. ಇದರಿಂದ ಎಲ್ಲರಿಗೂ ಸಮಾನ ಲಾಭ ಪಡೆಯುವ ಅವಕಾಶ ಸಿಗುತ್ತದೆ. ಆದರೆ ಪಾದಕ್ಷೇತ್ರದ ಮೂಲಕ ಹಣಗಳಿಸುವ ಹುಚ್ಚು ಶಿವಾರ್ಚಕರಲ್ಲಿ ಎಷ್ಟೊಂದು ಅತಿಯಾಯಿತೆಂದರೆ ಅವರಲ್ಲಿಯೇ ಕೆಲವರು ಇದನ್ನು 'ದಂಧೆ' (ವ್ಯಾಪಾರ) ಎಂದು ಕರೆಯಲು ಪ್ರಾರಂಭಿಸಿದರು. ಶಿವಾರ್ಚಕರು ಪಾದಕ್ಷೇತ್ರದಲ್ಲಿ ವಿವಿಧ ಮೌಲ್ಯಗಳ ನೋಟುಗಳನ್ನು ಇರಿಸಿ, ಭಕ್ತರಿಂದ ಸಾಧ್ಯವಾದಷ್ಟು ಹೆಚ್ಚಿಗೆ ಕಾಣಿಕೆ ಪಡೆಯಲು

ಪೀಡಿಸತೊಡಗಿದ್ದರೆಂದು ಹೇಳಲಾಗುತ್ತದೆ. ಪೀಡೆಯಾಗಿದ್ದ ಈ ಪದ್ಧತಿಯ ಬಗ್ಗೆ ಎರಡು ವರ್ಷಗಳ ಹಿಂದೆ ಕೆಲವು ಭಕ್ತರು ದೇವಸ್ಥಾನದ ಅಧಿಕಾರಿಗಳಿಗೆ ದೂರು ಕೊಟ್ಟಿದ್ದರು. ನಂತರ ಪೇಶಕರನು ಆ ಸ್ಥಳಗಳಲ್ಲಿ ಕಬ್ಬಿಣದ ಪೆಟ್ಟಿಗೆಗಳನ್ನು ಇಡುವ ವ್ಯವಸ್ಥೆ ಮಾಡಿದರು. ಪಾದಕ್ಷೇತ್ರದ ಎರಡೂ ಬದಿಗೆ ಕಬ್ಬಿಣದ ಪೆಟ್ಟಿಗೆಗಳನ್ನು ಇಟ್ಟು ಅದರಲ್ಲಿಯೇ ತಮ್ಮ ಕಾಣಿಕೆಯನ್ನು ಹಾಕಲು ಭಕ್ತರನ್ನು ಕೇಳಿಕೊಳ್ಳಲಾಯಿತು. ಶಿವಾರ್ಚಕರ ಸಿಬ್ಬಂದಿ ಪಾದಕ್ಷೇತ್ರದಲ್ಲಿ ಸೇವೆ ಸಲ್ಲಿಸಕೂಡದೆಂದು ನಿರ್ಬಂಧಿಸಲಾಯಿತು. ಆದರೆ ಶಿವಾರ್ಚಕರು ಪೇಶಕರನ ವ್ಯವಸ್ಥೆಯನ್ನು ಒಪ್ಪಿ ಸಲ್ಲಿಸುವುದನ್ನು ನಿಲ್ಲಿಸಲಿಲ್ಲ. ಏಕೆಂದರೆ ಪಾದಕ್ಷೇತ್ರವು ಅವರಿಗೆ ನಿರಂತರ ಆದಾಯದ ಮೂಲವಾಗಿತ್ತು. ಸಮಸ್ಯೆಯನ್ನು ತಾವೇ ಎದುರಿಸುವುದಕ್ಕಾಗಿ ಅವರೆಲ್ಲ ಒಂದುಗೂಡಿದರು. ಒಂದು ದಿನ ದೇವಸ್ಥಾನದ ಪೂಜೆ ಪೂರೈಸಿಕೊಂಡು ಮಹಾರಾಜರು ತಮ್ಮ ಅರಮನೆಗೆ ಹಿಂದಿರುಗುತ್ತಿರುವಾಗ ಕೆಲವು ಶಿವಾರ್ಚಕರು ವೈಯುಕ್ತಿಕವಾಗಿ ಬೆಟ್ಟದ ಮೇಲೆ ಅವರನ್ನು ಕಂಡರು. ಮಹಾರಾಜರಿಗೆ ದೀರ್ಘದಂಡ ನಮಸ್ಕಾರ ಹಾಕಿ, ತಮ್ಮ ಕಷ್ಟಗಳನ್ನು ನಿವೇದಿಸಿಕೊಂಡು ಪಾದಕ್ಷೇತ್ರಕ್ಕೆ ಸೇವೆ ಸಲ್ಲಿಸುವ ತಮ್ಮ ಪರಂಪರಾಗತ ಹಕ್ಕನ್ನು ಉಳಿಸಿಕೊಡಬೇಕೆಂದು ಪ್ರಾರ್ಥಿಸಿದರು. ನಂತರ ಮಹಾರಾಜರು ಭಕ್ತರನ್ನು ಪೀಡಿಸಕೂಡದೆಂದು ಕಠಿಣವಾಗಿ ಎಚ್ಚರಿಕೆ ಕೊಟ್ಟು ಅಂತಹ ಯಾವುದೇ ಘಟನೆಗಳು ಮುಂದೆ ಪುನರಾವರ್ತಿಸಿದರೆ ತಮ್ಮ ಹಕ್ಕನ್ನು ಕಳೆದುಕೊಳ್ಳುವ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಹೇಳಿ, ಅವರ ಹಕ್ಕನ್ನು ಮರಳಿಕೊಟ್ಟರೆಂದು ಹೇಳಲಾಗುತ್ತದೆ.

### 4. ಉತ್ತನಹಳ್ಳಿ ದೇವಾಲಯ :

ಚಾಮುಂಡೇಶ್ವರಿಯ ತಂಗಿಯೆಂದು ತಿಳಿಯಲಾಗುವ ಉತ್ತನಹಳ್ಳಿ ದೇವಿಗೆ ಬೆಟ್ಟದ ಶಿವಾರ್ಚರು ಪಾರಂಪರಿಕವಾಗಿ ಧಾರ್ಮಿಕ ಪರಿಣಿತರಾಗಿದ್ದರು. ಆದರೆ ಸುಮಾರು ನೂರು ವರ್ಷಗಳ ಹಿಂದೆ ಆಗಿನ ಪುರೋಹಿತನೇ ಈ ದೇವಾಲಯದ ಪೌರೋಹಿತ್ಯವನ್ನು ಅದೇ ಗ್ರಾಮದ ಲಿಂಗಾಯತ ಕುಟುಂಬವೊಂದಕ್ಕೆ ವಹಿಸಿಕೊಟ್ಟ. ಅಂದಿನಿಂದ, ವಾರ್ಷಿಕ ಉತ್ಸವದ ಕಾಲದಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ಬ್ರಾಹ್ಮಣ ಪರಿಣತರು ಆಗಮಿಕ ತತ್ವಗಳ ಪ್ರಕಾರ ನಡೆಸುವ ಎರಡು ದಿನಗಳ ಪೂಜೆ ಪುನಸ್ಕಾರಗಳನ್ನು ಹೊರತುಪಡಿಸಿ, ಲಿಂಗಾಯತರೇ ಪೌರೋಹಿತ್ಯ ನಡೆಸುತ್ತಾರೆ. ವಾರ್ಷಿಕ ಉತ್ಸವದಂದು ಅನುಬಂಧ 'ಆ' ದಲ್ಲಿ ವರ್ಣಿಸಿದಂತೆ 'ಕಣ್ಣಕನ್ನಡಿ' ಹಾಗೂ ಇತರ ಕ್ರಿಯಾವಿಧಿಗಳೂ ಕೂಡ ನಡೆಯುತ್ತದೆ. ಈ ಆಚರಣೆಗಳ ಮುಖ್ಯ ಲಕ್ಷಣಗಳನ್ನು ನಾವು ಇಲ್ಲಿ ಸಂಕ್ಷಿಪ್ತವಾಗಿ ವರ್ಣಿಸಬಹುದು. ಉತ್ತನಹಳ್ಳಿ ದೇವಿಯ ವಾರ್ಷಿಕ ಉತ್ಸವದಲ್ಲಿ ಮೂರು ಮುಖ್ಯ ಕ್ರಿಯಾವಿಧಿಗಳ ಅಂಶಗಳಿವೆ: ಕಣ್ಣಕನ್ನಡಿ( ದೇವಿಯ ಪ್ರದರ್ಶನ, ಬಾಯಿಬೀಗ– ಬಾಯಿಗೆ ಕೀಲಿ ಹಾಕುವುದು ಹಾಗೂ ಮಡಿ ಹೊಯ್ಯುವುದು– ವಿಧಿಬದ್ಧವಾಗಿ ಮಡಿಯಿಂದ ಅಡಿಗೆ ಮಾಡುವುದು). ಈ ಕ್ರಿಯಾವಿಧಿಗಳ ಆಚರಣೆಯ ದೇಶೀ ಸಂಸ್ಕೃತಿಯ ನಿರಂತರವಾದ ಮುಂದುವರಿಯುವಿಕೆಯನ್ನು ಸೂಚಿಸುತ್ತದೆ. ಚಾಮುಂಡೇಶ್ವರಿಗೆ ಸಂಬಂಧಿಸಿದ ಕೆಲವು ಸಾಂಪ್ರದಾಯಿಕ ಕ್ರಿಯಾವಿಧಿಗಳ ಮೇಲೆಯೂ ಇವುಗಳ ಪ್ರಭಾವ ಇದೆ.



### 5. ಚಾಮುಂಡೇಶ್ವರಿ ದೇವಸ್ಥಾನ :

ಈ ಮೊದಲು ಹೇಳಿದಂತೆ, ಚಾಮುಮಡೇಶ್ವರಿ ದೇವಸ್ಥಾನದಲ್ಲಿ ಬ್ರಾಹ್ಮಣರು ಶಿವಾರ್ಚಕರನ್ನು ಸ್ಥಾನಪಲ್ಲಟಗೊಳಿಸಿದರು. ಆಗಿನ ಮೈಸೂರು ಮಹಾರಾಜರಿಗೆ ಚಾಮುಂಡೇಶ್ವರಿ ದೇವತೆಯ ಗೌರವಾರ್ಥವಾಗಿ ವಿವರವಾದ, ಆಗಮಿಕ ಸಂಪ್ರದಾಯಗಳನ್ನೊಳಗೊಂಡ, ರಥೋತ್ಸವ ಹಾಗೂ ತೆಪ್ಪೋತ್ಸವಗಳನ್ನು ವಿಜೃಂಭಣೆಯಿಂದಾಚರಿಸಬೇಕೆಂದು ಇಚ್ಛೆಯೇ ಈ ಬದಲಾವಣೆಗೆ ಮೂಲ ಕಾರಣವಾಯಿತು. ಇಂಥ ಬದಲಾವಣೆಯನ್ನು ತಂದರೆ ಚಾಮುಮಡೇಶ್ವರಿ ದೇವತೆಯೊಂದಿಗೆ ತಮ್ಮ ಸಂಬಂಧ ಇನ್ನೂ ಹೆಚ್ಚು ಕಣ್ಣು ಕುಕ್ಕುವಂತೆ ಕಾಣುತ್ತದೆಯೆಂಬುದೂ ಮೈಸೂರು ಅರಸರ ಭಾವನೆಯಾಗಿತ್ತು. ಬ್ರಾಹ್ಮಣೇತರ ಆಗಮಿಕ ಕ್ರಿಯಾವಿಧಿಗಳಲ್ಲಿ ಪರಿಣತಿಯನ್ನು ಹೊಂದಿದ್ದರಿಂದ ಬೆಟ್ಟದ ಚಾಮುಂಡೇಶ್ವರಿ ಹಾಗೂ ಮಹಾಬಲೇಶ್ವರ ದೇವಸ್ಥಾನಗಳಿಗೆ ಪೌರೋಹಿತ್ಯ ವಹಿಸಲು ದೀಕ್ಷಿತ ಬ್ರಾಹ್ಮಣರನ್ನು ತರಲಾಯಿತು. ಕ್ರಿಯಾವಿಧಿಗಳ ಆಚರಣೆಯ ವ್ಯವಸ್ಥೆಯಲ್ಲಿ ಬದಲಾವನೆ ತರಲು ಬೇರೆ ಕಾರಣಗಳೂ ಇದ್ದವು. ಉದಾಹರಣೆಗೆ: ದೇವಸ್ಥಾನದ ಪುರೋಹಿತರು ಶಿವಾರ್ಚಕರಿದ್ದುದರಿಂದ ಬ್ರಾಹ್ಮಣ ಭಕ್ತರು ಅವರ ಕೈಯಿಂದ ತೀರ್ಥ ಪ್ರಸಾದಗಳನ್ನು ಸ್ವೀಖರಿಸುತ್ತಿರಲಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸುವ ಸಲುವಾಗಿ ಬ್ರಾಹ್ಮಣರಾಗಿದ್ದ ಆಗಿನ ದಿವಾನ ಶ್ರೀ ಪೂರ್ಣಯ್ಯನವರು ಈ ಬದಲಾವಣೆಗೆ ಒಪ್ಪಿದರೆನ್ನಲಾಗಿದೆ.

ಒಬ್ಬ ಶಿವಾರ್ಚಕ ಪರಿಣಿತರು ಮೊದಲಿನ ಶಿವಾರ್ಚಕರ ಪೌರೋಹಿತ್ಯ ಹೋದ ಬಗ್ಗೆ ಹೇಳಿದ ಕಥೆ ಇದು. "ಒಮ್ಮೆ ಚಾಮುಂಡೇಶ್ವರಿ ದೇವಸ್ಥಾನದ ಶಿವಾರ್ಚಕ ಪುರೋಹಿತ ಕಾರಣಾಂತರಗಳಿಂದ ಬೆಟ್ಟಕ್ಕೆ ಬಂದ ಆಲನಹಳ್ಳಿ ಗ್ರಾಮದ ಬ್ರಾಹ್ಮಣರನ್ನು ಅವಮಾನಗೊಳಿಸಿದನು. ಈ ಅವಮಾನವನ್ನು ಸಹಿಸಲಾರದೇ ಬ್ರಾಹ್ಮಣರು ಸೇಡು ತೀರಿಸಿಕೊಳ್ಳಲು ನಿರ್ಧರಿಸಿದರು. ಶಿವಾರ್ಚಕ ಪರಿಣತರು ದೇವಸ್ಥಾನದ ಒಳಗೆ ಬೀಡಿ ಸೇದುವ ಹೊಲಸು ಹವ್ಯಾಸವನ್ನಿರಿಸಿಕೊಂಡಿದ್ದಾರೆಂಬುದನ್ನು ತೋರಿಸಲು ದೇವಸ್ಥಾನದ ಗರ್ಭಗುಡಿಯ ಗದ್ದುಗೆಯ ಮೇಲೆ ಅರ್ಧ ಸೇದಿದ ಬೀಡಿಯನ್ನು ಇಡುವ ಕುತಂತ್ರ ಮಾಡಿದರು. ಮಹಾರಾಜರ ಅವಗಾಹನೆಗೆ ಈ ವಿಷಯವನ್ನು ತಂದಾಗ, ಅವರು ಪ್ರಮಾಣಿಸಿ ನೋಡಿ ಶಿವಾರ್ಚಕರ ಸ್ಥಾನದಲ್ಲಿ ಬ್ರಾಹ್ಮಣರನ್ನು ತರಲು ನಿರ್ಧರಿಸಿದರು. ಈ ಬ್ರಾಹ್ಮಣರ ಸಲಹೆಯ ಮೇರೆಗೆ ಆಗಮಗಳಲ್ಲಿ ಪರಿಣತಿಯನ್ನು ಪಡೆದ ದೀಕ್ಷಿತ ಬ್ರಾಹ್ಮಣರನ್ನು ದೇವಸ್ಥಾನದ ಪೌರೋಹಿತ್ಯ ವಹಿಸಲು ತರಲಾಯಿತು." ಈ ಘಟನೆ ನಡೆಯಿತೋ ಇಲ್ಲವೋ ; ಆದರೆ ಹೆಚ್ಚಾಗಿ ಬ್ರಾಹ್ಮಣರ ಆಗಮಿಕ ಸಂಪ್ರದಾಯದ ಪೂಜೆಯನ್ನು ದೇವಸ್ಥಾನದಲ್ಲಿ ಬಳಕೆಗೆ ತರಬೇಕೆಂಬ ಮೈಸೂರು ದೊರೆಗಳ ಇಚ್ಛೆಯೇ ಶಿವಾರ್ಚಕರ ಕ್ರಿಯಾವಿಧಿಗಳ ಉಚ್ಚಾಟನೆಗೆ ಕಾರಣವಾಯಿತೆಂದು ಕಾಣುತ್ತದೆ.

---

8. ಬ್ಯಾನರ್ಜಿಯವರ ಪ್ರಕಾರ (1966:5) ಒಕ್ಕಲು ಎಂದರೆ ಗೇಣಿದಾರ ಅಥವಾ ವ್ಯವಸಾಯಗಾರ. ನಮ್ಮ ಅಭ್ಯಾಸಕ್ಕೆ ಸಂಬಂಧಿಸಿದಂತೆ ಒಕ್ಕಲು ಎಂದರೆ ಕೇವಲ ವ್ಯವಸಾಯಗಾರ, ಗೇಣಿದಾರ ವರ್ಗಗಳಲ್ಲಿ ಅಲ್ಲದೆ ಗಾಣಿಗ, ವ್ಯಾಪಾರಸ್ಥ, ಪಾದರಕ್ಷೆ ಮಾಡುವ ಮುಂತಾದ ವೃತ್ತಿ ಸಮೂಹಗಳಲ್ಲಿಯೂ ಇದ್ದಾರೆ. ಈ ವರದಿಯಲ್ಲಿ ಪೋಷಕ ಹಾಗೂ ಶಿವಾರ್ಚಕರ ಸಂಬಂಧಗಳನ್ನು ವರ್ಣಿಸುವಾಗ 'ಪೋಷಕ' ಪದವನ್ನು ಒಕ್ಕಲು ಕುಟುಂಬಗಳು ಎಂಬ ಅರ್ಥದಲ್ಲಿಯೇ ಉಪಯೋಗಿಸಲಾಗಿದೆ.

1819ರ ಸುಮಾರಿಗೆ ಕ್ರಿಯಾವಿಧಿ ಸಂಪ್ರದಾಯಗಳಲ್ಲಿ ಈ ಬದಲಾವಣೆ ನಡೆದಾಗ ಆಗಿನ ಮಹಾರಾಜರು ಹೊರ ಹೋಗುವ ಶಿವಾರ್ಚಕ ಪುರೋಹಿತರಿಗೆ ಹಾಗೂ ಇತರ ಅರ್ಚಕ ವರ್ಗದವರಿಗೆ ಆದ ಹಾನಿಯನ್ನು ತಂಬಿಕೊಡಲು ಕೆಲವು ಕ್ರಮಗಳನ್ನು ಕೈಗೊಂಡರೆಂದು ಹೇಳಲಾಗುತ್ತದೆ. ಒಬ್ಬ ಶಿವಾರ್ಚಕನು ನೀಡಿದ ಮಾತಿನಂತೆ, ಅವನಿಗೆ ತಿಳಿದಮಟ್ಟಿಗೆ, ಆ ಕಾಲದಲ್ಲಿ ದೇವಸ್ಥಾನಕ್ಕೆ ಒಬ್ಬನೇ ಪುರೋಹಿತ, ಅವನಿಗೆ ಸಹಾಯ ಮಾಡಲು ಮತ್ತು ಕೆಲವೊಂದು ಇತರ ಕ್ರಿಯಾವಿಧಿಗಳನ್ನು ನಡೆಸಲು ಹಲವು ಜನ ಶಿವಾರ್ಚಕ ಸಹಾಯಕರಿದ್ದರು. ಹೊರಹೋಗುತ್ತಿದ್ದ ಶಿವಾರ್ಚಕ ಹಾಗೂ ಒಳಬರುತ್ತಿದ್ದ ಬ್ರಾಹ್ಮಣ ಸಿಬ್ಬಂದಿಯ ನಡುವೆ ಘರ್ಷಣೆಯನ್ನು ಕಡಿಮೆ ಮಾಡಲು, ಮಹಾರಾಜರು ಶಿವಾರ್ಚಕರಿಗೆ ಕೆಲವು ವಿಶೇಷ ಸವಲತ್ತು ದಯಪಾಲಿಸಿದ್ದರು. ಶಿವಾರ್ಚಕ ಪುರೋಹಿತನಿಗೆ ಒಂದು ಒಳ್ಳೆಯ ಮನೆಯನ್ನು ಕೊಡಲಾಯಿತು. ಅವನಿಗೆ ಇನ್ನೂರು ಎಕರೆ ಜಮೀನು ಕೊಟ್ಟು ಮೇಲೆ ರಾಜ್ಯದಲ್ಲಿಯ ಮೇಲ್ತೆರಿಗೆ ಸಂಗ್ರಹಿಸುವ ಅಧಿಕಾರವನ್ನು ಕೊಡಲಾಯಿತು. ಈ ತೆರಿಗೆಯನ್ನು ವಸೂಲು ಮಾಡುವುದಕ್ಕೋಸ್ಕರ, ಅವನಿಗೆ ಎಂಟು ಜನ ಪಲ್ಲಕ್ಕಿ ಹೊರುವ, ಎಂಟು ಜನ ಕುದುರೆ ಸವಾರರು ಮೊದಲಾದ ರಾಜಮರ್ಯಾದೆಯನ್ನು ದಯಪಾಲಿಸಿದ್ದರು. ಇದಲ್ಲದೆ ಆ ಅರ್ಚಕನ ಸಮ ತೂಕದ ಬಂಗಾರವನ್ನು ಅವನಿಗೆ ಕೊಡಲಾಯಿತೆಂದು ಹೇಳುತ್ತಾರೆ. ಇತರ ಶಿವಾರ್ಚಕ ಪರಿಣತರಿಗೆ ಭೂಮಿ ಹಾಗೂ ಗ್ರಾಮಗಳ ಒಕ್ಕಲು[8] (ಮೋಕ್ಷಕ ಕುಟುಂಬ) ಮನೆತನಗಳಿಂದ ಕಾಣಿಕೆ ಸ್ವೀಕರಿಸುವ ಹಕ್ಕನ್ನು ಕೊಡಲಾಯಿತು. ಉಳಿದ ಎಲ್ಲ ಶಿವಾರ್ಚಕ ಸಿಬ್ಬಂದಿಯನ್ನು ಕಾವಲಿನ ಕೆಲಸಕ್ಕೆ ನೇಮಿಸಲಾಯಿತು. ಮಹಾರಾಜರ ಆಜ್ಞೆಯು ಪ್ರಶ್ನಾತೀತವಾಗಿದ್ದರೂ, ಹೊರಹೋಗುವ ಶಿವಾರ್ಚಕ ಪರಿಣತರಿಗೆ ಹಲವು ಬಗೆಯ ಸೌಲಭ್ಯಗಳನ್ನು ಒದಗಿಸಿದ್ದರಿಂದಾಗಿ ಒಂದು ಸಂಪ್ರದಾಯದಿಂದ ಇನ್ನೊಂದು ಸಂಪ್ರದಾಯದ ಬದಲಾವಣೆಯು ಸರಳವಾಯಿತು ಎಂಬುದನ್ನು ಇಲ್ಲಿ ಒತ್ತಿ ಹೇಳಬಹುದು. ಆದಾಗ್ಯೂ ಶಿವಾರ್ಚಕರ ಕೆಲವು ಪರಂಪರಾಗತ ಸಾಂಸ್ಕೃತಿಕ ರೂಢಿಗಳು ಅಳಿಸಿ ಹೋಗಲಿಲ್ಲ. ಉದಾಹರಣೆಗೆ : ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಡೆಯುವ ಕಣ್ಣಕನ್ನಡಿ ಆಚರಣೆ.

### 6. ಕಣ್ಣ ಕನ್ನಡಿ ಉತ್ಸವ :

ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಆಗಮಿಕ ಕ್ರಿಯಾವಿಧಿಗಳು ಬರುವ ಮೊದಲು ಕಣ್ಣಕನ್ನಡಿ ಉತ್ಸವವೊಂದೇ ಪ್ರಮುಖವಾದ ಆಚರಣೆಯಾಗಿತ್ತೆಂದು ಹೇಳಲಾಗುತ್ತದೆ. ಇದಕ್ಕೆ 'ಬೋನುಗುಡಿಕೆ ಹಬ್ಬ'ವೆಂದೂ ಹೆಸರು.

ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಬರುವ ಭಾದ್ರಪದ ಮಾಸದ ಹುಣ್ಣಿಮೆಯ ನಂತರದ ಮೊದಲನೆ ಮಂಗಳವಾರ ಈ ಹಬ್ಬ ನಡೆಯುತ್ತದೆ. ಈ ಹಬ್ಬದ ನಂತರವೇ ದೇವಿಯ ರಥೋತ್ಸವ ಹಾಗೂ ತೆಪ್ಪೋತ್ಸವಗಳು ನಡೆಯುತ್ತವೆ ಎಂದು ಹೇಳಲಾಗುತ್ತದೆ. ಶಿವಾರ್ಚಕರಲ್ಲಿ ಒಬ್ಬಾತ ತನ್ನ ಮನೆಯಲ್ಲಿ

9. ಉತ್ತನಹಳ್ಳಿಯಮ್ಮನ ದೇವಾಲಯದಲ್ಲಿ ಆಚರಿಸುವ ಕಣ್ಣಕನ್ನಡಿಯ ವ್ರತಾಚರಣೆಯಲ್ಲಿ ಕಂಡುಬರುವ ಸಾಮಾನ್ಯ ರೂಢಿಗಳನ್ನು 'ಅ' ಅನುಬಂಧದಲ್ಲಿ ವರ್ಣಿಸಲಾಗಿದೆ.



ಹನ್ನೆರಡು ಬೆಳ್ಳಿ ಪಾತ್ರೆ ಹಾಗೂ ತ್ರಿಕೋನಾಕೃತಿಯ ಕಟ್ಟಿಗೆಯ ಹಂದರದ ಸಹಾಯದಿಂದ ಚಾಮುಂಡೇಶ್ವರಿ ದೇವತೆಯನ್ನು ಸಾಂಕೇತಿಕವಾಗಿ ತಯಾರಿಸುತ್ತಾನೆ. ಇದನ್ನು ಪ್ರಧಾನ ದೇವತೆಯೆಂದು ಕರೆಯಲಾಗುತ್ತದೆ. ಈ ದೇವತೆಯನ್ನು ತಯಾರಿಸುವ ಅನುವಂಶಿಕ ಹಕ್ಕನ್ನು ಪಡೆದ ಒಬ್ಬ ಶಿವಾರ್ಚಕನಿದ್ದಾನೆ. ಆ ಸಂದರ್ಭದಲ್ಲಿ ಅವನೇ ಪೌರೋಹಿತ್ಯ ವಹಿಸುತ್ತಾನೆ. ದಿವಂಗತ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಕೊಡ ಮಾಡಿದ, ಆಗಿನ ಕಾಲದಲ್ಲಿ ಒಂದು ಸಾವಿರ ರೂಪಾಯಿ ಬೆಲೆ ಇದ್ದ ಭಾರಿ ಸೀರೆಯಿಂದ ಪ್ರಧಾನ ದೇವತೆಯನ್ನು ಅಲಂಕರಿಸಲಾಗುತ್ತದೆ. ಪ್ರಧಾನ ದೇವತೆಯನ್ನು ಮಹಾಬಲೇಶ್ವರ ದೇವಾಲಯದ ಒಳ ಹಜಾರಕ್ಕೆ ತಂದು ಅಲ್ಲಿಯ ಜಗಲಿಯ ಮೇಲೆ ಪ್ರತಿಷ್ಠಾಪಿಸುತ್ತಾರೆ. ಶಿವಾರ್ಚಕರ ಆರು ಬೇರೆ ಬೇರೆ ಕುಟುಂಬಗಳ ಸದಸ್ಯರು ತಂದ ಕಣ್ಣ ಕನ್ನಡಿ ಇತರ ಆರು ಸಣ್ಣ ಪ್ರತಿರೂಪಗಳೂ ಅಲ್ಲಿರುತ್ತವೆ. ಬ್ರಾಹ್ಮೀ, ಮಹೇಶ್ವರಿ, ಇಂದ್ರಾಣಿ, ವಾರಾಹಿ, ವೈಷ್ಣವಿ, ಕಾಮಾರಿ–ಹಾಗೂ ಪ್ರಧಾನ ದೇವತೆಯಾದ ಚಾಮುಂಡೇಶ್ವರಿ ಸೇರಿ ಸಪ್ತ ಮಾತೃಕೆಯರಾಗುತ್ತಾರೆಂಲದು ಪರಿಗಣಿತವಾಗಿದೆ. ಮೇಲೆ ಉಲ್ಲೇಖಿಸಿದ ಘಟಕ ದೇವತೆಗಳ ಹೆಸರುಗಳನ್ನು ತಿಳಿಸಿದವನು ಪ್ರಧಾನ ದೇವತೆಯ ಪುರೋಹಿತ. ಆದರೆ ಈ ವಿಷಯದ ಬಗ್ಗೆ ಎಷ್ಟೋ ಜನ ಲೌಕಿಕ ಶಿವಾರ್ಚಕರನ್ನು ವಿಚಾರಿಸಿದಾಗ ಅವರು ಉಳಿದ ಕಣ್ಣಕನ್ನಡಿ ದೇವತೆಗಳು ಚಾಮುಂಡೇಶ್ವರಿಯ ತಂಗಿಯರೆಂಬ ವಿಷಯದ ಹೊರತಾಗಿ ಹೆಚ್ಚಿನ ವಿವರ ನೀಡಲು ಅಸಮರ್ಥರಾದರು. ಶಿವಾರ್ಚಕರು ತಮ್ಮ ಪೂಜಾವಿಧಿಗಳಲ್ಲಿ ಯಾವ ವೈದಿಕ ವಿಧಿಗಳನ್ನು ರೂಢಿಸಿಕೊಂಡಿಲ್ಲವಾದ್ದರಿಂದ ಚಾಮುಂಡೇಶ್ವರಿ ಹಾಗೂ ಇತರ ದೇವತೆಗಳ ಬಗೆಗೆ ಅವರು ನೀಡಿದ ಅರ್ಥ ವಿವರಣೆ ಗ್ರಾಮದೇವತೆಗಳ ಬಗೆಗಿರುವ ಸ್ಥಳೀಯ ಕಲ್ಪನೆಗಳಿಗಿಂತ ಹೆಚ್ಚಿನದಾಗಿರಲಿಲ್ಲ ಎಂದು ಹೇಳಬಯಸುತ್ತೇವೆ. ಈ ದೇವತೆಗಳನ್ನು ಸಂಸ್ಕೃತ ದೇವೀ ಪುರಾಣದಲ್ಲಿ ಸೇರಿದ ವೈದಿಕ ದೇವತೆಗಳೊಂದಿಗೆ ಜೋಡಿಸಿದ್ದು ನಂತರದ ಬ್ರಾಹ್ಮಣರ ಪ್ರಭಾವದಿಂದ ಇರಬೇಕು. ಇದು ಕೇವಲ ಊಹೆಯಾಗಿದ್ದರೂ, ಕಣ್ಣಕನ್ನಡಿ ಆಚರಣೆಯಲ್ಲಿ ಯಾವುದೇ ವೈದಿಕ ಕ್ರಿಯಾ ವಿಧಿಗಳ ವೈಶಿಷ್ಟ್ಯವನ್ನು ಅಳವಡಿಸಿಕೊಂಡಂತೆ ಕಾಣುವುದಿಲ್ಲ.

ಶಿವಾರ್ಚಕರ ಪುರೋಹಿತನು ಏಳು ದೇವತೆಗಳನ್ನು ಪ್ರತಿಷ್ಠಾಪಿಸಿದ ನಂತರ ಅವುಗಳ ಸ್ಥಾನ–ಕ್ರಮ ಅರ್ಥಪೂರ್ಣವೆನಿಸುತ್ತದೆ. ಮುಖ್ಯ ಕನ್ನಡಿಯನ್ನು ಎತ್ತರದ ಗದ್ದಿಗೆಯ ಮೇಲೆ ಇಟ್ಟು, ಎರಡು ಸಣ್ಣ ಕನ್ನಡಿಗಳನ್ನು ಈ ಮೂರು ಕನ್ನಡಿಗಳನ್ನಿರಿಸಿದ ಗದ್ದಿಗೆಯ ಕೆಳಗೆ ನೆಲದ ಮೇಲೆ ಇಡುತ್ತಾರೆ. (ಕನ್ನಡಿ ಎಂದರೆ ದೇವತೆಯ ಪ್ರತಿರೂಪ) ನಾವು ಇವುಗಳನ್ನು ಇಡುವ ಸ್ಥಾನ ಕ್ರಮದ ಬಗ್ಗೆ ವಿಚಾರಿಸಿದಾಗ, ಅದು ಸಂಪ್ರದಾಯದಿಂದ ಬಂದ ಪದ್ಧತಿ ಎಂದೂ ತಾವು ಅದನ್ನು ನಡೆಸಿಕೊಂಡು ಬಂದಿರುವುದಾಗಿಯೂ ಶಿವಾರ್ಚಕ ಹೇಳಿದನೇ ಹೊರತು ಇದಕ್ಕಿಂತ ಹೆಚ್ಚಿಗೆ ಹೇಳಲು ಅವನು ಅಸಮರ್ಥನಾಗಿದ್ದ. ದೇವತೆಗಳ ಪೂಜೆಯಾದ ನಂತರ ಆ ಸಂದರ್ಭದಲ್ಲಿ ಮುಖ್ಯವಾಗಿ ಶಿವಾರ್ಚಕ ಭಕ್ತರು ತಂದ ಪೂಜಾ ಸಾಮಗ್ರಿಗಳನ್ನು ಅರ್ಚಕನು ದೇವತೆಗಳಿಗೆ ನಿವೇದಿಸಿ ನಂತರ ಪ್ರಸಾದವೆಂದು ವಿತರಣೆ ಮಾಡುತ್ತಾನೆ. ಇದಾದ ನಂತರ ಋತುಮತಿಯಾಗದ ಅವಿವಾಹಿತ ಶಿವಾರ್ಚಕ ಹುಡುಗಿಯೊಬ್ಬಳು ಪ್ರಧಾನ ಕನ್ನಡಿ ದೇವತೆಯನ್ನು ತಲೆಯ ಮೇಲೆ ಹೊತ್ತುಕೊಂಡು ಈಶ್ವರ ದೇವಾಲಯದ ಪ್ರದಕ್ಷಿಣೆಗೆ ಹೊರಟರೆ ಉಳಿದ ಕನ್ನಡಿ ದೇವತೆಗಳನ್ನು

ಗಂಡು ಹುಡುಗರು ಹೊರುವುದು ಗಮನಾರ್ಹವಾದ ಅಂಶ. ಸಾಮಾನ್ಯವಾಗಿ ಹೆಣ್ಣುದೇವತೆಗಳನ್ನು ಅವಿವಾಹಿತರಾದ ಋತುಮತಿಯಾಗದ ಹುಡುಗಿಯರು ಹೊರುವುದೇ ಪದ್ಧತಿ. ಇದಕ್ಕೆ ಹೋಲಿಸಿದಾಗ ಇಲ್ಲಿಯ ಕ್ರಮ (ಗಂಡು ಹುಡುಗರು ಹೆಣ್ಣುದೇವತೆಯನ್ನು ಹೊರುವವರು) ವಿರುದ್ಧವಾಗಿ ಕಾಣುತ್ತದೆ. ನಂತರ ದೇವತೆಗಳನ್ನು ಕುರುಜು[10] ದ್ವಾರದ ಮೂಲಕ ಹೊರಗೆ ತೆಗೆದುಕೊಂಡು ಹೋಗಲಾಗುವುದು. ಈ ಆಚರಣೆಗಳು ನಡೆಯುವಾಗ ರಾಜಪರಿವಾರದ 'ತಳವಾರ' ವೃತ್ತಿಯಲ್ಲಿರುವ ಏಳು ಕುಟುಂಬದ ಏಳು ಹುಡುಗಿಯರು ತಲೆಯ ಮೇಲೆ ಬೋನು ಕುಡಿಕೆಯನ್ನು ಹೊತ್ತುಕೊಂಡು ಕುರುಜು ದ್ವಾರದ ಬಳಿ ದಾರಿ ಕಾಯುತ್ತಾರೆ. ಪ್ರಧಾನ ಕನ್ನಡಿ ದೇವತೆಯನ್ನು ಹೊರುವ ಹುಡುಗಿರಂತೆಯೇ ಈ ಹುಡುಗಿಯರು ಋತುಮತಿಯಾಗದವರೂ ಅವಿವಾಹಿತರೂ ಆಗಿರಬೇಕಾಗುತ್ತದೆ. ಈ ಏಳೂ ಹುಡುಗಿಯರು ಕಣ್ಣ ಕನ್ನಡಿ ದೇವತೆಯ ಮೆರವಣಿಗೆಯನ್ನು ಹಿಂಬಾಲಿಸುತ್ತಾರೆ.

ಈ ದೇವತೆಗಳನ್ನು ಮೆರವಣಿಗೆಯಲ್ಲಿ ಪ್ರದಕ್ಷಿಣೆ ಹಾಕಿಸಿ ದೇವಸ್ಥಾನಕ್ಕೆ ತರಲಾಗುತ್ತದೆ. ಚಾಮುಂಡೇಶ್ವರಿ ದೇವಸ್ಥಾನದ ಅಗ್ರ ಸುಕನಾಸಿ (ಒಳ ಮಂದಿರ)ಯ ಪ್ರವೇಶ ದ್ವಾರದ ಬಳಿ ಶಿವಾರ್ಚಕ ಪರಿಣತನು ಪ್ರಧಾನ ದೇವತೆಯನ್ನು ನಿಲ್ಲಿಸುತ್ತಾನೆ. ಪ್ರವೇಶ ದ್ವಾರದ ಬಳಿ ಮೂಲದೇವತೆ (ಚಾಮುಂಡೇಶ್ವರಿ) ಹಾಗೂ ಪ್ರಧಾನ ಕನ್ನಡಿ ದೇವತೆಗಳ ಮಧ್ಯ ತೆಳುವಾದ ಪರದೆಯನ್ನು ಹಿಡಿಯಲಾಗುತ್ತದೆ. ಬ್ರಾಹ್ಮಣ ಪುರೋಹಿತನು ಮೂಲ ದೇವತೆಯ ಪೂಜೆ ಪೂರೈಸಿ ಮಂಗಳಾರತಿಯನ್ನು ತಂದ ಕೂಡಲೆ ಪರದೆಯನ್ನು ತೆಗೆಯುತ್ತಾನೆ. ನಂತರ ಪ್ರಧಾನ ಕನ್ನಡಿ ದೇವತೆಗೆ ಬ್ರಾಹ್ಮಣ ಪುರೋಹಿತನು ಮಂಗಳಾರತಿ ಮಾಡುತ್ತಾನೆ. ಈ ಕ್ರಿಯಾವಿಧಿ ಮುಗಿದ ನಂತರ ಪ್ರಧಾನ ಕನ್ನಡಿ ದೇವತೆಯನ್ನು ಒಳಗೆ ತಂದು ವಾಡಿಕೆಯ ಸ್ಥಳದಲ್ಲಿ ಇರಿಸಲಾಗುತ್ತದೆ. ಪ್ರಧಾನ ಕನ್ನಡಿಯನ್ನು ಪೂಜಿಸಿದಂತೆ ಉಳಿದ ಆರೂ ಕನ್ನಡಿ ದೇವತೆಗಳನ್ನು ಬ್ರಾಹ್ಮಣ ಪುರೋಹಿತನು ಪೂಜಿಸುವುದಿಲ್ಲವೆಂಬುದನ್ನು ಇಲ್ಲಿ ಗಮನಿಸಬಹುದು. ಪ್ರಧಾನ ಕನ್ನಡಿಗೆ ಪೂಜೆ ಸಲ್ಲಿಸಿದ ನಂತರ ಹುಡುಗರು ಅವುಗಳನ್ನು ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಬೆಟ್ಟದ ಶಿವಾರ್ಚಕ ಭಕ್ತರು ಹಿಂದಣ ಸುಕನಾಸಿಯವರಿಗೆ (ಗರ್ಭಗುಡಿ ಗದ್ದುಗೆಯ ಮುಂಭಾಗ) ಹೋಗಿ ಬ್ರಾಹ್ಮಣ ಪುರೋಹಿತರ ಕೈಯಿಂದ ತೀರ್ಥ ಪ್ರಸಾದವನ್ನು ಸ್ವೀಕರಿಸುತ್ತಾರೆ. ಈ ಸಂದರ್ಭದಲ್ಲಿ ಪ್ರಸಾದವೆಂದರೆ ಸಾಮಾನ್ಯವಾಗಿ ದೇವತೆಗೆ ಅರ್ಪಿಸಿದ ಹೂ ಮತ್ತು ಕುಂಕುಮ. ಮಣ್ಣಿನ ಕುಡಿಕೆ ಹೊತ್ತ ರಾಜಪರಿವಾರದ ಹುಡುಗಿಯರು ಸಹ ನಂತರ ತೀರ್ಥ ಪ್ರಸಾದ ಸ್ವೀಕರಿಸುತ್ತಾರೆ. ಮರುದಿನ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯನ್ನು ಕುರುಜು ದ್ವಾರದ ಮುಖಾಂತರ ಪ್ರದಕ್ಷಿಣೆಗಾಗಿ ಕೊಂಡೊಯ್ಯಲಾಗುತ್ತದೆ. ಸಂಪ್ರದಾಯದಂತೆ, ಸಾಯಂಕಾಲ ಕಣ್ಣಕನ್ನಡಿ ಸಮಾರಂಭಕ್ಕೆ ಅರಮನೆಯ ಗೌರವಗಳಾದ ಕೊಂಬು (ಕಹಳೆ), ಧ್ವಜ, ಮುಂತಾದವುಗಳನ್ನು ಅರಮನೆಯ ಆಡಳಿತ ವರ್ಗ ಕಳಿಸಿಕೊಡುತ್ತದೆ.

10. ಕುರುಜು ಎಂದರೆ ಪ್ರವೇಶದ್ವಾರ. ಇದನ್ನು ಎರಡು ಬೊಂಬುಗಳನ್ನು ಹಾಕಿ ನಿಲ್ಲಿಸಿ ಮೇಲೆ ವಸ್ತ್ರ ಹೊದಿಸಿ ನಿರ್ಮಿಸಲಾಗುತ್ತದೆ. ಕನ್ನಡಿ ದೇವತೆ ಹಾಗೂ ಉತ್ಸವ ಮೂರ್ತಿಗಳನ್ನು ಒಯ್ಯುವಷ್ಟು ವಿಶಾಲವಾಗಿರುತ್ತದೆ.



ವೈದಿಕ ಸಂಪ್ರದಾಯಗಳನ್ನು ಆರಂಭಿಸುವ ಮೊದಲು ಕಣ್ಣಕನ್ನಡಿ ಹಬ್ಬಕ್ಕೆ ಮೈಸೂರು ನಗರದ ನೆರೆಹೊರೆಯ ಪ್ರದೇಶದ ಭಕ್ತರು ದೊಡ್ಡ ಸಂಖ್ಯೆಯಲ್ಲಿ ಬರುತ್ತಿದ್ದರಂತೆ. ಆದರೆ ರಥೋತ್ಸವ ಹಾಗೂ ತೆಪ್ಪೋತ್ಸವಗಳನ್ನು ಆಚರಿಸಲು ಪ್ರಾರಂಭಿಸಿದ ನಂತರ ಜನರು ಕಣ್ಣಕನ್ನಡಿ ಆಚರಣೆಯು ಕೇವಲ ಔಪಚಾರಿಕ ಸಂಪ್ರದಾಯಕವಾಗಿ ಮಾತ್ರ ಉಳಿದಿದೆ. ಆದಾಗ್ಯೂ ಕಣ್ಣಕನ್ನಡಿ ಸಮಾರಂಭ ಹೆಚ್ಚಾಗಿ ಶಿವಾರ್ಚಕ ಹಾಗೂ ರಾಜಪರಿವಾರ ಜಾತಿಗಳ ವಿಧಿಯಾಗಿ ಮಾತ್ರ ಉಳಿದುಕೊಂಡಿದೆ. ಇದರಲ್ಲಿ ಬ್ರಾಹ್ಮಣ ಕ್ರಿಯಾವಿಧಿ ಪರಿಣತರ ಭಾಗವಹಿಸುವಿಕೆ, ಪ್ರಧಾನ ಕನ್ನಡಿ ದೇವತೆಗೆ ಮಂಗಳಾರತಿ ಮಾಡುವುದು, ಉತ್ಸವ ಮೂರ್ತಿಯನ್ನು ಕುರುಜು ದ್ವಾರದ ಮುಖಾಂತರ ಒಯ್ಯುವುದು–ಇಂಥ ಕೆಲವೇ ಸಂಪ್ರದಾಯಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದನ್ನು ಗಮನಿಸಬಹುದು. ಬಹುಶಃ ಇದು ಉಭಯ ಕ್ರಿಯಾವಿಧಿಗಳ ಪರಸ್ಪರ ಕರ್ತವ್ಯ ಹಾಗೂ ಬೇರೆಬೇರೆ ಸಾಂಸ್ಕೃತಿಕ ಸಂಪ್ರದಾಯಗಳ ಸಹ ಬಾಳ್ವೆಯ ಉದಾಹರಣೆಯಾಗಿದೆ.

## 7. ಗದ್ದಿಗೆಯಮ್ಮನ ಪೂಜೆ :

ಮೈಸೂರು ನಗರದ ಮಹಾರಾಜರ ಅರಮನೆಯಲ್ಲಿ ಗದ್ದುಗೆಯಮ್ಮನ ಅರ್ಚಕರು ಶಿವಾರ್ಚಕ ಪರಿಣತರಾಗಿದ್ದಾರೆ. ಮೊದಲು ಈ ದೇವತೆಯನ್ನು ಗದ್ದಿಗೆ ಮನೆ ಎಂದು ಕರೆಯುವ ಚಾಮುಂಡೇಶ್ವರಿ ದೇವಸ್ಥಾನದ ಹತ್ತಿರದ ಒಂದು ಮನೆಯಲ್ಲಿ ಪ್ರತಿಷ್ಠಾಪಿಸಲಾಗಿತ್ತೆಂದು ಹೇಳುತ್ತಾರೆ. ಮಹಾರಾಜರ ಇಚ್ಛೆಗೆ ಮನ್ನಣೆ ಕೊಟ್ಟು ಗದ್ದಿಗೆ ದೇವತೆಯನ್ನು ಮೈಸೂರು ಅರಮನೆಗೆ ತೆಗೆದುಕೊಂಡು ಹೋದಂದಿನಿಂದ ಗದ್ದಿಗೆ ಮನೆ ಪೇಶಕರನ ವಾಸಸ್ಥಾನವಾಗಿದೆ.

ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿಯಮ್ಮನ ಎರಡು ಲೋಹದ ಮೂರ್ತಿಗಳೇ ಅರಮನೆಯ ಗುಡಿಯಲ್ಲಿರುವ ಗದ್ದಿಗೆ ದೇವತೆಗಳು. ಇಲ್ಲಿಯ ಕ್ರಿಯಾವಿಧಿಗಳನ್ನು ಬೆಟ್ಟದಲ್ಲಿಯ ದೇವಸ್ಥಾನದ ಶಿವಾರ್ಚಕ ಸಿಬ್ಬಂದಿಯು ಪೂರೈಸುತ್ತದೆ. ಶುಕ್ರವಾರ ಹಾಗೂ ಮಂಗಳವಾರ ಅರಮನೆಯ ಆವರಣದಲ್ಲಿಯೇ ಈ ಮೂರ್ತಿಗಳ ಪಲ್ಲಕ್ಕಿ ಮೆರವಣಿಗೆ[11] ತೆಗೆಯುತ್ತಾರೆ.

ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿಯಮ್ಮನ ಶಿಲೆಯ ಮೂಲ ವಿಗ್ರಹಗಳನ್ನು ಆಯಾ ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸಿದ ನಂತರ, ಶಿವಾರ್ಚಕರು ಲೋಹದ ಎರಡು ಮೂರ್ತಿಗಳನ್ನು ಪವಿತ್ರಗೊಳಿಸಿ ಪ್ರತ್ಯೇಕ ಮಂದಿರದಲ್ಲಿ ಪ್ರತಿಷ್ಠಾಪಿಸಿದರು ಎಂದು ಹೇಳಲಾಗುತ್ತದೆ. ಇವುಗಳನ್ನೇ ಗದ್ದಿಗೆಯಮ್ಮನ ದೇವತೆಗಳೆಂದು ಕರೆಯುತ್ತಾರೆ. ಕೆಲವು ಶಿವಾರ್ಚಕ ಕುಟುಂಬಗಳು ಕೂಡ ಲೋಹದ ವಿಗ್ರಹಗಳನ್ನು ಅಭಿಷಿಕ್ತಗೊಳಿಸಿ ಬೆಟ್ಟದ ಹೊರಗಿನ ಪೋಷಕ ಕುಟುಂಬಗಳಿಗೆ ಒಯ್ಯುತ್ತಿದ್ದರೆಂದು ಕಾಣುತ್ತದೆ. ಬ್ರಾಹ್ಮಣ ಪರಿಣತರು ಬೆಟ್ಟಕ್ಕೆ ಬರುವ ಪೂರ್ವದಲ್ಲಿ ಶಿವಾರ್ಚಕ ಕ್ರಿಯಾವಿಧಿ ಪರಿಣತರು ಯಾತ್ರಾರ್ಥಿಗಳಾಗಿ ಬರುತ್ತಿದ್ದ ಗ್ರಾಮೀಣ ಹಿನ್ನಾಡಿನ ಭಕ್ತರನ್ನು ಎಷ್ಟೋ

11. ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ನಡೆಯುವ ಮಾರಮ್ಮನ (ಗ್ರಾಮ ದೇವತೆ) ಹಬ್ಬದ ಕಾಲಕ್ಕೆ ಗದ್ದಿಗೆ ದೇವತೆಯ ಮೆರವಣಿಗೆಯನ್ನು ಅರಮನೆಯ ಪೌಳಿಯಲ್ಲಿ ನಡೆಸಲಾಗುವುದಿಲ್ಲ. ಇದರಂತೆ ಅರಮನೆಯ ಆವರಣದಲ್ಲಿರುವ ಉದಾ : ತ್ರಿನೇಶ್ವರ ಮುಂತಾದ ಗುಡಿಗಳ ರಥೋತ್ಸವದ ಕಾಲಕ್ಕೂ ಗದ್ದಿಗೆ ದೇವತೆ ಮೆರವಣಿಗೆ ಹೊರಡಿಸುವುದಿಲ್ಲ.

ದಿನಗಳಿಂದ ಪೋಷಕರನ್ನಾಗಿ ಪಡೆದಿದ್ದರೆಂದು ಹೇಳಲಾಗುತ್ತದೆ. ಭಕ್ತರು ಹಾಗೂ ಶಿವಾರ್ಚಕ ಪರಿಣಿತರ ನಡುವಿನ ವೈಯಕ್ತಿಕ ಸಂಪರ್ಕವು ದೇವತೆಯನ್ನು ಮನೆದೇವರನ್ನಾಗಿ ಸ್ವೀಕರಿಸಲು ಪ್ರೇರೆಪಿಸಿತು, ಕಾಣಿಕೆ ಇತ್ಯಾದಿಗಳನ್ನು ಅರ್ಪಿಸುವ ಮೂಲಕ ಪೋಷಕರಾಗುವವರ ಮನೆಗಳಿಗೆ ಶಿವಾರ್ಚಕರು ಗದ್ದಿಗೆ ದೇವತೆಗಳನ್ನು ಒಯ್ಯಲು ಪ್ರಾರಂಭಿಸಿದರು. ಶಿವಾರ್ಚಕರ ಉಪಜೀವನ ಮಾರ್ಗವಾದ ಇದು ಕ್ರಮ ಕ್ರಮೇಣ ವ್ಯವಸ್ಥಿತ ಪದ್ಧತಿಯಾಗಿ ಬೆಳೆಯಿತು.

ಶಿರ್ವಾಚಕರು ಗದ್ದಿಗೆ ದೇವತೆಗಳ ಕ್ರಿಯಾವಿಧಿಗಳನ್ನು ಈ ಕೆಳಗಿನಂತೆ ಪೂರೈಸುತ್ತಾರೆ. ಪೂಜೆಯ ಕಾಲಕ್ಕೆ ಅವರು ವಸ್ತ್ರದಿಂದ ಬಾಯಿಯನ್ನು ಮುಚ್ಚಿಕೊಂಡಿರುತ್ತಾರೆ ಹಾಗೂ ಒದ್ದೆಬಟ್ಟೆಯನ್ನು ಧರಿಸಿರುತ್ತಾರೆ. ಗದ್ದಿಗೆ ದೇವತೆಗೆ ನೀರಿನಿಂದ, ಕೆಲವೊಮ್ಮೆ ಹಾಲಿನಿಂದ ಅಭಿಷೇಕ ಮಾಡುವರು. ನಂತರ ಭಸ್ಮ, ಗಂಧ ಹಾಗೂ ಅರಿಶಿನದ ಲೇಹಗಳನ್ನು ಪೇಪಿಸುತ್ತಾರೆ. ಮಡಿವಸ್ತ್ರ ಹಾಗೂ ಹೂವುಗಳಿಂದ ದೇವತೆಯನ್ನು ಅಲಂಕರಿಸುತ್ತಾರೆ.ಮೊದಲು ಭಕ್ತರು ಕೊಟ್ಟ ಅರಿಶಿನ–ಪತ್ತಲ ಮತ್ತು ಇತರ ವಸ್ತ್ರಗಳಿಂದ ದೇವತೆಯನ್ನು ಅಲಂಕರಿಸಲಾಗುತ್ತಿತ್ತು. ಮೊದಲು ಭಕ್ತರು ಕೊಟ್ಟ ಅರಿಶಿನ–ಪತ್ತಲ ಮತ್ತು ಇತರ ವಸ್ತ್ರಗಳಿಂದ ದೇವತೆಯನ್ನು ಅಲಂಕರಿಸಲಾಗುತ್ತಿತ್ತು. ಆದರೆ ಭಕ್ತರು ಸೀರೆ ಕಾಣಿಕೆಯನ್ನು ಶಿವಾರ್ಚಕರಿಗೆ ಕೊಡುವುದರ ಬದಲಾಗಿ ಸೀರೆ ಹಾಗೂ ಇತರೆ ಕಾಣಿಕೆಗಳನ್ನು ದೇವಸ್ಥಾನದ ಅರ್ಚಕರಿಗೆ ಕೊಡುತ್ತಾರೆ ಎಂದು ಹೇಳಲಾಗುತ್ತದೆ. ದೇವತೆಗಳ ಶಿವಾರ್ಚಕರ ಪೂಜಾರಿಗಳು ತಾವೇ ತಯಾರಿಸಿದ ಅನ್ನವನ್ನು ನೈವೇದ್ಯವಾಗಿ ಸಲ್ಲಿಸುತ್ತಾರೆ. ಪೂಜಾ ಸಾಮಾಗ್ರಿಗಳನ್ನು ನಿವೇದಿಸಿ ಕರ್ಪೂರದ ಆರತಿಯನ್ನು ನೆಳಗಿದ ನಂತರ ಕ್ರಿಯಾವಿಧಿಗಳು ಪೂರ್ಣವಾಗುತ್ತವೆ. ಸಾಂಪ್ರದಾಯಿಕವಾಗಿ ಪೂಜೆಯ ಕಾಲಕ್ಕೆ ಮಂತ್ರ ಪಠನೆಯ ಪದ್ಧತಿ ಇರಲಿಲ್ಲ.ಆದರೆ ಇತ್ತೀಚೆಗೆ ಕನ್ನಡ ಲಿಪಿಯಲ್ಲಿ ಮುದ್ರಿತವಾಗಿ ದೊರಕುವ ಎಷ್ಟೋ ಶಿವಾರ್ಚಕ ಪೂಜಾರಿಗಳು ಕಲಿತಿದ್ದಾರೆಂದು ಹೇಳಲಾಗುತ್ತದೆ. ಇತರ ಕ್ಷೇತ್ರಗಳಲ್ಲಿಯೂ ಸಹಸ್ರನಾಮಗಳನ್ನು ಪಠಿಸಲಾಗುತ್ತದೆ. ಉದಾ: ನಂದಿ ಕ್ಷೇತ್ರದ ಶಿವಾರ್ಚಕ ಪೂಜಾರಿ ಬಸವೇಶ್ವರನ ಸಹಸ್ರನಾಮ ಪಠಿಸುತ್ತ ಕ್ರಿಯಾವಿಧಿಗಳನ್ನು ಪೂರೈಸುತ್ತಾರೆ.

ಮನೆಯಲ್ಲಿ ಗದ್ದುಗೆ ದೇವತೆಗಳಿರುವ ಶಿವಾರ್ಚಕರು ಪ್ರತಿ ಶುಕ್ರವಾರ ಕ್ರಿಯಾವಿಧಿ ನಡೆಸುವ ಕ್ರಮ ಇಟ್ಟುಕೊಂಡಿದ್ದಾರೆ. ಆಗಾಗ ಪೋಷಕ ಭಕ್ತರು ದೇವತೆಗೆ ಹರಕೆ ಮುಟ್ಟಿಸಲು ಬೆಟ್ಟದ ಶಿವಾರ್ಚಕರಲ್ಲಿ ಹೋಗಿ ಗದ್ದಿಗೆ ದೇವತೆಗೆ ಪೂಜೆ ಮಾಡಲು ಹಾಗೂ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಪೂಜೆಯ ವ್ಯವಸ್ಥೆ ಮಾಡಿಸಲು ಶಿವಾರ್ಚಕರ ಸಹಾಯ ಕೋರಬಹುದು. ಹೀಗೆ ಶಿವಾರ್ಚಕ ಪೂಜಾರಿಗಳು ಸಂಚಾರಿ ಗದ್ದಿಗೆ ದೇವತೆಗಳ ಮೂಲಕ ಹಾಗೂ ಪವಿತ್ರ ಕ್ರಿಯಾವಿಧಿ ಗಳ ಸಹಾಯದಿಂದ ಗ್ರಾಮೀಣ ಹಿನ್ನಾಡಿನ ಜನರಲ್ಲಿ ಚಾಮುಂಡೇಶ್ವರಿ ದೇವತೆಯ ಬಗ್ಗೆ ಶ್ರದ್ಧೆಯನ್ನು ಪ್ರಚಾರಗೊಳಿಸುತ್ತಾರೆಂದು ನಾವು ನಿರ್ಣಯಕ್ಕೆ ಬರಬಹುದು. ಒಕ್ಕಲುಗಳ ಬಗ್ಗೆ ಹೇಳುವುದಾದರೆ, ಅವರು ದೇವತೆಯ ಅನುಗ್ರಹವನ್ನು ಶಿವಾರ್ಚಕರ ಮೂಲಕ ತಮ್ಮ ಗ್ರಾಮದಲ್ಲಿಯೇ ಪಡೆಯುತ್ತೇವೆ ಎಂದು ಭಾವಿಸುತ್ತಾರೆ.



## ಒಕ್ಕಲು ಪೂಜಾರಿ ಸಂಬಂಧ :

ಆಗಿನ ಮೈಸೂರು ರಾಜ್ಯದ, ಮೈಸೂರು, ಮಂಡ್ಯ, ಬೆಂಗಳೂರು, ಹಾಸನ, ತುಮಕೂರು, ಚಿತ್ರದುರ್ಗ, ಕೋಲಾರ, ಚಿಕ್ಕಮಗಳೂರು, ಶಿವಮೊಗ್ಗ–ಈ ಎಂಟು ಜಿಲ್ಲೆಗಳ 120 ತಾಲೂಕಿನ ಹಲವು ಗ್ರಾಮಗಳಲ್ಲಿ ತಮಗೆ ಒಕ್ಕಲು ಕುಟುಂಬಗಳಿದ್ದವೆಂದು ಬೆಟ್ಟದ ಶಿವಾರ್ಚಕ ಸಿಬ್ಬಂದಿ ಸಾಧಿಸುತ್ತದೆ. ಈ ಸ್ಥಳಗಳಿಗೆಲ್ಲ ಶಿವಾರ್ಚಕರು ಗದ್ದಿಗೆ ದೇವತೆಯನ್ನು ಹೊತ್ತುಕೊಂಡು ಹೋಗುತ್ತಿದ್ದರು. ಈ ಮೊದಲೇ ಹೇಳಿದಂತೆ ಕೆಲವು ಶಿವಾರ್ಚಕರು ಪರಂಪರಾಗತವಾಗಿ ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿ ದೇವತೆಗಳ ಲೋಹದ ಪ್ರತಿರೂಪಗಳನ್ನು ಹೊಂದಿದ್ದಾರೆ. ಇವರಲ್ಲಿ ಲಿಂಗ, ಎರಡು ಕಟ್ಟಿಗೆ ತುಂಡಿನಲ್ಲಿ ಕೆತ್ತಿದ ವೀರಭದ್ರ (ಶಿವನ ಪರಿಚಾರಕ), ನಂದಿ ಹಾಗೂ ಕುದುರೆಗಳ ಮೂರ್ತಿಗಳಂಥ ಇತರ ದೇವತೆಗಳೂ ಇವೆ. ಶಿವಾರ್ಚಕ ಪೂಜಾರಿಗಳು ಈ ಮೂರ್ತಿಗಳನ್ನು ಬಿದರಿನ ಬುಟ್ಟಿಯಲ್ಲಿ ಒಯ್ಯುತ್ತಾರೆ. ಬಸ್ಸಿನಲ್ಲಿ ಪ್ರವಾಸಿಸಿದರೆ ಇತರ ಜಾತಿಯ ಜನರ ಸ್ಪರ್ಶದಿಂದ ಮೈಲಿಗೆಯಾಗಬಹುದೆಂಬ ಕಾರಣಕ್ಕಾಗಿ, ಗದ್ದಿಗೆ ದೇವತೆಯನ್ನು ಒಕ್ಕಲು ಕುಟುಂಬಗಳಿರುವ ಗ್ರಾಮಗಳೇಗೆ ಒಯ್ಯುವ ಪರಂಪರಾಗತ ಪದ್ಧತಿಯು ಕೆಲವು ತೊಂದರೆ ಹಾಗೂ ಅನಾನುಕೂಲತೆಗಳಿಗೆ ಒಳಗಾಗಿದೆ. ಇದರ ಪರಿಣಾಮವಾಗಿ ಪೋಷಕ ಹಾಗೂ ಶಿವಾರ್ಚಕ ಪೂಜಾರಿಗಳ ನಡುವಿನ ಸಂಬಂಧದಲ್ಲಿ ಬಿರುಕು ಉಂಟಾಗಿರುವುದನ್ನು ಗಮನಿಸಬಹುದು.

ಬೆಟ್ಟದ ಶಿವಾರ್ಚಕ ಪರಿಣಿತರು ಹಳೆ ಮೈಸೂರಿನ ಪ್ರದೇಶವೆಲ್ಲ ತಮ್ಮ ಸಾಮಾಜಿಕ ಸಾಂಸ್ಕೃತಿಕ ಹಿನ್ನಾಡಾಗಿತ್ತೆಂದು ಸಾಧಿಸುತ್ತಾರೆ. ಆದರೆ ಅವರಲ್ಲಿ ಬಹಳಷ್ಟು ಜನರು ಮೈಸೂರು, ಮಂಡ್ಯ, ಹಾಸನ ಹಾಗೂ ಬೆಂಗಳೂರು ಜಿಲ್ಲೆಗಳ ಗ್ರಾಮಗಳನ್ನು ಬಿಟ್ಟು ಉಳಿದ ಹಳ್ಳಿಗಳನ್ನು ಹೆಸರಿಸಲು ಅಸಮರ್ಥರಾದರು.

ಕಣ್ಣಕನ್ನಡಿ ದೇವತೆಯ ಪೂಜಾರಿಯು ಬೆಟ್ಟದ ಶಿವಾರ್ಚಕರ ಐದು ಕುಟುಂಬಗಳಲ್ಲಿ ಗದ್ದಿಗೆ ದೇವತೆಗಳಿವೆ ಎಂದು ಹೇಳಿದನು. ಈ ಐದು ಕುಟುಂಬಗಳು ಮಾತ್ರ ಒಕ್ಕಲುಗಳ ಮನೆಗಳೇಗೆ ಗದ್ದಿಗೆ ದೇವತೆಯನ್ನು ಒಯ್ಯುವ ಸಾಂಪ್ರದಾಯಿಕ ಹಕ್ಕನ್ನು ಹೊಂದಿವೆ. ಆದರೆ ಒಕ್ಕಲು ಕುಟುಂಬಗಳ ಸಂಖ್ಯೆ ಹಾಗೂ ಗ್ರಾಮಗಳ ಹೆಸರುಗಳ ಬಗ್ಗೆ ಯಾವುದೇ ವಿವರ ಕೊಡಲು ಅವನು ಅಸಮರ್ಥನಾಗಿದ್ದನು. ಒಕ್ಕಲು ಕುಟುಂಬಗಳು ವಿಭಜನೆ ಹೊಂದಿದ ಕಾರಣ ಶಿವಾರ್ಚಕ ಕುಟುಂಬದವರಿಗೆ ತಮ್ಮ ಮೂಲ ಒಕ್ಕಲು ಕುಟುಂಬಗಳ ಬಗೆಗೆ ಖಚಿತವಾದ ವಿಚಾರ ತಿಳಿದಿರಲಿಲ್ಲ. ಶಿವಾರ್ಚಕರು ಗದ್ದುಗೆ ದೇವತೆಯನ್ನು ಒಯ್ಯುವ ಪದ್ಧತಿ ಬಗ್ಗೆ ತೋರಿಸಿದ ಉದಾಸೀನತೆಯೇ ಅವರ ಅಜ್ಞಾನಕ್ಕೆ ಕಾರಣವಾಗಿರುವಂತೆ ಕಾಣುತ್ತದೆ. ಗದ್ದುಗೆ ದೇವತೆಯ ಹಕ್ಕನ್ನು ಪಡೆದ ಒಂದು ಕುಟುಂಬದ ಶಿವಾರ್ಚಕನನ್ನು ನಾವು ವಿಚಾರಿಸಿದಾಗ ಅವನು ಕೊಟ್ಟ ಮೊನಚಾದ ಸಂಕ್ಷಿಪ್ತ ಉತ್ತರ ಹೀಗಿತ್ತು– "ಗದ್ದಿಗೆ ದೇವತೆಯ ಬಗ್ಗೆ ತಿಳಿದುಕೊಳ್ಳುವುದು ಯಾರಿಗೆ ಬೇಕಾಗಿದೆ? ನಮ್ಮ ತಂದೆಯವರ ಕಾಲದಿಂದ ನಾವು ಈ ವಿಷಯದಲ್ಲಿ ಆಸಕ್ತಿಯನ್ನು ತೊರಿಸಿಲ್ಲ". ಶಿವಾರ್ಚಕ ಪೂಜಾರಿಗಳು ಯಾವುದೇ ದಾಖಲೆಗಳನ್ನು ಇಟ್ಟಿರದ ಕಾರಣ ಗ್ರಾಮಗಳಲ್ಲಿರುವ ಒಕ್ಕಲು ಕುಟುಂಬಗಳ ಬಗ್ಗೆ ಸಮಗ್ರ ವಿವರ ಕೊಡಲು ಅವರಿಗೆ ಸಾಧ್ಯವಿರಲಿಲ್ಲ. ಸದ್ಯ ಗದ್ದಿಗೆ ದೇವತೆಯನ್ನು

ಒಯ್ಯುವಲ್ಲಿ ಭಾಗಿಯಾದ ಆ ಐದು ಕುಟುಂಬಗಳ ಒಂಭತ್ತು ಜನರು ತಮ್ಮ ಅನುಭವ ಹಾಗೂ ನೆನಪಿನ ಆಧಾರದ ಮೇಲೆ ಮಾಹಿತಿ ಕೊಟ್ಟರು. ನಮಗೆ ದೇವತೆಗಳ ಪೂಜೆಯ ಸಂಬಂಧದಲ್ಲಿ ಶಿವಾರ್ಚಕ ಪೂಜಾರಿ ಹಾಗೂ ಒಕ್ಕಲು ಸಂಬಂಧವನ್ನು ತಿಳಿಯಲು ಇದು ಸಹಾಯಕವಾಗುತ್ತದೆ ಎಂದು ನಮ್ಮ ಭಾವನೆ.

ನಮಗೆ ಮಾಹಿತಿ ನೀಡಿದ ಒಂಭತ್ತು ಜನರು ಸಾಮಾಜಿಕ-ಸಾಂಸ್ಕೃತಿಕ ಸ್ವರೂಪ ಅರ್ಚಕರ ಬಗೆಗಿನ ಒಕ್ಕಲುಗಳ ನಿಲುವು, ಆರ್ಥಿಕ ಅಂಶಗಳು ಬದಲಾದ ಹಿನ್ನಲೆಯಲ್ಲಿ ತಮ್ಮ ಧಾರ್ಮಿಕ ಆಚರಣೆಗಳ ನಿಖರ ಸ್ವರೂಪವನ್ನು ವರ್ಣಿಸಿದರು. ಪರಂಪರಾಗತವಾಗಿ ಬಮದ ಗದ್ದಿಗೆ ದೇವತೆಯ ಪೂಜೆಯ ಪದ್ಧತಿಯು ಶಿವಾರ್ಚಕ ಸಾಂಸ್ಕೃತಿಕ ಸಂಪ್ರದಾಯಗಳ ಮೇಲೆ ಬೆಳಕು ಚೆಲ್ಲುವುದರಿಂದ, ಕೆಲವು ನಿರ್ದಿಷ್ಟವಾದ ಉದಾಹರಣೆಗಳನ್ನು ಸ್ಪಷ್ಟವಾಗಿ ವರ್ಣಿಸುವ ಮೂಲಕ, ಸಮಕಾಲೀನ ಶಿವಾರ್ಚಕ ಪೂಜಾರಿಗಳ ಹಾಗೂ ಅವರ ಒಕ್ಕಲುಗಳ ಸಂಬಂಧಗಳನ್ನು ಚಿತ್ರಿಸುವ ಯತ್ನ ಮಾಡಲಾಗಿದೆ. ಶಿವಾರ್ಚಕ ಪೂಜಾರಿಗಳು ತಮಗೆ ಗೊತ್ತಿದ್ದ ಹಾಗೂ ನೆನಪಿದ್ದ ಗ್ರಾಮಗಳ ಬಗೆಗೆ ಮಾಹಿತಿ ನೀಡಿದರು. ಆದರೆ ತಾವು ಎಷ್ಟೋ ದಿನಗಳಿಂದ ಸಾಂಪ್ರದಾಯಿಕ ಸೇವೆಗಳನ್ನು ನಿಲ್ಲಿಸಿದ್ದರಿಂದಾಗಿ ಸಂಬಂಧ ಕಡಿದುಕೊಂಡ ಒಕ್ಕಲು ಕುಟುಂಬಗಳ ಬಗೆಗಿನ ಯಾವುದೇ ವಿವರವನ್ನು ಅವರು ನೀಡಲಿಲ್ಲವೆಂಬುದನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಆದ್ದರಿಂದ ಇಲ್ಲಿ ಕೊಟ್ಟ ಮಾಹಿತಿ ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರವಾಗಿಲ್ಲ.

**ಪ್ರಕರಣ - 1**

ಈ ಶಿವಾರ್ಚರು ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕಿನ ಮೂರು ಗ್ರಾಮಗಳಲ್ಲಿ ಒಕ್ಕಲು ಕುಟುಂಬಗಳಿವೆಯೆಂದು ಸೂಚಿಸಿದರು. ಆ ಎಲ್ಲಾ ಕುಟುಂಬಗಳು ನಾಮಧಾರಿ ಒಕ್ಕಲಿಗ ಜಾತಿಯವರು. ಪ್ರತಿವರ್ಷ ಸುಗ್ಗಿಯ ದಿನಗಳಲ್ಲಿ ಅರ್ಚಕನು ಈ ಗ್ರಾಮಗಳಗೆ ಹೋಗಿ ಗದ್ದಿಗೆ ದೇವತೆಯ ಪ್ರಸಾದ ಹಂಚುತ್ತಾನೆ. ಪ್ರಸಾದವೆಂದರೆ ಒಡೆದ ತೆಂಗಿನಕಾಯಿ, ಬಾಳೇಹಣ್ಣು ಹಾಗೂ ಕುಂಕುಮ. ಪ್ರತಿಯೊಂದು ಒಕ್ಕಲು ಕುಟುಂಬವೂ ಅವನಿಗೆ ಸಾಮಾನ್ಯವಾಗಿ ಎರಡು ಸೇರು ಭತ್ತವನ್ನು ಕೊಡುತ್ತದೆ. ಈ ಮೂರು ಗ್ರಾಮಗಳ ಪೈಕಿ ಒಂದರಲ್ಲಿ ಒಕ್ಕಲು ಐದು ವರ್ಷಕ್ಕೊಮ್ಮೆ ಚಾಮುಮಡೇಶ್ವರಿ ಉತ್ಸವವನ್ನು ಆಚರಿಸುವ ವ್ಯವಸ್ಥೆ ಮಾಡುತ್ತಾರೆ. ಆಗ ಗದ್ದಿಗೆ ದೇವತೆಯನ್ನು ತರಲು ಅರ್ಚಕನನ್ನು ಆಮಂತ್ರಿಸುತ್ತಾರೆ. ಏಕೆಂದರೆ ಗದ್ದಿಗೆ ದೇವತೆ ಇಲ್ಲದೇ ಉತ್ಸವ ನಡೆಯುವಂತಿಲ್ಲ. ಸಾಮಾನ್ಯವಾಗಿ ಹಳ್ಳಿಯಲ್ಲಿ ದೇವರ ಮನೆಯೆಂಬ ಪ್ರತ್ಯೇಕ ಸ್ಥಳವಿದ್ದು ಅಲ್ಲಿ ದೇವತೆಗಳ ಪ್ರತಿಷ್ಠಾಪನೆಯಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಒಕ್ಕಲು ಕುಟುಂಬದವರು ತಮ್ಮ ಬಂಧುಗಳನ್ನು ಆಮಂತ್ರಿಸುತ್ತಾರೆ. ಶಿವಾರ್ಚಕ ಪೂಜಾರಿಯು ಗದ್ದಿಗೆ ದೇವರನ್ನು ಪೂಜಿಸಿ ತುಪ್ಪದಲ್ಲಿ ತಯಾರಿಸಿದ ಕಜ್ಜಾಯಗಳನ್ನು ಪ್ರಸಾದವಾಗಿ ನಿವೇದಿಸುತ್ತಾನೆ. ಈ ಪವಿತ್ರ ಕಾರ್ಯ ನಿರ್ವಹಣೆಗೆ ಒಕ್ಕಲು ಕುಟುಂಬಗಳು ಬಟ್ಟೆ, ದವಸ ಧಾನ್ಯ ಇತ್ಯಾದಿ ವಸ್ತುರೂಪದಲ್ಲಿ ಕಾಣಿಕೆ ಕೊಡುತ್ತಾರೆ. ಉಳಿದ ಒಕ್ಕಲು ಕುಟುಂಬಗಳು ಕೂಡ ಪೂಜೆಗೆ ವ್ಯವಸ್ಥೆ ಮಾಡುತ್ತಾರೆ. ಸಾಮಾನ್ಯವಾಗಿ ಇಂತಹ ಸಂದರ್ಭಗಳಲ್ಲಿ ಕೊಡುವ ಕಾಣಿಕೆಗಳು ಗಣನೀಯವಾಗಿದ್ದರೂ ಪೂಜಾರಿಯ



ದೃಷ್ಟಿಯಲ್ಲಿ ಕೆಲವು ಸಲ ಸಹಾಯಕರನ್ನು ಕರೆದುಕೊಂಡು ತಾನು ಗದ್ದಿಗೆ ದೇವತೆಯನ್ನು ಒಯ್ಯುವಲ್ಲಿ ತೆಗೆದುಕೊಂಡ ಶ್ರಮಕ್ಕೆ ಇವು ಅನುಗುಣವಾಗಿ ಇರುವುದಿಲ್ಲವೆಂದು ತಿಳಿಯುತ್ತಾನೆ.

ಈಗ ಅವನು ಗ್ರಾಮಗಳಲ್ಲಿಯ ಒಕ್ಕಲುಮ ಕುಟುಂಬಗಳನ್ನು ಸಂದರ್ಶಿಸುತ್ತಿದ್ದರೂ ಗದ್ದಿಗೆ ದೇವತೆಯನ್ನು ಒಯ್ಯುವ ಅಥವಾ ಪ್ರಸಾದ ಹಂಚುವ ಪದ್ಧತಿಯನ್ನು ಮುಂದುವರೆಸಕೊಂಡು ಹೋಗುವಲ್ಲಿ ಅವನಿಗೆ ಆಸಕ್ತಿ ಇಲ್ಲ. ಕಾಣಿಕೆಯ ವಿಷಯದಲ್ಲಿ ಒಕ್ಕಲುಗಳು ಉದಾರವಲ್ಲವೆಂಬುದು ಇದಕ್ಕೊಂದು ಕಾರಣ. ಮೊದಲು ಕಾಳುಗಳನ್ನು ಸೇರಿನಿಂದ ಅಳೆಯುತ್ತಿದ್ದರು. ಈಗ ಮೊರದಲ್ಲಿ ಕಡಿಮೆ ಪ್ರಮಾಣದಲ್ಲಿ ಕೊಡುತ್ತಾರೆ. ಹಿಂದೆ ವಸ್ತ್ರಗಳನ್ನು ಕಾಣಿಕೆಯಾಗಿ ಪೂಜಾರಿಗೆ ಕೊಡುತ್ತಿದ್ದರು. ಈಗ ಅವುಗಳನ್ನು ದೇವಸ್ಥಾನದ ಅಧಿಕಾರಿಗಳಿಗೆ ಕೊಡುತ್ತಾರೆ. ಅವನು ಕೊಟ್ಟ ಇನ್ನೊಂದು ಕಾರಣವೆಂದರೆ ಸಾರಿಗೆ ಸೌಕರ್ಯ ಹೆಚ್ಚಿದ್ದರಿಂದ ಒಕ್ಕಲುಗಳು ವೈಯಕ್ತಿಕವಾಗಿ ತಾವೇ ಬೆಟ್ಟಕ್ಕೆ ಬಂದು ಪೂಜಾರಿಯನ್ನು ಕಂಡು ಪೂಜೆಯ ವ್ಯವಸ್ಥೆ ಮಾಡಿಸುತ್ತಾರೆ. ಇಂತಹ ಸಂದರ್ಭದಲ್ಲಿ ಪೋಷಕರು ಹಣದ ರೂಪದಲ್ಲಿಯೇ ಕಾಣಿಕೆಯನ್ನು ಕೊಡಬಹುದು.

**ಪ್ರಕರಣ - 2 :**

ನಮಗೆ ಮಾಹಿತಿ ನೀಡಿದ ಒಬ್ಬ, ನಾಲ್ಕು ಲಿಂಗಾಯಿತ ಒಕ್ಕಲು ಕುಟುಂಬಗಳಿದ್ದ ಮೈಸೂರು ತಾಲ್ಲೂಕಿನ ಒಂದು ಗ್ರಾಮದ ಪರಿಚಯ ತನಗಿದೆ ಎಂದು ಹೇಳಿದ. ಮೊದಲು ಅವನು ಆ ಗ್ರಾಮವನ್ನು ಸಂದರ್ಶಿಸುತ್ತಿದ್ದ. ಅವನು ಹತ್ತು ವರ್ಷಗಳ ಹಿಂದೆ ಅಲ್ಲಿಗೆ ಹೋದದ್ದೇ ಕೊನೆಯ ಬಾರಿ. ಅವನಿಗೆ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ಒಂದು ಗ್ರಾಮದಲ್ಲಿ ಇಪ್ಪತ್ತು ಒಕ್ಕಲು ಕುಟುಂಬಗಳಿದ್ದು ಅವೆಲ್ಲವೂ ಲಿಂಗಾಯಿತ ಧರ್ಮಕ್ಕೆ ಸೇರಿದುವಾಗಿವೆ. ಅವನು ಕೊನೆಯ ಬಾರಿ ಆ ಗ್ರಾಮಕ್ಕೆ ಹೋದದ್ದು 1965ರಲ್ಲಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಗಾನಿಗ ಜಾತಿಯ 60 ಒಕ್ಕಲು ಕುಟುಂಬಗಳುಳ್ಳ ಗ್ರಾಮವೊಂದು ಅವನಿಗೆ ಇದೆ. ಈ ಗ್ರಾಮಕ್ಕೆ ಸುಮಾರು ಒಂಭತ್ತು ವರ್ಷಗಳ ಹಿಂದೆ ಗದ್ದಿಗೆ ದೇವತೆಯನ್ನು ಅವನು ಒಯ್ದಿದ್ದನಂತೆ. ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿಯೂ ಕೆಲವು ಗ್ರಾಮಗಳಿವೆ. ಆದರೆ ತನ್ನ ತಂದೆಯ ಕಾಲಕ್ಕೆ ಸಾಂಪ್ರದಾಯಕ ಸೇವೆಯನ್ನು ನಿಲ್ಲಿಸಿದ್ದರಿಂದ ಈ ಗ್ರಾಮದ ಒಕ್ಕಲು ಕುಟುಂಬಗಳು ಅವನಿಗೆ ಗೊತ್ತಿರಲಿಲ್ಲ.

ಈ ಪೂಜಾರಿಯ ಸಮೀಪದ ಗ್ರಾಮವೊಂದರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕನಾಗಿದ್ದಾನೆ. ತನ್ನ ಪಾಲಿಗಿದ್ದ ದೇವಸ್ಥಾನದ ಕಾವಲು ಕೆಲಸವನ್ನು ತನ್ನ ಸಹೋದರಿಯ ಗಂಡನಿಗೆ ತಾತ್ಪೂರ್ತಿಕವಾಗಿ ವಹಿಸಿಕೊಟ್ಟಿದ್ದಾನೆ. ಅವನು ಪ್ರಾಯದ ಮಗನು ಬೆಟ್ಟದಲ್ಲಿ ಪ್ರವಾಸಿ ಕೇಂದ್ರಗಳ ಚಿತ್ರಗಳನ್ನು ಮಾರುತ್ತಾನೆ. ಹೀಗೆ ಭಿನ್ನವೃತ್ತಿಗಳನ್ನು ಕೈಗೊಂಡಿದ್ದರಿಂದ ನಮಗೆ ವಿವರ ನೀಡಿದ ಶಿವಾರ್ಚಕ ಪೂಜಾರಿಯು, ಅರ್ಚಕ ವೃತ್ತಿಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಲಿಲ್ಲ.

**ಪ್ರಕರಣ – 3 :**

ಈ ಶಿವಾರ್ಚಕನಿಗೆ 44 ಲಿಂಗಾಯಿತ ಒಕ್ಕಲು ಕುಟುಂಬಗಳಿರುವ 3 ಗ್ರಾಮಗಳು ಕೃಷ್ಣರಾಜ ತಾಲ್ಲೂಕಿನಲ್ಲಿವೆ. ಮೈಸೂರು ತಾಲ್ಲೂಕಿನ 5 ಗ್ರಾಮಗಳಲ್ಲಿ 40 ಲಿಂಗಾಯಿತರ, 2 ಗ್ರಾಮಗಳಲ್ಲಿ 18 ಕ್ಕಲಿಗರ ಹಾಗೂಒಂದು ಗ್ರಾಮದಲ್ಲಿ ಹೊಲೆಯರ ಜಾತಿಗೆ ಸೇರಿದ ಒಕ್ಕಲು ಕುಟುಂಬಗಳಿವೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 24 ಒಕ್ಕಲಿಗ ಒಕ್ಕಲು ಕುಟುಂಬಗಳಿವೆ. 3 ಗ್ರಾಮಗಳು ಹಾಗೂ ಟಿ.ನರಸೀಪುರ ತಾಲ್ಲೂಕಿನಲ್ಲಿ10 ಲಿಂಗಾಯಿತ ಒಕ್ಕಲುಗಳಿರುವ ಗ್ರಾಮಗಳು ಇವೆ.

ಅವನಿಗೆ ವಿವಿಧ ಗ್ರಾಮಗಳಲ್ಲಿ ಹಂಚಿ ಹೋಗಿರುವ ದೊಡ್ಡ ಸಂಖ್ಯೆಯ ಒಕ್ಕಲುಗಳಿದ್ದರೂ ಸುಮಾರು 15 ವರ್ಷಗಳಿಂದ ಆ ಗ್ರಾಮಗಳನ್ನು ಅವನು ಸಂದರ್ಶಿಸಿಲ್ಲವೆಂದು ಹೆಳಿದ. ಇದಕ್ಕೆ ಅವನು ಕೊಟ್ಟ ಒಂದು ಕಾರಣವೆಂದರೆ ಅವನು ಮನೆಯಲ್ಲಿ ಒಬ್ಬಂಟಿಗನಾಗಿದ್ದು, ದೇವಸ್ಥಾನದ ಸೇವೆಯನ್ನು ಅವನೇ ಪೂರೈಸಬೇಕಾಗಿದ್ದರಿಂದ ಒಕ್ಕಲುಗಳಲ್ಲಿರುವಲ್ಲಿಗೆ ಅವನುಗೆ ಹೋಗುವುದು ಸಾಧ್ಯವಾಗಿಲ್ಲ. ಒಕ್ಕಲುಗಳು ಹೆಚ್ಚಾಗಿ ಬೆಟ್ಟಕ್ಕೆ ಬಂದು ಪ್ರಸಾದ ತೆಗೆದುಕೊಳ್ಳುತ್ತಾರೆ. ಅದಾಗ್ಯೂ ಕಳೆದ ವರ್ಷ ಸ್ವಲ್ಪ ತೊಂದರೆ ತೆಗೆದುಕೊಂಡು 2 ಗ್ರಾಮಗಳನ್ನು ಸಂದರ್ಶಿಸಿದ. ಸಾಂಪ್ರದಾಯಕ ಸೇವೆಗಳನ್ನು ನಿಲ್ಲಿಸುವುದಕ್ಕೆ ಅವನ ವಿರೋಧವಿತ್ತು. ಕಾಣಿಕೆಗಳನ್ನು ಪಡೆಯುವಲ್ಲಿ ಶಿವಾರ್ಚಕ ಪೂಜಾರಿಗಳು ತೊಂದರೆ ಅನುಭವಿಸುತ್ತಿದ್ದಾರೆಂದು ಅವನು ಹೇಳಿದನು. ಉದಾಹರಣೆಗೆ: ಒಕ್ಕಲುಗಳು ಮೊದಲು ಸುಮಾರು ಹತ್ತು ಸೇರು ಧಾನ್ಯ ಹಿಡಿಯುವ 'ದೇವಕೊಳಗ' ಎಂಬ ವಿಶೇಷ ಅಳತೆಯಿಂದ ಕಾಣಿಕೆ ಕೊಡುತ್ತಿದ್ದರು. ಆದರೆ ಈಗ ಸಾಮಾನ್ಯ ಐದು ಸೇರಿನ ಅಳತೆಯದು ಬಮದಿದೆ. ರಥೋತ್ಸವ ಹಾಗೂ ತೆಪ್ಪೋತ್ಸವ ಕಾಲಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲುಗಳು ಬೆಟ್ಟಕ್ಕೆ ಬಂದಾಗ ತಾನು ವೈಯಕ್ತಿಕವಾಗಿ ವಿಶೇಷ ತೊಂದರೆ ತೆಗೆದುಕೊಳ್ಳಬೇಕಾಗುತ್ತದೆಂದು ನಮಗೆ ವಿವರ ಕೊಟ್ಟವನು ಹೆಳಿದ. ಪರಸ್ಪರ ಋಣ ಪೂರೈಕೆಗಾಗಿ ಅವರಿಗೆ ಊಟ ಮುಂತಾದವುಗಳ ವ್ಯವಸ್ಥೆ ಅವನು ಮಾಡಬೇಕು. ಅವನ ಒಕ್ಕಲುಗಳಿಗೆ ಗಟ್ಟಿಯಾದ ಕಾಫಿ, ಮಕ್ಕಳಿಗೆ ಹಾಲು, ಸ್ನಾನಕ್ಕೆ ಬಿಸಿನೀರು ಮುಂತಾದವುಗಳನ್ನು ನಿರ್ಭಯದಿಂದ ಕೇಳುತ್ತಾರೆಂದು ಅವನು ಕಟುವಾಗಿ ಟೀಕಿಸಿದ. ಬೆಟ್ಟದಲ್ಲಿ ಜೀವನ ಬಹಳ ತುಟ್ಟಿಯಾಗಿದೆ. ಉಪಜೀವನಕ್ಕಾಗಿ ಹೆಚ್ಚಾಗಿ ಒಕ್ಕಲುಗಳ ಹಾಗೂ ದೇವಸ್ಥಾನದ ಸೇವೆಗಳನ್ನೇ ಅವಲಂಬಿಸಿದ ಶಿವಾರ್ಚಕರು, ಅಧಿನಿಕರಾದ ತನ್ನ ಒಕ್ಕಲುಗಳನ್ನು ನಿಭಾಯಿಸುವುದು ಕಷ್ಟ ಎಂದವನ ಅಭಿಪ್ರಾಯವಾಗಿತ್ತು. ಯಾಕೆಂದರೆ ಈ ಸುಧಾರಿಸಿದ ಒಕ್ಕಲುಗಳು ಬೆಟ್ಟಕ್ಕೆ ಬಂದಾಗ ತಮ್ಮ ಅರ್ಚಕರಿಗೆ ಕಾಣಿಕೆಗಳನ್ನು ಕೊಡುವಲ್ಲಿ ಜಿಪುಣರಾಗಿರುತ್ತಾರೆ. ದೇವಸ್ಥಾನದಲ್ಲಿ ಸೇವೆಗಳಿದ್ದಾಗ್ಯೂ ಗ್ರಾಮಗಳಲ್ಲಿರುವ ತನ್ನ ಒಕ್ಕಲು ಕುಟುಂಬಗಳೇಗೆ ಅವನು ಹೋಗಬಹುದಾಗಿತ್ತು. ಅದರ ಮೇಲೆ ಹೇಳಿದ ತೊಂದರೆಗಳಿಂದಾಗಿ ಎಷ್ಟೋ ವರ್ಷಗಳಿಂದ ಹೋಗುವುದನ್ನು ಬಹುಮಟ್ಟಿಗೆ ನಿಲ್ಲಿಸಿಬಿಟ್ಟಿರುವುದಾಗಿ ಅವನು ಹೇಳಿದ.



**ಪ್ರಕರಣ – 4:**

ಈತನಿಗೆ ಒಕ್ಕಲು ಕುಟುಂಬಗಳಿರುವ 3 ಗ್ರಾಮಗಳಿವೆ. 20 ಒಕ್ಕಲಿಗ ಒಕ್ಕಲುಗಳಿರುವ ಒಂದು ಗ್ರಾಮವು ಮೈಸೂರು ನಗರದ ಭಾಗವೇ ಆಗಿದೆ. 15 ಒಕ್ಕಲು ಒಕ್ಕಲುಗಳಿರುವ ಒಂದು ಗ್ರಾಮ ಮೈಸೂರು ತಾಲ್ಲೂಕಿನಲ್ಲಿದೆ. ಈ ಎರಡು ಗ್ರಾಮಗಳ ಒಕ್ಕಲುಗಳು ರಥೋತ್ಸವ ಹಾಗೂ ತೆಪ್ಪೋತ್ಸವ ಕಾಲಕ್ಕೆ ಬೆಟ್ಟವನ್ನು ಸಂದರ್ಶಿಸುತ್ತಾರೆ. ಗದ್ದಿಗೆ ಕ್ಷೇತ್ರಕ್ಕೆ ದೀಪ ಹಚ್ಚಲು ಎಣ್ಣೆ, ರಾಗಿ ಮುಂತಾದ ವಸ್ತುರೂಪದ ಕಾಣಿಕೆಗಳನ್ನು ಅವರು ಕೊಡುತ್ತಾರೆ. ಒಕ್ಕಲುಗಳು ಬೆಟ್ಟಕ್ಕೆ ಬರುವುದರಿಂದ ಶಿವಾರ್ಚಕನು ಅವರ ಗ್ರಾಮಗಳಿಗೆ ಹೋಗುವುದಿಲ್ಲ. ಮಂಡ್ಯ ತಾಲ್ಲೂಕಿನ ಒಂದು ಗ್ರಾಮದಲ್ಲಿ ಅವನ ಒಕ್ಕಳುಗಳಾದ 5 ಒಕ್ಕಲಿಗ ಕುಟುಂಬಗಳಿವೆ. ಎಷ್ಟೋ ಕಾಲದಿಂದ ಅವನು ಆ ಗ್ರಾಮಕ್ಕೆ ಹೋಗಿಯೇ ಇರಲಿಲ್ಲ. ಇದೇ ವರ್ಷ ಅವನು ಅಲ್ಲಿ ಹೋಗಿ ಪ್ರಸಾದ ಹಂಚಿದ್ದ. ಆದರೆ ಕೇವಲ ಹತ್ತು ಸೇರಿ ಬತ್ತದ ಕಾಣಿಕೆ ಪಡೆದುದಾಗಿ ವಿಷಾದದಿಂದ ಹೇಳಿದ. ಪ್ರವಾಸ ಹಾಗೂ ಇತರ ವೆಚ್ಚಕ್ಕೆ ಸುಮಾರು 10 ರೂಪಾಯಿ ಖರ್ಚು ಆಗಿದ್ದರೂ ಅವನ ಆದಾಯ ಅದಕ್ಕಿಂತ ಕಡಿಮಾಯಾಗಿತ್ತು. ಒಕ್ಕಲುಗಳಿಮದ ಕಾಣಿಕೆ ಪಡೆದಿದ್ದಕ್ಕಾಗಿ ಅವರು ಬೆಟ್ಟಕ್ಕೆ ಬಂದಾಗ ಅವನು ಅವರಿಗೆ ಪರಸ್ಪರ ಋಣ ತೀರಿಸಲು ಔತಣ ಏರ್ಪಡಿಸಬೇಕಾಗುತ್ತದೆ. ಹೀಗಾಗಿ ಇಬ್ಬಗೆಯಿಂದಲೂ ಅನಾನುಕೂಲತೆಗಳಿಗೆ ಒಳಗಾದೆನೆಂದು ಹೇಳಿದ. ಆದ್ದರಿಂದ ದೊಡ್ಡ ಮೊತ್ತದಲ್ಲಿ ಕಾಣಿಕೆಗಳನ್ನು ಕೊಡುವುದಾಗಿ ವಚನ ಕೊಡುವವರೆಗೆ ಮಂಡ್ಯ ತಾಲ್ಲೂಕಿನ ಗ್ರಾಮಕ್ಕೆ ಹೋರಬಾರದೆಂದು ಆತ ನಿರ್ಧರಿಸಿದ್ದಾನೆ.

**ಪ್ರಕರಣ – 5:**

ನಮಗೆ ಮಾಹಿತಿ ನೀಡಿದ ಶಿವಾರ್ಚಕನು ಮೇಲ್ವಿಚಾರಕನೆಂದು, ನೌಕರಿ ಮಾಡುತ್ತಿದ್ದುದರಿಂದ ಗ್ರಾಮಗಳಲ್ಲಿಯ ಒಕ್ಕಲು ಮನೆತನಗಳನ್ನು ಕಾಣುವುದು ಅವನಿಗೆ ಸಾಧ್ಯವಾಗಿಲ್ಲ. ಅವನ ಪ್ರಾಯದ ಮಕ್ಕಳೇಬ್ಬರೂ ಬೆಟ್ಟದ ಹೊರಗೆ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದು ಅವರಿಗೂ ಒಕ್ಕಲು ಮನೆಗಳಲ್ಲಿ ಹೋಗುವುದರಲ್ಲಿ ಆಸಕ್ತಿ ಇಲ್ಲ. ಅವನಿಗೆ ಮೈಸೂರು ತಾಲ್ಲೂಕಿನಲ್ಲಿಯ 14 ಗ್ರಾಮಗಳಲ್ಲಿ ಲಿಂಗಾಯಿತ ಹಾಗೂ ಒಕ್ಕಲಿಗರ ಜಾತಿಗೆ ಸೇರಿದ ಒಕ್ಕಲುಗಳಿದ್ದಾರೆ. ಅವನು ಅಲ್ಲಿಗೆ ಹೋಗದಿದ್ದರೂ ಎಷ್ಟೋ ಜನ ಒಕ್ಕಲುಗಳ ಬೆಟ್ಟಕ್ಕೆ ಬಂದು ಅವನನ್ನು ಕಾಣುತ್ತಾರೆ. ಅವನು ಕ್ರಿಯಾವಿಧಿಗಳನ್ನು ಪೂರೈಸುವಲ್ಲಿ ಅವರಿಗೆ ಸಹಾಯ ಒದಗಿಸಿ ಆತಿಥ್ಯ ನೀಡುತ್ತಾನೆ.

**ಪ್ರಕರಣ – 6 :**

ಈ ಶಿವಾರ್ಚಕ ಪೂಜಾರಿಯ ಬೆಟ್ಟದ ಹೊರಗೆ ಪ್ರಾಥಮಿಕ ಶಾಲೆಯ ಶಿಕ್ಷಕನಾಗಿದ್ದರೂ ಕೆಲಸ ಮಾಡುತ್ತ ಸುಗ್ಗಿಯ ದಿನಗಳಲ್ಲಿ ಹಾಗೂ ಶಾಲೆಗೆ ರಜೆ ಇದ್ದಾಗ ತನ್ನ ಒಕ್ಕಲುಗಳನ್ನು ಕಾಣುತ್ತಾನೆಂದು ಹೇಳಬಹುದು. ಅವನಿಗೆ ಮೈಸೂರು ತಾಲ್ಲೂಕಿನ ಒಂದು ಗ್ರಾಮದಲ್ಲಿ ರಾಜ ಪರಿವಾರ ಜಾತಿಗೆ ಸೇರಿದ ಇಪ್ಪತ್ತು ಒಕ್ಕಲುಗಳಿವೆ. ವರ್ಷದಲ್ಲಿ ಎರಡು–ಮೂರು ಬಾರಿ ಈ ಗ್ರಾಮಕ್ಕೆ ಅವನು ಹೋಗುತ್ತಾನೆ. ಪೋಷಕರು ಇಚ್ಛಿಸಿದಲ್ಲಿ ಗದ್ದಿಗೆ ದೇವತೆಯನ್ನು ಕೊಂಡೊಯ್ಯುತ್ತಾರೆ.

ಸಾಮಾನ್ಯವಾಗಿ ಪೋಷಕರ ಮನೆಗಳಲ್ಲಿ ವಿವಾಹ, ಗೃಹ ಪ್ರವೇಶ ಮುಂತಾದ ಸಮಾರಂಭಗಳಿದ್ದರೆ ಗದ್ದಿಗೆ ದೇವತೆಯ ಪೂಜೆಯನ್ನು ನೆರವೇರಿಸುತ್ತಾರೆಂದು ಅವನು ಹೇಳಿದನು. ಬೆಟ್ಟದಲ್ಲಿದ್ದ ಅವನ ಮನೆಗೆ ಪೋಷಕರು ಬಂದರೆ ದೇವಸ್ಥಾನದಲ್ಲಿ ತಾತ್ಕಾಲಿಕವಾಗಿ ಅವನ ಬದಲು ಕಾರ್ಯ ನಿರ್ವಹಿಸುವ ಅವನ ಬಂಧುಗಳು ಅವರಿಗೆ ಅವಶ್ಯಕ ಸೇವೆ ಸಲ್ಲಿಸುವ ಸಹಾಯ ಮಾಡಿ, ಆದರೋಪಚಾರ ಮಾಡುತ್ತಾರೆ.

ಮೈಸೂರು ತಾಲ್ಲೂಕಿನಲ್ಲಿ ಅವನಿಗೆ ಸಂಬಂಧಿಸಿದ ಮೂರು ಗ್ರಾಮಗಳ ಪೈಕಿ ರಾಜಪರಿವಾರ ಜಾತಿಯ ಸುಮಾರು 17 ಒಕ್ಕಲು ಕುಟುಂಬಗಳ ಎರಡು ಗ್ರಾಮಗಳಿವೆ. ಮೂರನೇ ಗ್ರಾಮದಲ್ಲಿ ಕೇವಲ ಏಳು ಒಕ್ಕಲಿಗ ಕುಟುಂಬಗಳು ಮಾತ್ರ ಅವರ ಒಕ್ಕಲು. ಈ ಗ್ರಾಮಗಳಲ್ಲಿ ನೀರಿನ ಅನಾನುಕೂಲತೆ ಇದ್ದ ಕಾರಣ ಪೂಜಾರಿಯು ಗದ್ದಿಗೆ ದೇವತೆಯನ್ನು ಅಲ್ಲಿಗೆ ಒಯ್ಯುವುದಿಲ್ಲ. ಆದರೆ ಅವನು ಆಗೊಮ್ಮೆ ಈಗೊಮ್ಮೆ ತನ್ನ ಒಕ್ಕಲು ಕುಟುಂಬಗಳಿಗೆ ಭೇಟಿಯಿತ್ತು ಪ್ರಸಾದ ವಿತರಣೆ ಮಾಡುತ್ತಾನೆ.

**ಪ್ರಕರಣ – 7 :**

ಈ ವಿವರಣೆ ನೀಡಿದ ಶಿವಾರ್ಚಕನು ತನ್ನ ಒಕ್ಕಲು ಕುಟುಂಬಗಳಿರುವ 10 ಗ್ರಾಮಗಳನ್ನು ಹೆಸರಿಸಿದ. ಇಪ್ಪತ್ತು ಒಕ್ಕಲಿಗ, ಇಪ್ಪತ್ತು ಲಿಂಗಾಯಿತ ಹಾಗೂ ಕುರುಬರ ಜಾತಿಗಳ ಒಕ್ಕಲು ಕುಟುಂಬಗಳು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಒಂದು ಗ್ರಾಮದಲ್ಲಿವೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ತನ್ನ ತಂದೆಯ ಜೊತೆ ಈ ಗ್ರಾಮಕ್ಕೆ ಹೋಗಿದ್ದ ಈ ಅರ್ಚಕ. ಹಾಸನ ಜಿಲ್ಲೆಯ ಹೊಳೆನರಸೀಪುರ ಗ್ರಾಮ ವೊಂದರಲ್ಲಿರುವ ಹದಿನೈದು ಒಕ್ಕಲಿಗ ಒಕ್ಕಲು ಕುಟುಂಬಗಳು, ಸಾಮಾನ್ಯವಾಗಿ ಬೆಟ್ಟಕ್ಕೆ ಹೋದಾಗ ಈ ಪೂಜಾರಿಯನ್ನು ಕಾಣುತ್ತಾರೆ ಹಾಗೂ ಅವನಿಗೆ ವಸ್ತು ರೂಪದ ಕಾಣಿಕೆಗಳನ್ನು ನೀಡುತ್ತಾರೆ. ಕೃಷ್ಣರಾಜನಗರ ತಾಲ್ಲೂಕಿನ ಮೂರು ಗ್ರಾಮಗಳಲ್ಲಿ ನಲವತ್ತೈದು ಲಿಂಗಾಯಿತ ಒಕ್ಕಲು ಕುಟುಂಬಗಳಿವೆ. ಎರಡು ಗ್ರಾಮಗಳಲ್ಲಿ ಅವನಿಗೆ ಧಾರಾಳವಾಗಿ ಕಾಣಿಕೆಗಳು ದೊರಕುವುದರಿಂದ ಅಲ್ಲಿ ತಪ್ಪದೆ ಹೋಗುತ್ತಾನೆ. ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ನಾಲ್ಕು ಗ್ರಾಮಗಳಲ್ಲಿ ಲಿಂಗಾಯಿತ ಜಾತಿಯವರೇ ಆದ ನಲವತ್ತು ಒಕ್ಕಲು ಕುಟುಂಬಗಳಿವೆ. ಈ ನಾಲ್ಕು ಗ್ರಾಮಗಳಲ್ಲಿ ಒಂದೇ ಒಂದು ಗ್ರಾಮದಲ್ಲಿ ಮಾತ್ರ ಆತನು ಒಳ್ಳೆಯ ಮೊತ್ತದ ಕಾಣಿಕೆಗಳನ್ನು ಸ್ವೀಕರಿಸುತ್ತಾನೆ. ಇದಕ್ಕೆ ಅವನು ಹಿಂದಿನ ವರ್ಷದ ಉದಾಹರಣೆ ಕೊಟ್ಟ. ಹಿಂದಿನ ವರ್ಷ ಅವನು ಗ್ರಾಮಕ್ಕೆ ಹೋದಾಗ ಚಾಮುಂಡೇಶ್ವರಿಯ ಪ್ರಸಾದ ವಿತರಣೆ ಮಾಡಿದ್ದಕ್ಕೆ ಸುಮಾರು 5 ಕ್ವಿಂಟಾಲಿಗಿಂತ ಹೆಚ್ಚು ಧಾನ್ಯಗಳನ್ನು ಕಾಣಿಕೆಯಾಗಿ ಪಡೆದಿದ್ದಾನಂತೆ. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿಯೂ ಅವನ ಕೆಲವು ಗ್ರಾಮಗಳಿವೆ. ಆದರೆ ಬಹು ದಿನಗಳಿಂದ ಸಂದರ್ಶಿಸಲಿಲ್ಲವಾದ್ದರಿಂದ ಅಲ್ಲಿಯ ಒಕ್ಕಲು ಕುಟುಂಬಗಳ ಬಗ್ಗೆ ಅವನಿಗೆ ಗೊತ್ತಿಲ್ಲ. ಹೆಚ್ಚಿನ ಒಕ್ಕಲು ಕುಟುಂಬಗಳು ಬೆಟ್ಟದಲ್ಲಿರುವ ಅವನನ್ನು ಕಂಡು ಕಾಣಿಕೆ ಸಲ್ಲಿಸುತ್ತಾರೆಂದು ಅವನು ಹೇಳಿದ.



ನಮಗೆ ವಿವರ ನೀಡಿದ ಶಿವಾರ್ಚಕನು ಕೆಲವು ಒಕ್ಕಲು ಗ್ರಾಮಗಳನ್ನು ಸಂದರ್ಶಿಸುತ್ತಿದ್ದರೂ ಅವನು ಸಾಂಪ್ರದಾಯಿಕವಾಗಿ ಬಂದ ಪ್ರಸಾದ ವಿತರಣೆ ಅಥವಾ ಗದ್ದಿಗೆ ದೇವತೆಯನ್ನು ಕೊಂಡೊಯ್ಯುವ ಪದ್ಧತಿಯನ್ನು ಮುಂದುವರಿಸುವುದರಲ್ಲಿ ಆಸಕ್ತಿ ಹೊಂದಿರಲಿಲ್ಲ. ಅದಕ್ಕೆ ಅವನು ಕೊಟ್ಟ ಕಾರಣಗಳು ಹೀಗಿವೆ:

1. ಈ ತರದ ಕೆಲಸ ಮಾಡುವಲ್ಲಿ ಅವನಿಗೆ ಒಲವಿಲ್ಲ. ಇತ್ತೀಚೆಗೆ ಅವನು ಚಾಮುಂಡಿ ಬೆಟ್ಟದ ಹಳ್ಳಿಯ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸ ತೊಡಗಿರುವುದನ್ನು ಇಲ್ಲಿ ಎತ್ತಿ ಹೇಳಬಹುದು. ಉದಾ: ಅವನು ದೇವಸ್ಥಾನದ ಸೇವಕನೆಂಬ ಕಾರಣಕ್ಕಾಗಿ ಚುನಾವಣೆ ಅಧಿಕಾರಿಗಳು ಗ್ರಾಮ ಪಂಚಾಯಿತಿ ಸದಸ್ಯತ್ವಕ್ಕೆ ಅವನ ಉಮೇದುವಾರಿಕೆಯನ್ನು ತಿರಸ್ಕರಿಸಿದಾಗ ಮೈಸೂರು ಉಚ್ಚನ್ಯಾಯಾಲಯದಿಂದ ತಡೆ ಆಜ್ಞೆ ತರುವಲ್ಲಿ ಆತ ಯಶಸ್ವಿಯಾದ.

2. ಹೆಚ್ಚಾಗಿ ಒಕ್ಕಲುಗಳೇ ಬೆಟ್ಟಕ್ಕೆ ಬರುವುದರಿಂದ ಅವನು ಹಳ್ಳಿಗೆ ಹೋಗಿ ಅವರ ಕುಟುಂಬಗಳನ್ನು ಕಾಣುವುದು ಅನವಶ್ಯಕವೆಂದು ಭಾವಿಸುತ್ತಾನೆ.

3. ಎಷ್ಟೋ ಗ್ರಾಮಗಳಲ್ಲಿ ಕಾಣಿಕೆಗಳ ಮೊತ್ತ ಅತ್ಯಲ್ಪವಾಗಿದೆ.

ಆದಾಗ್ಯೂ ತಾನು ಸೇವೆಯಲ್ಲಿ ಇರುವವರೆಗೆ ಒಕ್ಕಲು ಕಾಣಿಕೆ ಕೊಡಲಿ, ಬಿಡಲಿ, ಅವರನ್ನು ಅತ್ಯಂತ ಗೌರವದಿಂದ ಸ್ವಾಗತಿಸಿ ಸ್ಥಾಪಿತ ಸಂಪ್ರದಾಯಗಳಿಗೆ ಅನುಗುಣವಾಗಿ ಪೂಜಾದಿ ಮರ್ಯಾದೆಗಳನ್ನು ಮುಂದುವರೆಸುವುದಾಗಿ ಹೇಳಿದನು.

**ಪ್ರಕರಣ – 8 :**

ಈ ಶಿವಾರ್ಚಕನಿಗೆ ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನಲ್ಲಿ ಕೇವಲ ಮೂರು ಲಿಂಗಾಯಿತ ಒಕ್ಕಲುಗಳಿರುವ ಒಂದು ಗ್ರಾಮವಿದೆ. ಸುಮಾರು ಮೂವತ್ತು ವರ್ಷಗಳ ಹಿಂದೆ ತನ್ನ ತಂದೆಯ ಸಹೋದರನೊಡನೆ ಗದ್ದಿಗೆ ದೇವತೆಯನ್ನು ತೆಗೆದುಕೊಂಡು ಹೋದದ್ದನ್ನು ಜ್ಞಾಪಿಸಿಕೊಳ್ಳುತ್ತಾನೆ. ಮೈಸೂರು ತಾಲ್ಲೂಕಿನಲ್ಲಿ ಐದು ಲಿಂಗಾಯಿತ ಪೋಷಕ ಕುಟುಂಬಗಳಿರುವ ಇನ್ನೊಂದು ಗ್ರಾಮ ಇದೆ. ಬೆಟ್ಟಕ್ಕೆ ಈ ಗ್ರಾಮ ತೀರ ಸಮೀಪ ಇರುವುದರಿಂದ ಪ್ರತಿವರ್ಷ ಭೇಟಿ ಕೊಡುತ್ತಾನೆ. ಅವನಿಗೆ ಬೆಂಗಳೂರು ಜಿಲ್ಲೆಯ ಕನಕಪುರದಲ್ಲಿಯೂ ಕೆಲವು ಒಕ್ಕಲು ಕುಟುಂಬಗಳಿವೆ. ಆದರೆ ಸುಮಾರು ಐವತ್ತು ವರ್ಷಗಳಿಂದ ಸಾಂಪ್ರದಾಯಿಕ ಕ್ರಿಯಾವಿಧಿಗಳ ಸೇವೆ ನಿಂತುಹೋದದ್ದರಿಂದ ಸಂಪರ್ಕ ಕಳಚಿಬಿದ್ದಿದೆ ಎಂದು ಹೇಳಿದನು. ಆ ಗ್ರಾಮದ ಎಷ್ಟೋ ಒಕ್ಕಲುಗಳು ಬೆಟ್ಟವನ್ನು ಸಂದರ್ಶಿಸುತ್ತಿರುವುದು ಅವನಿಗೆ ಗೊತ್ತಿದೆ. ಆದರೂ ಕಡಿದುಹೋದ ಸಂಬಂಧವನ್ನು ಬೆಸೆಯಲು ಎರಡು ಕಡೆಯವರೂ (ಶಿವಾರ್ಚಕ–ಪೋಷಕ) ಪ್ರಯತ್ನಿಸಲಿಲ್ಲವೆಂದು ಪೂಜಾರಿ ತಿಳಿಸಿದ. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿಯೂ ಅವನಿಗೆ ಒಂದು ಗ್ರಾಮ ಇದೆ. ಆದರೆ ಗ್ರಾಮವು ಬಹಳ ದೂರವಿರುವುದರಿಂದ ಅವನು ಭೇಟಿಕೊಡುವುದನ್ನು ನಿಲ್ಲಿಸಿಬಿಟ್ಟಿದ್ದಾನೆ. ಗ್ರಾಮಗಳ ಪೋಷಕರು ಬೆಟ್ಟಕ್ಕೆ ಸಂದರ್ಶನವಿತ್ತಾಗ ಅವರಿಗೆ ಅವಶ್ಯಕವಾದ ಕ್ರಿಯಾವಿಧಿಗಳ ಸೇವೆಯಲ್ಲಿ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಸಹಾಯ ಒದಗಿಸುವುದಾಗಿ ಶಿವಾರ್ಚಕನು ಹೇಳಿದ.

ಜೀವನೋಪಾಯಕ್ಕಾಗಿ ಈ ಸಾಂಪ್ರದಾಯಿಕ ವೃತ್ತಿಯನ್ನು ಕೈಗೊಳ್ಳುವ ಇಚ್ಛೆ ತನಗಿಲ್ಲವೆಂದು ಅವನು ತಿಳಿಸಿದ. ಪೋಷಕ ಕುಟುಂಬಗಳು ಮುಕ್ತ ಹಸ್ತದಿಂದ ಕಾಣಿಕೆಗಳನ್ನು ಕೊಡದಿರುವುದು ಇದಕ್ಕೆ ಪ್ರಮುಖ ಕಾರಣವಾಗಿ ಜೀವನ ನಡೆಸುವಷ್ಟು ಕಾಣಿಕೆಗಳು ಧಾರಾಳವಾಗದಿರುವುದು. ಇಂಥ ಕೆಲವು ತೊಂದರೆಗಳಿಂದಾಗಿ ಎಷ್ಟೋ ಶಿವಾರ್ಚಕ ಪೂಜಾರಿಗಳು ತಮ್ಮ ಸಾಂಪ್ರಾದಾಯಿಕ ವೃತ್ತಿಯನ್ನು ತ್ಯಜಿಸಿ, ಶಾಲೆಗಳಲ್ಲಿ, ಸರ್ಕಾರಿ ಸೇವೆಗಳಲ್ಲಿ, ವಾಣಿಜ್ಯದಲ್ಲಿ ಹೊಸ ವೃತ್ತಿಯನ್ನು ಕೈಗೊಂಡಿದ್ದಾರೆಂದು ಅವನು ತಿಳಿಸಿದ. ಸ್ವತಃ ಅವನೇ ಬಡ್ಡಿ ವ್ಯವಹಾರ ಪ್ರಾರಂಭಿಸಿರುವುದರಿಂದ ಇದು ಅವನ ವಿಚಾರ ಸರಣಿ ಮೇಲೆ ಪ್ರಭಾವ ಬೀರಿದೆ.

**ಪ್ರಕರಣ – 9 :**

ಈ ವಿವರ ತಿಳಿಸಿದ ಶಿವಾರ್ಚಕನು ಏಳು ಗ್ರಾಮಗಳನ್ನು ಹೆಸರಿಸಿದನು. ನಂಜನಗೂಡು ತಾಲ್ಲೂಕಿನ ಒಂದು ಗ್ರಾಮದಲ್ಲಿ 25 ಲಿಂಗಾಯಿತ ಒಕ್ಕಲು ಕುಟುಂಬಗಳಿದ್ದರೆ, ಅದೇ ತಾಲ್ಲೂಕಿನ ಇನ್ನೊಂದು ಗ್ರಾಮದಲ್ಲಿ ಒಂದು ಲಿಂಗಾಯಿತ ಹಾಗೂ ಎರಡು ಕುರುಬರ ಕುಟುಂಬಗಳಿವೆ. ಅವನು ಈ ಎರಡೂ ಗ್ರಾಮಗಳಿಗೆ ಪ್ರತಿವರ್ಷ ಭೇಟಿ ಕೊಡುತ್ತಿದ್ದರೂ ಸರಿಯಾದ ರೀತಿಯಲ್ಲಿ ಕಾಣಿಕೆಗಳು ಬರುತ್ತಿಲ್ಲವಾದ್ದರಿಂದ ಅವನಿಗೆ ಅತೃಪ್ತಿಯಿದೆ. ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಮೂರು ಗ್ರಾಮಗಳ ಪೈಕಿ ಒಂದರಲ್ಲಿ ಎರಡು ಒಕ್ಕಲಿಗ, ಎರಡು ಗಾಣಿಗ ಹಾಗೂ ಒಂದು ರಾಜಪರಿವಾರ ಜಾತಿಯ ಒಕ್ಕಲು ಕುಟುಂಬಳಿವೆ. ಇನ್ನೊಂದು ಗ್ರಾಮದಲ್ಲಿ ಗಾಣಿಗರ ಹತ್ತು ಕುಟುಂಬಗಳಿವೆ ಹಾಗೂ ಮೂರನೆಯ ಗ್ರಾಮದಲ್ಲಿ ರಾಜಪರಿವಾರ ಜಾತಿಯ ಎಂಟು ಕುಟುಂಬಗಳಿವೆ. ಈ ಗ್ರಾಮಗಳ ಒಕ್ಕಲು ಕುಟುಂಬಗಳು ಬೆಟ್ಟಕ್ಕೆ ಸಂದರ್ಶಿಸಿದಾಗ ಶಿವಾರ್ಚಕನು ಅವರಿಗೆ ಎಲ್ಲಾ ರೀತಿಯ ಸಹಕಾರ ನೀಡುವನು. ಹೆಗ್ಗಡದೇವನಕೋಟೆ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಲಿಂಗಾಯಿತ ಹಾಗೂ ಒಕ್ಕಲಿಗ ಜಾತಿಯ ಕೆಲವು ಒಕ್ಕಲು ಕುಟುಂಬಗಳಿವೆ. ಅವನ ಪ್ರಕಾರ ಗ್ರಾಮದ ಒಕ್ಕಲುಗಳು ಅವನೊಂದಿಗೆ ಸರಿಯಾಗಿ ನಡೆದುಕೊಳ್ಳುತ್ತಿಲ್ಲ, ಅವನು ಭೇಟಿ ಕೊಟ್ಟಾಗಲೆಲ್ಲಾ ಬೆಳೆ ಸರಿಯಾಗಿ ಬಂದಿಲ್ಲವೆಂಬ ನೆಪ ಹೇಳಿದರು. ಆದ್ದರಿಂದ ಈ ಗ್ರಾಮದ ಒಕ್ಕಲುಗಳು ಒಂದು ಕ್ವಿಂಟಾಲಿನಷ್ಟು ಭತ್ತವನ್ನು ಕಾಣಿಕೆಯಾಗಿ ಕೊಡುವ ಭರವಸೆ ನೀಡುವವರೆಗೆ ಅವರಲ್ಲಿಗೆ ಹೋಗಿ ಪ್ರಸಾದ ವಿತರಣೆ ಮಾಡುವುದಿಲ್ಲವೆಂದು ಅವರಿಗೆ ನಿಷ್ಠೂರವಾಗಿ ಹೇಳಿದ್ದಾನಂತೆ.

ಗದ್ದಿಗೆ ದೇವತೆಯ ಪವಿತ್ರ ಸೇವೆಯನ್ನು ನಡೆಸುವಲ್ಲಿ ಕಾಣಿಸಿಕೊಂಡಿರುವ ತೊಂದರೆ ಹಾಗೂ ನಿಲುವನ್ನು ಸೂಚಿಸುವ ಈ ಮೇಲಿನ ಒಂಭತ್ತು ಉದಾಹರಣೆಗಳ ಆಧಾರದ ಮೇಲೆ ಹೀಗೆ ಸಾಮಾನ್ಯೀಕರಿಸಬಹುದು – ಸಾಂಪ್ರದಾಯಿಕವಾಗಿ ಬಂದ ಗದ್ದಿಗೆ ದೇವತೆ ಪೂಜಾರಿಗಳು ಗ್ರಾಮೀಣ ಹಿನ್ನಾಡಿನಲ್ಲಿರುವ ಒಕ್ಕಲು ಕುಟುಂಬಗಳನ್ನು ನಿಯಮಿತವಾಗಿ ಭೇಟಿಯಾಗುವಲ್ಲಿ, ಗದ್ದಿಗೆ ದೇವತೆಯನ್ನು ಕೊಂಡೊಯ್ಯುವಲ್ಲಿ, ಇಲ್ಲವೆ ಪ್ರಸಾದ ವಿತರಣೆಯಲ್ಲಿ ಉತ್ಸುಕರಾಗಿಲ್ಲ. ತದ್ವಿರುದ್ಧವಾಗಿ, ಸಾರಿಗೆ ಸೌಲಭ್ಯಗಳು ಸುಧಾರಣೆಯಿಂದಾಗಿ ಗ್ರಾಮಗಳಲ್ಲಿರುವ ಒಕ್ಕಲು ಕುಟುಂಬದವರಿಗೆ ದೇವಸ್ಥಾನದ ದರ್ಶನಕ್ಕೆ ಹೋಗುವುದು ಹಾಗೂ ತಮ್ಮ ಪೂಜಾರಿಗಳನ್ನು



ಬೆಟ್ಟದಲ್ಲಿ ಕಾಣುವುದು ಹೆಚ್ಚು ಸುಲಭವೆನಿಸಿದೆ. ಸಾಮಾನ್ಯವಾಗಿ ಒಕ್ಕಲುಗಳ ಮನೆಯಲ್ಲಿ ವಿವಾಹ ಸಮಾರಂಭ ಜರುಗುವಾಗ, ಗೃಹ ಪ್ರವೇಶ ಕಾಲಕ್ಕೆ ಗದ್ದಿಗೆ ದೇವತೆಯ ಅವಶ್ಯಕತೆ ಬೀಳುತ್ತದೆ. ಏಕೆಂದರೆ ಒಕ್ಕಲುಗಳು ಕೊಡುವ ಹಣ ಹಾಗೂ ವಸ್ತುರೂಪದ ಕಾಣಿಕೆಗಳು ಅತ್ಯಲ್ಪವಾದುದರಿಂದ ಮತ್ತು ಆ ಕಾಣಿಕೆಗಳಿಗೆ ಪ್ರತಿಯಾಗಿ ಒಕ್ಕಲುಗಳು ಬೆಟ್ಟಕ್ಕೆ ಬಂದಾಗ ಅರ್ಚಕರು ಅವರಿಗೆ ಆದರಾತಿಥ್ಯ ಮಾಡಬೇಕಾದ ಭಿಡೆ ಇರುವುದರಿಂದ, ತಮ್ಮ ಒಕ್ಕಲುಗಳನ್ನು ಭೆಟ್ಟಿಯಾಗುವುದರಲ್ಲಿ ಅರ್ಚಕರಿಗೆ ಆಸಕ್ತಿ ಇಲ್ಲವೆಂಬುದು ಸ್ಪಷ್ಟ. ಆದರೆ ಪೂಜಾರಿಗಳು ಈಗಿನ ವೃತ್ತಿಗಳನ್ನು ಲಕ್ಷ ಕೊಟ್ಟು ನೋಡಿದರೆ ಅವರೇ ಸ್ವತಃ ವಾಣಿಜ್ಯ, ಶಿಕ್ಷಣ ಹಾಗೂ ರಾಜಕಾರಣ ಮುಂತಾದ ಅರ್ಚಕೇತರ ವೃತ್ತಿಗಳಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆಂದು ತಿಳಿದುಬರುತ್ತದೆ. ಮುಖ್ಯವಾಗಿ ಇಂಥ ಕೆಲವು ಸಂಗತಿಗಳೇ ಒಂದು ತಲೆಮಾರಿನ ಅವಧಿಯಲ್ಲಿ ಶಿವಾರ್ಚಕ ಪೂಜಾರಿ ಮತ್ತು ಅವರ ಮೇಲಿನ ಪೋಷಕ ಕುಟುಂಬಗಳ ನಡುವಿನ ಸಾಂಪ್ರದಾಯಿಕ ಸಂಬಂಧ ಶಿಥಿಲವಾಗಲು ಕಾರಣವೆಂದು ಕಂಡುಬರುತ್ತದೆ.

**8. ಪ್ರಸಾದ ವಿತರಣೆ :**

ಬೆಟ್ಟದ ಶಿವಾರ್ಚಕ ಸಹೋದರರಿಬ್ಬರು ಮೈಸೂರು ನಗರದ ಖಾಯಂ ಭಕ್ತರಿಗೆ ಪ್ರಸಾದ ವಿತರಣೆ ಮಾಡುವ ಕಾರ್ಯ ಕೈಗೊಂಡಿರುವುದನ್ನು ನಾವು ಗಮನಿಸಿದ್ದೇವೆ. ಈ ಶಿವಾರ್ಚಕರ ತಂದೆ ಶುಕ್ರವಾರ ಹಾಗೂ ಮಂಗಳವಾರ ನಿಯಮಿತವಾಗಿ ಭಕ್ತರ ಮನೆ ಅಥವಾ ಅಂಗಡಿಗಳಿಗೆ ಹೋಗಿ ಪ್ರಸಾದವನ್ನು ತಾವೇ ಕೆಲವು ಖಾಯಂ ಭಕ್ತರನ್ನು ಸೃಷ್ಟಿಸಿದ್ದ. ಪ್ರಸಾದ ಎಂದರೆ ಇಲ್ಲಿ ದೇವಸ್ಥಾನದಲ್ಲಿ ಚಾಮುಂಡೇಶ್ವರಿ ದೇವಿಗೆ ಅರ್ಪಿಸಿದ ಕುಂಕುಮ. ಕೆಲವು ಭಕ್ತರು ದೇವಸ್ಥಾನಕ್ಕೆ ಪೂಜಾ ಸಾಮಗ್ರಿಗಳನ್ನು ಶಿವಾರ್ಚಕರ ಮೂಲಕ ಕಳಿಸಲು ಇಚ್ಛಿಸಬಹುದು. ಈ ಸಹೋದರರಿಬ್ಬರೂ ತಮ್ಮ ಭಕ್ತರು ವಾಸಿಸುವ ಇಡೀ ಮೈಸೂರು ನಗರ ಪ್ರದೇಶವನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಿಕೊಂಡಿದ್ದಾರೆ. ಒಂದು ವಿಭಾಗವು ಕೃಷ್ಣರಾಜ ಹಾಗೂ ಕೋಟೆ ಮೊಹಲ್ಲಾ (ನಗರಸಭೆ ವಿಭಾಗಗಳು)ಗಳ ಪೂರ್ಣ ಪ್ರದೇಶವನ್ನು ಒಳಗೊಂಡಿದೆ. ಇನ್ನೊಂದು ವಿಭಾಗವು ದೇವರಾಜ ಮೊಹಲ್ಲಾವನ್ನು ಒಳಗೊಂಡಿದೆ. ಇಬ್ಬರು ಸಹೋದರರು ತಮ್ಮ ಭಕ್ತರನ್ನು ಕಂಡು, ಪುರುಷ ಭಕ್ತರ ಹಣೆಗೆ ಕುಂಕುಮದ ಪ್ರಸಾದವನ್ನು ಹಚ್ಚುತ್ತಾರೆ. ಶಿವಾರ್ಚಕ ಪೂಜಾರಿಗಳ ಈ ಕಾರ್ಯವನ್ನು ಭಕ್ತರು ಪವಿತ್ರ ಕ್ರಿಯಾವಿಧಿ ಎಂದು ಪರಿಗಣಿಸುತ್ತಾರೆ. ಸರಿಯಾಗಿ ಕಾಣಿಕೆಗಳು ಬಾರದಿದ್ದರೆ ಅವರು ಈ ಕ್ರಿಯಾವಿಧಿ ಪೂರೈಸಲು ನಿರಾಕರಿಸಬಹುದು. ಮಹಿಳಾ ಭಕ್ತರಿಗೆ ಕಾಗದದ ಪೊಟ್ಟಣಗಳಲ್ಲಿ ಅಥವಾ ಕೈಯಲ್ಲಿ ಪ್ರಸಾದ ಕೊಡುತ್ತಾರೆ. ಈ ಭಕ್ತರು ವಿವಿಧ ಜಾತಿಗಳಿಗೆ ಸೇರಿದ್ದಾರೆ. ಸಾಮಾನ್ಯವಾಗಿ ಅರ್ಚಕರು ಅಸ್ಪೃಶ್ಯ ಜಾತಿಗಳ ಜನರಿಗೂ ಕೂಡ ಪ್ರಸಾದ ಕೊಡಲು ಹಿಂಜರಿಯುವುದಿಲ್ಲ. ಆದಾಗ್ಯೂ ಅವರು ಸಾಮಾನ್ಯವಾಗಿ ಹಿಂದೂಗಳ ಹಣೆಗೆ ಕುಂಕುಮ ಹಚ್ಚಿದಂತೆ ಅಸ್ಪೃಶ್ಯರಿಗೆ ಹಚ್ಚುವುದಿಲ್ಲ. ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿದಾಗ ಅರ್ಚಕರು ಹಣದ ಕಾಣಿಕೆಗಳನ್ನು ಪಡೆಯುತ್ತಾರೆ. ಇಂಥ ಖಾಯಂ ಭಕ್ತರು ದೊಡ್ಡ ಸಂಖ್ಯೆಯಲ್ಲಿರುವುದರಿಂದ ಆರ್ಥಿಕ ಲಾಭ ಗಣನೀಯವಾಗಿರುವಂತೆ ಕಾಣುತ್ತದೆ. ಹೀಗೆ ಬೆಟ್ಟದ

ಶಿವಾರ್ಚಕ ಸಹೋದರರಿಬ್ಬರೂ ಈ ಹೊಸ ಕ್ರಿಯಾಚರಣೆ ಪೂರೈಸುತ್ತ ಪವಿತ್ರ ಪ್ರಸಾದ ಮಾಧ್ಯಮದ ಮುಖಾಂತರ ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ಆರಾಧನೆಯನ್ನು ಪ್ರಚುರಗೊಳಿಸುತ್ತಿದ್ದಾರೆಂದು ಹೇಳಬಹುದು.

ಬೆಟ್ಟದ ಶಿವಾರ್ಚಕ ಪರಿಣಿತರು ಮುಖ್ಯವಾಗಿ ತಮ್ಮ ಭಕ್ತರಿಗೆ ಹಾಗೂ ಒಕ್ಕಲು ಕುಟುಂಬಗಳಿಗೆ ಮೇಲೆ ವಿವರಿಸಿದ ವಿವಿಧ ಪ್ರಕಾರದ ಕ್ರಿಯಾಚರಣೆಗಳನ್ನು ಪೂರೈಸುವುದರ ಮೂಲಕವೇ ಜೀವನ ನಿರ್ವಹಣೆ ಮಾಡುತ್ತಾರೆ. ಈಗಿನ ಶಿಕ್ಷಣ ಪಡೆದ ಪೂಜಾರಿಗಳು ತಮ್ಮ ಜೀವನೋಪಾಯಕ್ಕಾಗಿ ಬೇರೆ ಉದ್ಯೋಗಗಳನ್ನು ಅರಸುತ್ತಿದ್ದಾರೆ. ಅನೇಕ ಜನ ಶಿವಾರ್ಚಕರು ಹೊಂದಿದ್ದಾರೆ ಸಹ. ಈಗ ಎಷ್ಟೋ ಸಂದರ್ಭಗಳಲ್ಲಿ ಅವರು ಅವುಗಳ ಒಡೆತನ ಪಡೆದಿಲ್ಲ. ಕೆಲವು ಎಕರೆಗಳ ಒಡೆತನವನ್ನು ಇಂದಿಗೂ ಪಡೆದಿದ್ದರೂ ತಮ್ಮ ರೈತರಿಂದ ಹೆಚ್ಚು ಪ್ರತಿಫಲ ಪಡೆಯುತ್ತಿಲ್ಲ. ಅವರು ದೇವಸ್ಥಾನಕ್ಕೆ ಸಲ್ಲಿಸುವ ಸೇವೆಗಳಿಗಾಗಿ 1922ರಲ್ಲಿ ನಿಶ್ಚಿತವಾದ ಅತ್ಯಲ್ಪ ಸಂಭಾವನೆಯೇ ಇಂದಿಗೂ ಮುಂದುವರೆದಿದೆ. ದೇವಸ್ಥಾನದ ಕಾವಲು ಸಿಬ್ಬಂದಿಗೆ ತಿಂಗಳಿಗೆ 5 ರೂಪಾಯಿ ವರಮಾನವಿದ್ದರೆ, ಉಪ ಪವಿತ್ರ ಕ್ಷೇತ್ರ ಪೂಜಿಸುವವರು ಒಂದು ರೂಪಾಯಿಯಿಂದ ಆರು ರೂಪಾಯಿ ಎಪ್ಪತ್ತೈದು ಪೈಸೆವರೆಗೆ ಪಡೆಯುತ್ತಿದ್ದಾರೆ. ಆದಾಗ್ಯೂ ಶಿವಾರ್ಚಕರು ಪೋಷಕ ಕುಟುಂಬಗಳ, ಪಾದಕ್ಷೇತ್ರದ ಪೂಜೆ ಹಾಗೂ ದೇವಸ್ಥಾನದಲ್ಲಿ ಭಕ್ತರ ಆದರಾತಿಥ್ಯ ಮಾಡುತ್ತಾ ದೇವಸ್ಥಾನದ ತಮ್ಮ ಸೇವೆಗಳನ್ನು ಹಾಗೂ ಅರ್ಚಕ ವೃತ್ತಿಯನ್ನು ಮುಂದುವರೆಸಿಕೊಂಡು ನಡೆದಿದ್ದಾರೆ. ಆದರೆ ಬೆಟ್ಟದ ಇತರ ಶಿವಾರ್ಚಕರು, ಬೆಟ್ಟದ ಹೊರಗೆ ಹೆಚ್ಚು ಲಾಭದಾಯಕ ವೃತ್ತಿಗಳನ್ನು ಆರಿಸಿ, ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವ ಪ್ರಯತ್ನದಲ್ಲಿ ಹೆಚ್ಚು ನಿರತರಾಗಿದ್ದಾರೆ. ಬೆಟ್ಟದ ಚಾಮುಂಡಿ ಗ್ರಾಮವು ಹೊಸ ಉದ್ಯೋಗಾವಕಾಶಗಳನ್ನು ಒದಗಿಸುವ ಸ್ಥಿತಿಯಲ್ಲಿ ಇಲ್ಲ. ದೇವಾಲಯ ಗಳಿರುವುದರಿಂದ ಗ್ರಾಮ ಬೆಳೆದಿದೆ. ಪ್ರತಿಶತ ಸುಮಾರು 40ರಷ್ಟು ನಿವಾಸಿಗಳು ದೇವಸ್ಥಾನದ ಸೇವೆ ಹಾಗೂ ವ್ರತಾಚರಣೆ ಸಂಬಂಧಿಸಿದ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಮೈಸೂರಿನಂತಹ ನಗರ ಸಮೀಪದಲ್ಲಿಯೇ ಇರುವುದರಿಂದ ಎಷ್ಟೋ ಜನರು ಅಲ್ಲಿ ಉದ್ಯೋಗಾವಕಾಶಗಳನ್ನು ಪಡೆಯುತ್ತಿದ್ದಾರೆ. ಈ ಗ್ರಾಮದ ಹಲವು ನಿವಾಸಿಗಳು ಮೈಸೂರು ನಗರದಲ್ಲಿ ಲಾಭದಾಯಕ ವೃತ್ತಿಯಲ್ಲಿದ್ದಾರೆಂದು ಹೇಳಲಾಗುತ್ತದೆ. ಪ್ರತಿದಿವಸ ಗ್ರಾಮದಿಂದ ನಗರಕ್ಕೆ ಸಾವಿರ ಮೆಟ್ಟಿಲಿನ ದಾರಿಯಿಂದ ಕಾಲ್ನಡಿಗೆಯಲ್ಲಿಯೇ ಪ್ರವಾಸಿಸುತ್ತಾರೆ. ಶಿವಾರ್ಚಕರು ಕೂಡ ಉದ್ಯೋಗಾವಕಾಶ ಗಳಿಗಾಗಿ ನಗರ ಪ್ರದೇಶದ ಲಾಭ ಪಡೆದಿದ್ದಾರೆ.

## ಬ್ರಾಹ್ಮಣ ಕ್ರಿಯಾವಿಧಿ ಪರಿಣತರು :

ಈಗಾಗಲೇ ಹೇಳಿರುವಂತೆ ಬ್ರಾಹ್ಮಣರು ಶಿವಾರ್ಚಕ ಕ್ರಿಯಾವಿಧಿ ಪರಿಣತರನ್ನು ಸ್ಥಾನಪಲ್ಲಟಗೊಳಿಸಿದೊಡನೆ ದೇವಸ್ಥಾನದಲ್ಲಿ ಆಗಮ ವಿಧಿ-ಸಂಪ್ರದಾಯಗಳನ್ನು ಪರಿಚಯಿಸಲಾಯಿತು. ಬ್ರಾಹ್ಮಣ ಪರಿಣತರ ಪ್ರಮುಖ ಲಕ್ಷಣ ಹಾಗೂ ಅವರ ಪವಿತ್ರ ಕ್ರಿಯಾವಿಧಿ ಪೂರೈಕೆಯನ್ನು ವರ್ಣಿಸುವ ಪೂರ್ವದಲ್ಲಿ ಆಗಮಗಳು ಸಂಸ್ಕೃತದ ಹಾಗೂ ಮಾರ್ಗಸಂಸ್ಕೃತಿಯ



ಅಂಗಗಳೆಂದು ಹೇಳಬಯಸುತ್ತೇವೆ. ಈ ವೈಲಕ್ಷಣವನ್ನು ತಳಹದಿಯನ್ನಾಗಿಟ್ಟುಕೊಳ್ಳುತ್ತೇವೆ. ಮೈಸೂರು ಸರ್ಕಾರದ ಧರ್ಮದತ್ತಿ ಇಲಾಖೆಯಲ್ಲಿ ಆಗಮ ಪಂಡಿತರು ಹಾಗೂ ಚಾಮುಂಡೇಶ್ವರಿ ದೇವಸ್ಥಾನದ ಬ್ರಾಹ್ಮಣ ಪುರೋಹಿತರ ಸಹೋದರರಾದ ಕೃಷ್ಣ ದೀಕ್ಷಿತರು ಆಗಮಗಳ ಬಗ್ಗೆ ಕನ್ನಡದಲ್ಲಿ ಬರೆದ ಒಂದು ಲೇಖನದಲ್ಲಿ ಹೀಗೆ ಹೇಳಿದ್ದಾರೆ : "ವೇದಗಳು ಪರಮಾತ್ಮನ ನಿಶ್ವಾಸವಾದರೆ ಆಗಮಗಳು ವಾಣಿ[12] ರೂಪಗಳಾಗಿವೆ. ವೇದದಂತೆ ಆಗಮವು ಅಪೌರುಷೇಯವಾದುದು." ಅವರ ಪ್ರಕಾರ ಭಾರತ ಸಂಸ್ಕೃತಿಯಲ್ಲಿ ಎಲ್ಲ ಧಾರ್ಮಿಕ ಸಾಹಿತ್ಯವು ಎರಡೂ ಭಾಗಗಳನ್ನೊಳಗೊಂಡಿದೆ. ಅವು ಯಾವುವೆಂದರೆ ವೇದ ಹಾಗೂ ಆಗಮಗಳು (ನಿಗಮಾಗಮ) 'ವೇದಸಾರಂ ಶಿವಾಗಮ' ಎಂಬ ಸಂಸ್ಕೃತ ಶ್ಲೋಕವನ್ನು ಉದ್ಧರಿಸುತ್ತ ಅವರು ಶಿವಾಗಮವು ವೇದದ ಸಾರ ಎಂದು ಅರ್ಥೈಸುತ್ತಾರೆ. ಬ್ರಾಹ್ಮಣ (ಆರ್ಷೇಯ ಬ್ರಾಹ್ಮಣ) ಹಾಗೂ ಆಗಮಗಳ ವ್ಯಾಖ್ಯಾನಗಳಲ್ಲಿ ಎಷ್ಟೋ ಸಾದೃಶ್ಯ ಉದಾಹರಣೆಗಳು ಕೂಡ ಇವೆ ಎಂದು ಅವರು ಹೇಳುತ್ತಾರೆ. ವೇದಗಳ ವ್ಯಾಖ್ಯಾನಗಳನ್ನು ಶ್ರುತಿ ಎಂದು ತಿಳಿದಂತೆ, ಆಗಮಗಳ ವ್ಯಾಖ್ಯಾನಗಳನ್ನು ಸಹಿತ ಶ್ರುತಿ ಎಂದು ತಿಳಿಯಲಾಗಿದೆ.

ತಮಿಳು ಮಾತನಾಡುವ ಸ್ಮಾರ್ತ ಬ್ರಾಹ್ಮಣರು ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಆಗಮ ಸಂಪ್ರದಾಯಗಳ ವಾಹಕರಾಗಿದ್ದಾರೆ. ಅವರನ್ನು 'ಆಗಮಿಕ'ರೆಂದು ಕರೆಯಲಾಗುತ್ತದೆ. ತಮಿಳುನಾಡಿನ ಪಕ್ಷಿತೀರ್ಥ ಹಾಗೂ ಕಾಂಜಿವರಂದಿಂದ ಮೈಸೂರು ಪ್ರದೇಶಕ್ಕೆ ಬಂದ ವಲಸಿಗರವರು. ಅವರು ಬೌದ್ಧಾಯನ ಸೂತ್ರ (ಬೌದ್ಧಾಯನ ತತ್ತ್ವಜ್ಞಾನ) ಹಾಗೂ ಯಜುರ್ವೇದ ಶಾಖೆಯ ಅನುಯಾಯಿಗಳಾಗಿದ್ದಾರೆ. ಕೌಸಿಕ, ಕಾಶ್ಯಪ, ಭಾರದ್ವಾಜ, ಗೌತಮ ಹಾಗೂ ಅಗಸ್ತ್ಯ ಎಂಬ ಐದು ಗೋತ್ರಗಳಿಗೆ ಅವರು ಸೇರಿದ್ದಾರೆ. 'ದೀಕ್ಷಿತ' ಹೆಸರಿನ ಪ್ರತ್ಯಯ ಹಚ್ಚಿಕೊಳ್ಳುತ್ತಾರೆ. ದೀಕ್ಷಿತರು ಮೈಸೂರು ಪ್ರದೇಶಕ್ಕೆ ಯಾವಾಗ ವಲಸೆ ಬಂದರೆಂಬುದು ಖಚಿತವಾಗಿ ಗೊತ್ತಿಲ್ಲ. ಆದರೆ ಸನದು ದಾಖಲೆ ಹೇಳುವಂತೆ ಸುಮಾರು 1819ರಲ್ಲಿ ದೇವಸ್ಥಾನದ ಪುರೋಹಿತ ವೃತ್ತಿ ಕೈಗೊಂಡರು. ದೀಕ್ಷಿತರು ದಕ್ಷಿಣ ಮೈಸೂರಿನ ಪ್ರಮುಖ ಶೈವ ದೇವಾಲಯಗಳಲ್ಲಿಯೂ ಕೂಡ ಕ್ರಿಯಾವಿಧಿ ಪರಿಣಿತರಾಗಿದ್ದಾರೆ. (ಗೋಸ್ವಾಮಿ ಹಾಗೂ ಮೊರಬ : 1968).

ಬೆಟ್ಟದ ಬ್ರಾಹ್ಮಣ ಪರಿಣಿತರ ವೈದಿಕ ಜೀವನಪದ್ಧತಿಯ ಕೆಲವು ಪ್ರಮುಖ ಬದಲಾವಣೆಗಳನ್ನು ಹಳೆಯ ತಲೆಮಾರಿನ ಜನರು ಕಂದಾಚಾರದವರಾಗಿದ್ದರು ಅಂದರೆ ಸಾಂಪ್ರದಾಯಿಕ ಜೀವನ ಪದ್ಧತಿ ಅನುಸರಿಸಿದ್ದರು. ಆದರೆ ಹೊಸ ತಲೆಮಾರಿನ ಎಷ್ಟೋ ವ್ಯಕ್ತಿಗಳು ಸಾವಕಾಶವಾಗಿ ಬದಲಾವಣೆ ಹೊಂದುತ್ತಿದ್ದರು ಅಥವಾ ಪಾಶ್ಚಾತ್ತ್ಯೀಕರಣಕ್ಕೆ ಒಳಗಾಗಿದ್ದರೆಂಬುದು ನಮ್ಮ ಗಮನಕ್ಕೆ ಬಂದಿದೆ. ಸುಮಾರು 20 ವರ್ಷಗಳ ಹಿಂದೆ ದೇವಸ್ಥಾನದಲ್ಲಿ ಪುರೋಹಿತರಾಗಿದ್ದ ದೀಕ್ಷಿತ

---

12. ವೇದ ಆಗಮಗಳ ಚರ್ಚೆ ನಮಗೆ ಇಲ್ಲಿ ಅಪ್ರಸ್ತುತ. ಕೇವಲ ಚಾಮುಂಡೇಶ್ವರಿ ದೇವಸ್ಥಾನದ ಪುರೋಹಿತನ ದೃಷ್ಟಿಕೋನದ ಮೇಲೆ ಬೆಳಕು ಚೆಲ್ಲುತ್ತೇವೆ.

ಬ್ರಾಹ್ಮಣರನ್ನು ಇತರ ಬ್ರಾಹ್ಮಣರು ತಮಗಿಂತ ಕೆಳಗಿನ ಸ್ಥಾನದವರೆಂದು ಪರಿಗಣಿಸಿದ್ದರು. ಆದ್ದರಿಂದ ದೀಕ್ಷಿತರ ಮನೆಯಿಂದ ಯಾರೊಬ್ಬರೂ ಆಹಾರ ನೀರು ಸ್ವೀಕರಿಸುತ್ತಿರಲಿಲ್ಲ. ಆದರೆ ಈಗಿನ ದಿನಗಳಲ್ಲಿ ಇತರ ಬ್ರಾಹ್ಮಣರು ಈ ಪದ್ಧತಿಯನ್ನು ಅನುಸರಿಸುತ್ತಿಲ್ಲ. ದೀಕ್ಷಿತರ ಮನೆಯಿಂದ ಇಂದಿಗೂ ಆಹಾರ ನೀರು ತೆಗೆದುಕೊಳ್ಳಲಾರದ ಮೂರು ಬ್ರಾಹ್ಮಣ ಕುಟುಂಬಗಳನ್ನು ಬಿಟ್ಟು ಉಳಿದೆಲ್ಲರು ಈ ಪದ್ಧತಿಯ ಬಗ್ಗೆ ಅಷ್ಟೊಂದು ಕಟ್ಟುನಿಟ್ಟಾಗಿಲ್ಲವೆಂಬುದನ್ನು ನಾವು ಕಂಡೆವು. ತದ್ವಿರುದ್ಧವಾಗಿ ದೀಕ್ಷಿತರು ತಾವು ತಮಿಳು ಸ್ಮಾರ್ಥರ ಪದಮ ಶಾಲೆಯವರೆಂದು ಸಾಧಿಸುತ್ತಾ (ಪದಮ  ಶಾಖೆಯವರು ದೀಕ್ಷಿತರನ್ನು ಹಾಗೆ ಪರಿಗಣಿಸಿಲ್ಲ) ಪದಮರೊಂದಿಗೆ ವಿವಾಹ ಸಂಬಂಧ ಬೆಳೆಯಿಸಲು ಯತ್ನಿಸುತ್ತಿದ್ದಾರೆಂಬುದನ್ನು ಗಮನಿಸಬಹುದು. ಇತ್ತೀಚೆಗೆ ಮೈಸೂರು ನಗರದಲ್ಲಿ ದೀಕ್ಷಿತ ಬ್ರಾಹ್ಮಣರು ತಮ್ಮ ಮಗಳಿಗೆ ಪದಮ ಶಾಖೆಯ ವರನನ್ನು ಪಡೆಯುವ ಪ್ರಯತ್ನದಲ್ಲಿ ಯಶಸ್ವಿಯಾದರೆಂದು ಹೇಳಲಾಗುತ್ತದೆ. ಕಿರಿಯ ತಲೆಮಾರಿನ ಎಷ್ಟೋ ಬ್ರಾಹ್ಮಣರು ಬಾದಾಮಿ ಕ್ರಾಪು ಬಿಡುವುದು, ಹೋಟಲಿಗೆ ಹೋಗುವುದು ಕಂಡುಬರುತ್ತದೆ. ಹಿಂದೆ ಇವುಗಳನ್ನು ಆಚರಿಸುತ್ತಿರಲಿಲ್ಲ. ಜಾತಿಸೂಚಕ ಚಿಹ್ನೆಗಳಾದ ಭಸ್ಮ ಹಚ್ಚಿಕೊಳ್ಳುವ, ಗಂಧ ಲೇಪಿಸಿಕೊಳ್ಳುವ ಮುಂತಾದ ಸಾಂಪ್ರದಾಯಗಳನ್ನು ಬಿಟ್ಟಿದ್ದಾರೆ. ಅವರ ಉಡಿಗೆಗಳಲ್ಲಿಯೂ ಕೂಡ ಕೆಲವರು ಪಾಶ್ಚಾತ್ಯೀಕರಣ ಹೊಂದಿದ್ದಾರೆಂಬುದನ್ನು ಗಮನಿಸಲಾಗಿದೆ.

ಆಗಮ ಕ್ರಿಯಾವಿಧಿಗಳು ಪರಿಚಯಿಸಲ್ಪಡುವ ಪೂರ್ವದಲ್ಲಿ ಬಂದಾಗ ಪೂಜಾರ್ಥಕ್ಕಾಗಿ ಎರಡು ಉತ್ಸವ ಮೂರ್ತಿಗಳನ್ನು ಮಾಡಲಾಯಿತು ಚಿಕ್ಕಗಾತ್ರದ ಲೋಹದ ಮೂರ್ತಿಯೊಂದನ್ನು ನಿತ್ಯೋತ್ಸವ ಪೂಜೆಗಾಗಿ ಅಂದರೆ ಕೇವಲ ದೇವಸ್ಥಾನದ ಒಳ ಪ್ರಾಕಾರದಲ್ಲಿ  ಪ್ರದಕ್ಷಿಣೆಗೆ ಉಪಯೋಗಿಸಲಾಗುತ್ತದೆ. ದೊಡ್ಡಗಾತ್ರದ ಇನ್ನೊಂದು ಮೂರ್ತಿಯನ್ನು ಕೇವಲ ಉತ್ಸವ ಕಾಲದ ಕ್ರಿಯಾವಿಧಿಗಳಿಗೆ ಉಪಯೋಗಿಸಲಾಗುತ್ತದೆ. ಸಾಮಾನ್ಯವಾಗಿ ದೊಡ್ಡಗಾತ್ರದ ಮೂರ್ತಿಯನ್ನು ದೇವಸ್ಥಾನದ ಹೊರ ಪ್ರಾಕಾರದಲ್ಲಿ ಪ್ರದಕ್ಷಿಣೆಗೆ ಕೊಂಡೊಯ್ಯಲಾಗುತ್ತದೆ. ಪ್ರಮುಖ ಆಚರಣೆಗಳಾದ ರಥೋತ್ಸವ, ತೆಪ್ಪೋತ್ಸವ ಹಾಗೂ ಉಡೋತ್ಸವಗಳಲ್ಲಿ[13] ಉತ್ಸವ ಮೂರ್ತಿಯನ್ನು ಪವಿತ್ರ ಜಕಣಿ ಹಾಗೂ ಮರಗಳಿಗೂ ಕೂಡ ಕೊಂಡೊಯ್ಯಲಾಗುತ್ತದೆ.

ದೇವಸ್ಥಾನದಲ್ಲಿ ಆಗಮ ವಿಧಾನದ ಪವಿತ್ರ ಕ್ರಿಯಾಚರಣೆಗಳ ಪೂರೈಕೆಗೆ ಹಲವು ಬ್ರಾಹ್ಮಣ ಪರಿಣತರು ಬೇಕು. ಉದಾ: ದೇವಿಯ ಸಹಸ್ರನಾಮ ಪಠಿಕರು, ವೇದಸ್ತೋತ್ರ ಪಠಿಕರು, ಸ್ತೋತ್ರಪಥ (ದೇವಿ ಮಹಾತ್ಮೆ ಹೊಗಳುವವರು) ಉತ್ಸವ ಮೂರ್ತಿಗಳನ್ನು ಒಯ್ಯುವುದು ಹಾಗೂ ವಿಧಿಬದ್ಧವಾಗಿ ಅಡಿಗೆ ಮಾಡುವ ಸೇವಕರು. ಮಹಾಬಲೇಶ್ವರ ಹಾಗೂ ನಾರಾಯಣಸ್ವಾಮಿ ದೇವಾಲಯಗಳ ಬ್ರಾಹ್ಮಣ ಸಿಬ್ಬಂದಿ, ಆಡಳಿತ ಸಿಬಬ್ದಿ ಕೂಡಿಯೇ ಒಟ್ಟು  28 ಬ್ರಾಹ್ಮಣ ಪರಿಣತರು 60 ಹುದ್ದೆಗಳಲ್ಲಿ ಇದ್ದಾರೆ. ಕೆಲವು ಸಿಬ್ಬಂದಿಯು ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ದೇವಾಲಯಗಳಲ್ಲಿ ಹುದ್ದೆಗಳನ್ನು ಹೊಂದಿದ್ದಾರೆ.

---

13. ಚಾಮುಂಡೇಶ್ವರಿ, ಮಹಾಬಲೇಶ್ವರ ಹಾಗೂ ನಾರಾಯಣಸ್ವಾಮಿ ದೇವತೆಗಳ ಗೌರವಾರ್ಥವಾಗಿ ಚಳಿಗಾಲದಲ್ಲಿ ಈ ಉತ್ಸವವನ್ನು ಆಚರಿಸಲಾಗುತ್ತದೆ.



ಈ ಹಿಂದೆ ಹುದ್ದೆಗಳು ಅನುವಂಶಿಕವಾಗಿದ್ದವು. ಆದರೆ ಆಗಾಗ್ಗೆ ಮರಣ ಸಂಭವಿಸಿದಾಗ ಅಥವಾ ಯಾರಾದರೂ ಮುಂದುವರೆಸಿಕೊಂಡು ಹೋಗದಿದ್ದಲ್ಲಿ ಹುದ್ದೆಗಳು ಖಾಲಿ ಬೀಳುತ್ತಿದ್ದವು. ಆಗ ಅಧಿಕಾರಿಗಳು ಹೊಸಬರನ್ನು ಆಯ್ಕೆ ಮಾಡಬೇಕಾಗುತ್ತಿತ್ತು. ಇಲ್ಲವೆ ಬೇರೆ ಹುದ್ದೆಯಲ್ಲಿದ್ದವರು ಇಚ್ಛಿಸಿದರೆ ತೆರವಾದ ಹುದ್ದೆಗಳನ್ನು ಅವರಿಗೆ ವಹಿಸಲಾಗುತ್ತಿತ್ತು. ಇಪ್ಪತ್ತೆಂಟು ಜನರಲ್ಲಿ ಇಪ್ಪತ್ತೆರಡು ಜನರು ವಿವಿಧ ಕುಟುಂಬಗಳಿಗೆ ಸಂಬಂಧಿಸಿದ್ದರು. ಉಳಿದ ಆರು ಜನರು, ಕೆಲವು ಸಿಬ್ಬಂದಿಯು ಬ್ರಾಹ್ಮಣರಲ್ಲಿಯ ವಿವಿಧ ಉಪಜಾತಿ ಹಾಗೂ ಉಪಪಂಥಗಳಿಗೆ ಸೇರಿದ್ದಾರೆ. ಅವು ಯಾವುವೆಂದರೆ, ಆರು ಜನ ದೀಕ್ಷಿತರು, ತಮಿಳು ಸ್ಮಾತಂ, ತೆಲುಗು ಸ್ಮಾರ್ತ ಹಾಗೂ ಕನ್ನಡ ಸ್ಮಾರ್ತರು ಅನುಕ್ರಮವಾಗಿ ಹತ್ತು, ನಾಲ್ಕು ಹಾಗೂ ಕಂದರ ಮಾಣಿಕ್ಯದ ಉಪಮತದವರಿದ್ದಾರೆ. ತೆಲುಗು ಸ್ಮಾರ್ತರಲ್ಲಿ ಹೊಯ್ಸಳ, ಕರ್ನಾಟಕ, ಬಬ್ಬೂರುಕಮ್ಮೆ ಹಾಗೂ ಬಡಗನಾಡು ಉಪಶಾಖೆಗಳವರಾಗಿದ್ದಾರೆ.

ವಿವಿಧ ಕ್ರಿಯಾವಿಧಿ ಸೇವೆಗಳನ್ನು ಪೂರೈಸುವ ಸಿಬ್ಬಂದಿಯ ವಿಶ್ಲೇಷಣೆಯಿಂದ ದೀಕ್ಷಿತರು, ಪುರೋಹಿತ ವೃತ್ತಿಯಲ್ಲಿ ಪರಿಣತ ಜಾತಿಯವರೆಂಬುದನ್ನು ಗಮನಿಸಬಹುದು. ಒಬ್ಬ ದೀಕ್ಷಿತನು ಮಂತ್ರ ಪಠಿಕನ ಹುದ್ದೆಯಲ್ಲಿದ್ದಾನೆ. ಆದರೆ ಈ ತೆರವಾದ ಹುದ್ದೆಯನ್ನು ತೀರ ಇತ್ತೀಚೆಗೆ ಅವನಿಗೆ ಕೊಡಲಾಗಿದೆ. ತಮಿಳು ಸ್ಮಾರ್ತರು ಸಂಖ್ಯಾ ದೃಷ್ಟಿಯಲ್ಲಿ ಬಲಿಷ್ಠರಾಗಿದ್ದಾರೆ. ಅವರು ಎಲ್ಲ ಪ್ರಕಾರದ ಸೇವೆಗಳನ್ನು ಪೂರೈಸುತ್ತಾರೆ. ತಮಿಳು ಸ್ಮಾರ್ತರು ಪ್ರಮುಖವಾಗಿ ಮಂತ್ರಪಠಿಕರಾಗಿದ್ದಾರೆ. ಕನ್ನಡ ಸ್ಮಾರ್ತರು ಮಂತ್ರಪಠಣ ಹಾಗೂ ಶ್ರೀಪಾದ (ಉತ್ಸವ ಮೂರ್ತಿ ಒಯ್ಯುವ) ಸೇವೆಗಳಲ್ಲಿ ತೊಡಗಿರುವುದು ಜೊತೆಗೆ ಕೆಲವು ಇತರ ಕಾರ್ಯಗಳನ್ನು ಪೂರೈಸುತ್ತಾರೆ. ಒಬ್ಬನೇ ಇರುವ ಮಾಧ್ವನು ಒಂದು ಉಪ ಕ್ಷೇತ್ರದಲ್ಲಿ ಪುರೋಹಿತ ವೃತ್ತಿಯಲ್ಲಿರುವವರ ಜೊತೆಗೆ ಶ್ರೀಪಾದ ಸೇವೆಯನ್ನು ಪೂರೈಸುತ್ತಾನೆ.

## ಬ್ರಾಹ್ಮಣ ಪರಿಣತರ ಕಾರ್ಯಗಳು :

ದೇವಸ್ಥಾನದ ದರ್ಶನಕ್ಕೆ ಬಂದ ಭಕ್ತರು ಪುರೋಹಿತರ ಹಾಗೂ ಪರಿಚಾರಕರ ಸಂಪರ್ಕದಲ್ಲಿ ಬರುತ್ತಾರೆ, ಭಕ್ತರಿಗೆ ಪುರೋಹಿತರು ತೀರ್ಥ ಕೊಟ್ಟರೆ ಪರಿಚಾರಕರು ದೇವತೆಯ ಮಂಗಳಾರತಿ ತರುತ್ತಾರೆ. ಮಂಗಳಾರತಿಗೆ ಭಕ್ತರು ಕೈಮುಗಿದು, ಆರತಿಯ ತಟ್ಟೆಗೆ ಹಣದ ಕಾಣಿಕೆಗಳನ್ನು ಹಾಕುತ್ತಾರೆ. ಪುರೋಹಿತರಿಗೂ ಕೂಡ ಕಾಣಿಕೆಗಳನ್ನು ಕೊಡುತ್ತಾರೆ.

ಪರಿಚಾರಕನು ಪೂಜಾ ಸಾಮಗ್ರಿಗಳನ್ನು ಗರ್ಭಗುಡಿಗೆ ಒಯ್ಯಬೇಕಾಗುತ್ತದೆ. ಅಲ್ಲಿ ಪುರೋಹಿತರು ಅವುಗಳ ಮೇಲೆ ತೀರ್ಥ ಪ್ರೋಕ್ಷಿಸಿ ದೇವತೆಗೆ ನಿವೇದಿಸುತ್ತಾರೆ. ಕಾಣಿಕೆಗಳನ್ನು ತೆಗೆದುಕೊಂಡು ಭಕ್ತರಿಗೆ ಪ್ರಸಾದವನ್ನು ಹಿಂತಿರುಗಿಸಲಾಗುತ್ತದೆ. ಈ ಮೊದಲೇ ಹೇಳಿದಂತೆ ಬ್ರಾಹ್ಮಣ ಪರಿಚಾರಕನಿಗೆ ಈ ಪವಿತ್ರ ಕ್ರಿಯಾಚರಣೆಯನ್ನು ನೆರವೇರಿಸುವ ಬಾಧ್ಯತೆ ಇದ್ದರೂ ಬ್ರಾಹ್ಮಣರು ಆಕ್ಷೇಪಿಸದಿದ್ದ ಕೆಲವು ಸೇವೆಗಳನ್ನು ಬ್ರಾಹ್ಮಣೇತರರಾದ ಶಿವಾರ್ಚಕನು ಪೂರೈಸುವರೆಂಬುದು ಗಮನಾರ್ಹ ಅಂಶವಾಗಿದೆ. ನಾವು ಈಗಾಗಲೇ ಹೇಳಿದ ಒಂದು

ಅಂಶವನ್ನು ಇಲ್ಲಿ ಅನುಷಂಗಿಕವಾಗಿ ಪುನರಾವರ್ತನೆ ಮಾಡುವುದು ಅವಶ್ಯವೆನಿಸುತ್ತದೆ. ಶಿವಾರ್ಚಕರು ಯಾವ ಅಳುಕು ಇಲ್ಲದೆ ಉಡಿಗೆಗಳಲ್ಲಿ ರೇಶ್ಮೆಮಡಿ ಧರಿಸುವಲ್ಲಿ, ಹಣೆಯ ಮೇಲೆ ಪವಿತ್ರ ಭಸ್ಮ ಧರಿಸುವಲ್ಲಿ, ಜುಟ್ಟು ಬಿಡುವ ವಿಧಾನದಲ್ಲಿ, ಭಕ್ತರ ಹೆಸರನ್ನು ಉಚ್ಚರಿಸುವಲ್ಲಿ ಅಥವಾ ಅವರ ಇತರ ವಿವರಗಳನ್ನು ಹೇಳುವ ಧ್ವನಿಯಲ್ಲಿಯೂ ಪರಿಚಾರಕರನ್ನು (ಬ್ರಾಹ್ಮಣ) ಅನುಕರಿಸುತ್ತಾರೆ. ಪೇಶಕನ, ಇತ್ತೀಚೆಗೆ ಕಿರಿಯ ಬ್ರಾಹ್ಮಣ ಸಿಬ್ಬಂದಿಯು ಸಾಂಪ್ರದಾಯಕ ಜುಟ್ಟು ಬಿಡುವ ವಿಧಾನ ತ್ಯಜಿಸಿ ಪಾಶ್ಚಾತ್ಯ ಶೈಲಿಯ ಕ್ರಾಪ್ ಹೊಂದಿದಾಗ ಗಂಭೀರವಾಗಿ ಆಕ್ಷೇಪಿಸಿದ್ದನು. ಇದರಿಂದ (ಹೊಸ ತಲೆಮಾರಿನ) ಬ್ರಾಹ್ಮಣರು 'ಬಾದಾಮಿ' ಕ್ರಾಪ್ ಎಂಬ ಹೊಸ ಕೇಶಶೈಲಿಯನ್ನು ಅನುಸರಿಸಿದರು. ಈ ಶೈಲಿಯಲ್ಲಿ ನೆತ್ತಿಯ ಮುಂಭಾಗವನ್ನು ಸಂಪೂರ್ಣವಾಗಿ ಬೋಳಿಸಿ, ಹಿಂಭಾಗ ಹಾಗೂ ಮಗ್ಗುಲುಗಳನ್ನು ಪಾಶ್ಚಾತ್ಯ ಮಾದರಿಯ ಕ್ರಾಪ್ ಬಿಡಲಾಗುತ್ತದೆ. ಕಿರಿಯ ಶಿವಾರ್ಚಕರು ತಡವಿಲ್ಲದೆ 'ಬಾದಾಮಿ' ಶೈಲಿಯನ್ನು ಸ್ವೀಕರಿಸಿ, ಪಾಶ್ಚಾತ್ಯ ಕೇಶವಿನ್ಯಾಸವನ್ನು ಉಳಿಸಿಕೊಂಡರೆಂಬುದನ್ನು ಇಲ್ಲಿ ಸೂಚಿಸಬಹುದು. ಎಷ್ಟೋ ಭಕ್ತರು ದೇವಸ್ಥಾನದಲ್ಲಿ ಶಿವಾರ್ಚಕರನ್ನು ಬ್ರಾಹ್ಮಣರೆಂದೇ ಭಾವಿಸಿದಂತಿದೆ.

ಶಿವಾರ್ಚಕರು ತಮ್ಮ ಜೊತೆಗೆ ಸಹಕರಿಸುವ ವಿಷಯದಲ್ಲಿ ಬ್ರಾಹ್ಮಣ ಪರಿಚಾರಕರಿಗೆ ಹೆಚ್ಚು ಮುಕ್ತ ಮನಸ್ಸಿನ ಅಥವಾ ಲೌಕಿಕ ದೃಷ್ಟಿಕೋನ ಹೊಂದಿರುವುದು ಕಂಡುಬರುತ್ತದೆ. ಇಬ್ಬರು (ಬ್ರಾಹ್ಮಣ) ಪರಿಚಾರಕರಿಗೆ ಶಿವಾರ್ಚಕ ಮಿತ್ರರು ಇದ್ದಾರೆ. ಪರಿಚಾರಕರು ವಿಶ್ರಾಂತಿ ಸಮಯದಲ್ಲಿ ಸಮವಯಸ್ಕರಾದ ಶಿವಾರ್ಚಕ ಸಿಬ್ಬಂದಿಯ ಹೆಗಲ ಮೇಲೆ ಕೈಹಾಕಿ ಧ್ವಜ ಸ್ತಂಬದ ಬಳಿ ಕುಳಿತು ಹರಟುವುದನ್ನು ನಾವು ಗಮನಿಸಿದ್ದೇವೆ. ಬಹುಶಃ ಈ ಸಖ್ಯ ಅವರ ತಂದೆಯ ತಲೆಮಾರಿನಲ್ಲಿ ಸಾಧ್ಯವಿರಲಿಲ್ಲ. ಬ್ರಾಹ್ಮಣ ಪುರೋಹಿತರಿಗೆ ಈ ಬದಲಾವಣೆ ಸಂತೋಷ ತರದಿದ್ದರೂ, ಅದರ ಬಗ್ಗೆ ಅವರು ತಲೆ ಕೆಡಿಸಿಕೊಂಡಿಲ್ಲ. ಬ್ರಾಹ್ಮಣನಾದ ಪೇಶಕರನಿಗೆ ಇದರಿಂದ ಅಸಮಾಧಾನವಾದರೂ ಆಡಳಿತ-ಬಾಹ್ಯವಾದ ಈ ವಿಷಯದಲ್ಲಿ ಅವನು ಮಧ್ಯ ಪ್ರವೇಶಿಸುವುದಿಲ್ಲ. ಆದರೆ ಒಂದು ಸಂದರ್ಭದಲ್ಲಿ ಪೇಶಕರನು ಈ ಘಟನೆ ತನ್ನ ವೈಯಕ್ತಿಕ ಭಾವನೆಗಳನ್ನು ಕೆರಳಿಸಿದ್ದರಿಂದ ಗಂಭೀರವಾಗಿ ಪರಿಗಣಿಸಿದನು. ಒಬ್ಬ ಶಿವಾರ್ಚಕನು ಕೆಲವು ಭಕ್ತರಿಂದ ಪಾದ ಮುಟ್ಟಿಸಿಕೊಂಡು ನಮಸ್ಕಾರ ಮಾಡಿಕೊಳ್ಳುತ್ತಿದ್ದನು. ಆದರೆ, ಬ್ರಾಹ್ಮಣ ಪೇಶಕರನ ಪ್ರಕಾರ ಈ ಪದ್ಧತಿಯು ತೀರ ಕೆಟ್ಟದ್ದು, ಏಕೆಂದರೆ 'ಬ್ರಾಹ್ಮಣ ಪುರೋಹಿತರಿಗಷ್ಟೇ ಪಾದ ಮುಟ್ಟಿಸಿಕೊಂಡು ನಮಸ್ಕಾರ ಸ್ವೀಕರಿಸುವ ಹಕ್ಕು ಇದೆ ಮತ್ತು ಲಿಂಗಾಯಿತರಿಗೆ (ಅವನು ಶಿವಾರ್ಚಕರನ್ನು ಲಿಂಗಾಯಿತರೆಂದೇ ಸಂಬೋಧಿಸುತ್ತಿದ್ದನು) ಇಂತಹ ಅಧಿಕಾರ ಇಲ್ಲ, ಪೇಶಕರನು ಶಿವಾರ್ಚಕರಿಗೆ ಇಂತಹ ಅಸಂಬದ್ಧ ನಡೆತೆಗೆ ಆಸ್ಪದ ಕೊಡಕೂಡದು ಎಂದು ಬಾಯ್ಮಾತಿನಲ್ಲಿ ಎಚ್ಚರಿಸಿದನು.

ಇತರ ಬ್ರಾಹ್ಮಣ ಪರಿಣಿತರಾದ ಮತ್ತು 'ಪಠಿಕ', 'ಶ್ರೀಪಾದ' ಹಾಗೂ ಉಳಿದ ಸಿಬ್ಬಂದಿಗೆ ಅವರದೇ ವಿಧಿಗಳ ನಿಯಮಾವಳಿ ಇದೆ. ಅವರು ಆ ಪ್ರಕಾರ ಪೂಜೆಯ ಸಮಯಕ್ಕೆ ದೇವಸ್ಥಾನಕ್ಕೆ ಬರುತ್ತಾರೆ. ಬ್ರಾಹ್ಮಣ ಪುರೋಹಿತರು, ದೇವಸ್ಥಾನದಲ್ಲಿ ಶಿವಾರ್ಚಕರ ಪವಿತ್ರ ಕ್ರಿಯಾ ವಿಧಿಗಳ



ಸ್ಥಾನದ ಬಗ್ಗೆ ತಟಸ್ಥ ಧೋರಣೆ ತಳೆದಿದ್ದಾರೆ. ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದರೂ ಯಾವುದೇ ಗುಂಪು (ಶಿವಾರ್ಚಕರಾಗಲೀ – ಬ್ರಾಹ್ಮಣರಾಗಲೀ) ಈ ಕಾರ್ಯ ನೆರವೇರಿಸಲು ಪ್ರಯತ್ನಿಸಲಿ ಎಂಬುದು ಸ್ವಾರಸ್ಯಕರ ವಿಷಯ. ಆದಾಗ್ಯೂ ಅವರಲ್ಲಿ ಕೆಲವರು, ಹಣ ಗಳಿಸುವುದಕ್ಕಾಗಿ ಹೊಸ ಪವಿತ್ರ ಕ್ರಿಯಾವಿಧಿಗಳನ್ನು ನಿರೂಪಿಸಿದ್ದಾರೆ. ಉದಾಹರಣೆಯಾಗಿ: ಗಣಪನ ಹಾಗೂ ಆಂಜನೇಯನ ಉಪಕ್ಷೇತ್ರಗಳಲ್ಲಿದ್ದ ಇಬ್ಬರು ಕ್ರಿಯಾವಿಧಿ ಪರಿಣತರು ಹೋಗು–ಬರುವ ಭಕ್ತರನ್ನೆಲ್ಲ ತೀರ್ಥ ಸ್ವೀಕರಿಸಲು ಆಮಂತ್ರಿಸಿ ದಕ್ಷಿಣೆಗೆ ಕೈ ಒಡ್ಡುತ್ತಾರೆ. ಚಾಮುಂಡೇಶ್ವರಿಯ ಗರ್ಭಗುಡಿಯಿಂದ ನೀರು ಹೊರ ಬರುವ ಸ್ಥಳದಲ್ಲಿ ಬ್ರಾಹ್ಮಣನೊಬ್ಬನು ಕುಳಿತಿರುತ್ತಾನೆ. ಆ ತೀರ್ಥಕುಂಡವು ಕ್ಷೇತ್ರವಲ್ಲದಿದ್ದರೂ (ತೀರ್ಥ ಕುಂಡವು ಬ್ರಹ್ಮನಂತಹ ದೇವತೆಗಳ ವಾಸಸ್ಥಾನವೆಂದು ಪರಿಗಣಿಸಿ ಪವಿತ್ರವೆನಿಸಿಕೊಂಡಿದೆ) ಆ ಬ್ರಾಹ್ಮಣನು ದಕ್ಷಿಣೆ ಪಡೆದು ಮಂತ್ರ, ತೀರ್ಥ ಪ್ರಸಾದ ವಿತರಣೆ ಮಾಡುತ್ತಾನೆ. ಪಠಿಕನೊಬ್ಬನು ಕುರುಡನಿದ್ದಾನೆ. ಪ್ರಾಕಾರದ ಮೂಲೆಯಲ್ಲಿ ಕುಳಿತು ಭಿಕ್ಷೆ ಕೊಡುತ್ತಾರೆ. ಇನ್ನೊಬ್ಬ ಬ್ರಾಹ್ಮಣನು ಒಂದು ಮೂಲೆಯಲ್ಲಿ ಕುಳಿತು ಇಲ್ಲವೆ ಕೆಲವೊಮ್ಮೆ ಭಕ್ತರ ಬೆನ್ನುಹತ್ತಿ (ಪೀಡಿಸಿ) ಕಾಣಿಕೆ ಪಡೆಯುತ್ತಾನೆ.

ಮಂತ್ರ ಪಠಿಕ ಪರಿಣಿತರ ಇಪ್ಪತ್ತೊಂದು ಹುದ್ದೆಗಳಿವೆ. ಕೆಳಗೆ ಕೊಟ್ಟಂತೆ ಬೇರೆ ಬೇರೆ ಜನರ ಕರ್ತವ್ಯ-ವಿಧಿಗಳು ಈ ರೀತಿಯಿವೆ. ಹತ್ತು ಜನರು ಅಭಿಷೇಕ ಪಾರಾಯಣ ಮಾಡುತ್ತಾರೆ. ಋಗ್ವೇದ, ಸಾಮವೇದ, ಯಜುರ್ವೇದ ಹಾಗೂ ಅಥರ್ವಣವೇದ ಪಠಿಸಲು ನಾಲ್ಕು ಜನ ವೇದಪಠಿಕರಿದ್ದಾರೆ, ಅವರಿಗೆ ಇಬ್ಬರು ಸ್ಥಾನಿಕ 'ಸಹಾಯಕ' ರಿದ್ದಾರೆ, ಒಬ್ಬ ಜ್ಯೋತಿಷಿ ಇದ್ದಾನೆ, ಮೂರು ಜನ ಸ್ತೋತ್ರ ಪಠಿಕ ಹಾಗೂ ಒಬ್ಬ ಸಹಸ್ರನಾಮ ಪಠಿಕನಿದ್ದಾನೆ. ದೇವತೆಗೆ ಅಭಿಷೇಕ ಮಾಡುವಾಗ ಹತ್ತು ವೇದ ಪಾರಾಯಣ ಪರಿಣಿತರು ಪೌರೋಹಿತ್ಯ ವಹಿಸುತ್ತಾರೆ. ಪವಿತ್ರ ಕ್ರಿಯಾ ವಿಧಿಯ ಕೊನೆಯ ಘಟ್ಟವಾದ ಮಹಾಮಂಗಳಾರತಿ ಸಮಯದಲ್ಲಿ ಎಲ್ಲರೂ ಇರಲೇಬೇಕು ಹಾಗೂ ವೈದಿಕ ಮಂತ್ರ, ಸ್ತೋತ್ರ ಮುಂತಾದವುಗಳನ್ನು ಪಠಿಸಬೇಕು. ಸಹಸ್ರ ನಾಮ ಪಠಿಕರು ದೇವಸ್ಥಾನದ ಸೇವೆ ಮುಗಿಯುವವರೆಗೆ ವಿಧಿಗಳಲ್ಲಿ ಭಾಗವಹಿಸುವುದು ಅನಿವಾರ್ಯ. ವೇದ ಪಠಣವನ್ನು, ಸಹಸ್ರನಾಮ ಪಠಣವನ್ನು ಅನುವಂಶಿಕವಾಗಿ ಕಲಿಯುತ್ತಾರೆಂದು ಹೇಳಲಾಗುತ್ತದೆ.

ಮಹಾಮಂಗಳಾರತಿ ವಿಧಿ ಪೂರೈಕೆಯ ಮೊದಲು ಶ್ರೀಪಾದ ಸಿಬ್ಬಂದಿಯು ಉತ್ಸವ ಮೂರ್ತಿಯನ್ನು ಒಯ್ಯಬೇಕು. (ಶ್ರೀಪಾದ ಹನ್ನೊಂದು ಹುದ್ದೆಗಳಿವೆ. ಇದಲ್ಲದೆ ಉಪಕ್ಷೇತ್ರದ ಅರ್ಚಕನೊಬ್ಬನು ಶ್ರೀಪಾದ ಸೇವೆ ನಿರ್ವಹಿಸುತ್ತಾನೆ) ಶ್ರೀಪಾದ ಸೇವಕರ ಇನ್ನೊಂದು ಪ್ರಮುಖ ಕಾರ್ಯವೆಂದರೆ "ಮಹಾರಾಜರ ಅರಮನೆಗೆ ದೇವತೆಯ ಪ್ರಸಾದ ಒಯ್ಯುವುದು" ಪ್ರಸಾದದಲ್ಲಿ ತೆಂಗಿನ ಬಟ್ಟಲು, ಬಾಳೆಹಣ್ಣು, ಹೂವು ಹಾಗೂ ದೇವತೆಗೆ ಅರ್ಪಿಸಿದ ಕುಂಕುಮ ಇರುತ್ತವೆ. ಎಲ್ಲ ಶ್ರೀಪಾದ ಸಿಬ್ಬಂದಿಯು ಸರದಿಯ ಪ್ರಕಾರ ಈ ಕಾರ್ಯ ಪೂರೈಸುತ್ತಾರೆ. ಇಬ್ಬರು ಕೂಡಿದ ಪ್ರತಿ ತಂಡವು ದಿನ ಬಿಟ್ಟು ದಿನ ಕ್ರಮವಾಗಿ ಒಂದು ತಿಂಗಳವರೆಗೆ ಈ ಕಾರ್ಯ ಪೂರೈಸುತ್ತದೆ. ಕೆಲವೊಮ್ಮೆ ತಾವು ಈ ಕಾರ್ಯ ಪೂರೈಸಲಾಗದಾಗ ಪ್ರತಿನಿಧಿಗಳ ವ್ಯವಸ್ಥೆ ಮಾಡುತ್ತಾರೆ.

ಪ್ರತಿದಿನ ಮಧ್ಯಾಹ್ನ ಹಾಗೂ ಸಂಜೆಯ ಕಾಲಕ್ಕೆ ವಿಧಿವಿಹಿತವಾದ ಅಡಿಗೆ ಬೇಕು. ನಿತ್ಯದ

ಕ್ರಿಯಾವಿಧಿಗಳಲ್ಲಿ ದೇವತೆಗೆ 'ಅನ್ನ'ವನ್ನು ನಿವೇದಿಸಲಾಗುವುದು. ಬ್ರಾಹ್ಮಣರಿಗೆ ಊಣಿಸಲು 'ದೇವಿಕೂಟ' ಎಂಬ ವಿಶೇಷ ಪಾಕಶಾಲೆ ಇದೆ. ಈ ಕಾರ್ಯದ ಐದು ಹುದ್ದೆಗಳಿವೆ.

ಹೀಗೆ ದೇವಸ್ಥಾನದಲ್ಲಿ ದೇವಿಯ ಪವಿತ್ರ ಕ್ರಿಯಾವಿಧಿಗಳ ಆಚರಣೆಯಲ್ಲಿ ಬ್ರಾಹ್ಮಣ ಸಿಬ್ಬಂದಿಯು ಪ್ರಮುಖವಾಗಿ ನಿರತವಾಗಿದೆ. ಚಾಮುಂಡೇಶ್ವರಿ ಸಂಪ್ರದಾಯವನ್ನು ಹರಡುವಲ್ಲಿ ಬ್ರಾಹ್ಮಣರು ಎಷ್ಟರಮಟ್ಟಿಗೆ ಕಾರಣೀಭೂತರಾಗಿದ್ದಾರೆ ಎಂಬ ಪ್ರಶ್ನೆಯನ್ನು ಈಗ ಕೇಳಬಹುದು.

ಶಿವಾರ್ಚಕರಲ್ಲಿರುವಂತೆ ಗದ್ದಿಗೆ ದೇವತೆಯನ್ನು ಒಯ್ಯುವ ಪದ್ಧತಿಯು ಬೆಟ್ಟದ ಬ್ರಾಹ್ಮಣರ ಪರಿಣತರಲ್ಲಿಲ್ಲ ಎಂಬುದನ್ನು ಉಲ್ಲೇಖಿಸಿದ್ದೇವೆ. ದೇವಸ್ಥಾನಕ್ಕೆ ಸಂದರ್ಶನವಿತ್ತ ಭಕ್ತರು ಅಲ್ಲಿಯ ಬ್ರಾಹ್ಮಣ ಪರಿಣಿತರ ನೇರ ಸಂಪರ್ಕದಲ್ಲಿ ಬರುತ್ತಾರೆ. ದೇವಸ್ಥಾನದಲ್ಲಿ ಬ್ರಾಹ್ಮಣರು ಪುರೋಹಿತರಾಗಿರುವುದರಿಂದ ಅಲ್ಲಿಯ ಸಂಪ್ರದಾಯಗಳನ್ನು ವ್ಯವಸ್ಥಿತಗೊಳಿಸಿದರೆಂಬ ಭಾವನೆ ಭಕ್ತರಲ್ಲಿ ಬರುತ್ತದೆ. ಇದು ದೇವಸ್ಥಾನವು ವೈದಿಕ ದೇವರುಗಳಲ್ಲಿ ಒಂದು ಎಂಬ ಭಾವನೆಗೆ ಇಂಬುಗೊಡುತ್ತದೆ. ಕಳೆದ 150 ವರ್ಷಗಳಲ್ಲಿ ಸಸ್ಯಾಹಾರಿ ಬ್ರಾಹ್ಮಣ ಪುರೋಹಿತರು, ಸಸ್ಯಾಹಾರಿ ಜಾತಿಗಳಿಗೆ ವಿರೋಧಾಭಾಸವಾಗಿದ್ದ ಕೆಲವು ಸಂಪ್ರದಾಯಗಳನ್ನು ಸಂಪೂರ್ಣವಾಗಿ ತೊಡೆದುಹಾಕಿದ್ದಾರೆ. ಹೀಗೆ ಮಾಡುವುದರಿಂದ ಬ್ರಾಹ್ಮಣರು ಹಿಂದಿಗಿಂತ ಹೆಚ್ಚು ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸುವುದಕ್ಕಾಗಿ ಬುನಾದಿ ಹಾಕಿದರು. ದೀಕ್ಷಿತರಿಗೆ ಇದು ಚೆನ್ನಾಗಿ ಗೊತ್ತಿದೆ ಹಾಗೂ ಇದರ ಬಗ್ಗೆ ಅವರಿಗೆ ಅಭಿಮಾನವಿದೆ.

ದೇವಿಯ ಅವತಾರದ ಬಗ್ಗೆ ಧರ್ಮಗ್ರಂಥಗಳ ವ್ಯಾಖ್ಯಾನದ ಪ್ರಭಾವವು ಭಕ್ತರ ಮೇಲೆ ಆದುದರ ಅರಿವು ದೇವಸ್ಥಾನದ ಬ್ರಾಹ್ಮಣ ಪುರೋಹಿತರಿಗೆ ಇದೆ. ದೇವಸ್ಥಾನದ ಈಗಿನ ಪುರೋಹಿತನ ತಂದೆಯು 1913ರಲ್ಲಿ ಬೆಟ್ಟದಲ್ಲಿ ಚಾಮುಂಡೇಶ್ವರಿ ಅವತಾರದ ಕಥೆಯನ್ನು ನಿರೂಪಿಸುವ "ಚಾಮುಂಡೇಶ್ವರಿ ಮಹಾತ್ಮೆ" ಎಂಬ ಕಿರುಹೊತ್ತಿಗೆಯನ್ನು ಸ್ಕಂದ, ವರಾಹ ಹಾಗೂ ಕಲ್ಕಿ ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಪ್ರಕಟಿಸಿದ್ದಾನೆಂಬುದನ್ನು ಇಲ್ಲಿ ಸೂಚಿಸಬಹುದು. ಈಗಿನ ಪುರೋಹಿತನಿಂದ 1967ರಲ್ಲಿ ಆ ಕಿರುಹೊತ್ತಿಗೆಯು ಪುನರ್ ಮುದ್ರಣಗೊಂಡಿತು.

ಬ್ರಾಹ್ಮಣ ಸಿಬ್ಬಂದಿ ಸದಾಕಾಲ ದೇವಸ್ಥಾನದ ಪ್ರಾಮುಖ್ಯತೆ ಹಾಗೂ ಪ್ರಾಧಾನ್ಯತೆಯನ್ನು ಧರ್ಮಗ್ರಂಥಗಳ ಪರಿಭಾಷೆಯಲ್ಲಿ ವಿವರಿಸಲು ಮಹತ್ವ ಕೊಡುತ್ತದೆ. ಭಾರತದ ಇತರ ಭಾಗಗಳಲ್ಲಿ ಪ್ರಚಲಿತವಿರುವ ಶಕ್ತಿ ಪೂಜೆಯ ಜೊತೆಗೆ ದೇವಸ್ಥಾನದ ಸಂಬಂಧ ಕಲ್ಪಿಸಲು ಯತ್ನಿಸುತ್ತಾರೆ. ಹೀಗೆ ಮಾಡುವಾಗ ದೇವಸ್ಥಾನದ ಆಗಮಿಕ ಸಂಪ್ರದಾಯಗಳಿಗೆ ವಿಶೇಷ ಪ್ರಾಮುಖ್ಯತೆ ಕೊಡುತ್ತಾರೆ. ಈಗಾಗಲೇ ಹೇಳಿದಂತೆ ದೇವಸ್ಥಾನದ ಮತ ಸಂಸ್ಕಾರಗಳ ಪೂರೈಕೆಗಾಗಿ ಬ್ರಾಹ್ಮಣರಿಗೆ ಕೊಡಮಾಡಿದ ರಾಜಾಶ್ರಯವು ದೇವಸ್ಥಾನವನ್ನು ಮಾರ್ಗ ಸಂಸ್ಕೃತಿಗೆ ಎತ್ತರಿಸುವಲ್ಲಿ ಹೆಚ್ಚು ಸಹಾಯಕವಾಯಿತು. ಇದಲ್ಲದೆ ಅಪರಿಮಿತ ರಾಜಾಶ್ರಯದೊಂದಿಗೆ, ಭಕ್ತರಿಂದ ವೈಯಕ್ತಿಕವಾಗಿ ಪೋಷಣೆ ಪಡೆಯಲು ದೇವಸ್ಥಾನ ಪ್ರಾರಂಭಿಸಿದ್ದರಿಂದ ಮಾರ್ಗ ಸಂಸ್ಕೃತಿಯ ಎಷ್ಟೋ ಕ್ರಿಯಾವಿಧಿಗಳನ್ನು ಒಳಗೊಳ್ಳುವಂತೆ ವಾರ್ಷಿಕ ಮತವಿಧಿಗಳನ್ನು ವಿಸ್ತರಿಸಲಾಯಿತು. ಬ್ರಾಹ್ಮಣ



ಪುರೋಹಿತರಿಂದ ಪ್ರಾರಂಭಿಸಲಾದ, ಭಕ್ತರ ಹೆಸರಿನಲ್ಲಿ ನಡೆಯಿಸುವ ಸೇವೆಗಳು ಹಾಗೂ ಕ್ರಿಯಾವಿಧಿಗಳು ವಿವಿಧ ಪ್ರಕಾರದ ಆಶ್ರಯಗಳನ್ನು ಪಡೆಯುವ ಪ್ರಮುಖ ಮಾಧ್ಯಮಗಳಾಗಿವೆ. ಪರೀಕ್ಷಿಸಲ್ಪಟ್ಟ ಕ್ರಿಯಾಚರಣೆಯ ಪೂರೈಕೆಯೂ ಸಹಿತ ಹೆಚ್ಚು ಸಂಖ್ಯೆಯ ಯಾತ್ರಾರ್ಥಿಗಳನ್ನು ಆಕರ್ಷಿಸಲು ಸಹಾಯ ಮಾಡಿತು.

**ಪೋಷಣೆಯ ಪ್ರಕಾರಗಳು :**

ಬ್ರಾಹ್ಮಣ ಪುರೋಹಿತರ ಆಗಮನ, ರಥೋತ್ಸವ ಹಾಗೂ ತೆಪ್ಪೋತ್ಸವಗಳನ್ನು ಪರಿಚಯಿಸುವಿಕೆಯಿಂದ ದೇವಸ್ಥಾನಕ್ಕೆ ಭಕ್ತರು ನೀಡುವ ಆಶ್ರಯ ಸ್ವರೂಪದಲ್ಲಿ ಎಷ್ಟೋ ಬದಲಾವಣೆಗಳಾಗಿವೆ. ಅವುಗಳನ್ನು ನಾವು ಸ್ವಲ್ಪ ವಿವರವಾಗಿ ಕೆಳಗೆ ಚರ್ಚಿಸೋಣ.

ಚಾಮುಂಡೇಶ್ವರಿ ದೇವತೆಯು ಮೈಸೂರು ಮಹಾರಾಜರ ಮನೆದೇವತೆ ಯಾದ್ದರಿಂದ ಅವರು ಹಣದ ರೂಪದ ದತ್ತಿ, ವಜ್ರಾಭರಣ, ಕಾಣಿಕೆ, ಬಂಗಾರ-ಬೆಳ್ಳಿ ಆಭರಣಗಳ ಹಾಗೂ ಉಡಿಗೆಗಳ ವಿಶೇಷ ರಾಜಾಶ್ರಯ ನೀಡಿದ್ದಾರೆ. ಸೆಪ್ಟೆಂಬರ್ 1941ರಿಂದ ಜನವರಿ 1947ರ ಅವಧಿ ಹೊರತುಪಡಿಸಿ, 1914ರ ನಂತರದಿಂದ ಏಪ್ರಿಲ್ 1968ರ ವರೆಗೆ ಈ ವಿಷಯವಾಗಿ ನಾವು ದಾಖಲೆಗಳನ್ನು ಸಂಗ್ರಹಿಸಲು ಶಕ್ತರಾಗಿದ್ದೇವೆ. ನಮಗೆ ದೊರೆತ ಮಾಹಿತಿ ಎರಡು ಹಂತದ್ದಾಗಿದೆ, 1914 ರಿಂದ 1939ರ ವರೆಗೆ ಈಗಿನ ಮಹಾರಾಜರಾದ ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರು ಸಿಂಹಾಸನದಲ್ಲಿದ್ದ ಕಾಲ. ದಾಖಲು ಮಾಹಿತಿಯಲ್ಲಿ ಮಹಾರಾಜರಿಂದ ಬಂದ ಕಾಣಿಕೆಗಳ ಜೊತೆಗೆ ವೈಯಕ್ತಿಕ ಕಾಣಿಕೆಗಳನ್ನು ಕೊಟ್ಟವರ ಉಲ್ಲೇಖವೂ ಇದೆ.

ಸ್ತ್ರೀ ದೇವತೆಯಾದ ಚಾಮುಂಡೇಶ್ವರಿಗೆ ಕಾಣಿಕೆಗಳನ್ನು ಪರ್ಚಿ (ಸೀರೆ, ಬೌಸು ಮುಂತಾದ) ವಸ್ತುಗಳ, ವಜ್ರಾಭರಣ, ಬಂಗಾರ, ಬೆಳ್ಳಿ ಆಭರಣಗಳ ರೂಪದಲ್ಲಿ ಕೊಡಲಾಗುತ್ತದೆ. ದೇವಸ್ಥಾನದಲ್ಲಿ ದಾಖಲಾತಿಯಾದ ಮಾಹಿತಿಯ ವಿಶ್ಲೇಷಣೆಯು ದೇವಸ್ಥಾನವು ಸ್ವೀಕರಿಸಿದ ವಿವಿಧ ಪ್ರಕಾರದ ಕೊಡುಗೆಗಳನ್ನು ಸೂಚಿಸುತ್ತದೆ. ಪರ್ಚಿ ವಸ್ತುಗಳನ್ನು ವಿವರಿಸುವಾಗ ಇಪ್ಪತ್ತು ರೂಪಾಯಿ ಕೆಳಗಿನ ನಾಶಹೊಂದಬಹುದಾದ, ಲಿಲಾವು ಮಾಡಬಹುದಾದ ಅಲ್ಪ ವಸ್ತುಗಳನ್ನು ನಾವು ಗಣನೆಗೆ ತೆಗೆದುಕೊಂಡಿಲ್ಲ.

ವೈಯಕ್ತಿಕ ದಾನಿಗಳು ಕೊಡುತ್ತಿದ್ದ ಇಪ್ಪತ್ತರಿಂದ ಐವತ್ತು ರೂಪಾಯಿ ಬೆಲೆಯೊಳಗಿನ ಪರ್ಚಿ ಕಾಣಿಕೆ ಸಾಮಗ್ರಿಗಳು 1914-1939ರ ಅವಧಿಗಿಂತ 1940-1968ರ ಅವಧಿಯಲ್ಲಿ ಸುಮಾರು ಮೂರುಪಟ್ಟು ಹೆಚ್ಚು ಇವೆ ಇಂದು ನಮ್ಮ ಆಧಾರಾಂಶಗಳು ತೋರಿಸುತ್ತವೆ. ಈ ಅವಧಿಯಲ್ಲಿ 51ರಿಂದ 100 ರೂ. ಹಾಗೂ 101 ರಿಂದ 200 ರೂ. ಬೆಲೆಯ ಕಾಣಿಕೆಗಳೂ ಸಹಿತ ಹೆಚ್ಚು ಇದ್ದವು. ಮೈಸೂರಿನ ರಾಜವಂಶ ಕುಟುಂಬದ ಸದಸ್ಯರು ಇಪ್ಪತ್ತರಿಂದ ಒಂದು ಸಾವಿರ ರೂ. ಒಳಗಿನ ಪರ್ಚಿ ವಸ್ತುಗಳ ವಿವಿಧ ಪ್ರಕಾರದ ದೇಣಿಗೆಗಳನ್ನು ಕೊಟ್ಟಿದ್ದಾರೆ. ಅವರ ಕೊಡುಗೆಗಳು ಹಿಂದಿನ ಅವಧಿ 1914-1939ಕ್ಕೆ ಹೋಲಿಸಿದರೆ 1940-1968ರಲ್ಲಿ ದೊಡ್ಡ ಮೊತ್ತದ್ದಾಗಿದೆ

ಹಾಗೂ ಭರತಪುರ ರಾಜಮನೆತನದ ಕಾಣಿಕೆಗಳು ಇವೆ. ಶೃಂಗೇರಿ, ಬದರೀ ಶಂಕರ ಮಠ ಹಾಗೂ ಸಿದ್ಧಗಂಗೆಯ ವೀರಶೈವ ಮಠಗಳ ಪೀಠಾಧೀಶರೂ ಪರ್ಚಿ ವಸ್ತುಗಳನ್ನು ದಾನವಾಗಿ ಕೊಟ್ಟಿದ್ದಾರೆ. 1958ರಿಂದ ಅಸ್ಸಾಮಿನ ಚಹಾ ತೋಟದ ಧನಿಯು ಬೆಲೆಯುಳ್ಳ ಪರ್ಚಿ ಸಾಮಗ್ರಿಗಳನ್ನು ದಾನವಾಗಿ ಕೊಡುತ್ತಿದ್ದಾನೆಂಬುದು ಗಮನಾರ್ಹವಾದ ಸಂಗತಿಯಾಗಿದೆ. ಬೋಯಿ ಜಾತಿಯವರೂ ಸಹಿತ 101 ರಿಂದ 200 ರೂಪಾಯಿಯ ಬೆಲೆಬಾಳುವ ಪರ್ಚಿ ಸಾಮಗ್ರಿಗಳನ್ನು ಕೊಟ್ಟಿದ್ದಾರೆ.

ಮೈಸೂರು ರಾಜಮನೆತನದವರು ವಜ್ರಾಭರಣ, ಬಂಗಾರ ಹಾಗೂ ಬೆಳ್ಳಿ ಒಡವೆಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ. ಬೆಲೆ ಕಟ್ಟಲಾಗದ ಪರ್ಚಿ ವಸ್ತುಗಳ ಜೊತೆಗೆ ಅವರಿಂದ ಕೊಡಮಾಡಿದ ವಜ್ರಾಭರಣ, ಬಂಗಾರ, ಬೆಳ್ಳಿ ಒಡವೆಗಳ ಬೆಲೆಯು 1914–1939ರ ಅವಧಿಯಲ್ಲಿ ಅನುಕ್ರಮವಾಗಿ 12,000, 28,000 ಹಾಗೂ 13,000 ರೂಪಾಯಿ ಆಗಿದ್ದು, 1940–48ರ ಅವಧಿಯಲ್ಲಿ ಅನುಕ್ರಮವಾಗಿ 4,500, 4,800 ಹಾಗೂ 59,800 ರೂಪಾಯಿ ಬೆಲೆಯುಳ್ಳ ಕಲಾತ್ಮಕವಾಗಿ ಕೆತ್ತಿದ ಬೆಳ್ಳಿ ಹೊದಿಕೆಯನ್ನು ಮಹಾದ್ವಾರಕ್ಕೆ ದಾನವಾಗಿ ಕೊಟ್ಟಿದ್ದರಿಂದ 1940ರಿಂದ 1968ರ ಅವಧಿಯಲ್ಲಿ ಬೆಳ್ಳಿ ಕಾಣಿಕೆ ಅಗಾಧವಾಗಿದೆ. ಭಾರತದ ಬೇರೆ ರಾಜಮನೆತನ ದವರಿಂದಲೂ ಕಾಣಿಕೆಗಳನ್ನು ಸ್ವೀಕರಿಸಲಾಗಿದೆ. ಉದಾಹರಣೆಗೆ : ವೆಂಕಟಗಿರಿ ಮಹಾರಾಜ, ಗಪ್ವಾಲ, ತ್ರಾಣಕೋರ, ಗೊಂದಳ ಮಹಾರಾಜರು ಹಾಗೂ ಧರ್ಮಪುರಿ ಒರಚು (ಪೊಚ್ಚರಾಜ್ಯ) ಮಹಾರಾಣಿಯರು 1914–1939ರ ಅವಧಿಯಲ್ಲಿ ಶೃಂಗೇರಿ ಮಠದ ಶಂಕರಾಚಾರ್ಯರು 100 ರೂಪಾಯಿ ಬೆಲೆ ಬಾಳುವ ಬಂಗಾರದ ಆಭರಣಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ.

ದೇವತೆಯ ಆಶೀರ್ವಾದ ಹಾಗೂ ಪುಣ್ಯಗಳಿಸುವುದಕ್ಕಾಗಿ ಭಕ್ತರು ದೇವತೆಯ ಹೆಸರಿನಲ್ಲಿ ಕ್ರಿಯಾವಿಧಿ ಪೂರೈಕೆ ಕಾಲದಲ್ಲಿ ದೇವಸ್ಥಾನಕ್ಕೆ ಹಣದ ಕಾಣಿಕೆ ಕೊಡುವುದು ರೂಢಿಯಾಗಿದೆ. ಇಂತಹ ಹಣದ ಕಾಣಿಕೆಗಳನ್ನು ಸ್ಥಿರದತ್ತಿಗಳೆಂದು ಕರೆಯಲಾಗಿದೆ ಹಾಗೂ ಅವುಗಳನ್ನು ಹಿಂದಿರುಗಿಸಲಾಗುವುದಿಲ್ಲ. ದತ್ತಿ ನೀಡಿದವರ ಮರಣ ಸಂಭವಿಸಿದಾಗ ಅವರ ಆತ್ಮಕ್ಕೆ ಶಾಂತಿ ಕೋರುವುದಕ್ಕೋಸ್ಕರ ಕ್ರಿಯಾವಿಧಿಗಳನ್ನು ನೆರವೇರಿಸುತ್ತಾರೆಂಬುದು ಗಮನಾರ್ಹವಾದ ಅಂಶವಾಗಿದೆ. ಹಣದ ದತ್ತಿಗಳನ್ನು ಸರಕಾರದಲ್ಲಿ ಠೇವಣೆ ಮಾಡಲಾಗುವುದು. ದೇವಸ್ಥಾನದ ಅಧಿಕಾರಿಗಳು ಅದರಿಂದ ಬಂದ ಬಡ್ಡಿಯನ್ನು ಮಾತ್ರ ಬಳಸಬಹುದು. ದಾನಿಗಳು ಇಚ್ಛಿಸಿದ ವಿಶಿಷ್ಟವಾದ ಕ್ರಿಯಾವಿಧಿಗಳನ್ನು ಪೂರೈಸಲು ಬಡ್ಡಿ ಹಣವನ್ನು ಉಪಯೋಗಿಸಲಾಗುತ್ತದೆ. ದಾನಿಗಳು ತಮ್ಮ ದತ್ತಿಗಳನ್ನು ಕೊಡುವಾಗಲೇ ದೇವಸ್ಥಾನದಲ್ಲಿ ಆಚರಿಸಬೇಕಾದ ಕ್ರಿಯಾವಿಧಿ ಗಳನ್ನು ಸೂಚಿಸಬೇಕು.

ಭಕ್ತರ ದೇಣಿಗೆಗಳನ್ನು ದೇವಸ್ಥಾನದ ಹೆಸರಿನಲ್ಲಿ ಬ್ಯಾಂಕ್ ಹಾಗೂ ಸಂಘಗಳಲ್ಲಿ ಠೇವಣಿ ಇಡುವ ಏರ್ಪಾಡು ಇದೆ. ದೇವಸ್ಥಾನದ ಅಧಿಕಾರಿಗಳು ಠೇವಣಿದಾರ – ದಾನಿಗಳು ಸೂಚಿಸಿದ ಕ್ರಿಯಾವಿಧಿಗಳನ್ನು ನೆರವೇರಿಸಲು ಠೇವಣಿ ಮೇಲಿನ ಬಡ್ಡಿ ಬಳಸುತ್ತಾರೆ.



ಲಭ್ಯವಿರುವ ದಾಖಲಾತಿಗಳ ಮೇಲೆ ಮೈಸೂರು ರಾಜವಂಶದ ಮನೆತನ ದವರೊಬ್ಬರೇ ರೂ. 1,36,682ರ ದತ್ತಿಯನ್ನು ಕೊಟ್ಟ ಏಕೈಕ ಮಹಾಪೋಷಕ ರಾಗಿದ್ದಾರೆ ಎಂಬುದನ್ನು ಗಮನಿಸಬಹುದು. ಸುಮಾರು 41 ವೈಯಕ್ತಿಕ ದಾನಿಗಳು ಹಾಗೂ 32 ಠೇವಣಿದಾರ ದಾನಿಗಳು ಕೊಟ್ಟ ಹಣದ ಮೊತ್ತವು ಅನುಕ್ರಮವಾಗಿ 10,630 ಹಾಗೂ 7,790 ರೂಪಾಯಿ ಇದೆ. ಅಸ್ಸಾಮಿನ ಚಹಾ ತೋಟದ ಧಣಿ ಕುಟುಂಬದವರು 300 ರೂಪಾಯಿಗಳ ದತ್ತಿಯನ್ನು ಹಾಗೂ 15,708 ರೂಪಾಯಿಗಳ ಠೇವಣಿ ದಾನವನ್ನು ಕೊಟ್ಟಿದ್ದಾರೆ. ದತ್ತಿ ಹಾಗೂ ಠೇವಣಿ ಕೊಟ್ಟ ದಾನಿಗಳ ಜಾತಿಗಳನ್ನು ಗುರುತಿಸುವುದು ಸಾಧ್ಯವಾಗಲಿಲ್ಲ ಎಂಬುದನ್ನು ಇಲ್ಲಿ ಸೂಚಿಸಬಹುದು.

ಹಿಂದೆ ದೇವಸ್ಥಾನಕ್ಕೆ ಜಮೀನಿನ ದತ್ತಿ ಇರಲಿಲ್ಲ. ಆದರೆ 1959–60ರಲ್ಲಿ ಶಯನೋತ್ಸವ, ತುಪ್ಪದ ನಂದಾದೀಪ ಹಾಗೂ ರಥೋತ್ಸವದ ದಿನದಂದು ಬ್ರಾಹ್ಮಣ ಭಕ್ತರಿಗೆ ಭೋಜನ ಏರ್ಪಾಡು ಮಾಡುವ ಮುಂತಾದ ಉದ್ದೇಶಗಳಿಗಾಗಿ ಮೈಸೂರಿನ ಮಹಾರಾಜ ಹಾಗೂ ಮಹಾರಾಣಿಯವರು ಸುಮಾರು 137 ರಿಂದ 160 ಎಕರೆಯಷ್ಟು ಜಮೀನನ್ನು ದತ್ತಿ ಹಾಕಿಕೊಟ್ಟಿದ್ದಾರೆ.

ಭಕ್ತರು ಠೇವಣಿ ಹಾಗೂ ದತ್ತಿಯ ರೂಪದಲ್ಲಿ ದಾನ ಕೊಟ್ಟಾಗ ಅವರು ಕೆಲವು ಕ್ರಿಯಾವಿಧಿ ಗಳನ್ನು ತಮ್ಮ ಹೆಸರಿನಲ್ಲಿ ಇಲ್ಲವೇ ತಾವು ನಾಮಕರಣ ಮಾಡಿದವರ ಹೆಸರಿನಲ್ಲಾಗಲೀ ನಡೆಯಬೇಕೆಂದು ಆಪೇಕ್ಷಿಸುತ್ತಾರೆ. 'ಸೇವೆ' ಎಂದು ಕೆಲವು ಕ್ರಿಯಾವಿಧಿಗಳ ಭಕ್ತರ ಆರೋಗ್ಯ, ಸಂಪತ್ತು ಹಾಗೂ ಕಲ್ಯಾಣಕ್ಕಾಗಿ ನಡೆಯುತ್ತದೆ. ಈ ಕೆಳಗೆ ವರ್ಣಿಸಿದ ಎಷ್ಟೋ ಸೇವೆಗಳನ್ನು ದೇವಸ್ಥಾನದಲ್ಲಿ ಪೂರೈಸಲಾಗುತ್ತದೆ.

ಸೇವೆಗಳು :

ಕ್ರಿಯಾವಿಧಿಗಳೆಂದರೆ, (ಸೇವೆಗಳೆಂದರೆ) ಕುಂಕುಮ ಪೂಜೆ, ಬಿಲ್ವ ಪೂಜೆ ಹಾಗೂ ಏಕಾದಶಿ ಹಾಗೂ ಏಕಾದಶವರ ರುದ್ರಾಭಿಷೇಕ. ಏಕಾದಶವರವೆಂದರೆ ದೇವತೆಗೆ ಹನ್ನೊಂದು ಸಲ ಅಭಿಷೇಕ ಮಾಡುವುದು, ಏಕಾವರವೆಂದರೆ ಒಂದೇ ಸಲ ಅಭಿಷೇಕ ಮಾಡುವುದು. ಕುಂಕುಮ ಹಾಗೂ ಬಿಲ್ವಗಳಿಂದ ಸಹಸ್ರನಾಮ, ತ್ರಿಸತಿ ಹಾಗೂ ಅಷ್ಟೋತ್ತರ ಎಂಬ ಇತರ ಸೇವೆಗಳು ಇವೆ. ಸಹಸ್ರ ನಾಮದಲ್ಲಿ ಒಂದು ಸಾವಿರ ಸಲ, ತ್ರಿಶತಿಯಲ್ಲಿ ಮೂರು ನೂರು ಸಲ, ಅಷ್ಟೋತ್ತರ ಶೈಲಿಯಲ್ಲಿ ಒಂದುನೂರ ಎಂಟು ಸಲ ದೇವತೆ ಹೆಸರನ್ನು ಪಠಿಸುವುದು. 'ವಾಹನ ಹಾಗೂ ಕೈತುಲೋತ್ಸವ' ಸೇವೆಗಳು ಇವೆ. ವಾಹನೋತ್ಸವದಲ್ಲಿ ಉತ್ಸವ ಮೂರ್ತಿಯನ್ನು ಸಿಂಗ, ಕುದುರೆ, ಆನೆ ಮುಂತಾದ ವಾಹನಗಳ ಮೇಲೆ ಇರಿಸಿ ದೇವಸ್ಥಾನದ ಪ್ರದಕ್ಷಿಣೆ ಕೊಂಡೊಯ್ಯಲಾಗುವುದು. ಕೈತುಲೋತ್ಸವದಲ್ಲಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು, ಶ್ರೀಪಾದ ಸಿಬ್ಬಂದಿಯವರು ದೇವಸ್ಥಾನದ ಪ್ರದಕ್ಷಿಣೆ ಕೊಂಡೊಯ್ಯುತ್ತಾರೆ. ಏಕಾದಶವರ, ಏಕಾವರ, ವಾಹನ ಹಾಗೂ ಕೈತುಲೋತ್ಸವ ಮುಂತಾದ ಸೇವೆ ಸಂದರ್ಭಗಳಲ್ಲಿ ವಿಶೇಷವಾದ ಅಡುಗೆಗಳನ್ನು ದೇವತೆಗೆ ನಿವೇದಿಸುತ್ತಾರೆ. ಪ್ರಸಾದದ ಜೊತೆಗೆ ಸೇವೆ ಸಲ್ಲಿಸಿದ ಭಕ್ತರಿಗೆ ನಿವೇದಿಸಲು ಮಾಡಿದ ಅಡಿಗೆಯನ್ನು ಕೊಡುತ್ತಾರೆ. ಆದರೆ ಭಕ್ತರು

ಮೈಸೂರು ನಗರದ ಹೊರಗಡೆ ಇದ್ದರೆ ಕೇವಲ ಕುಂಕುಮ ಪ್ರಸಾದವನ್ನು ಅವರ ವಿಳಾಸಕ್ಕೆ ಅಂಚೆಯ ಮೂಲಕ ಕಳಿಸಲಾಗುತ್ತದೆ. ಪ್ರತಿಯೊಂದು ಸೇವೆಯ ದರಗಳು ಭಿನ್ನವಾಗಿವೆ. ಇವುಗಳನ್ನು ಸೇವೆಯಲ್ಲಿ ಬರಬಹುದಾದ ಖರ್ಚು ಹಾಗೂ ವಿಧಾನವನ್ನು ಅನುಸರಿಸಿ ಇಡಲಾಗಿದೆ. ಉದಾಹರಣೆಗೆ : ಅಷ್ಟೋತ್ತರದಂತಹ ಸರಳವಾದ ಸೇವೆಗೆ 50 ಪೈಸೆಗಳು, ತ್ರಿಶತಿ ಹಾಗೂ ಸಹಸ್ರನಾಮ ಸೇವೆಗೆ ಅನುಕ್ರಮವಾಗಿ ಒಂದು ರೂಪಾಯಿ ಐವತ್ತು ಪೈಸೆ ಹಾಗೂ ಆಹಾರದ ಸಾಮಗ್ರಿ ತಯಾರಿಸಬೇಕಾದ ಏಕಾದಶವರ ಹಾಗೂ ಸಿಂಹವಾಹನ ಉತ್ಸವದ ಸೇವೆಗೆ 25 ರೂಪಾಯಿ ಕೊಡಬೇಕಾಗುತ್ತದೆ. ಏಕಾವರ ಹಾಗೂ ಕೈತುಲೋತ್ಸವ ಸೇವೆಗಳಲ್ಲಿ ವೆಚ್ಚ ವಿಶೇಷವಿಲ್ಲದಿದ್ದರಿಂದ ಅವುಗಳಿಗೆ 10 ರೂಪಾಯಿ ಕೊಡಬೇಕಾಗುತ್ತದೆ. ಈ ಎಲ್ಲ ದರಗಳನ್ನು 1953ರಲ್ಲಿ ನಿಗದಿಪಡಿಸಲಾಗಿದೆ. ಸಾಮಾನ್ಯ ಭಕ್ತರಿಗೆ ದುಬಾರಿ ಸೇವೆಗಳನ್ನು ಸಲ್ಲಿಸುವವರು ಆಗುವುದಿಲ್ಲ. ಆದರೂ ಸಹ ಕೆಲವು ಭಕ್ತರು ಅಷ್ಟೋತ್ತರ, ತ್ರಿಶತಿ, ಸಹಸ್ರನಾಮ ಮುಂತಾದ ಕಡಿಮೆ ವೆಚ್ಚದ ಸೇವೆಗಳನ್ನು ಸಲ್ಲಿಸಿ, 'ಸೇವೆ 'ಯ ಲಾಭ ಪಡೆಯುತ್ತಾರೆ. ಸೇವೆ ಸಲ್ಲಿಸುವವರ ದಾಖಲೆಗಳನ್ನು ಅವಲೋಕಿಸಿದಾಗ ದಿನದಿನಕ್ಕೆ ವರ್ಷವರ್ಷಕ್ಕೆ ಸೇವೆ ಸಲ್ಲಿಸುವವರ ಸಂಖ್ಯೆ ಹೆಚ್ಚುತ್ತಿದ್ದುದು ಕಂಡು ಬರುತ್ತದೆ.

ಸೇವೆಗಳಲ್ಲಿ ಅತಿ ಹೆಚ್ಚು ಪ್ರಮುಖವಾದದ್ದು ಕೋಟಿ ಸಹಸ್ರನಾಮಾರ್ಚನ ವಾಗಿದೆ. ಕೋಟಿ ಸಹಸ್ರನಾಮಾರ್ಚನೆ ನೆರವೇರಿಸಲು ಎಷ್ಟೋ ತಿಂಗಳುಗಳು ಹಿಡಿಯುತ್ತದೆ. ಇದೊಂದು ಹೆಚ್ಚು ವೆಚ್ಚದಾಯಕ ಸೇವೆಯಾಗಿದ್ದು ಪೂಜೆಯ ಸಾಮಗ್ರಿಗಳಿಗೆ, ನೈವೇದ್ಯಕ್ಕೆ, ಬ್ರಾಹ್ಮಣ ಕ್ರಿಯಾವಿಧಿ ಪರಿಣತರಿಗೆ ದಕ್ಷಿಣೆ ಕೊಡುವುದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಸಾಮಾನ್ಯವಾಗಿ ಎಂತಹ ಸೇವೆಗಳನ್ನು ಮೈಸೂರು ಮಹಾರಾಜರು ಏರ್ಪಡಿಸುತ್ತಾರೆ.

ಮೈಸೂರಿನ ರಾಜಮನೆತನದವರಿಂದ ಹಾಗೂ ವೈಯಕ್ತಿಕ ಭಕ್ತರಿಂದ ನಡೆಯುವ ಇಂತಹ ಸೇವೆಗಳು ಬ್ರಾಹ್ಮಣ ಪರಿಣಿತರಿಗೆ ಹಾಗೂ ದೇವಸ್ಥಾನಕ್ಕೂ ಕೂಡ ಆರ್ಥಿಕವಾಗಿ ಸಹಾಯಕವಾಗಿದೆಯೆಂಬುದನ್ನು ಇಲ್ಲಿ ಗಮನಿಸಬಹುದು. ಸೇವೆ ನಡೆದಾಗ ಬ್ರಾಹ್ಮಣರಲ್ಲಿ ಪ್ರಮುಖವಾಗಿ ಪುರೋಹಿತ, ಸಹಾಯಕರು ಹಾಗೂ ಪರಿಕರು ನಿಶ್ಚಿತಪಡಿಸಿದ ಹಣದ ಕಾಣಿಕೆ ಪಡೆಯುತ್ತಾರೆ. ವಾಹನ ಹಾಗೂ ಕೈತುಲೋತ್ಸವ ಸೇವೆ ನಡೆದಾಗ ಶ್ರೀಪಾದ ಸಿಬ್ಬಂದಿಯು ಹಣದ ಕಾಣಿಕೆ ಪಡೆಯುತ್ತಾರೆ. ಪ್ರತಿ ಸೇವೆಗೆ ಹಣದ ರೂಪದಲ್ಲಿ ದೇವಸ್ಥಾನಕ್ಕೆ ಕೊಡುಗೆಗಳು ಬರುತ್ತವೆ. ಇವುಗಳನ್ನು ದೇವಸ್ಥಾನದ ನಿಧಿಗೆ ಜಮಾ ಮಾಡಲಾಗುವುದು. ಆದ್ದರಿಂದ ಬ್ರಾಹ್ಮಣ ಪರಿಣಿತರಿಗೆ ಹಾಗೂ ದೇವಸ್ಥಾನಕ್ಕೂ ಕೂಡ 'ಸೇವೆ' ಗಳು ಪ್ರಮುಖ ಆದಾಯದ ಮೂಲಗಳಾಗಿವೆ. ಮಾಸಿಕ ವೇತನ ರೂಪದಲ್ಲಿ ಬ್ರಾಹ್ಮಣ ಪರಿಣಿತರಿಗೆ ಕಡಿಮೆ ಸಂಭಾವನೆ ಇದೆ. ಆದರೆ ಸೇವೆ ಹಾಗೂ ಕ್ರಿಯಾವಿಧಿಗಳನ್ನು ನೆರವೇರಿಸುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ ಕೆಲವು ಬ್ರಾಹ್ಮಣ ಕ್ರಿಯಾವಿಧಿ ಪರಿಣಿತರು ಹಿಂದಿಗಿಂತಲೂ ಹೆಚ್ಚು ಹಣ ಗಳಿಸಲು ಸಮರ್ಥರಾಗಿದ್ದಾರೆ.

ದೇವಸ್ಥಾನ ಬ್ರಾಹ್ಮಣ ಪರಿಚಾರಕರು ಈ ಹಿಂದೆ ಹೆಚ್ಚು ಪ್ರಮಾಣದ ಅನ್ನವನ್ನು ಕಾಣಿಕೆಯಾಗಿ ಪಡೆಯುತ್ತಿದ್ದರೆಂದು ಹೇಳಲಾಗುತ್ತದೆ. ಆದರೆ 1922ರಲ್ಲಿ ಅವರ ಸಂಭಾವನೆಯ ಪ್ರಮಾಣವನ್ನು



ಪರಿಷ್ಕರಿಸಿದಾಗ ಅನ್ನದ ಕಾಣಿಕೆ ಬದಲು ಹಣಕ್ಕೆ ಹೆಚ್ಚು ಬೆಲೆ ಇದ್ದದ್ದರಿಂದ ಹಣದ ರೂಪದ ಸಂಭಾವನೆಯನ್ನೇ ಪಡೆಯಲು ಇಚ್ಛಿಸಿದರೆಂದು ಹೇಳಲಾಗುತ್ತದೆ. ಬ್ರಾಹ್ಮಣರಲ್ಲಿ ಹಳೆಯ ತಲೆಮಾರಿನ ಎಷ್ಟೋ ಜನ ದೇವಸ್ಥಾನದ ಸೇವೆಯೊಂದನ್ನೇ ಆಶ್ರಯಿಸಿದ್ದಾರೆ. ಪುರೋಹಿತರು ಹಾಗೂ ಉಪಪುರೋಹಿತರು ಅನುವಂಶಿಕ ವೃತ್ತಿಯನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಿದ್ದರಿಂದ ಈ ಎರಡು ತರಗತಿಯ ನೌಕರರು ಹಣದ ಕಾಣಿಕೆ ಹಾಗೂ ಸೇವೆಗಳಿಂದ ಹಣದ ದೇಣಿಗೆ ಗಳಿಸುವಲ್ಲಿ ಹೆಚ್ಚು ಪ್ರತಿಫಲ ಪಡೆಯುತ್ತಿದ್ದಾರೆ. ಸಹಸ್ರನಾಮ ಪರಿಣತನು ಪ್ರತಿ ಸಹಸ್ರನಾಮ ಸೇವೆಗೆ ಸುಮಾರು 25 ಪೈಸೆ ತೆಗೆದುಕೊಳ್ಳುತ್ತಾನೆ. ಇಂತಹ ಸೇವೆಯನ್ನು ಭಕ್ತರು ಬಹು ಸಂಖ್ಯೆಯಲ್ಲಿ ಏರ್ಪಡಿಸುವುದರಿಂದ ಅವರು ಪ್ರತಿ ತಿಂಗಳಿಗೆ 200 ರೂಪಾಯಿಗಿಂತ ಹೆಚ್ಚು ಹಣ ಗಳಿಸುತ್ತಾರೆಂದು ಹೇಳಲಾಗುತ್ತದೆ. ಈತನು ಮೆಟ್ರಿಕ್ಯುಲೇಷನ್ ಪಾಸಾಗಿದ್ದರೂ ಆರ್ಥಿಕ ಲಾಭವನ್ನು ಅನುಲಕ್ಷಿಸಿ ಸಾಂಪ್ರದಾಯಕ ವೃತ್ತಿಯನ್ನೇ ಆಶ್ರಯಿಸಿದ್ದಾನೆ. ಆದರೆ ಉಳಿದ ಬ್ರಾಹ್ಮಣ ಕ್ರಿಯಾವಿಧಿ ಪರಿಣಿತರಿಗೆ ವಿಶೇಷ ಸಂಪಾದನೆ ಮಾರ್ಗಗಳಿಲ್ಲ. ಆದರೂ ಸಹ ನಾವು ಈ ಮೊದಲೇ ಹೇಳಿದಂತೆ ತೀರ್ಥ ಮುಂತಾದುವನ್ನು ಕೊಟ್ಟು ಭಕ್ತರಿಂದ ಕಾಣಿಕೆ ಪಡೆಯುತ್ತಾರೆ. ಆದ್ದರಿಂದ ಬ್ರಾಹ್ಮಣ ಕ್ರಿಯಾವಿಧಿ ಪರಿಣಿತರಲ್ಲಿ ಪರಿಕರು ಹಾಗೂ ಶ್ರೀಪಾದರು ಸಾಂಪ್ರದಾಯಕವಾಗಿ ಬಂದ ದೇವಸ್ಥಾನದ ಪವಿತ್ರ ಕ್ರಿಯಾಚರಣೆಗಳನ್ನು ಬಿಟ್ಟು ಬೆಟ್ಟದ ಹೊರಗಡೆ ನೌಕರಿ ಹುಡುಕುತ್ತಿರುವುದು ಕಂಡುಬರುತ್ತದೆ.

### ಇತರ ಬ್ರಾಹ್ಮಣೇತರ ಸಿಬ್ಬಂದಿ :

ಶಿವಾರ್ಚಕರಲ್ಲದೆ ಎಷ್ಟೋ ಬ್ರಾಹ್ಮಣೇತರ ಸಿಬ್ಬಂದಿ ಬೆಟ್ಟದಲ್ಲಿದ್ದಾರೆ. ಶಿವಾರ್ಚಕರು ದೇವಸ್ಥಾನದಲ್ಲಿ ಅರ್ಚಕರಾಗಿದ್ದಾಗ ಅವರಿದ್ದರೋ ಹೇಗೆ ಎಂಬುದನ್ನು ತಿಳಿಯುವುದು ಸಾಧ್ಯವಾಗಲಿಲ್ಲ. ಆದರೂ ರಾಜಪರಿವಾರ ಜಾತಿಯು ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿ ದೇವತೆಗಳ ಪೂಜೆಯಲ್ಲಿ ಸಮೀಪದ ಒಡನಾಟ ಹೊಂದಿದ್ದರೆಂಬುದು ನಮ್ಮ ಊಹೆಯಾಗಿದೆ. ದೇವತೆಯ ಕಣ್ಣಕನ್ನಡಿ ಆಚರಣೆಯಲ್ಲಿ ನಾವು ಇದನ್ನು ಗಮನಿಸಿದ್ದೇವೆ. ಆಗಮಿಕ ಕ್ರಿಯಾವಿಧಿಗಳನ್ನು ಪರಿಚಯಿಸಿದಾಗ ಪಂಜು ಹಿಡಿಯುವವರ, ನೃತ್ಯಗಾರರ, ಗಂಬಾರತಿ ಹಿಡಿಯುವವರ ಮುಂತಾದ ಹುದ್ದೆಗಳನ್ನು ನಿರ್ಮಿಸಿದಂತೆ ಕಾಣಿಸುತ್ತದೆ. ಈ ಹುದ್ದೆಗಳ ಪಟ್ಟಿಯನ್ನು ಈ ಹಿಂದೆ ಕ್ರಿ.ಶ. 1851ರಲ್ಲಿ ಸಿದ್ಧಪಡಿಸಿದ ಪಟ್ಟಿಯ ಆಧಾರದ ಮೇಲೆ 1899ರಲ್ಲಿ ಸಿದ್ಧಪಡಿಸಲಾಯಿತು. ಅವುಗಳ ಮೇಲೆ ಕೆಲವು ಅವಲೋಕನ ಗಳನ್ನು ಮಾಡಲಾಗಿದೆ.

### ದೇವಸ್ಥಾನದ ಸೇವಕರ ಕಾರ್ಯಗಳು :

ಮಹಾ ಮಂಗಳಾರತಿ ಸಮಯದಲ್ಲಿ ಉತ್ಸವ ದೇವತೆಗಳ ಪ್ರದಕ್ಷಿಣೆ ಕಾಲದಲ್ಲಿ ಹಾಗೂ ಉತ್ಸವ ದೇವತೆಗಳನ್ನು ಪವಿತ್ರ ಕೆರೆ ಹಾಗೂ ಮರಗಳಿಗೆ ತೆಗೆದುಕೊಂಡು ಹೋದಾಗಲೂ ಸಹಿತ ಕೆಲವು ಸಿಬ್ಬಂದಿಯ ಸೇವೆಗಳು ಅವಶ್ಯವಾಗುತ್ತವೆ. ನಿತ್ಯ ಕ್ರಿಯಾ ವಿಧಿಗಳನ್ನು ನೆರವೇರಿಸುವ ಕಾಲಕ್ಕೆ ಮೊದಲು ನೃತ್ಯ ಹಾಗೂ ಗುಂಬಾರತಿ ಸೇವೆಯನ್ನು ಸ್ತ್ರೀ ಸಿಬ್ಬಂದಿಯು ಪೂರೈಸುತ್ತಿತ್ತು. ಆದರೆ

1899ರಲ್ಲಿ ನೃತ್ಯ ಸೇವೆಯನ್ನು ಮುಂದುವರೆಸಬಾರದೆಂದು ಹಾಗೂ ಪುರುಷ ಸಿಬ್ಬಂದಿಯನ್ನು ನೇಮಿಸಿಕೊಳ್ಳ ಬೇಕೆಂದು ಗುಂಬಾರತಿ ಹುದ್ದೆಗಳು ತೆರವಾದಾಗ ಆಜ್ಞೆ ಹೊರಡಿಸಲಾಯಿತು. ಈಗ ಗುಂಬಾರತಿ ಸೇವೆಯೊಂದೇ ಮುಂದುವರೆದಿದ್ದು ಪುರುಷ ಸೇವಕನೊಬ್ಬ ಅಲ್ಲಿದ್ದಾನೆ.

ವಾದ್ಯ ಸಂಗೀತಕ್ಕೆ, ಅದರಲ್ಲೂ ವಿಶೇಷವಾಗಿ ಮೊಹರಿ ಹಾಗೂ ಡೋಲುಗಳಿಗೆ ಶಾಸ್ತ್ರೀಯ ಜ್ಞಾನ ಅವಶ್ಯಕ. ವಿವಿಧ ಕ್ರಿಯಾವಿಧಿಗಳನ್ನು ಪೂರೈಸುವಾಗ ಬೇರೆ ಬೇರೆ ಸಂಗೀತ ಆಲಾಪಗಳನ್ನು ಉಪಯೋಗಿಸಲಾಗುವುದು. ಸಂಗೀತಗಾರರ ಕಲೆಯು ಭಾಗಶಃ ಅನುವಂಶಿಕವಾಗಿದ್ದುದು, ಭಾಗಶಃ ಬೆ ಟ್ಟದ ಹೊರಗೆ ಆಯಾ ಕ್ಷೇತ್ರಗಳ ಪರಿಣತ ಶಿಕ್ಷಕರಿಂದ ಎಂದು ಹೇಳಲಾಗುತ್ತದೆ. ವಿವಿಧ ಪ್ರಕಾರದ ಸೇವೆಗಳನ್ನು ಪೂರೈಸುವ ಸಲುವಾಗಿ ಸಂಗೀತಗಾರರ ಎಷ್ಟೋ ಹುದ್ದೆಗಳು ಅಲ್ಲಿವೆ. ಮೊದಲು ಓಲಗದವರು ಇಬ್ಬರಿದ್ದರು, ಆದರೆ ಒಂದು ಹುದ್ದೆ ತೆರವಾಗಿ ಯಾರೂ ಬರದಿದ್ದಾಗ ಒಬ್ಬನೇ ಎರಡೂ ಹುದ್ದೆಗಳನ್ನು ಪೂರೈಸಿಕೊಂಡಿದ್ದಾನೆ. ಇಬ್ಬರು ಶ್ರುತಿ ಊದುತ್ತಾರೆ. ಈ ಹುದ್ದೆಗಳು ಅನುವಂಶಿಕವಾಗಿವೆ. ತಮಟೆ ಬಾರಿಸುವವನೊಬ್ಬ, ಡೋಲು ಬಡಿಯುವವನೊಬ್ಬ, ದವಣಿ ತುತ್ತೂರಿ ಊದುವವನೊಬ್ಬ , ಕೈತಾಳ ತುತ್ತೂರಿಗೊಬ್ಬ, ಕಹಳೆಗೊಬ್ಬ ಹಾಗೂ ಜಾಗಟೆಗೊಬ್ಬ ಹೀಗೆ ವಿವಿಧ ಸಿಬ್ಬಂದಿ ಯವರಿದ್ದು, ಈ ಹುದ್ದೆಗಳನ್ನು ಅವರು ಅನುವಂಶಿಕವಾಗಿ ಹೊಂದಿದ್ದಾರೆ. ದೇವಸ್ಥಾನದ ಪವಿತ್ರ ಕ್ರಿಯಾವಿಧಿ ಪೂರೈಕೆಯ ಕಾಲಕ್ಕೆ ಇವರ ಸಂಗೀತ ಸೇವೆ ಅವಶ್ಯಕ. ತಿಪಾರಿ (ಒಂದು ತರಹದ ವಾದ್ಯ) ಹಾಗೂ ಮದ್ದಳೆ ಬಾರಿಸುವವರ ಎರಡು ಹುದ್ದೆಗಳಿದ್ದವು. ಆದರೆ ಶಾಸ್ತ್ರೀಯ ಪರಿಣಿತರು ಸಿಗದ ಕಾರಣ ಎಷ್ಟೋ ವರ್ಷಗಳಿಂದ ಹುದ್ದೆಗಳು ತೆರವಾಗಿಯೇ ಇವೆ. ರಾಜಪರಿವಾರ ಜಾತಿಯವರು ದೇವಸ್ಥಾನದಲ್ಲಿ ಸಂಗೀತ ಸೇವೆ ಪೂರೈಸುತ್ತಾರೆ.

ರಾಜ ಪರಿವಾರ ಜಾತಿಯವರು ಮೊದಲು ನಾಯಕ (ಬೇಡರ) ಜಾತಿಯವರಾಗಿದ್ದರೆಂದು ಆದರೆ ಕೆಲವು ಕಾರಣಗಳಿಂದ ಅವರು ರಾಜಪರಿವಾರ ದವರಾದರೆಂದು ಹೆಸರು ಪಡೆದಿದ್ದಾರೆಂದು ಹೇಳಿಕೊಳ್ಳುವುದನ್ನು ಗಮನಿಸಬಹುದು. 'ರಾಜ ಪರಿವಾರ'ದ ಅಕ್ಷರಶಃ ಅರ್ಥವು ಅವರು ಮೂಲತಃ ರಾಜಮನೆತನದವ ರೆಂಬುದನ್ನು ಸೂಚಿಸುತ್ತದೆ. ಆದರೆ ಒಂದು ಹೇಳಿಕೆಯ ಪ್ರಕಾರ ರಾಜ ಪರಿವಾರದವರು ಮೊದಲಿನ ಪಾಳೆಗಾರ ಮಾರನಾಯಕನ ವಂಶಜರಾಗಿದ್ದರು. ಈಗಿನ ಮೈಸೂರು ದೊರೆಗಳಾದ ಒಡೆಯರ ಸಾಮ್ರಾಜ್ಯದ ಸ್ಥಾಪಕನು ಮಾರನಾಯಕನನ್ನು ಸೋಲಿಸಿದನು. ಇನ್ನೊಂದು ಹೇಳಿಕೆಯ ಪ್ರಕಾರ ರಾಜಪರಿವಾರದ ಎಷ್ಟೋ ಜನರು ಮೈಸೂರು ರಾಜ ಮನೆತನದ ಸೇವೆಯಲ್ಲಿದ್ದರು. ನಾಯಕ ಶಬ್ದವು ಬೇಟೆಗಾರನೆಂಬ ಹೀನ ಅರ್ಥ ಕೊಡುವುದರಿಂದ ಅವರೆಲ್ಲ ರಾಜ ಪರಿವಾರದವರೆಂಬ ಗುಣವಾಚಕ ಪದವನ್ನು ಉಪಯೋಗಿಸಲು ಪ್ರಾರಂಭಿಸಿದರು.

ಮಹತ್ವದ ಅಂಶವೆಂದರೆ ರಾಜ ಪರಿವಾರದವರ ಸಂಗೀತ ಸೇವೆ ಕೇವಲ ದೇವಸ್ಥಾನಕ್ಕೆ ಮಾತ್ರ ಮೀಸಲು, ಬೇರೆಯವರಿಗೆ ದೊರಕುವಂತಿಲ್ಲವೆಂಬುದು ಗಮನಾರ್ಹ. ಸುಮಾರು 50 ವರ್ಷಗಳ ಹಿಂದೆ ದೇವಸ್ಥಾನದ ವಾದ್ಯಗಾರರು ಬೆಟ್ಟದ ದೀಕ್ಷಿತ ಬ್ರಾಹ್ಮಣರಿಗೆ ವಿವಾಹದಂತಹ ಮಂಗಳಕರ



ಸಂದರ್ಭಗಳಲ್ಲಿ ತಮ್ಮ ಸೇವೆಯನ್ನು ಪೂರೈಸುತ್ತಿದ್ದರು. ಆದರೆ ಮೈಸೂರು ನಗರದ ರಾಜಪರಿವಾರ ಜಾತಿಯವರು ಈ ಪದ್ಧತಿಯನ್ನು ಹೀನವೆಂದು ಪರಿಗಣಿಸಿದ್ದರಿಂದ ದೇವಸ್ಥಾನದ ವಾದ್ಯಗಾರರು ತಮ್ಮ ಸಾಂಪ್ರದಾಯಕ ಪದ್ಧತಿಯನ್ನು ನಿಲ್ಲಿಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ದೀಕ್ಷಿತ ಬ್ರಾಹ್ಮಣರು ಸಾಂಪ್ರದಾಯಕವಾಗಿ ಬಂದ ರಾಜಪರಿವಾರದವರ ವಿವಾಹ ಮುಂತಾದ ಕಾರ್ಯಗಳಲ್ಲಿ ಪೌರೋಹಿತ್ಯ ವಹಿಸುವುದನ್ನು ನಿಲ್ಲಿಸಿದರು. ನಂತರ ಈ ವಿವಾದವು ದೇವಸ್ಥಾನದ ಇತರ ಬ್ರಾಹ್ಮಣರ ಹಾಗೂ ಶಿವಾರ್ಚಕ ಸಿಬ್ಬಂದಿಯವರ ಮಧ್ಯಸ್ತಿಕೆಯಲ್ಲಿ ರಾಜಪರವಾರ ಸಂಗೀತಗಾರರ ಪರವಾಗಿ ಬಗೆಹರಿಸಲ್ಪಟ್ಟಿತ್ತು. ದೀಕ್ಷಿತರು ಸಂಗೀತಗಾರರ ಸೇವೆಗಾಗಿ ಮೀಸಲಾಗಿಡುವುದರ ಮಹತ್ವವನ್ನು ಮನಗಂಡು ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟರು. ಅಂದಿನಿಂದ ಸಾಂಪ್ರದಾಯಕ ವಾಗಿ ನಡೆದು ಬಂದಂತೆ ರಾಜಪರಿವಾರ ವಾದ್ಯಗಾರ ಪೌರೋಹಿತ್ಯವನ್ನು ದೀಕ್ಷಿತ ಬ್ರಾಹ್ಮಣರು ವಹಿಸುತ್ತಿದ್ದಾರೆ.

ಶಂಖ ಊದುವವನ ಹುದ್ದೆಯಲ್ಲಿ ಒಕ್ಕಲಿಗ ಜಾತಿಯವನಿದ್ದಾನೆ. ಪಂಜು ಹಿಡಿಯುವವರ ಮೂರು ಹುದ್ದೆಗಳಿವೆ. ಇವರ ಕೆಲಸವೆಂದರೆ ಉತ್ಸವ ಮೂರ್ತಿಯ ಮೆರವಣಿಗೆಯ ಕಾಲಕ್ಕೆ ಹಾಗೂ ಇತರ ಕರ್ಮಾಚರಣೆಗಳ ಸಂದರ್ಭದಲ್ಲಿ ಮೂರ್ತಿ ಎದುರಿಗೆ ಪಂಜು ಹಿಡಿಯುವುದು. ಇವರಲ್ಲಿ ಒಂದು ಹುದ್ದೆಯನ್ನು ಕುರುಬ ಜಾತಿಯವನು, ಎರಡು ಹುದ್ದೆಗಳನ್ನು ರಾಜ ಪರಿವಾರ ಜಾತಿಯವರು ಅನುವಂಶಿಕವಾಗಿ ಮುಂದುವರಿಸಿಕೊಂಡು ಬಂದಿದ್ದಾರೆ. ತಳವಾರರ ಎಂಟು ಹುದ್ದೆಗಳಿವೆ. ಅವರ ಸೇವೆಯನ್ನು ವಿವಿಧ ಕಾರ್ಯಗಳಿಗೆ ಉಪಯೋಗಿಸಿ ಕೊಳ್ಳಲಾಗುವುದು. ತಳವಾರರಲ್ಲಿ ರಾಜ ಪರಿವಾರ ಜಾತಿಯವರಾಗಿದ್ದು, ಈ ಹುದ್ದೆಗಳಲ್ಲಿ ಅನುವಂಶಿಕರಾಗಿದ್ದಾರೆ. ಅಗಸನ ಹುದ್ದೆಯೊಂದಿದ್ದು, ದೇವಿಯ ಕಣ್ಣಕನ್ನಡಿ ಕ್ರಿಯಾವಿಧಿ ನಡೆದಾಗ ಹಡದಿ (ಮಡಿಬಟ್ಟೆ) ಹಾಸುವ ಕಾರ್ಯ ಪೂರೈಸುತ್ತಾನೆ. ಜೊತೆಗೆ ಅವನು ದೇವಸ್ಥಾನದ ಬಟ್ಟೆಗಳನ್ನು, ಪರದೆಗಳನ್ನು ಒಗೆಯುವ ಕಾರ್ಯವನ್ನು ಪೂರೈಸುತ್ತಾನೆ. ಅಗಸನು ಉತ್ತನಹಳ್ಳಿಯವನು. ಇವನ ಹುದ್ದೆಯು ಕೂಡ ಅನುವಂಶಿಕವಾಗಿದೆ. ರಾಜ ಪರವಾರದವನೊಬ್ಬ ಬಂಡಿಕಾರ ನೆಂದು ಕೆಲಸ ಮಾಡುತ್ತಾನೆ. ಇವನ ಕೆಲಸವೆಂದರೆ ರಥೋತ್ಸವ ಸಮಯದಲ್ಲಿ ರಥವನ್ನು ಅಲಂಕರಿಸುವುದು.

ಒಬ್ಬ ಜಿನಿಸಿ ಸಹಾಯಕ (ಜಿನಿಸಿ ಗೊಲ್ಲ) ಹಾಗೂ ಒಬ್ಬ ಹಣದ ಲೇವಾದೇವಿಯಲ್ಲಿ ಸಹಾಯ ಮಾಡುವವ (ನಗದಿ ಗೊಲ್ಲ)ನಿದ್ದಾನೆ. ಇವರು ದೇವಸ್ಥಾನದ ಆಡಳಿತ ವರ್ಗಕ್ಕೆ ಉಗ್ರಾಣದ ಮೇಲ್ವಿಚಾರಣೆ ಹಾಗೂ ಹಣದ ಪೆಟ್ಟಿಗೆಯನ್ನು ಭದ್ರವಾಗಿರಿಸುವ ಕೆಲಸದಲ್ಲಿ ಸಹಾಯ ಮಾಡುತ್ತಾರೆ. ಇವೆರಡೂ ಹುದ್ದೆಗಳು ಅನುವಂಶಿಕವಾಗಿದ್ದು, ಗೊಲ್ಲರ ಜಾತಿಯವರೇ ಇದ್ದಾರೆ. ಗುಂಬಾರತಿ ಹಿಡಿಯುವ ಸಂಪ್ರದಾಯವು ತನ್ನ ಮೂಲ ಕ್ರಿಯಾವಿಧಿ ಔಚಿತ್ಯವನ್ನು ಕಳೆದುಕೊಂಡಿದ್ದರೂ ಅದನ್ನು ನಗದಿ ಗೊಲ್ಲನೇ ಪೂರೈಸುತ್ತಾನೆ. ಕುರುಬ ಜಾತಿಯವನೊಬ್ಬ ದೀಪ ಹಚ್ಚುವ ಕಾರ್ಯದಲ್ಲಿ ಅನುವಂಶಿಕವಾಗಿದ್ದಾನೆ. ಗ್ರಾಮದೇವತೆಯಾದ ಮಾರಮ್ಮನ ಗುಡಿ ಕಾಯುವ ಕೆಲಸವನ್ನು ರಾಜಪರಿವಾರ ಜಾತಿಯವನೊಬ್ಬ ಅನುವಂಶಿಕವಾಗಿ ನೋಡಿಕೊಳ್ಳುತ್ತಾನೆ. ದೇವಸ್ಥಾನದೊಳಗೆ ಕಸ ಗುಡಿಸುವ ಕಾರ್ಯವನ್ನು ರಾಜ ಪರಿವಾರ ಜಾತಿಯ ಇಬ್ಬರು ಸ್ತ್ರೀಯರು ಪೂರೈಸುತ್ತಾರೆ. ಕಸ ಗುಡಿಸುವ ಈ ಕಾರ್ಯವನ್ನು ಆ ಕುಟುಂಬದ ಹಿರಿಯ ಸೊಸೆಯಂದಿರು

ಅನುವಂಶಿಕವಾಗಿ ಪಡೆಯುತ್ತಾರೆ. ದೇವಸ್ಥಾನದ ಹೊರಗೆ ಕಸ ಗುಡಿಸುವ ಕಾರ್ಯವನ್ನು ಅಸ್ಪೃಶ್ಯ ಜಾತಿ (ತೆಲುಗು ಮಾತನಾಡುವ ಆದಿ ಜಾಂಬವ) ಯವನು ಅನುವಂಶಿಕವಾಗಿ ಮಾಡುತ್ತಾನೆ.

ಬ್ರಾಹ್ಮಣೇತರ ಸಿಬ್ಬಂದಿಯಲ್ಲಿ ರಾಜಪರಿವಾರದವರು ಬಹುಸಂಖ್ಯಾತ ಬಲಿಷ್ಟರಾಗಿದ್ದಾರೆ. ಚಾಮುಂಡಿಬೆಟ್ಟ ಗ್ರಾಮದಲ್ಲಿಯೂ ಕೂಡ ರಾಜ ಪರಿವಾರದವರು ಸಂಖ್ಯಾದೃಷ್ಟಿಯಿಂದ ಪ್ರಬಲರಾಗಿದ್ದಾರೆ. ಬೆಟ್ಟದಲ್ಲಿ ಮೊದಲು ಈ ಜಾತಿಯ ಜನರು ಹೆಚ್ಚಾಗಿ ದೇವಸ್ಥಾನದ ಸೇವೆಯನ್ನು ಅವಲಂಬಿಸಿದ್ದರು. ಆದರೆ ಕುಟುಂಬಗಳು ವಿಭಜನೆ ಹೊಂದಿದ್ದರಿಂದ ಹಾಗೂ ಬೆಟ್ಟದಲ್ಲಿ ಕಡಿಮೆ ಉದ್ಯೋಗಾ ವಕಾಶಗಳಿರುವುದರಿಂದ, ಈ ಜಾತಿಯ ಎಷ್ಟೋ ಜನ ಮೈಸೂರು ನಗರದಲ್ಲಿ ವಿವಿಧ ವೃತ್ತಿಗಳನ್ನು ಕೈಗೊಂಡಿದ್ದಾರೆ.

ದೇವಸ್ಥಾನದಲ್ಲಿ ಈ ಬ್ರಾಹ್ಮಣೇತರ ಸಿಬ್ಬಂದಿಯು 75 ಪೈಸೆಯಿಂದ 6 ರೂಪಾಯಿ ಯವರೆಗೆ ಮಾಸಿಕ ಸಂಭಾವನೆ ಪಡೆಯುತ್ತಿದ್ದಾರೆ. ವಸ್ತುವಿನ ರೂಪದಲ್ಲಿಯೂ ಸಂಭಾವನೆ ಪಡೆಯುತ್ತಾರೆ. ಈ ಮೊದಲು ಹೇಳಿದಂತೆ ಬ್ರಾಹ್ಮಣ ಸಿಬ್ಬಂದಿಯು 1922ರಲ್ಲಿ ಹೆಚ್ಚಿನ ಸಂಭಾವನೆ ಆಯ್ಕೆ ಮಾಡಿಕೊಂಡಾಗ ಅವರು ಹಣ ಹಾಗೂ ವಸ್ತುರೂಪದ ಸಂಭಾವನೆಗಳನ್ನು ಪಡೆಯುವ ಸವಲತ್ತನ್ನು ಉಳಿಸಿಕೊಂಡ ರೆಂಬುದನ್ನು ಇಲ್ಲಿ ಸೂಚಿಸಬಹುದು. ಈ ಹೊಂದಾಣಿಕೆಯಿಂದ ಅವರು ದೊಡ್ಡ ಪ್ರಮಾಣದಲ್ಲಿ ಧಾನ್ಯ ಪಡೆಯುತ್ತಿದ್ದುದರಿಂದ ಅವರಿಗೆ ಇದು ಗಣನೀಯ ಪ್ರಮಾಣದಲ್ಲಿ ಸಹಾಯಕವಾಗಿದೆ. ಕೆಲವು ರಾಜ ಪರಿವಾರದವರು ದೇವಸ್ಥಾನದ ಸೇವೆಗಳೊಂದಿಗೆ ಎಳೆನೀರು, ಸೌತೆಕಾಯಿ, ಮುಂತಾದವುಗಳನ್ನು ಮಾರುವ ಲಾಭದಾಯಕ ವ್ಯಾಪಾರದಲ್ಲಿಯೂ ತೊಡಗಿದ್ದಾರೆ. ರಾಜಪರಿವಾರ ಸಿಬ್ಬಂದಿ ಕುಟುಂಬದ ಸ್ತ್ರೀಯರು ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಪೂಜಾ ಸಾಮಗ್ರಿಗಳನ್ನು ಮಾರುವ ವೃತ್ತಿ ಕೈಗೊಂಡಿದ್ದಾರೆ. ಯಾತ್ರಿಕರು ಹೆಚ್ಚು ಸಂಖ್ಯೆಯಲ್ಲಿ ಧಾರ್ಮಿಕ ಕ್ರಿಯೆಗಳನ್ನು ನೆರವೇರಿಸುವುದಕ್ಕಾಗಿ ಹಾಗೂ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವ ಸಾಂಸ್ಕೃತಿಕ ಉದ್ದೇಶಕ್ಕಾಗಿ ಬೆಟ್ಟಕ್ಕೆ ಬರುವುದರಿಂದ ರಾಜಪರಿವಾರದವರ ವ್ಯಾಪಾರವು ಭರಾಟೆಯಲ್ಲಿ ನಡೆದು ಅವರಿಗೆ ಆರ್ಥಿಕ ಲಾಭವನ್ನು ಗಣನೀಯವಾಗಿ ತಂದು, ಅವರ ಆರ್ಥಿಕ ಸ್ಥಿತಿ ಸುಧಾರಿಸಲು ಸಹಾಯ ಮಾಡಿದೆ. ಆದರೂ ಪೂಜಾ ಸಾಮಗ್ರಿಗಳನ್ನು ಮಾರುವ ಸ್ತ್ರೀಯರು ವ್ಯಾಪಾರದ ಆರ್ಥಿಕ ಭಾಗಕ್ಕೆ ಹೆಚ್ಚು ಗಮನ ಕೊಡದೆ (ಅವರು ಮಾರುವ ವಸ್ತುಗಳ ಬೆಲೆ ಹೆಚ್ಚು ಇದ್ದಾಗ್ಯೂ) ಮಹಾತಾಯಿಯ ಪಾದದಲ್ಲಿ ಭಕ್ತರ ಸೇವೆಯನ್ನು ಪೂರೈಸುತ್ತಿದ್ದೇವೆ ಎಂಬ ಅಂಶಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟು ಹೇಳುತ್ತಾರೆ.

ದೇವಸ್ಥಾನದ ಸೇವೆಯ ಪೂರೈಕೆಯಲ್ಲಿ ಕಡಿಮೆ ಸಂಭಾವನೆಯಂತಹ ಅನಾನುಕೂಲ ಇದ್ದರೂ ಸಾಂಪ್ರದಾಯಿಕ ವೃತ್ತಿ ಪೂರೈಸುವುದರಲ್ಲಿ ದೇವಸ್ಥಾನದ ಸಿಬ್ಬಂದಿ ತೃಪ್ತರಾಗಿದ್ದಾರೆ. ದೇವಸ್ಥಾನದ ವಿವಿಧ ಕ್ರಿಯಾವಿಧಿಗಳ ಆಚರಣೆಗಳು ಹೆಚ್ಚಿರುವ ಈ ಸಂದರ್ಭದಲ್ಲಿ ಅವರ ಸೇವೆ ಅವಶ್ಯವಾಗಿದೆ.

## ದೇವಸ್ಥಾನಕ್ಕೆ ಸಂಬಂಧಿಸಿದ ಕೆಲವು ಬ್ರಾಹ್ಮಣೇತರ ಸಂಪ್ರದಾಯಗಳು :

ಚಾಮುಂಡೇಶ್ವರಿ ದೇವಿಯನ್ನು ಪ್ರಸನ್ನಗೊಳಿಸುವುದಕ್ಕಾಗಿ ಆಗಮಿಕ ಕ್ರಿಯಾವಿಧಿ



ಸಂಪ್ರದಾಯಗಳ ಅಂಗವಾದ ರಥೋತ್ಸವ ಹಾಗೂ ತೆಪ್ಪೋತ್ಸವಗಳನ್ನು ಆಚರಿಸಲಾಗುತ್ತದೆ. ದಸರಾ ಉತ್ಸವಗಳ ನಂತರ ಇವುಗಳನ್ನು ಆಚರಿಸಲಾಗುವುದು. ಈ ವಾರ್ಷಿಕ ಉತ್ಸವಗಳು ಮೈಸೂರು ನಗರದಿಂದ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಹೆಚ್ಚು ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸುತ್ತವೆ.

### ಅ) ಧೂಪ ಸುಡುವುದು :

ವಾರ್ಷಿಕ ಹಬ್ಬಗಳ ಸಮಯದಲ್ಲಿ ಕೆಲವು ಪರಿಣತರು ಧೂಪ ಸುಡುವವರಾಗಿ (ದೂಪದವರು) ಕಾರ್ಯ ನಿರ್ವಹಿಸುವುದು ಕಂಡುಬರುತ್ತದೆ. ಈ ಹಬ್ಬಗಳ ಕಾಲಕ್ಕೆ ಹೆಚ್ಚಾಗಿ ನಂಜನಗೂಡು ತಾಲ್ಲೂಕಿನ ಗ್ರಾಮಗಳಿಂದ ಬಂದ ಈ ಸಿಬ್ಬಂದಿಯು ಬ್ರಾಹ್ಮಣೇತರ ಭಕ್ತರು ಏರ್ಪಡಿಸುವ ಧೂಪ ಸುಡುವ ಪವಿತ್ರ ಸೇವೆಯ ವ್ಯವಸ್ಥೆ ಮಾಡುತ್ತಾರೆ. ಅವರು ಉಪ್ಪಲಿಗ (ಉಪ್ಪು ಮಾಡುವವರು) ಹಾಗೂ ರಾಜ ಪರಿವಾರ ಜಾತಿಯವರಾಗಿದ್ದಾರೆ. ಈ ಸಿಬ್ಬಂದಿಯಲ್ಲಿ ಸ್ತ್ರೀಯರು ಬಹುಸಂಖ್ಯೆಯಲ್ಲಿ ಇದ್ದಾರೆಂಬುದನ್ನು ನಾವು ನಿರೀಕ್ಷಿಸಿದೆವು. ಅವರಲ್ಲಿರುವ ಮಣ್ಣಿನ ಜ್ವಾಲಕಗಳಲ್ಲಿ ಭಕ್ತರು ದೇವತೆಯ ಹೆಸರಿನಲ್ಲಿ ಸಾಂಬ್ರಾಣಿಯನ್ನು ಸುಡುತ್ತಾರೆ. ಸಿಬ್ಬಂದಿಯೇ ಭಕ್ತರಿಗೆ ಧೂಪವನ್ನು ಪೂರೈಸುತ್ತದೆ. ಈ ಸೇವೆಗಳಿಗಾಗಿ ಭಕ್ತರು ಅವರಿಗೆ ಹಣ ಕೊಡುತ್ತಾರೆ. ಧೂಪ ಸುಡುವವರು ದೇವಸ್ಥಾನದ ಪ್ರವೇಶದ್ವಾರದ ಬಳಿ ಹಾಗೂ ಬೆಟ್ಟದ ಮೆಟ್ಟಿಲುಗಳ ಪ್ರಮುಖ ಸ್ಥಳಗಳಲ್ಲಿ ಇರುತ್ತಾರೆ. ಹೆಚ್ಚಾಗಿ ಬ್ರಾಹ್ಮಣೇತರ ಭಕ್ತರೇ ಈ ಕ್ರಿಯಾವಿಧಿ ಆಚರಿಸುತ್ತಾರೆಂಬುದನ್ನು ಗಮನಿಸಿದೆವು. ಧೂಪ ಸುಡುವ ಈ ಸೇವೆಯನ್ನು ತಮ್ಮ ಕುಟುಂಬದ ಸಾಂಪ್ರದಾಯಿಕ ವೃತ್ತಿಯೆಂದು ಕೈಗೊಂಡಿದ್ದಾರೆಂದು ಹೇಳುತ್ತಾರೆ. ಈ ಸೇವೆಯನ್ನು ಪೂರೈಸುವುದರಿಂದ ಧೂಪ ಸುಡುವ ಸಿಬ್ಬಂದಿಗೆ ಆರ್ಥಿಕ ಲಾಭವಾದರೆ, ಭಕ್ತರಿಗೆ ದೇವತೆಯ ಪವಿತ್ರಸ್ಥಾನದಲ್ಲಿ, ಶುಭ ಸಂದರ್ಭಗಳಲ್ಲಿ ಧೂಪ ಸುಡುವುದು ಪವಿತ್ರ ಕ್ರಿಯಾಚರಣೆಯಾಗಿದೆ. ಕೆಲವು ಭಕ್ತರು ರೋಗ ಗುಣವಾದ ಸಂದರ್ಭ ಮುಂತಾದವುಗಳಲ್ಲಿ, ವಾರ್ಷಿಕ ಉತ್ಸವದ ಕಾಲಕ್ಕೆ ಧೂಪ ಸುಡುವುದಾಗಿ ದೇವತೆಗೆ ಹರಕೆ ಹೊತ್ತಿರುತ್ತಾರೆ. ಅಂತಹ ಹರಕೆ ಹೊತ್ತವರು ವೆಚ್ಚವಾಗಲಾರದ ಕಾರಣ ಹೆಚ್ಚು ಸಂಖ್ಯೆಯಲ್ಲಿ ಭಕ್ತರು ಇದನ್ನು ನೆರವೇರಿಸುತ್ತಾರೆ. ಈ ಕ್ರಿಯಾವಿಧಿಯು ಬ್ರಾಹ್ಮಣೇತರ ಸಂಪ್ರದಾಯವಾಗಿದ್ದು ದೇಶೀಸಂಸ್ಕೃತಿಯ ಲಕ್ಷಣವಾಗಿದೆ.

### ಬ) ಜಂಗಮ ಶಿವಾರ್ಚಕ ಪೂಜಾರಿ :

ರಥೋತ್ಸವ ಸಂದರ್ಭದಲ್ಲಿ ಸುಮಾರು 30 ಶಿವಾರ್ಚಕ ಪೂಜಾರಿಗಳು ನಂಜನಗೂಡು ತಾಲ್ಲೂಕಿನ ಗೋಳೂರು, ಹಾಡಿ ಹಾಗೂ ನಂಜನಗೂಡು ಪಟ್ಟಣಗಳಿಂದ ಈ ಪವಿತ್ರ ಕ್ರಿಯಾವಿಧಿ ನೆರವೇರಿಸುವುದಕ್ಕಾಗಿ ಬೆಟ್ಟಕ್ಕೆ ಬರುತ್ತಿದ್ದರೆಂಬುದನ್ನು ನಾವು ಗಮನಿಸಿದೆವು. ಬೆಟ್ಟದ ಶಿವಾರ್ಚಕರ ರಕ್ತ ಸಂಬಂಧಗಳು ಹೆಚ್ಚಾಗಿ ಅವರಲ್ಲಿರದಿದ್ದರೂ ಈ ಕಾರ್ಯ ಪೂರೈಸದಿರುವುದು ಗಮನಾರ್ಹವಾದ ಅಂಶವಾಗಿದೆ. ರಥ ಎಳೆಯುವ ಪೂರ್ವದಲ್ಲಿ ಉತ್ಸವಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿದಾಗ ಹಾಗೂ ಉತ್ಸವ ಮೂರ್ತಿಯನ್ನು ರಥೋತ್ಸವದ ದಿವಸ ಸಂಜೆಯವರೆಗೆ ಅಲ್ಲಿ ಇಟ್ಟಾಗಲೂ ಕೂಡ ಅನುಕೂಲಕ್ಕೆ ತಕ್ಕಂತೆ ಶಿವಾರ್ಚಕ ಪೂಜಾರಿಗಳು

ಕ್ರಿಯಾವಿಧಿಗಳನ್ನು ನೆರವೇರಿಸುತ್ತಾರೆ. ದೇವಸ್ಥಾನದ ಹತ್ತಿರ ರಥವನ್ನು ನಿಲ್ಲಿಸುವುದಕ್ಕಾಗಿ ತಂದೊಡನೆ ಬ್ರಾಹ್ಮಣ ಹಾಗೂ ಅರಮನೆಯ ಇತರ ಸಿಬ್ಬಂದಿಯು ಆ ಸ್ಥಳ ತೆರವು ಮಾಡುತ್ತಾರೆ. ಆಗ ಶಿವಾರ್ಚಕರು ರಥದ ಚಕ್ರ ಹಾಗೂ ದಂಡ ಮುಂತಾದವುಗಳನ್ನು ಹತ್ತಿ ಪೂಜೆ ಪ್ರಾರಂಭಿಸುತ್ತಾರೆ. ಪೂಜಾ ಸಾಮಗ್ರಿಗಳನ್ನು ಭಕ್ತರಿಂದ ಸ್ವೀಕರಿಸಿ, ತೆಂಗಿನಕಾಯಿ ಒಡೆಯುವುದು, ಬಾಳೆಹಣ್ಣು ನಿವೇದಿಸುವುದು, ಊದಿನ ಕಡ್ಡಿಕರ್ಪೂರ ಸುಡುವುದು ಅವರ ಪೂಜಾ ವಿಧಾನವಾಗಿದೆ. ಉತ್ಸವಮೂರ್ತಿ ರಥದಲ್ಲಿದ್ದಾಗ ಅವರು ಅದಕ್ಕೆ ನೈವೇದ್ಯ ಅರ್ಪಿಸಿದಂತೆ ಅಥವಾ ರಥದಲ್ಲಿ ಉತ್ಸವಮೂರ್ತಿ ಇಲ್ಲದಿದ್ದಾಗ ದೇವಸ್ಥಾನದ ದೇವಿಯ ದಿಕ್ಕಿನ ಕಡೆಗೆ ನಿವೇದಿಸಿದ ಹಾವಭಾವ ಮಾಡುತ್ತಾರೆ. ನಂತರ ಅವರು ತೆಂಗಿನಕಾಯಿ ಹೋಳಿನಲ್ಲಿ ಸ್ವಲ್ಪ ಕುಂಕುಮ, ಹೂಗಳನ್ನಿಟ್ಟು ಭಕ್ತರಿಗೆ ನಿವೇದಿಸಿದ ಪ್ರಸಾದವನ್ನು ಎಲ್ಲಾ ಪೂಜಾ ಸಾಮಗ್ರಿಗಳೊಂದಿಗೆ ಹಿಂದಿರುಗಿಸುತ್ತಾರೆ. ಈ ಪವಿತ್ರ ಕ್ರಿಯಾವಿಧಿಗಳನ್ನು ನೆರವೇರಿಸುವುದಕ್ಕಾಗಿ ಭಕ್ತರಿಂದ ಸಾಮಾನ್ಯವಾಗಿ ಹಣದ ರೂಪದಲ್ಲಿ ಸ್ವಸಂತೋಷದ ಕಾಣಿಕೆಗಳನ್ನು ಅಪೇಕ್ಷಿಸುತ್ತಾರೆ. ಎಷ್ಟೋ ಬ್ರಾಹ್ಮಣೇತರ ಭಕ್ತರು ಈ ಕ್ರಿಯಾವಿಧಿ ಪೂರೈಕೆಗಾಗಿ ಶಿವಾರ್ಚಕರಲ್ಲಿಗೆ ಹೋಗುತ್ತಿರುವುದು ಕಂಡುಬರುತ್ತದೆ. ತೆಪ್ಪೋತ್ಸವದ ದಿನವೂ ಸಹಿತ ಉತ್ಸವ ಮೂರ್ತಿ ರಥದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರದಿದ್ದರೂ ಎಷ್ಟೋ ಶಿವಾರ್ಚಕರು ಭಕ್ತರ ಪೂಜಾರಿಗಳಾಗುತ್ತಾರೆ. ನಿಜ ಸಂಗತಿಯೆಂದರೆ ಎಷ್ಟೋ ಭಕ್ತರು ತಮ್ಮ ಪೂಜಾ ಸಾಮಾಗ್ರಿಗಳನ್ನು ದೇವತೆಗೆ ಅರ್ಪಿಸಲು ಆತುರರಾಗಿರುತ್ತಾರೆಯೇ ಹೊರತು ಉತ್ಸವ ಮೂರ್ತಿ ರಥದಲ್ಲಿ ಇದೆಯೋ ಇಲ್ಲವೋ ಎನ್ನುವುದು ಅವರಿಗೆ ಸಂಬಂಧಿಸಿದ ವಿಷಯವಲ್ಲವೆಂಬಂತೆ ವರ್ತಿಸುತ್ತಾರೆ. ರಥೋತ್ಸವದ ದಿವಸ ವಿಶೇಷವಾಗಿ ಜಂಗಮ ಶಿವಾರ್ಚಕರ ಸೇವೆಯನ್ನು ಪಡೆಯುವ ಪ್ರಮುಖ ಕಾರಣವೆಂದರೆ ಅಂದು ಹೆಚ್ಚು ಜನ ಮುಂದೆ ಇರುವುದರಿಂದ ದೇವಸ್ಥಾನ ಪ್ರವೇಶಿಸಲು ಸರದಿಯಲ್ಲಿ ಗಂಟೆಗಟ್ಟಲೆ ದೇವಸ್ಥಾನದ ಎದುರು ಕಾಯುವುದು ದುಸ್ಸಾಧ್ಯ ವಾಗುತ್ತದೆ. ಆದ್ದರಿಂದ ಭಕ್ತರು ದೇವತೆಯನ್ನು ಹೊರಗಿನಿಂದಲೇ ಪೂಜಿಸಲು ಶಿವಾರ್ಚಕ ಪೂಜಾರಿಗಳ ಸಹಾಯ ಪಡೆಯುತ್ತಾರೆ.

**ಕ) ತೆಂಗಿನಕಾಯಿ ಸಂಗ್ರಹಣೆ :**

ಇಡೀ ಕಾಯಿಯನ್ನು ನೆಲಕ್ಕೆ ಹೊಡೆದು ನೈವೇದ್ಯ ಅರ್ಪಿಸುವ ಪದ್ಧತಿಯು ಭಕ್ತರಲ್ಲಿದೆ. ಕ್ರಿಯಾಚರಣೆಯ ಅಂಗವಾಗಿ ರಥೋತ್ಸವದ ದಿವಸ ಹೆಚ್ಚು ಸಂಖ್ಯೆಯ ಭಕ್ತರು ತೆಂಗಿನಕಾಯಿಯನ್ನು ಈ ರೀತಿಯಲ್ಲಿ ಅರ್ಪಿಸುವುದನ್ನು ನಾವು ಗಮನಿಸಿದ್ದೇವೆ. ಆದರೆ ಇಲ್ಲಿ ಮಹತ್ವದ ಅಂಶವೆಂದರೆ ಮೈಸೂರು ನಗರದ ಹೊರವಲಯದ ಕೇತಮ್ಮಹಳ್ಳಿಯ ಜನರು ಭಕ್ತರು ಒಡೆದ ತೆಂಗಿನಕಾಯಿಗಳನ್ನು ವ್ಯವಸ್ಥಿತವಾಗಿ ಹೆಚ್ಚು ಸಂಖ್ಯೆಯಲ್ಲಿ ಸಂಗ್ರಹಿಸುವುದು ಕಂಡು ಬರುತ್ತದೆ. ಆ ಗ್ರಾಮದ ಜನರು ಉತ್ಸವದ ಕಾಲದಲ್ಲಿ ದೇವಿಯ ರಥವನ್ನು ಎಳೆಯುವುದು ಹಾಗೂ ತೆಂಗಿನಕಾಯಿಗಳನ್ನು ವ್ಯವಸ್ಥಿತವಾಗಿ ಹೆಚ್ಚು ಸಂಖ್ಯೆಯಲ್ಲಿ ಸಂಗ್ರಹಿಸುವುದು ಕಂಡು ಬರುತ್ತದೆ. ಆ ಗ್ರಾಮದ ಜನರು ಉತ್ಸವದ ಕಾಲದಲ್ಲಿ ದೇವಿಯ ರಥವನ್ನು ಎಳೆಯುವುದು ಹಾಗೂ ತೆಂಗಿನಕಾಯಿಗಳನ್ನು ಸಂಗ್ರಹಿಸುವುದು ಸಾಂಪ್ರದಾಯಿಕ ವಾಗಿ ಬಂದ ತಮ್ಮ ಹಕ್ಕು



ಬಾಧ್ಯತೆಯಾಗಿದೆಯೆಂದು ನಂಬಿದ್ದಾರೆ.

ನಮಗೆ ಹೇಳಿದ ಪ್ರಕಾರ ಜಾತಿಯನ್ನು ಗಣನೆಗೆ ತರದೆ ಆ ಹಳ್ಳಿಯ ಪ್ರತಿಯೊಂದು ಕುಟುಂಬದಿಂದ ಒಬ್ಬನು ಬೆಟ್ಟಕ್ಕೆ ಬರುವ ತಿಳುವಳಿಕೆ ಮಾಡಿಕೊಂಡಿದ್ದಾರೆ. ಸುಮಾರು 5–6 ಜನ ಕೂಡಿದ ಎರಡು ತಂಡಗಳು ತೆಂಗಿನ ಹೋಳುಗಳನ್ನು ಸಂಗ್ರಹಿಸುವಲ್ಲಿ ತೊಡಗಿದರೆ ಉಳಿದವರೆಲ್ಲ ರಥವನ್ನೆಳೆಯುವುದರಲ್ಲಿ ಪಾಲ್ಗೊಳ್ಳುತ್ತಾರೆ. ಉತ್ಸವಮೂರ್ತಿಗೆ ಪವಿತ್ರ ಕ್ರಿಯಾಚರಣೆಗಳನ್ನು ಮಾಡಿ ಮುಗಿಸಿದ ಮೇಲೆ ರಥದಲ್ಲಿ ಪ್ರತಿಷ್ಠಾಪಿಸಲಾಗುವುದು. ರಥೋತ್ಸವವು ಪ್ರಾರಂಭವಾಯಿತೆಂದು ಸೂಚಿಸಲು ಮೈಸೂರು ಮಹಾರಾಜರು ತಮ್ಮ ಅರಮನೆಯ ವರಿಷ್ಠರೊಂದಿಗೆ ಕೆಲವು ಹೆಜ್ಜೆ ರಥವನ್ನು ಎಳೆಯುತ್ತಾರೆ. ನಂತರ ಕೇತಮ್ಮನ ಹಳ್ಳಿಯ ಜನರು ಸಾಂಪ್ರದಾಯಿಕ ವಿಧಾನದಂತೆ ರಥವು ಒಂದು ಪ್ರದಕ್ಷಿಣೆ ಪೂರ್ತಿ ಗೊಳಿಸುತ್ತಾರೆ.

ರಥೋತ್ಸವ ದಿನದಂದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಇಡಿಗಾಯಿಯನ್ನು ಅರ್ಪಿಸುವುದರಿಂದ, ಒಡೆದ ತೆಂಗಿನಕಾಯಿಗಳನ್ನು ಸಂಗ್ರಹಿಸುವ ಎರಡು ತಂಡಗಳು ಪ್ರಾತಃ ಕಾಲದಿಂದ ಸಾಯಂಕಾಲದವರೆಗೆ ಕಾರ್ಯಮಗ್ನವಾಗಿರುತ್ತವೆ. ಒಂದು ತಂಡವು ದೇವಸ್ಥಾನಕ್ಕೆ ಬರುವ ಮೊದಲನೇ ಪಾವಟಿಗೆ ಹತ್ತಿರ ಕಾರ್ಯನಿರತ ವಾಗಿದ್ದರೆ, ಇನ್ನೊಂದು ತಂಡವು ದೇವಸ್ಥಾನದ ಪ್ರವೇಶದ್ವಾರದ ಬಳಿ ಕಾರ್ಯ ನಿರ್ವಹಿಸುತ್ತದೆ. ಈ ಎರಡೇ ಸ್ಥಳಗಳಲ್ಲಿ ಮಾತ್ರ ಭಕ್ತರು ಇಡಿಗಾಯಿ ಅರ್ಪಿಸುವ ಕ್ರಿಯಾವಿಧಿ ನೆರವೇರಿಸುತ್ತಾರೆ. ಆ ದಿವಸ ಎರಡೂ ತಂಡಗಳಿಂದ ಸಂಗ್ರಹಿಸಲ್ಪಟ್ಟ ತೆಂಗಿನ ಹೋಳುಗಳನ್ನು ಗ್ರಾಮದ ಪ್ರತಿ ಮನೆಗೂ ಪ್ರಸಾದವೆಂದು ಹಂಚ ಲಾಗುವುದೆಂದು ಹೇಳಲಾಗುತ್ತದೆ. ಗ್ರಾಮದ ಅಸ್ಪೃಶ್ಯ ಜಾತಿಯವರೂ ಸಹಿತ ಈ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ. ಅವರಿಗೂ ಸಹಿತ ತೆಂಗಿನಕಾಯಿ ಪ್ರಸಾದ ಕೊಡಲಾಗುತ್ತದೆ.

ತೆಪ್ಪೋತ್ಸವದ ದಿನದಂದೂ ಬೆಟ್ಟದಿಂದ ಕೆಲವೇ ಮೈಲುಗಳ ಅಂತರದಲ್ಲಿರುವ ರಾಮನಹಳ್ಳಿ, ಸಕ್ಕಳ್ಳಿ, ಮಣ್ಣೂರು, ಉತ್ತನಹಳ್ಳಿ, ಆಲನಹಳ್ಳಿ ಹಾಗೂ ವಜಮಂಗಲ ಗ್ರಾಮದ ಜನರೂ ಸಹ ತೆಂಗಿನಕಾಯಿ ಹೋಳುಗಳನ್ನು ಸಂಗ್ರಹಿಸುತ್ತಾರೆಂಬುದನ್ನು ಗಮನಿಸಿದೆ. ಆದರೆ ಈ ಸಂದರ್ಭದಲ್ಲಿ ಹೋಳುಗಳು ಸಂಗ್ರಹಣೆ ವ್ಯವಸ್ಥಿತವಾದ ಪದ್ಧತಿಯಲ್ಲಿ ನಡೆಯದೆ ವ್ಯಕ್ತಿ ಪ್ರಧಾನವಾದ ಪದ್ಧತಿಯ ಮೇಲೆ ನಡೆಯುತ್ತದೆ. ಮೇಲೆ ಸೂಚಿಸಿದ ಗ್ರಾಮಗಳ ಜನ ಮಾತ್ರ ಆ ದಿವಸ ತೆಂಗಿನಕಾಯಿ ಸಂಗ್ರಹಿಸುವ ಕಾಯಕ ಮಾಡುತ್ತಾರೆಂದು ಹೇಳಲಾಗುತ್ತದೆ. ಕೇತಮ್ಮನಹಳ್ಳಿಯ ತೆಂಗಿನ ಹೋಳುಗಳ ಸಂಗ್ರಾಹಕರು ಮಾಡುವಂತೆ ಉಳಿದ ಗ್ರಾಮಗಳ ಜನರು ಪರಸ್ಪರ ಋಣಾರ್ಥವಾಗಿ ಯಾವುದೇ ಕೆಲಸ ಮಾಡಬೇಕಾಗಿಲ್ಲ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಈ ಎಲ್ಲ ಗ್ರಾಮಗಳ ಜನರು ಉತ್ಸವದ ಸಂದರ್ಭದಲ್ಲಿ ಪ್ರತಿವರ್ಷ ತಪ್ಪದೆ ದೇವಸ್ಥಾನ ಸಂದರ್ಶಿಸಿ ಆ ಕಾರ್ಯವನ್ನು ಕ್ರಮೇಣವಾಗಿ ಸಂಪ್ರದಾಯಬದ್ಧ ಮಾಡತೊಡಗಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ ಐತಿಹಾಸಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕಾರಣಗಳಿಂದ ಸ್ಥಾನಿಕ ಬ್ರಾಹ್ಮಣೇತರ ಸಂಪ್ರದಾಯದ ಮೇಲೆ ವೈದಿಕ ಸಂಪ್ರದಾಯ ಹೇರಿದ್ದರಿಂದ

ಚಾಮುಂಡೇಶ್ವರಿ ದೇವಿಯ ಧಾರ್ಮಿಕ ನಂಬಿಕೆಯನ್ನು ಮಾರ್ಗ ಸಂಸ್ಕೃತಿಯ ಮೂಲಕ ಈ ಪ್ರದೇಶದಲ್ಲಿ ಹರಡಲು ಹಾಗೂ ಪ್ರಸಾರ ಮಾಡಲು ಅನುವಾಯಿತಲ್ಲದೆ, ಎರಡೂ ಪಂಗಡಗಳ ಕ್ರಿಯಾಚರಣೆ ಪರಿಣಿತರಲ್ಲೆ ಬದಲಾವಣೆ ಹಾಗೂ ಹೊಂದಾಣಿಕೆ ತರಲು ಸಾಧ್ಯವಾಯಿತು. ದೇವಸ್ಥಾನದ ವಾರ್ಷಿಕ ಉತ್ಸವಗಳ ಅಂಗವಾದ ಧೂಪ ಸುಡುವ, ಜಂಗಮ ಶಿವಾರ್ಚಕನು ಪೂಜಾರಿ ಯಾಗುವ ಹಾಗೂ ತೆಂಗಿನಕಾಯಿ ಹೋಳು ಸಂಗ್ರಹಿಸುವ ಸಂಪ್ರದಾಯಗಳು ದೇವಸ್ಥಾನದ ಕಾರ್ಯ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿದೆ. ಇವುಗಳಿಂದ ವಿವಿಧ ಪಂಗಡಗಳ ಜನರನ್ನು ಚಾಮುಂಡೇಶ್ವರಿಯ ಆರಾಧನೆಯ ವ್ಯಾಪ್ತಿಯಲ್ಲಿ ತರಲಾಗಿದೆ.



## ಅಧ್ಯಾಯ - ಮೂರು

### ಚಾಮುಂಡೇಶ್ವರಿ ದೇವಿಯ ಆರಾಧನೆ :

ಈ ಅಧ್ಯಾಯದಲ್ಲಿ ಇನ್ನೂ ಕೆಲವು ಹೆಚ್ಚಿನ ಯುಕ್ತ ಪ್ರಶ್ನೆಗಳನ್ನು ಚರ್ಚಿಸಲು ಪ್ರಯತ್ನಿಸೋಣ. ಅವು ಯಾವುವೆಂದರೆ, ಮೈಸೂರಿನ ಚಾಮುಂಡೇಶ್ವರಿ ಭಕ್ತರು ಯಾರು ? ದೇವಸ್ಥಾನ ಸಂದರ್ಶಿಸಲು ಅವರಿಗೆ ಪ್ರೇರಣೆಗಳು ಯಾವುವು ? ಹಾಗೂ ಅವರು ದೇವತೆಯ ಸ್ವರೂಪವನ್ನು ಹೇಗೆ ಗ್ರಹಿಸಿದ್ದಾರೆ ? ದೇವತೆಯ ಹೆಸರಿನಲ್ಲಿ ಏರ್ಪಡಿಸಿದ ಉತ್ಸವಗಳು ಎಷ್ಟು ಗಾಢವಾಗಿ ಮೈಸೂರಿನ ವಿವಿಧ ಜಾತಿಗಳನ್ನು ಹಾಗೂ ಸಮುದಾಯಗಳನ್ನು ತಲುಪಿವೆ ?

ಈ ಪ್ರಶ್ನೆಗಳಿಗೆ ಉತ್ತರ ಹೊರಡಿಸಲು ನಾವು ದೇವಸ್ಥಾನದ ಪ್ರಮುಖ ಕ್ರಿಯಾಚರಣೆಗಳನ್ನು ಹಾಗೂ ದೇವಸ್ಥಾನ ಸಂದರ್ಶಿಸುವ ಭಕ್ತರನ್ನು ಸಮೀಪದಿಂದ ನಿರೀಕ್ಷಿಸಿದ್ದೇವೆ. ಕೆಲವು ಭಕ್ತರನ್ನು ಸಂದರ್ಶಿಸಿ, ಅವರ ಪ್ರೇರಣೆಗಳ, ದೇವಸ್ಥಾನ ಸಂದರ್ಶಿಸುವ ವಿಧಾನ ಹಾಗೂ ಅದರ ವೃತ್ತಿ, ಜಾತಿಯ ಹಿನ್ನೆಲೆ, ಯಾವ ಸ್ಥಳದಿಂದ ಅವರು ಬಂದರು ಮುಂತಾದ ಮಾಹಿತಿಗಳನ್ನು ಸಂಗ್ರಹಿಸಿದೆವು. ಕಾಲಾನುಕ್ರಮದಲ್ಲಿ ಜನರು ದೇವಸ್ಥಾನದೊಂದಿಗೆ ಬೆಳೆಸಿಕೊಂಡ ಸಂಬಂಧದ ಸ್ವರೂಪ ತಿಳಿಯಲು ನಂತರ ನಾವು ಮೈಸೂರು ನಗರವನ್ನು ಹಾಗೂ ಸುತ್ತಲಿನ ಗ್ರಾಮಗಳನ್ನು ಸಹಿತ ಸಮೀಕ್ಷಿಸಿದೆವು.

ಆಧಾರಾಂಶಗಳನ್ನು ಇಲ್ಲಿ ಮೂರು ಭಾಗಗಳಲ್ಲಿ ನಿರೂಪಿಸಲಾಗಿದೆ. ಮೊದಲನೆ ವಿಭಾಗದಲ್ಲಿ ದೇವಸ್ಥಾನ ಸಂದರ್ಶಿಸುವ ಭಕ್ತರ ವಿವರಣೆ ಹಾಗೂ ನಾವು ಸಂಪರ್ಕಿಸಿದವರ ವಿವರಣೆ ಕೊಡಲಾಗಿದೆ. ಎರಡನೇ ಹಾಗೂ ಮೂರನೇ ವಿಭಾಗದಲ್ಲಿ ಸುತ್ತಲಿನ ಗ್ರಾಮಗಳ ಹಾಗೂ ಮೈಸೂರು ನಗರದ ಜನತೆಯು ಚಾಮುಂಡೇಶ್ವರಿ ದೇವತೆಯ ಸ್ವರೂಪ ಹಾಗೂ ಗ್ರಹಿಕೆ, ದೇವತೆಗೆ ಸಂಬಂಧಿಸಿದ ಪವಿತ್ರ ಮತಾಚರಣೆಗಳ ನಿರ್ವಹಣೆಗಳನ್ನು ಅನುಕ್ರಮವಾಗಿ ವರ್ಣಿಸಲಾಗಿದೆ.

### ದೇವಸ್ಥಾನ ಸಂದರ್ಶಿಸುವ ಭಕ್ತರು :

ಈ ಹಿಂದೆ ಭಕ್ತರು ದೇವಸ್ಥಾನಕ್ಕೆ ಹೆಚ್ಚಾಗಿ ದಸರಾ ಉತ್ಸವಗಳಾದ ನಂತರ ನಡೆಯುವ ವಾರ್ಷಿಕ ರಥೋತ್ಸವ ಹಾಗೂ ತೆಪ್ಪೋತ್ಸವಗಳಿಗೆ ಬರುತ್ತಿದ್ದರು. ಆದರೆ ಸುಮಾರು 15 ವರ್ಷಗಳಿಂದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭಕ್ತರು ಹಾಗೂ ಪ್ರವಾಸಿಗರು ಇಡೀ ವರ್ಷ ಧಾವಿಸುತ್ತಿದ್ದಾರೆಂದು ಹೇಳಲಾಗುತ್ತದೆ. ಸಾರಿಗೆ ಅನುಕೂಲತೆಗಳಿದ್ದು, ಭಕ್ತರ ಸಂಖ್ಯೆ ವಿಶೇಷವಾಗಿ ವರ್ಷ-ವರ್ಷಕ್ಕೂ ಹೆಚ್ಚುತ್ತಿದೆ. ದಕ್ಷಿಣ ರಾಜ್ಯಗಳ ಎಷ್ಟೋ ಪ್ರಮುಖ ನಗರ ಹಾಗೂ ಪಟ್ಟಣಗಳಿಂದ ಸುಖಾಸೀನ ಹಾಗೂ ಪ್ರವಾಸಿ ಬಸ್ಸುಗಳು ಹೆಚ್ಚು ಸಂಖ್ಯೆಯ ಪ್ರವಾಸಿಗರನ್ನು ಚಾಮುಂಡಿ ಬೆಟ್ಟ ಹಾಗೂ ಮೈಸೂರು ನಗರಕ್ಕೆ ತರಲು ಓಡಾಡುತ್ತಿವೆ. ಪ್ರವಾಸಿಗರು ಸಾಮಾನ್ಯವಾಗಿ ಬೆಟ್ಟಕ್ಕೆ ಸಾಂಸ್ಕೃತಿಕ ಪ್ರೇಕ್ಷಣೀಯ ಸ್ಥಳವೆಂಬ ಉದ್ದೇಶದಿಂದ ಭೇಟಿ ಕೊಟ್ಟರೂ ಹಿಂದೂ ಪ್ರವಾಸಿಗರು ಚಾಮುಂಡೇಶ್ವರಿ

ದೇವತೆಗೆ ಹೆಚ್ಚು ಭಕ್ತಿ ತೋರಿಸಿ ತಮ್ಮ ಪ್ರಾರ್ಥನೆ ಸಲ್ಲಿಸುತ್ತಾರೆ. ಬೆಟ್ಟದಲ್ಲಿರುವ ಅಂಗಡಿಗಳಲ್ಲಿ ಪೂಜಾ ಸಾಮಗ್ರಿಗಳನ್ನು ಖರೀದಿಸಿ, ಪೂಜೆಗಾಗಿ ದೇವಸ್ಥಾನದ ಪುರೋಹಿತನಿಗೆ ಕೊಡುತ್ತಾರೆ. ಇದಕ್ಕೆ ಪ್ರತಿಯಾಗಿ ಭಕ್ತರು ನಿವೇದಿಸಿದ ಪವಿತ್ರ ಕುಂಕುಮ ಹಾಗೂ ಪೂಜಾ ಸಾಮಗ್ರಿಗಳನ್ನು ಪ್ರಸಾದವಾಗಿ ಸ್ವೀಕರಿಸುತ್ತಾರೆ. ಸಂಪ್ರದಾಯಸ್ಥ ಹಿಂದೂ ಸಂದರ್ಶಕರು ಬೆಟ್ಟದಲ್ಲಿ ಹೊತ್ತು ಮಾರುವ ವ್ಯಾಪಾರಸ್ಥರಿಂದ ದೇವತೆಯ ಮುದ್ರಿತ ಭಾವಚಿತ್ರದೊಡನೆ ಪ್ರಮುಖ ಪ್ರವಾಸಿ ಕೇಂದ್ರಗಳ ಚಿತ್ರ ಸಂಪುಟ ಖರೀದಿಸುತ್ತಾರೆ.

ದೇವಸ್ಥಾನಕ್ಕೆ ಬರುವವರು ಪ್ರಮುಖವಾಗಿ ಕಾಲ್ನಡಿಗೆ, ಸೈಕಲ್, ಸ್ಕೂಟರ್, ಸರ್ಕಾರಿ ಬಸ್ಸು, ಸುಖಾಸೀನ ಬಸ್ಸು ಅಥವಾ ಖಾಸಗಿ ಕಾರು ಮುಂತಾದವುಗಳಿಂದ ಬರುತ್ತಾರೆ. ಈ ಮೊದಲೇ ಹೇಳಿದಂತೆ ಸಾವಿರ ಮೆಟ್ಟಿಲುಗಳ ದಾರಿಯಿಂದ ಭಕ್ತರು ಕಾಲ್ನಡಿಗೆಯಿಂದಲೂ ಹೋಗಬಹುದಾಗಿದೆ. ಈ ಅವಧಿಯಲ್ಲಿ ಬಾಲಕರನ್ನು ಹೊರತುಪಡಿಸಿ 437 ಸಂದರ್ಶಕರನ್ನು ಸಂಪರ್ಕಿಸಿದೆವು. ಅವರಲ್ಲಿ 290 ಪುರುಷರು, 147 ಮಹಿಳೆಯರು ಇದ್ದರು. ಇವರಲ್ಲಿ ಸಂದರ್ಶಕರು ಬೇರೆ ಬೇರೆ ಧರ್ಮದವರಾಗಿದ್ದರೆಂಬುದು ಸ್ವಾರಸ್ಯಕರ ವಿಷಯ. ಇವರಲ್ಲಿ ಐವರು ಮುಸ್ಲಿಂ ಹಾಗೂ ನಾಲ್ವರು ಕ್ರೈಸ್ತರಿದ್ದರು. ಚಾಮುಂಡೇಶ್ವರಿ ಬೆಟ್ಟ ಸಂದರ್ಶಿಸಲು ಇವರ ಪ್ರಮುಖ ಆಸಕ್ತಿಯು ಪ್ರೇಕ್ಷಣೀಯ ಸ್ಥಳ ನೋಡುವುದಾಗಿತ್ತು. ಮುಸ್ಲಿಂ ಹಾಗೂ ಕ್ರೈಸ್ತ ಸಂದರ್ಶಕರು ಮೈಸೂರಿನವರಾಗಿರಲಿಲ್ಲ.

ನಾವು ಸಂಪರ್ಕಿಸಿದ ಹಿಂದೂ ದರ್ಶನಾರ್ಥಿಗಳಲ್ಲಿ ಕೆಲವರು ಆಂಧ್ರ ಪ್ರದೇಶ, ಅಸ್ಸಾಂ, ಕೇರಳ, ಮದ್ರಾಸ್ ಹಾಗೂ ಮಹಾರಾಷ್ಟ್ರಗಳಿಂದ ಬಂದಿದ್ದರು. ಕೆಲವರು ಮೈಸೂರು ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದರೆ, ಬಹುಪಾಲು ಸಂದರ್ಶಕರು ನಗರದವರೇ ಆಗಿದ್ದರು.

ಮೈಸೂರು ನಗರದ ದರ್ಶನಾರ್ಥಿಗಳಲ್ಲಿ ಸುಮಾರು ಶೇಕಡ 25 ರಷ್ಟು ಜನ ಕಾಲ್ನಡಿಗೆಯಿಂದ ಬಂದಿದ್ದರು. ದೇವಸ್ಥಾನಕ್ಕೆ ಕಾಲ್ನಡಿಗೆಯಿಂದ ಮುಟ್ಟಿದವರಲ್ಲಿ ಇಬ್ಬರು ಸಾಧುಗಳಿದ್ದರು. ಒಬ್ಬ ಸಾಧು ಹೃಷಿಕೇಶ ಶಂಕರಾಚಾರ್ಯ ಮಠದ ದಶನಾಮಿ ಪಂಥಕ್ಕೆ ಸೇರಿದ್ದನು. ಭಾರತದ ವಿವಿಧ ಕ್ಷೇತ್ರಗಳಿಗೆ ಹೋಗುವ ತೀರ್ಥಯಾತ್ರೆ ಅಂಗವಾಗಿ ಅವನು ದೇವಸ್ಥಾನ ಸಂದರ್ಶಿಸಿದ್ದನು. ಆಂಧ್ರಪ್ರದೇಶದ ಇನ್ನೊಬ್ಬ ಸಾಧು ಐಹಿಕಭೋಗವನ್ನು ತ್ಯಜಿಸಿ ದಶನಾಮಿ ಪಂಥದ ಸನ್ಯಾಸಿಯಾಗಿದ್ದನೆಂದು ಹೇಳಿದನು. ಅವನು ದಕ್ಷಿಣ ಭಾರತದ ವಿವಿಧ ಸ್ಥಳಗಳನ್ನು ಸಂದರ್ಶಿಸುತ್ತಿದ್ದು ನಂತರ ತನ್ನ ಗುರುವನ್ನು ಕಾಣಲು ಹೃಷಿಕೇಶಕ್ಕೆ ಹೋಗುವವನಿದ್ದನು.

## ಪೂಜೆಯ ಉದ್ದೇಶ :

ನಾವು ಸಂಪರ್ಕಿಸಿದ ದರ್ಶನಾರ್ಥಿಗಳಲ್ಲಿ ಎಷ್ಟೋ ಜನರು ಭಕ್ತಿ ಹಾಗೂ ಸಾಂಸ್ಕೃತಿಕ ರಮ್ಯದೃಶ್ಯಗಳನ್ನು ನೋಡುವ ದ್ವಿವಿಧ ಉದ್ದೇಶಗಳಿಂದ ಬಂದವ ರಾಗಿದ್ದರು. ಆದರೆ ನಾವು ವಿಶಿಷ್ಟ ಉದ್ದೇಶದಿಂದ ಪ್ರೇರಿತರಾಗಿ ಪೂಜೆ ಸಲ್ಲಿಸಲು ಬಂದ ಕೆಲವು ಭಕ್ತರನ್ನು ಕೂಡ ಕಂಡೆವು. ವಿವಿಧ ಉದ್ದೇಶಗಳೆಂದರೆ 1) ಹೊಸ ಕಾರನ್ನು ಕೊಂಡಾಗ, 2) ನಂಜನಗೂಡಿನ ನಂಜುಂಡೇಶ್ವರ ಕ್ಷೇತ್ರಕ್ಕೆ ಮುಡಿ ಅರ್ಪಿಸಿ ಹಿಂದಿರುಗುವಾಗ ವಾಡಿಕೆಯಂತೆ ಚಾಮುಂಡಿ ದೇವಸ್ಥಾನ ಸಂದರ್ಶಿಸುವುದು.



3) ವಿವಾಹದ ನಂತರ ಅಥವಾ ಮನೆಯಲ್ಲಿ ಶಿಶುವಿನ ಜನನದ ಮಂಗಳಕರ ಸಂದರ್ಭದಲ್ಲಿ, 4) ಕಣ್ಣು ಬೇನೆಯಿಂದ ಬಳಲಿದ ಭಕ್ತನು ದೇವತೆಯ ಕೃಪೆಯಿಂದ ಗುಣ ಹೊಂದಿದಾಗ ದೇವತೆಯ ಬೆಳ್ಳಿ ಕಣ್ಣುಗಳನ್ನು ಅರ್ಪಿಸಲು ಹಾಗೂ 5) ದೇವತೆಗೆ ಮುಡಿ ಅರ್ಪಿಸುವುದಾಗಿ ಹೊತ್ತ ಹರಕೆಯನ್ನು ಪೂರೈಸಲು.

ಕಾರು ಕೊಂಡ ಸಂದರ್ಭದಲ್ಲಿ ಭಕ್ತರು ಶಿವಾರ್ಚಕ ಪೂಜಾರಿಯಿಂದ ಪೂಜೆ ಏರ್ಪಡಿಸುತ್ತಾರೆ. ಆಗ ದೇವತೆಗೂ ಸಹಿತ ಪೂಜೆ ಸಲ್ಲಿಸುತ್ತಾರೆ. ಮೇಲೆ ಹೇಳಿದ ಮೂರು (2:3:4) ಸಂದರ್ಭಗಳಲ್ಲಿ ಭಕ್ತರು ದೇವತೆಗೆ ಪೂಜೆ ಸಲ್ಲಿಸಲು ವ್ಯವಸ್ಥೆ ಮಾಡಿರುತ್ತಾರೆ. ಆದರೆ ಕೊನೆಯ ಸಂದರ್ಭವಾದ ಮುಡಿ ಅರ್ಪಿಸುವಲ್ಲಿ ಭಕ್ತರು ಪಶುಬಲಿ ಕೊಡುವ ವ್ಯವಸ್ಥೆಯನ್ನು ಮಾಡಿರುತ್ತಾರೆ. ಇಂತಹ ಘಟನೆ ನಮ್ಮ ಅವಗಾಹನೆಗೆ ಬಂದ ಮೂಲಕ ವಾಡಿಕೆಯ ಪೂಜಾ ಪದ್ಧತಿ ಹಾಗೂ ಬಲಿ ಕೊಡುವ ಪದ್ಧತಿ ವ್ಯತ್ಯಾಸವನ್ನು ವರ್ಣಿಸಿದ್ದೇವೆ.

ಶಿವಮೊಗ್ಗ ಜಿಲ್ಲೆಯ ಗ್ರಾಮವೊಂದರ ಬೋಯಿ ಜಾತಿ ಭಕ್ತನು ತನ್ನ ಮಗನ ಮುಡಿ ಕೊಡುವ ಹರಕೆಯನ್ನು ಪೂರೈಸಲು ದೇವಸ್ಥಾನಕ್ಕೆ ಬಂದಿದ್ದನು. ಅವನ ಮನೆತನದಲ್ಲಿ ದೇವತೆಗೆ ಮುಡಿ ಕೊಡುವ ಪದ್ಧತಿಯನ್ನು ಅವನ ತಂದೆಯು ಪ್ರಾರಂಭಿಸಿದ್ದನು. ಏಕೆಂದರೆ ಇವನ ತಂದೆಗೆ ದೇವಿಯ ಕೃಪೆಯಿಂದ ಮಗನು (ಈ ಭಕ್ತನು) ಹುಟ್ಟಿದ್ದನು. ಆದ್ದರಿಂದ ಈ ಭಕ್ತನು ಪ್ರತಿಸಲ ಮಗು ಜನಿಸಿದಾಗ ಈ ಪದ್ಧತಿಯನ್ನು ಮುಂದುವರೆಸಿಕೊಂಡು ಬಂದಿದ್ದಾನೆ. ಈ ಸಲ ಅವನು ತನ್ನ ಮೂರನೇ ಮಗುವಿನ ಮುಡಿ ಕೊಡುವ ಸಮಾರಂಭವನ್ನು (ಹರಕೆ) ಪೂರೈಸಲು ಬಂದಿದ್ದನು. ದೇವಿ ಕೆರೆಯ ಹತ್ತಿರ (ದೇವತೆಯ ಕ್ರಿಯಾವಿಧಿಗಳನ್ನು ನೆರವೇರಿಸಲು ಜಕಣಿ) ನೆರೆಯ ಗ್ರಾಮದ ಕ್ಷೌರಿಕನಿಂದ ಮಗುವಿನ ಮುಡಿ ತೆಗೆಯುವ ವ್ಯವಸ್ಥೆ ಮಾಡಿದ್ದನು. ಪ್ರತಿಯೊಬ್ಬರೂ ಜಕಣಿಯಲ್ಲಿ ಸ್ನಾನ ಮಾಡಿದ್ದರು. ಪೂಜಾ ಸಾಮಗ್ರಿಗಳನ್ನು ಕೊಟ್ಟು ದೇವಸ್ಥಾನದಲ್ಲಿ ಪೂಜೆಯ ಹಾಗೂ ಕುಂಕುಮ ಅಷ್ಟೋತ್ತರ ಕ್ರಿಯಾವಿಧಿಗಳನ್ನು ಸಹ ಏರ್ಪಾಡು ಮಾಡಿದ್ದನು. ಇದು ಮುಗಿದ ನಂತರ ಬಂಡಿಕಾರನಿಗೆ ಹೋತವನ್ನು ಕೊಟ್ಟನು. ಅವನು ಪಶುವನ್ನು ಪ್ರಮುಖ ಪ್ರವೇಶ ದ್ವಾರದ ಬಳಿ ತಂದು ಅದರ ಕುತ್ತಿಗೆ ಹಾಗೂ ಕಾಲುಗಳನ್ನು ಕಡಿದನು. ನಂತರ ಇಂತಹ ಬಲಿ ಸಂಪ್ರದಾಯದಲ್ಲಿ ಮಾಡುವಂತೆ ಬಲಿಪಶುವಿನ ಕಾಲನ್ನು ಅದರ ಬಾಯಿಯಲ್ಲಿ ತುರುಕಿದನು. ಭಕ್ತರೆಲ್ಲರು ತಮ್ಮ ಬೆರಳುಗಳಿಂದ ಬಲಿಪಶುವಿನ ರಕ್ತವನ್ನು ಹಣೆಗಿಟ್ಟುಕೊಂಡರು. ನಂತರ ಅವರು ಪಶುವಿನ ಮಾಂಸವನ್ನು ಬೇಯಿಸಿ ತಿಂದರೆಂದು ಹೇಳಲಾಯಿತು. ಪಶುಬಲಿ ಕೊಡುವುದು ಸಾಮಾನ್ಯವಾಗಿ ಬೆಟ್ಟದ ಅಡಿಯಲ್ಲಿ ನಡೆಯುತ್ತಿದ್ದರೂ ಮೇಲೆ ಉಲ್ಲೇಖಿಸಿದ ಘಟನೆಗಳು ತೀರ ವಿರಳವೆಂಬುದನ್ನು ಗಮನಿಸಬಹುದು.

## ಉತ್ಸವ ಸಂದರ್ಭದಲ್ಲಿ ಭಕ್ತರ ಉಪಸ್ಥಿತಿ :

ವಾರ್ಷಿಕ ರಥೋತ್ಸವ ಹಾಗೂ ತೆಪ್ಪೋತ್ಸವ ಕಾಲದಲ್ಲಿ ಚಾಮುಂಡಿ ಬೆಟ್ಟದ ಗ್ರಾಮದ ಜನ ಮನೆಯಲ್ಲಿ ಭಕ್ತರನ್ನು ಅತಿಥಿಗಳೆಂದು ಬರಮಾಡಿಕೊಳ್ಳುತ್ತಾರೆ. ಉದಾಹರಣೆಗೆ : ಒಬ್ಬ ಶಿವಾರ್ಚಕನ ಮನೆಯಲ್ಲಿ ನೆರೆಗ್ರಾಮಗಳಿಂದ ಬಂದ ಸುಮಾರು 15 ಜನ ಅತಿಥಿಗಳನ್ನು ನಾವು ಕಂಡೆವು. ಬ್ರಾಹ್ಮಣರ ಮನೆಯಲ್ಲಿಯೂ ಕೂಡ ಎಷ್ಟೋ ಜನ ಅತಿಥಿಗಳಿದ್ದರು. ಬೆಟ್ಟದಲ್ಲಿ ವೈಶ್ಯ

ಭಕ್ತನ ಛತ್ರವಿದ್ದು ಅದು ಸಹಿತ ಆ ದಿವಸಗಳಲ್ಲಿ ವೈಶ್ಯಭಕ್ತರಿಂದ ತುಂಬಿರುತ್ತದೆ. ಕೆಲವು ರಾಜಪರಿವಾರದ ಸಿಬ್ಬಂದಿಯವರು ನೆರೆಯ ಗ್ರಾಮಗಳಿಂದ ಹಾಗೂ ಮೈಸೂರು ನಗರದಿಂದ ಬಂದ ತಮ್ಮ ಬಂಧುಗಳ ಹಾಗೂ ಮಿತ್ರರು ತಮ್ಮೊಡನೆ ಇಂತಹ ಸಂದರ್ಭಗಳಲ್ಲಿ ಇರುವುದಾಗಿ ತಿಳಿಸಿದರು. ಈ ಸಂದರ್ಭಗಳಲ್ಲಿ ಮೈಸೂರು ನಗರದ ವಿವಿಧ ಭಾಗಗಳಿಂದ ಭಕ್ತರು ಬಹು ಸಂಖ್ಯೆಯಲ್ಲಿ ಕಲೆಯುತ್ತಾರೆ. ರಥೋತ್ಸವ ಹಾಗೂ ತೆಪ್ಪೋತ್ಸವಗಳನ್ನು ವೀಕ್ಷಿಸಲು ಮೈಸೂರು ನಗರ ಸುತ್ತಮುತ್ತಲಿನ ಹಾಗೂ ನೆರೆಹೊರೆಯ ಸ್ಥಳಗಳಿಂದ ಬರುವ ಭಕ್ತರ ಅನುಕೂಲಕ್ಕಾಗಿ ವಿಶೇಷ ಸರಕಾರಿ ಹಾಗೂ ಖಾಸಗಿ ಬಸ್ಸುಗಳ, ರೈಲುಗಳ ವ್ಯವಸ್ಥೆ ಮಾಡಲಾಗಿರುತ್ತದೆ. ಮೈಸೂರು ಮಹಾರಾಜರು ದೇವತೆಯ ಕ್ರಿಯಾವಿಧಿಗಳಾದ ದೇವಿಯ ರಥವನ್ನು ಕೆಲವು ಹೆಜ್ಜೆಗಳವರೆಗೆ ಎಳೆಯುವುದು ಹಾಗೂ ವರ್ಣರಂಜಿತ ತೆಪ್ಪೋತ್ಸವವನ್ನು ವೀಕ್ಷಿಸುವುದು ಭಕ್ತರಿಗೆ ಹಾಗೂ ಪ್ರವಾಸಿಗರಿಗೆ ಹೆಚ್ಚಿನ ಆಕರ್ಷಣೆಯಾಗಿದೆ.

ಈ ಅಂಶಗಳು ಚಾಮುಂಡೇಶ್ವರಿ ಬಗೆಗಿರುವ ನಂಬಿಕೆಯ, ಧಾರ್ಮಿಕತೆಯ ವ್ಯಾಪ್ತಿಯನ್ನು ಹೆಚ್ಚಿಸಲು ಹಾಗೂ ಪಸರಿಸಲು ಕಾರಣೀಭೂತವಾಗಿವೆ. ಇವೆಲ್ಲ ದೇವಸ್ಥಾನದ ದೂರದ ಪ್ರದೇಶಗಳಿಗೆ ಖ್ಯಾತಿ ಹರಡುವಂತೆ ಮಾಡಿದೆ. ಪ್ರತಿದಿವಸ ಸಂದರ್ಶಿಸುವ ಅಥವಾ ವಾರ್ಷಿಕ ಉತ್ಸವಗಳಿಗೆ ತಮ್ಮ ಪ್ರಾರ್ಥನೆ ಸಲ್ಲಿಸಲು ಬರುವ ಚಾಮುಂಡೇಶ್ವರಿ ಭಕ್ತರು ಹಾಗೂ ಪ್ರವಾಸಿಗರು ದೇವತೆಯ ಪ್ರಸಾದ, ಭಾವಚಿತ್ರ ಮುಂತಾದವುಗಳನ್ನು ಒಯ್ಯುವುದರ ಮೂಲಕ ವಿಶೇಷವಾಗಿ ದೇವತೆಯ ನಂಬಿಕೆಯನ್ನು ಪಸರಿಸುವ ಪ್ರತಿನಿಧಿಗಳಾಗಿದ್ದಾರೆ.

## ಗ್ರಾಮೀಣ ಒಳಪ್ರದೇಶದಲ್ಲಿ ಚಾಮುಂಡೇಶ್ವರಿ ದೇವತೆಯ ಉಪಾಸನೆ :

ಹೆಚ್ಚು ಸಮೀಪದ ಒಳನಾಡಿನಲ್ಲಿ ಚಾಮುಂಡೇಶ್ವರಿ ಪೂಜೆಯ ಸ್ವರೂಪ ಹಾಗೂ ಸಾಂಸ್ಕೃತಿಕ ಸಂಪ್ರದಾಯಗಳ ಹರವು ತಿಳಿಯುವ ಉದ್ದೇಶದಿಂದ ಬೆಟ್ಟದ ಸುತ್ತಲಿನ ಇಪ್ಪತ್ತು ಗ್ರಾಮಗಳ ಸಮೀಕ್ಷೆಯನ್ನು ನಾವು ಕೈಗೊಂಡಿವು. ಬೆಟ್ಟ ಹಾಗೂ ಮೈಸೂರು ನಗರವನ್ನು ಒಳಗೊಳ್ಳುವಂತೆ ಈ ಗ್ರಾಮಗಳನ್ನು ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಪ್ರಾರಂಭದಲ್ಲಿ ನಾವು ಸೂಚಿಸಿದ ಕೆಲವು ಅಂಶಗಳನ್ನು ವಿವರಿಸಲು ಹಾಗೂ ನಮ್ಮ ಅಭ್ಯಾಸದ ದೃಷ್ಟಿಯಿಂದ ಈ ಆಯ್ಕೆ ಅನಿವಾರ್ಯವೆಂದು ಪರಿಗಣಿಸಲಾಯ್ತು. ನಾವು ಸಮೀಕ್ಷಿಸಿದ ಗ್ರಾಮಗಳಲ್ಲಿ ದೇವಿ ಪೂಜೆಯ ಸ್ವರೂಪ ಹಾಗೂ ಕಲ್ಪನೆಯ ಯಥಾರ್ಥವಾದ ಸಂಕ್ಷಿಪ್ತ ವಿವರಣೆ ಕೆಳಗಿನಂತಿದೆ.

ಒಟ್ಟಿಗೆ ನಾವು ಇಪ್ಪತ್ತು ಗ್ರಾಮಗಳನ್ನು ಸಮೀಕ್ಷಿಸಿದೆವು. ಗಣ್ಯರಾದ ಗ್ರಾಮದ ಮುಖ್ಯಸ್ಥ, ಪಂಚಾಯಿತಿ ಸದಸ್ಯರು ಹಾಗೂ ಕೆಲವು ವಯೋವೃದ್ಧರನ್ನು ಸಂಪರ್ಕಿಸಿದೆವು. ಚಾಮುಂಡೇಶ್ವರಿ ಆರಾಧನೆಯ ಬಗ್ಗೆ ತಿಳಿದ ವಿಷಯ ಚರ್ಚೆಯ ಸ್ವರೂಪದಲ್ಲಿತ್ತು.

ಕೆಲವು ಪ್ರದೇಶದ ಗ್ರಾಮಗಳಲ್ಲಿ ಕೆಲವೇ ಜಾತಿಗಳು ಸಂಖ್ಯಾಬಲದಿಂದ ಪ್ರಬಲ ರಾಗಿದ್ದುದನ್ನು ನಾವು ಗಮನಿಸಿದೆವು. ನಾವು ಸಮೀಕ್ಷಿಸಿದ ಇಪ್ಪತ್ತು ಗ್ರಾಮಗಳಲ್ಲಿ ಸಂಖ್ಯಾತ್ಮಕ ಪ್ರಬಲ ಜಾತಿಗಳ ಸಾಮಾನ್ಯ ರೂಪರೇಷೆಯ ಚಿತ್ರ ಈ ರೀತಿಯಿದೆ:



1) ಉತ್ತರ ಹಾಗೂ ವಾಯುವ್ಯ ದಿಕ್ಕಿನಲ್ಲಿರುವ ಆರು ಗ್ರಾಮಗಳಲ್ಲಿ ಒಕ್ಕಲಿಗರು ಬಹುಸಂಖ್ಯೆಯಲ್ಲಿದ್ದಾರೆ. 2) ಆಗ್ನೇಯ ಹಾಗೂ ಈಶಾನ್ಯ ದಿಕ್ಕಿನಲ್ಲಿರುವ ಐದು ಗ್ರಾಮಗಳಲ್ಲಿ ಲಿಂಗಾಯಿತರು ಬಹುಸಂಖ್ಯಾತರಿದ್ದಾರೆ. 3) ಉತ್ತರ ದಿಕ್ಕಿಗಿರುವ ಒಂದು ಗ್ರಾಮದಲ್ಲಿ ರಾಜ ಪರಿವಾರದವರು ಬಹುಸಂಖ್ಯೆಯಲ್ಲಿದ್ದಾರೆ. ಆದರೆ ಇವಲ್ಲದೆ ಬೇರೆ ಕೆಲ ಜಾತಿಯ ಜನರು ಕೆಲವು ಗ್ರಾಮಗಳಲ್ಲಿ ಬಹುಸಂಖ್ಯಾತ ಪ್ರಬಲರಾಗಿದ್ದಾರೆ. ಉದಾಹರಣೆಗೆ : ಬೇರೆ ಬೇರೆ ದಿಕ್ಕುಗಳಲ್ಲಿ ಇರುವ ನಾಲ್ಕು ಗ್ರಾಮಗಳಲ್ಲಿ ಆದಿಕರ್ನಾಟಕ (ಅಸ್ಪೃಶ್ಯರು), ಮೂರು ಗ್ರಾಮಗಳಲ್ಲಿ ಕುರುಬರು ಬಹುಸಂಖ್ಯಾತ ರಾಗಿದ್ದಾರೆ. ಬೆಟ್ಟದ ನೈಋತ್ಯ ದಿಕ್ಕಿನಲ್ಲಿರುವ ಒಂದು ಗ್ರಾಮದಲ್ಲಿ ವಡ್ಡರು ಬಹುಸಂಖ್ಯಾತ ಪ್ರಬಲ ಜಾತಿಯವರಾಗಿದ್ದಾರೆ.

## ದೇವತೆಯ ಗ್ರಹಿಕೆ :

ಚಾಮುಂಡೇಶ್ವರಿ ದೇವಿಯು ದುಷ್ಟರಿಂದ ಮಾನವ ಜನಾಂಗವನ್ನು ರಕ್ಷಿಸಲು ಹುಟ್ಟಿದ, ಶಿವನ ಹೆಂಡತಿಯಾದ ಪಾರ್ವತಿಯ ಅವತಾರ ಎಂದು ಗ್ರಾಮಗಳಲ್ಲಿಯ ಜನ ಗ್ರಹಿಸಿದ್ದಾರೆ. ಕೆಲವರು ಪಾರ್ವತಿಯು ಮೈಸೂರು ಮಹಾರಾಜರ ಕುಲದೇವತೆ ಯಾದ ಕಾರಣ ಅವಳಿಗೆ (ಚಾಮುಂಡೇಶ್ವರಿಗೆ) ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಹಳ್ಳಿಗಳಲ್ಲಿದ್ದ ಇನ್ನೊಂದು ಪ್ರಚಲಿತ ಭಾವನೆಯೆಂದರೆ ಮಹಿಷಾಸುರನೆಂಬ ರಾಕ್ಷಸನನ್ನು ಕೊಂದ ದೇವಿಯು ಜನರ ಅದೃಷ್ಟವನ್ನು ನಿರ್ದೇಶಿಸುವ ಮಾತ್ರ ದೇವತೆಯಾಗಿದ್ದಾಳೆ. ಮೇಲೆ ವರ್ಣಿಸಿದಂತೆ ದೇವಿಯ ಬಗೆಗೆ ಕೆಲವರು ಹೇಳಿದರೂ ಸಹ ಕೆಲವು ಆದಿಕರ್ನಾಟಕ ಜಾತಿಯವರು ತಮಗೆ ದೇವಿ ಯಾರೆಂಬುದರ ಬಗೆಗೆ ಗೊತ್ತಿಲ್ಲವೆಂದೇ ಹೇಳಿದರು.

ನಾವು ಸಮೀಕ್ಷೆ ಮಾಡಿದ ಇಪ್ಪತ್ತು ಗ್ರಾಮಗಳಲ್ಲಿ ಕೇವಲ ಎರಡರಲ್ಲಿ ಚಾಮುಂಡೇಶ್ವರಿ ದೇವಿಯ ಪೋಷಕ ಕುಟುಂಬಗಳಿದ್ದುದು ಕಂಡುಬಂದಿತು. ಪೋಷಕ ಕುಟುಂಬಗಳು ಒಕ್ಕಲಿಗ, ಶಿವಾರ್ಚಕ, ಆಚಾರಿ, ವೈಶ್ಯ, ರಾಜಪರಿವಾರ, ವಡ್ಡರು, ಆದಿಕರ್ನಾಟಕ (ಅಸ್ಪೃಶ್ಯರು) ಜಾತಿಯವರು ಮತ್ತು ಲಿಂಗಾಯಿತ ಮತದವರೂ ಸಹಿತ ಆಗಿದ್ದಾರೆ. ಈ ಎಲ್ಲ ಜಾತಿಗಳಲ್ಲಿ ಒಕ್ಕಲಿಗ ಜಾತಿ ಪೋಷಕ ಕುಟುಂಬಗಳು ಹೆಚ್ಚು ಸಂಖ್ಯೆಯಲ್ಲಿದ್ದುದು ಕಂಡುಬಂದಿತು.

## ಪೋಷಕ ಕುಟುಂಬಗಳು :

ಮೂರನೇ ಅಧ್ಯಾಯದಲ್ಲಿ ನಾವು ವರ್ಣಿಸಿದಂತೆ ಪೋಷಕ ಕುಟುಂಬಗಳಿಗೆ ಬ್ರಾಹ್ಮಣೇತರ ಕ್ರಿಯಾವಿಧಿ ಪರಿಣಿತರಾದ ಅರ್ಥಾತ್ ಶಿವಾರ್ಚಕರೊಂದಿಗೆ ಸಮೀಪದ ಬಳಕೆಯಿರುತ್ತದೆ. ನಾವು ಸಮೀಕ್ಷಿಸಿದ ಇಪ್ಪತ್ತು ಗ್ರಾಮಗಳಲ್ಲಿ ಚಾಮುಂಡಿ ಬೆಟ್ಟದ ಕೇವಲ ಎರಡು ಗ್ರಾಮಗಳು ಶಿವಾರ್ಚಕ ಕ್ರಿಯಾವಿಧಿ ಪರಿಣಿತರು ಪೋಷಕ ಕುಟುಂಬಗಳೊಂದಿಗೆ ಸಂಪರ್ಕವಿಟ್ಟುಕೊಂಡದ್ದು ತಿಳಿದುಬಂದಿತು. ಒಂದು ಗ್ರಾಮದಲ್ಲಿ ತಿಳಿದುಬಂದ ಅಂಶವೆಂದರೆ ಕೆಲವು ವರ್ಷಗಳ ಹಿಂದೆ ಚಾಮುಂಡಿ ಬೆಟ್ಟದ ಶಿವಾರ್ಚಕ ಪೂಜಾರಿಯು ಆ ಗ್ರಾಮಕ್ಕೆ ಭೇಟಿ ಕೊಟ್ಟಿದ್ದನು. ಆದರೆ ಕಳೆದ ಹತ್ತು ವರ್ಷಗಳಿಂದ ಅವನು ಬರುವುದನ್ನು ನಿಲ್ಲಿಸಿದ್ದಾನೆ. ಪೋಷಕ ಕುಟುಂಬಗಳಿಗೆ ಸೇವೆ ಸಲ್ಲಿಸುವುದನ್ನು ಬಿಟ್ಟ ಕಾರಣಗಳು ನಮಗೆ ವಿವರ ನೀಡಿದವನಿಗೆ ಗೊತ್ತಿಲ್ಲ. ಇನ್ನೊಂದು ಗ್ರಾಮದಲ್ಲಿ

ಒಕ್ಕಲಿಗ ಪೋಷಕ ಕುಟುಂಬವು 3 ಅಥವಾ 4 ವರ್ಷಗಳಿಗೊಮ್ಮೆ ನಡೆಯುವ ಚಾಮುಂಡೇಶ್ವರಿ ದೇವಿಯ ದೊಡ್ಡ ಹಬ್ಬದ ವೇಳೆಗೆ ಅಥವಾ ಮನೆಯಲ್ಲಿ ಹಿರಿಯ ಮಗನ ವಿವಾಹದ ಕಾಲಕ್ಕೆ ಬೆಟ್ಟದ ಶಿವಾರ್ಚಕ ಪೂಜಾರಿಯಿಂದ ಹಾಗೂ ಬೆಟ್ಟದ ಅಡಿಯಲ್ಲಿರುವ ಕುರುಬರ ಹಳ್ಳಿಯ ಒಕ್ಕಲಿ ಜಾತಿಯ ಪೂಜಾರಿಯಿಂದಲೂ ಸೇವೆ ಪಡೆಯುತ್ತದೆ.

**ಚಾಮುಂಡೇಶ್ವರಿ ಉತ್ಸವದ ಆಚರಣೆ :**

ನಾವು ಈಗಾಗಲೇ ಗಮನಿಸಿದಂತೆ ಚಾಮುಂಡೇಶ್ವರಿ ಉತ್ಸವವು ಗ್ರಾಮಗಳಲ್ಲಿ ಎರಡು ವಿಧವಾಗಿ ಆಚರಿಸಲ್ಪಡುತ್ತದೆ. ದೇವತೆಯ ಪೋಷಕ ಕುಟುಂಬಗಳು ಉತ್ಸವವನ್ನು ತಮ್ಮ ಅನುಕೂಲತೆ ಪ್ರಕಾರ ಎಷ್ಟೋ ವರ್ಷಗಳಿಗೊಮ್ಮೆ ಆಚರಿಸುತ್ತಾರೆ. ವಿವಾಹ ಇಲ್ಲವೇ ಗೃಹ ಪ್ರವೇಶದಂತಹ ಸಮಾರಂಭಗಳಲ್ಲಿ ನಿಶ್ಚಿತವಾಗಿ ಆಚರಿಸುತ್ತಾರೆ. ಇಂತಹ ಹಬ್ಬಕ್ಕೆ 'ದೊಡ್ಡ ಹಬ್ಬ' ಎಂದು ಹೆಸರು. ಚಾಮುಂಡೇಶ್ವರಿ ಹಬ್ಬವೆಂಬ (ಚಾಮುಂಡೇಶ್ವರಿ ದೇವತೆಯ ಗೌರವಾರ್ಥವಾಗಿ ಆಚರಿಸುವ ಹಬ್ಬ) ಇನ್ನೊಂದು ಬಗೆಯ ಉತ್ಸವವು ಸಮುದಾಯ ಹಬ್ಬವಾಗಿದೆ. ಈ ಎರಡೂ ಪ್ರಕಾರದ ಹಬ್ಬಗಳ ಪ್ರಧಾನ ಲಕ್ಷಣಗಳನ್ನು ಮತ್ತು ವ್ಯತ್ಯಾಸಗಳನ್ನು ವರ್ಣಿಸಿದ್ದೇವೆ.

**ದೊಡ್ಡ ಹಬ್ಬ:**

ಮೂರು ಗ್ರಾಮಗಳ ಪೋಷಕ ಕುಟುಂಬಗಳು ದೊಡ್ಡಹಬ್ಬವನ್ನು ಆಚರಿಸುತ್ತವೆ. ಪ್ರತಿ ಗ್ರಾಮದ ಆಚರಣೆಯಲ್ಲಿ ಕೆಲವು ವ್ಯತ್ಯಾಸಗಳು ಇವೆ. ಈ ಗ್ರಾಮಗಳಲ್ಲಿ ನಡೆಯುವ ಪವಿತ್ರ ಕ್ರಿಯಾವಿಧಿಗಳನ್ನು ಹಾಗೂ ಅವುಗಳಲ್ಲಿಯ ವ್ಯತ್ಯಾಸಗಳನ್ನು ವಿವರಿಸುವುದಕ್ಕಾಗಿ ನಾವು ಮೂರು ಪ್ರತ್ಯೇಕ ಘಟನೆಗಳೆಂದು ಬೇರ್ಪಡಿಸಿ ವರ್ಣಿಸಿದ್ದೇವೆ:

**ಸಂದರ್ಭ ಒಂದು :**

ಚಾಮುಂಡಿ ಬೆಟ್ಟದಿಂದ ಸುಮಾರು ಆರು ಮೈಲು ದೂರವಿರುವ ಈ ಗ್ರಾಮದಲ್ಲಿ ಒಕ್ಕಲಿಗ ಜಾತಿಯ ಇಪ್ಪತ್ತು ಪೋಷಕ ಕುಟುಂಬಗಳಿವೆ. ಪೋಷಕನ ಗೃಹದಲ್ಲಿ ವಿವಾಹದಂತಹ ಮಹತ್ವದ ಸಂದರ್ಭಗಳಲ್ಲಿ ಬಂಧು-ಬಳಗದವರನ್ನು ಆಮಂತ್ರಿಸಿ ದೊಡ್ಡ ಹಬ್ಬವನ್ನು ಆಚರಿಸುವ ವ್ಯವಸ್ಥೆ ಮಾಡಲಾಗುತ್ತದೆ. ಪೋಷಕನ ಮನೆಯಲ್ಲಿ ದೇವತೆಯನ್ನು ಪ್ರತಿಷ್ಠಾಪಿಸಲು ಯೋಗ್ಯವಾದ ಸ್ಥಳಗಳನ್ನು ಆಚರಿಸಲಾಗುತ್ತದೆ. ದೇವತೆಯ ಸಂಕೇತವಾದ ಕಲಶವನ್ನು (ಲೋಹದ ಪಾತ್ರೆ) ಗ್ರಾಮದ ಸಮೀಪವಿರುವ ಹಳ್ಳದ ಬದಿಯಲ್ಲಿ ಸಾಮಾನ್ಯವಾಗಿ ಪ್ರತಿಷ್ಠಾಪಿಸಲಾಗುತ್ತದೆ. ಪೋಷಕ ಕುಟುಂಬಕ್ಕೆ ಸಂಬಂಧಪಟ್ಟ ಚಾಮುಂಡಿ ಬೆಟ್ಟದ ಶಿವಾರ್ಚಕ ಪೂಜಾರಿಯನ್ನು ಇಂತಹ ಸಂದರ್ಭಗಳಲ್ಲಿ ಗದ್ದಿಗೆ ದೇವತೆಯೊಂದಿಗೆ ಬಂದು ಪೌರೋಹಿತ್ಯ ನಡೆಸಲು ಆಮಂತ್ರಿಸಲಾಗುವುದು. ಕಲಶವನ್ನು ಅಡಕೆ ಹೂಗಳಿಂದ, ವೀಳ್ಯದೆಲೆ ಹಾಗೂ ತೆಂಗಿನಕಾಯಿಯಿಂದ ಪ್ರತಿಷ್ಠಾಪನೆ ಮಾಡಲಾಗುತ್ತದೆ. ಬೆಟ್ಟದ ಶಿವಾರ್ಚಕನು ಅಂತಹ ಮತಾಚರಣೆಗಳಲ್ಲಿ ಪೌರೋಹಿತ್ಯ ವಹಿಸುವ ಪದ್ಧತಿ ಇದ್ದಿತಾದರೂ ಸುಮಾರು 25 ವರ್ಷಗಳಿಂದ ಗ್ರಾಮಕ್ಕೆ ಆ ಕಾರ್ಯ ಪೂರೈಸಲು ಯಾರೊಬ್ಬರೂ ಹೋಗುತ್ತಿಲ್ಲ. ಆದ್ದರಿಂದ ಒಬ್ಬ ಹಿರಿಯ



ಒಕ್ಕಲಿಗ ಜಾತಿಯವನಿಗೆ ಕ್ರಿಯಾವಿಧಿ ನಡೆಸಲು ಕೇಳಿಕೊಳ್ಳಲಾಗುತ್ತದೆ. ಅಭಿಷಿಕ್ತ ಕಲಶವನ್ನು ಪೋಷಕನ ಮನೆಗೆ ತಂದು ಪ್ರತಿಷ್ಠಾಪಿಸಲಾಗುವುದು. ಪೋಷಕನ ಮನೆಯಿಂದ ಕಲಶದೇವತೆಯನ್ನು ಗ್ರಾಮದ ಅಸ್ಪೃಶ್ಯ ಜಾತಿಯ ಹಾಗೂ ಮೈಸೂರು ನಗರದಿಂದ ಸಂಭಾವನೆ ಕೊಟ್ಟು ತಂದ ವಾದ್ಯಗಾರರೊಂದಿಗೆ ಮೆರವಣಿಗೆಯಲ್ಲಿ ಗ್ರಾಮದ ಪ್ರದಕ್ಷಿಣೆಗೆ ಒಯ್ಯಲಾಗುತ್ತದೆ. ಋತುಮತಿಯಾಗದ ಅವಿವಾಹಿತ ಹುಡುಗಿಯು ಕಲಶ ದೇವತೆಯನ್ನು ತಲೆಯ ಮೇಲೆ ಒಯ್ಯುವಳು. ಈ ವಿಶಿಷ್ಟ ಆಚರಣೆಗೆ ಗ್ರಾಮದಲ್ಲಿ ಕಣ್ಣಕನ್ನಡಿಯೆಂದು ಹೆಸರು. ಕಲಶವನ್ನು ಮರಳಿ ಮನೆಗೆ ತಂದು ನಂತರ ಹೋತಗಳ ಬಲಿ ಅರ್ಪಿಸಲಾಗುತ್ತದೆ. ಪೋಷಕರಲ್ಲದ ಗ್ರಾಮದ ಇತರ ಭಕ್ತರು ಕಲಶ ದೇವತೆಗೆ ಪೂಜಾ ಸಾಮಾಗ್ರಿಗಳನ್ನು ಅರ್ಪಿಸಬಹುದು. ಕ್ರಿಯಾಚರಣೆಯ ಅಂಗವಾಗಿ ಊಟವನ್ನು ಏರ್ಪಡಿಸಿದಾಗ ಬಲಿಕೊಟ್ಟ ಪಶುವಿನ ಮಾಂಸವನ್ನು ಬಡಿಸಲಾಗುವದು. ಕ್ರಿಯಾವಿಧಿ ಮುಗಿಯಿತು. ಇದು ಗ್ರಾಮದಲ್ಲಿ ಸಾಮಾನ್ಯವಾಗಿ ಹಬ್ಬವನ್ನು ಆಚರಿಸುವ ರೀತಿ ಸ್ವಾರಸ್ಯವಾಗಿದೆ. ಈ ಕುಟುಂಬದ ಜನರು ಭಿನ್ನವಾದ ರೀತಿಯಲ್ಲಿ ಚಾಮುಂಡೇಶ್ವರಿಯ ಆರಾಧನೆ ಮಾಡುವುದು ಎದ್ದು ತೋರುವಂತಿದೆ. ಆ ಯಾಥಾರ್ಥ ಘಟನೆ ಹೀಗಿದೆ.

ಈ ಗ್ರಾಮದ ಪೋಷಕ ಮನೆತನದವರು ಹಾಗೂ ಗ್ರಾಮದ ಮುಖ್ಯಸ್ಥನು ಕಳೆದ 25 ವರ್ಷಗಳಿಂದ ದೊಡ್ಡ ಹಬ್ಬ ಆಚರಿಸುವುದನ್ನು ನಿಲ್ಲಿಸಿದ್ದರು. ಹಬ್ಬದ ಆಚರಣೆಯ ಬದಲಾಗಿ ಅವರು ಬೆಟ್ಟದಲ್ಲಿದ್ದ ಚಾಮುಂಡೇಶ್ವರಿಯ ದೇವಸ್ಥಾನಕ್ಕೆ ಹೋಗುವ ಪರಿಪಾಠ ಹಾಕಿಕೊಂಡಿದ್ದಾರಿ. ಅವರು ದೇವಸ್ಥಾನದಲ್ಲಿಯೇ ಕುಂಕುಮ ಸಹಸ್ರನಾಮ, ರುದ್ರಾಭಿಷೇಕ ಮುಂತಾದ ಕ್ರಿಯಾವಿಧಿಗಳನ್ನು ಅಲ್ಲಿ ನಿಗದಿಪಡಿಸಿದಂತೆ ಆಚರಿಸುವುದಾಗಿ ಹೇಳಿದರು. ಹರಕೆ ಹೊತ್ತಾಗ ಸಾಮಾನ್ಯವಾಗಿ ಉಡಿಗೆ ಹಾಗೂ ವಸ್ತುರೂಪದ ಕಾಣಿಕೆಗಳನ್ನು ಸಹಿತ ಕೊಡುತ್ತಾರೆ. ತಮ್ಮ ಹಣದ ಕಾಣಿಕೆಗಳನ್ನು ದೇವಸ್ಥಾನದ ಗೋಲಕದಲ್ಲಿ ಹಾಕುತ್ತಾರೆ. ಗ್ರಾಮಗಳಿಗೆ ಮರಳುವಾದಾಗ ಆಹಾರ, ಇತರ ಪ್ರಸಾದ ಹಾಗೂ ದೇವತೆಯ ತೀರ್ಥಗಳನ್ನು ಕೊಂಡೊಯ್ಯುತ್ತಾರೆ. ಪ್ರಸಾದವನ್ನು ಅಪೇಕ್ಷಿಸಿದ ದೇವಿಯ ಭಕ್ತರಿಗೆ ಹಂಚುತ್ತಾರೆ.

ದೇವತೆಯ ಈ ಹೊಸವಿಧಾನದ ಪೂಜಾ ಪ್ರಭಾವದಿಂದ ವಿಶೇಷತಃ ಈ ಕುಟುಂಬದ ಸದಸ್ಯರು ಕಟ್ಟುನಿಟ್ಟಾದ ಸಸ್ಯಾಹಾರಿಗಳಾಗಿದದಾರೆಂದು ಹೇಳಲಾಗುತ್ತದೆ. ಅವರ ಜೀವನ ಕ್ರಮದಲ್ಲಿ ಈ ಬದಲಾವಣೆಯನ್ನು ನಮಗೆ ಹೇಳಿದವನ ಅಜ್ಜನು ಸುಮಾರು 25 ವರ್ಷಗಳ ಹಿಂದೆ ತಂದನು. ಇಲ್ಲಿ ಗಮನಿಸಬೇಕಾದ ಅಂಶವೆಮದರೆ ನಮಗೆ ವಿಷಯ ತಿಳಿಸಿದವನ ಮುತ್ತಜ್ಜನು ದೇವಿಯ ಪರಮ ಭಕ್ತನಾಗಿದ್ದನು. ಅವನೇ ಸ್ವತಃ ದೇವಿಯ ಮಹಾತ್ಮೆಯನ್ನು ಆಧರಿಸಿ ದೇವಿಯ ಮಹತ್ಕಾರ್ಯ ಹೊಗಳುವ ಕೆಲವು ಹಾಡುಗಳನ್ನು ಬರೆದಿದ್ದಾನೆ. ಇವುಗಳನ್ನು ಅವನು ತನ್ನ ಗ್ರಾಮದಲ್ಲಿ ಹಾಗೂ ಬೇರೆ ಸ್ಥಳಗಳಲ್ಲಿ ಯಕ್ಷಗಾನ ಪ್ರಸಂಗಗಳಲ್ಲಿ ಹಾಡುತ್ತಿದ್ದನು. ಅವನು ಮರಣ ಹೊಂದಿದ್ದರೂ ಅವನ ಕುಟುಂಬದ ಸ್ತ್ರೀಯರು ಆ ಹಾಡುಗಳನ್ನು ಪರಮಭಕ್ತಿಯಿಂದ ಇನ್ನೂ ಹಾಡುತ್ತಾರೆ. ಅವನು ತನ್ನ ಮನೆಯಲ್ಲಿ ಒಂದು ಶಾಶ್ವತ ಕಲಶವನ್ನು ಪ್ರತಿಷ್ಠಾಪಿಸಿದ್ದಾನೆ ಪ್ರತಿ ಶುಕ್ರವಾರ ಕಲಶದ ಪೂಜೆ ತಪ್ಪದೆ ನಡೆಯುತ್ತದೆ. ಕುಟುಂಬದ ದೇವಿಯ ರಥೋತ್ಸವದ ದಿನದಂದು ಒಂದು ಹೊತ್ತು ಉಪವಾಸ ಆಚರಿಸುತ್ತಾರೆ. ಕುಟುಂಬದ ವಯೋವೃದ್ಧರೆಲ್ಲ ದೇವಿಯ ಬಗೆಗಿನ

ಭಕ್ತಿಯನ್ನು ಪ್ರಚುರಗೊಳಿಸಲು ಶಕ್ಯವಿದ್ದಷ್ಟು ಪ್ರಯತ್ನಿಸುತ್ತಿದ್ದಾರೆ. ಅಲ್ಲದೆ ಸಸ್ಯಾಹಾರವೇ ಸಾತ್ವಿಕ ನಡತೆಯ ಮಾರ್ಗವೆಂಬುದನ್ನು ಎತ್ತಿ ಹೇಳುತ್ತಾರೆ. ಅವರು ದೇವಿಗೆ ಪಶುಬಲಿ ಕೊಡುವುದು ಒಳ್ಳೆಯ ಸಂಪ್ರದಾಯವಲ್ಲವೆಂದು ಕೂಡ ಹೇಳುತ್ತಾರೆ.

**ಸಂದರ್ಭ ಎರಡು :**

ಈ ಗ್ರಾಮದಲ್ಲಿ ಪೋಷಕ ಕುಟುಂಬದವರು ದೊಡ್ಡಹಬ್ಬವನ್ನು ಮೂರು ವರ್ಷಕ್ಕೊಮ್ಮೆ ಹಾಗೂ ಹಿರಿಯ ಮಗನ ವಿವಾಹ ಕಾಲದಲ್ಲಿ ದೊಡ್ಡ ಪ್ರಮಾಣದಲ್ಲಿ ಆಚರಿಸುತ್ತಾರೆ, ಬೆಟ್ಟದ ಶಿವಾರ್ಚಕ ಪೂಜಾರಿಯೊಂದಿಗೆ, ಕುರುಬನಹಳ್ಳಿಯ ಒಕ್ಕಲಿಗ ಪೂಜಾರಿಯನ್ನು ಕೂಡ ಆಮಂತ್ರಿಸಲಾಗುತ್ತದೆ. ಕಲಶವನ್ನು ಸ್ಥಾಪಿಸುವ ಕ್ರಿಯಾವಿಧಿಯನ್ನು ಶಿವಾರ್ಚಕ ಪೂಜಾರಿಯು ನೆರವೇರಿಸುತ್ತಾನೆ. ಅವನಿಲ್ಲದೇ ಹೋದ ಪಕ್ಷದಲ್ಲಿ ಒಕ್ಕಲಿಗ ಪೂಜಾರಿಯು ಈ ಕ್ರಿಯಾವಿಧಿಯನ್ನು ನೆರವೇರಿಸಬಹುದು. ಈ ಗ್ರಾಮದಲ್ಲಿ ಒಕ್ಕಲಿಗ ಪೂಜಾರಿಗೆ ಸಾಂಪ್ರದಾಯಿಕವಾಗಿ ಬಂದ ಪೋಷಕ ಕುಟುಂಬಗಳಿವೆ. ಈ ಪೂಜಾರಿಯು ಪೋಷಕ ಕುಟುಂಬದಲ್ಲಿ ಜರುಗುವ ವಿವಾಹಗಳಲ್ಲಿ ಪೌರೋಹಿತ್ಯ ನಡಿಸುತ್ತಾನೆ. ಉತ್ಸವವನ್ನು ಮೊದಲನೆ ಸಂದರ್ಭದಲ್ಲಿ ವರ್ಣಿಸಿದಂತೆ ಆಚರಿಸಲಾಗುತ್ತದೆ.

**ಸಂದರ್ಭ ಮೂರು :**

ಈ ಗ್ರಾಮದಲ್ಲಿ ಒಕ್ಕಲಿಗ ಜಾತಿಯ ಐವತ್ತು ಪೋಷಕ ಕುಟುಂಬಗಳಿವೆ. ಚಾಮುಂಡೇಶ್ವರಿ ದೇವಿಗೆ ಹೊತ್ತ ಹರಕೆಯನ್ನು ಪೂರೈಸಲು ಈ ಹಬ್ಬವನ್ನು ಸಾಮಾನ್ಯವಾಗಿ ಆಚರಿಸುತ್ತಾರೆ. ಕೆಲವೇ ಪೋಷಕ ಕುಟುಂಬಗಳು ಇದನ್ನು ಆಚರಿಸುವುದರಿಂದ ಬೆಟ್ಟದ ಶಿವಾರ್ಚಕ ಪೂಜಾರಿಯೊಂದಿಗೆ, ಕುರುಬನಹಳ್ಳಿಯ ಒಕ್ಕಲಿಗ ಪೂಜಾರಿಯನ್ನು ಕೂಡ ಆಮಂತ್ರಿಸಲಾಗುತ್ತದೆ. ಅವರು ಈ ಆಚರಣೆಯಲ್ಲಿ ಪರಸ್ಪರ ಸಹಕರಿಸುತ್ತಾರೆ. ಸಂಬಂಧಿಸಿದ ಪೋಷಕ ಕುಟುಂಬಗಳು ದೇವಸ್ಥಾನದ ಬೆಟ್ಟದ ಅಡಿಗೆ ಹೋಗಿ ಕ್ರಿಯಾವಿಧಿಗಳನ್ನು ನೆರವೇರಿಸುತ್ತಾರೆ. ಬೆಟಟದ ಅಡಿಯಲ್ಲಿ ಒಂದು ಮಂಟಪ ನಿರ್ಮಿಸಿ ಒಂದನೇ ಸಂದರ್ಭದಲ್ಲಿ ವರ್ಣಿಸಿದಂತೆ ಕಲಶವನ್ನು ಅಲಂಕರಿಸುತ್ತಾರೆ. ಆ ಸಮಯದಲ್ಲಿ ಒನ್ನ ಒಕ್ಕಲಿಗನು ಪೂಜಾರಿಯಾಗಿ ಕಾರ್ಯ ನೆರವೇರಿಸುತ್ತಾನೆ. ಕೆಲಸದ ಪೂಜೆಯಾಗುವ ಮೊದಲು ಕೆಲವು ಜನರು ಬೆಟ್ಟದಲ್ಲಿಯ ದೇವಸ್ಥಾನಕ್ಕೆ ಹೋಗಿ ದೇವಿಗೆ ಕುಂಕುಮ ಅಷ್ಟೋತ್ತರ ಪೂಜೆ ಏರ್ಪಡಿಸುತ್ತಾರೆ. ಮರಳುವಾಗ ತಮ್ಮ ಜೊತೆಗೆ ದೇವತೆಯ ತೀರ್ಥ–ಪ್ರಸಾದ ತರುತ್ತಾರೆ. ತೀರ್ಥವನ್ನು ಕಲಶವನ್ನು ಪ್ರೋಕ್ಷಿಸಿದ ನಂತರ ಅದು ಚಾಮುಂಡೇಶ್ವರಿ ದೇವಿಯ ಸಂಕೇತವಾಗುತ್ತದೆ. ಪೂಜಾ ಸಾಮಾಗ್ರಿಗಳನ್ನು ಪೋಷಕ ಕುಟುಂಬದವರು (ಮುಖ್ಯವಾಗಿ ಪುರುಷರಷ್ಟೇ) ಕಲಶದೇವತೆಗೆ ಅರ್ಪಿಸುತ್ತಾರೆ. ಪಶುಬಲಿ ನಡೆಯುತ್ತದೆ. ವಿಧಿವಿಹಿತವಾಗಿ ಅಡಿಗೆ ತಯಾರಿಸಿ ಪೋಷಕ ಕುಟುಂಬದವರು ಊಟ ಮಾಡುತ್ತಾರೆ. ವಿಸರ್ಜನೆ ಸಮಾರಂಭದ ಅಂಗವಾಗಿ ಕಲಶದಲ್ಲಿದ್ದುದನ್ನೆಲ್ಲ ಕೆರೆಯಲ್ಲಿ ವಿಸರ್ಜಿಸುತ್ತಾರೆ. ಚಾಮುಂಡೇಶ್ವರಿಯ ತೀರ್ಥ–ಪ್ರಸಾದ ಹಾಗೂ ಕಲಶ ದೇವತೆಯ ಪ್ರಸಾದವಾದ ತೆಂಗಿನಬಟ್ಟಲು ಮುಂತಾದವುಗಳನ್ನು ತಮ್ಮ ಗ್ರಾಮಕ್ಕೆ ಕೊಂಡೊಯ್ಯುವರು.



**ಬ. ಚಾಮುಂಡೇಶ್ವರಿ ಹಬ್ಬ :**

ನಾವು ಸಮೀಕ್ಷೆ ನಡೆಸಿದ 20 ಗ್ರಾಮಗಳಲ್ಲಿ 12 ಗ್ರಾಮಗಳ ಪೂರ್ಣ ಸಮುದಾಯವು ಚಾಮುಮಡೇಶ್ವರಿ ಹಬ್ಬ ಆಚರಿಸುವುದನ್ನು ಗಮನಿಸಿದೆವು. ಉಳಿದ 8 ಗ್ರಾಮಗಳಲ್ಲಿ ಒಮದು ಗ್ರಾಮದಲ್ಲಿ ಮಾತ್ರ ಎಷ್ಟೋ ವರ್ಷಗಳ ಹಿಂದೆ ಹಬ್ಬವನ್ನಾಚರಿಸಿದ್ದರು. ಆದರೆ ನಾಯಕತ್ವದ ಕೊರತೆಯಿಂದ ಆ ಗ್ರಾಮದಲ್ಲಿ ಹಬ್ಬವನ್ನಾಚರಿಸುವ ಪದ್ಧತಿಯನ್ನು ಕೈಬಿಡಲಾಗಿದೆ. ಉಳಿದ ಏಳು ಗ್ರಾಮಗಳಲ್ಲಿ ಈ ಹಬ್ಬವನ್ನು ಎಂದೂ ಆಚರಿಸಿಲ್ಲ.

ಗ್ರಾಮದ ಜನರು ಪಾಲ್ಗೊಳ್ಳುವ ಚಾಮುಮಡೇಶ್ವರಿ ಹಬ್ಬವು ನಡೆಯುವ ಅನೇಕ ಗ್ರಾಮಗಳಲ್ಲಿ ಕ್ರಿಯಾವಿಧಿ ವ್ಯತ್ಯಾಸವಿದೆ ಎಂಬುದನ್ನು ನಿರ್ಣಯಿಸಿ ಹಬ್ಬದ ಸಮಯ ಹಾಗೂ ದಿನಾಂಕವನ್ನು ಗೊತ್ತುಪಡಿಸುತ್ತಾರೆ. ಈ ನಿರ್ಣಯವನ್ನು ಗ್ರಾಮದ ಅಸ್ಪೃಶ್ಯ ಸೇವಕರು ತಮಟೆ ಹೊಡೆಯುವುದರ ಮೂಲಕ ಪ್ರಕಟಪಡಿಸುತ್ತ ಗ್ರಾಮದ ಜನರಿಗೆ ನಿರ್ಣಯವನ್ನು ತಿಳಿಸುತ್ತಾರೆ. ಪ್ರತಿಯೊಂದು ಮನೆತನದಿಂದ ದೇಣಿಗೆಗಳನ್ನು ಸಂಗ್ರಹಿಸುತ್ತಾರೆ. ಇಂತಹ ದೇಣಿಗೆಗಳು ಸ್ವಯಂ ಪ್ರೇರಿತವಾದವು. ಸಾಮಾನ್ಯವಾಗಿ ಹಬ್ಬವನ್ನು ಮಂಗಳವಾರ ಇಲ್ಲವೆ ಶುಕ್ರವಾರ ಆಚರಿಸುತ್ತಾರೆ. ಊರ ಹೊರಗೆ ಜಲಾಶಯ ಬಳಿ ಮಂಟಪವನ್ನು ನಿರ್ಮಿಸುತ್ತಾರೆ. ಪ್ರಬಲ ಜಾತಿಯವನೊಬ್ಬ ಇಂತಹ ಸಂದರ್ಭಗಳಲ್ಲಿ ಪೌರೋಹಿತ್ಯ ವಹಿಸುವುದನ್ನು ಗಮನಿಸಬಹುದು. ಪ್ರಬಲ ಜಾತಿಯವನೊಬ್ಬ ಇಂತಹ ಸಂದರ್ಭಗಳಲ್ಲಿ ಪೌರೋಹಿತ್ಯ ವಹಿಸುವುದನ್ನು ಗಮನಿಸಬಹುದು. ಮಂಟಪದಲ್ಲಿ ಒಂದು ಕಲಶವನ್ನು (ಬೆಲ್ಲ ಹಾಗೂ ಹಿಟ್ಟಿನಿಂದ ಮಾಡಿದ್ದು) ದೇವತೆಗೆ ಅರ್ಪಿಸುತ್ತಾರೆ. ಪೌರೋಹಿತ್ಯ ವಹಿಸಿದ ಪೂಜಾರಿಯು ಇವುಗಳನ್ನು ನಿವೇದಿಸಿ, ಭಕ್ತರಿಗೆ ಪ್ರಸಾದವೆಂದು ಹಿಂತಿರುಗಿಸುತ್ತಾನೆ. ಹೋತಗಳ ಬಲಿ ನಡೆಯುತ್ತದೆ. ಸಾಮಾನ್ಯವಾಗಿ ಗ್ರಾಮ ಸಮುದಾಯದ ವೆಚ್ಚದಲ್ಲಿ ಕಲಶ ದೇವತೆಯ ಎದುರಿಗೆ ಬಲಿ ಕೊಡಲಾಗುತ್ತದೆ. ಆದರೆ ಕೆಲವು ಕುಟುಂಬದವರು ಕೂಡಿಕೊಂಡು ತಮ್ಮ ಗುಂಪಿನ ವತಿಯಿಂದ ಬಲಿಕೊಟ್ಟ ಪ್ರಾಣಿಯ ಮಾಂಸವನ್ನು ಸಾಮಾನ್ಯವಾಗಿ ಗ್ರಾಮದ ಸೇವಕರಿಗೆ ಕೊಡುವುದುಂಟು. ಈ ಹಬ್ಬಗಳ ಆಚರಣೆಯ ಉದ್ದೇಶವೆಂದರೆ ಕಲರಾ ಮುಂತಾದ ರೋಗಗಳ ಭೀಕರ ಪರಿಣಾಮವನ್ನು ದೂರ ಗೊಳಿಸುವಂತೆ ಚಾಮುಂಡೇಶ್ವರಿಯನ್ನು ಪ್ರಸನ್ನಗೊಳಿಸುವುದಾಗಿದೆ.

ಬೇರೆ ಬೇರೆ ಏಳು ಗ್ರಾಮಗಳಲ್ಲಿ ಹಬ್ಬವನ್ನಾಚರಿಸುವ ಸಾಂಪ್ರದಾಯಕ ವಿಧಾನ ಮೇಲೆ ವಿವರಿಸಿದಂತೆ ಇದ್ದರೂ ಸಮುದಾಯದ ಹಬ್ಬದ ಆಚರಣೆಯಲ್ಲಿ ನಾವು ಕೆಲವು ವ್ಯತ್ಯಾಸಗಳನ್ನು ಗಮನಿಸಿದೆವು. ಉದಾಹರಣೆಗೆ : ಈ ಕ್ರಿಯಾವಿಧಿಯಲ್ಲಿ ಪೌರೋಹಿತ್ಯ ನಡೆಸುವವನು ಆ ಗ್ರಾಮದ ಶಿವಾಲಯದ ಲಿಂಗಾಯತ ಪೂಜಾರಿಯಾಗಿದ್ದಾನೆ. ಆದರೆ ಅವನು ಬಲಿಪಶು ಸಮಯದಲ್ಲಿ ಇರುವುದಿಲ್ಲ. ಇನ್ನೊಂದು ಗ್ರಾಮದಲ್ಲಿ ಕಲಶವನ್ನು ಬೆಟ್ಟದ ಚಾಮುಮಡೇಶ್ವರಿಯ ದೇವಸ್ಥಾನದಿಂದತಂದ ತೀರ್ಥದಿಂದ ಪವಿತ್ರಗೊಳಿಸುತ್ತಾರೆ. ಮೂರು ಗ್ರಾಮಗಳಲ್ಲಿ ಕಲಶವನ್ನು ನಿರ್ಮಿಸುವುದಿಲ್ಲವೆಂದು ಹೇಳಲಾಯಿತು. ಆದರೆ ಮಂಟಪದಲ್ಲಿ ಚಾಮುಮಡೇಶ್ವರಿ ದೇವಿಯನ್ನು ಪ್ರತಿನಿಧಿಸುವ ಐದು ಶಿಲೆಗಳನ್ನು ಪ್ರತಿಷ್ಠಾಪಿಸುತ್ತಾರೆ. ಈ ಮೂರು ಗ್ರಾಮಗಳಲ್ಲಿಯ

ಒಂದು ಗ್ರಾಮದಲ್ಲಿ ತೀರ್ಥವನ್ನು ಚಾಮುಮಡೇಶ್ವರಿ ದೇವಸ್ಥಾನದಿಂದ ತರಲಾಗುತ್ತದೆ ಮತ್ತು ಉತ್ತನಹಳ್ಳಿಯಲ್ಲಿಯ ಉತ್ತನಹಳ್ಳಿಯಮ್ಮನ ದೇವಾಲಯದಿಂದ ತೀರ್ಥ ತರುತ್ತಾರೆ. ಉತ್ತನಹಲ್ಳಿಯ ಹಬ್ಬ ಆಚರಿಸುವಾಗ ಅಲ್ಲಿಯ ದೇವಾಲಯದ ಲಿಂಗಾಯಿತ ಪೂಜಾರಿಯು ಕ್ರಿಯಾವಿಧಿ ಪೂರೈಸುತ್ತಾನೆ. ಕಲಶ ಹಾಗೂ ಶಿಲೆಗಳು ಚಾಮುಂಡೇಶ್ವರಿ ದೇವತೆಯನ್ನು ಸಂಕೇತಿಸುತ್ತವೆ. ಆದರೂ ದೇವಿಯ ವಿಗ್ರಹವನ್ನು ಪೂಜಿಸುತ್ತಾರೆ. ಉದಾಹರಣೆಯಾಗಿ : ಇನ್ನೊಂದು ದರಾಮದಲ್ಲಿ ಹಬ್ಬದ ಆಚರಣೆಗಾಗಿ ಕಟ್ಟಿದ ಮಂಟಪದಲ್ಲಿ ಮಣ್ಣಿನಮೂರ್ತಿಯನ್ನು ದೇವತೆಯ ಸಮಕೇತವಾಗಿ ಪ್ರತಿಷ್ಠಾಪಿಸಲಾಗುತ್ತದೆಂದು ನಮಗೆ ತಿಳಿದು ಬಂದಿತು. ಇಂತಹ ಕ್ರಿಯಾಚರಣೆ ಸಂದರ್ಭಗಳಲ್ಲಿ ಗ್ರಾಮದಲ್ಲಿಯ ಕುಟುಂಬಗಳಿಂದ ನೈವೇದ್ಯವನ್ನು ದೇವತೆಗೆ ಸಂಕೇತವಾಗಿ ಪ್ರತಿಷ್ಠಾಪಿಸಲಾಗುತ್ತದೆಂದು ನಮಗೆ ತಿಳಿದು ಬಂದಿತು. ಇಂತಹ ಕ್ರಿಯಾಚರಣೆ ಸಂದರ್ಭಗಳಲ್ಲಿ ಗ್ರಾಮದಲ್ಲಿಯ ಕುಟುಂಬಗಳಿಂದ ನೈವೇದ್ಯವನ್ನು ದೇವತೆಗೆ ನಿವೇದಿಸಲಾಗುವುದು. ಆದರೆ ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ. ಅರ್ಪಿತವಾದ ಆಹಾರವನ್ನು ಗ್ರಾಮಗಳಿಗೆ ಹಿಂತಿರುಗಿ ತರದೇ ಮೂರ್ತಿಯೊಡನೆ ಆ ಸ್ಥಲದಲ್ಲಿಯೇ ತ್ಯಜಿಸಲಾಗುವುದು. ಆದರೆ ದೇವತೆಗೆ ನಿವೇದಿಸಿದ ಪೂಜಾಸಾಮಾಗ್ರಿಗಳನ್ನು ಪ್ರಸಾದವೆಂದು ಹಿಂತಿರುಗಿ ತರದೇ ಮೂರ್ತಿಯೊಡನೆ ಆ ಸ್ಥಳದಲ್ಲಿಯೇ ತ್ಯಜಿಸಲಾಗುವುದು. ಆದರೆ ದೇವತೆಗೆ ನಿವೇದಿಸಿದ ಪೂಜಾಸಾಮಾಗ್ರಿಗಳನ್ನು ಪ್ರಸಾದವೆಂದು ಹಿಂತಿರುಗಿ ತರಲಾಗುವುದು. ವಿಸರ್ಜನಾ ಸಮಾರಂಭವನ್ನು ಆಚರಿಸುವುದಿಲ್ಲ. ಈ ಗ್ರಾಮಗಳಲ್ಲಿಯೂ ಹಬ್ಬದ ಆಚರಣೆಯ ಉದ್ದೇಶವು ಭೀಕರ ರೋಗಗಳಿಂದ ರಕ್ಷಿಸಲು ದೇವತೆಯನ್ನು ಪ್ರಸನ್ನಗೊಳಿಸುವುದಾಗಿದೆ. ಹೆಚ್ಚಾಗಿ ಸಮುದಾಯ ಹಬ್ಬಗಳನ್ನು ಗ್ರಾಮದ ಸಾರ್ವಜನಿಕ ಸ್ಥಳಗಳಲ್ಲಿಯೇ ಆಚರಿಸಲಾಗುವುದು. ಆದರೆ ಇದಕ್ಕೆ ಹೊರತಾದ ಉದಾಹರಣೆಯೊಂದಿದೆ ಎಂಬುದನ್ನು ಗಮನಿಸಬಹುದು. ಒಂದು ಗ್ರಾಮದಲ್ಲಿ ದೇವಸ್ಥಾನದ ಬೆಟ್ಟದ ಅಡಿಯಲ್ಲಿರುವ ಕಿಬ್ಬಿಪಾದದ ಹತ್ತಿರ ಗ್ರಾಮಸ್ಥರು ಹಬ್ಬವನ್ನು ಆಚರಿಸುತ್ತಾರೆಂದು ನಮಗೆ ಹೇಳಿದರು. ಮೂರನೇ ಸಂದರ್ಭದಲ್ಲಿ ವರ್ಣಿಸಿದ ದೊಡ್ಡ ಹಬ್ಬದಂತೆ ಈ ಗ್ರಾಮದವರು ಹಬ್ಬವನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಸರಿಯಾಗಿ ಮಳೆಯಾಗುವಂತೆ ದೇವತೆಗೆ ಪ್ರೇರೇಪಿಸಲು ಹಬ್ಬ ಆಚರಿಸುತ್ತಾರೆ.

## ಮಕ್ಕಳ ನಾಮಕರಣ :

ಗ್ರಾಮ ಅಥವಾ ನಗರಗಳಲ್ಲಿ ಪೋಷಕ ಕುಟುಂಬಗಳು ಚಾಮುಮಡೇಶ್ವರಿ ದೆವತೆಯ ಹೆಸರಿನ ವಿವಿಧ ರೂಪಗಳನ್ನು ಮಕ್ಕಳಿಗೆ ಇಡುವುದು ವಾಡಿಕೆಯಾಗಿದೆ. ಸಾಮಾನ್ಯವಾಗಿ ಹಿರಿಯ ಗಂಡು ಮಗುವಿಗೆ 'ಚಾಮುಂಡಿ'ಯೊಂದಿಗೆ 'ಅಪ್ಪ'ಇಲ್ಲವೆ 'ಗೌಡ' ಎಂಬ ಪ್ರತ್ಯಯದೊಂದಿಗೆ ಹೆಸರಿಸುವುದುಂಟು. ಆದರೆ ಹೆಣ್ಣು ಶಿಶುವಿಗೆ 'ಅಮ್ಮ' ಪ್ರತ್ಯಯದೊಂದಿಗೆ ಹೆಸರಿಸುವುದುಂಟು. ಸಾಮಾನ್ಯವಾಗಿ ಪೋಷಕರಲ್ಲದವರು ಚಾಮುಮಡೇಶ್ವರಿ ಹೆಸರನ್ನು ಇಡುವುದಿಲ್ಲ.

ಇಲ್ಲಿಯವರೆಗೆ ನಾವು ಮೈಸೂರು ನಗರದ ಸುತ್ತಲಿನ ಗ್ರಾಮಗಲ ಹಾಗೂ ಚಾಮುಂಡಿಬೆಟ್ಟದ ಕ್ರಿಯಾಚರಣೆಗೆ ಸಾಂಸ್ಕೃತಿಕ ಸಂಪ್ರದಾಯಗಳನ್ನು ವರ್ಣಿಸಿದ್ದೇವೆ. ಇನ್ನು ಮುಂದೆ ವಿವರಿಸುವ



ವಿಷಯದಲ್ಲಿ ಮೈಸೂರು ನಗರದ ವಿವಿಧ ಭಾಗಗಳಲ್ಲಿ ಚಾಮುಂಡೇಶ್ವರಿ ಉಪಾಸನೆಗೆ ಸಂಬಂಧಪಟ್ಟ ವಿವಿಧ ಕ್ರಿಯಾಚರಣೆಗೆ ಪ್ರಾಧಾನ್ಯವಿತ್ತಿದ್ದೇವೆ.

## ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ಉಪಾಸನೆ :

ಮೈಸೂರು ನಗರವನ್ನು ಏಳು ಮೊಹಲ್ಲಾಗ್ಗಳಲ್ಲಿ ಅಥವಾ ನಗರಸಭೆ ವಾರ್ಡು(ವಿಭಾಗ)ಗಳಲ್ಲಿ ವಿಭಾಗಿಸಲಾಗಿದೆ. ಎಲ್ಲ ಮೊಹಲ್ಲಾಗ್ಗಳಲ್ಲಿ ಹಿಂದೂಗಳ ಪ್ರಾಬಲ್ಯವಿದೆ. ಆರೆನೇ ಹಾಗೂ ಹಳೆ ನಗರಕ್ಕೆ ತೀರ ಹತ್ತಿರದ ಅಗ್ರಹಾರದಲ್ಲಿ ಬ್ರಾಹ್ಮಣರು ಬಹುಪಾಲು ಕೇಂದ್ರೀಕೃತವಾಗಿದ್ದಾರೆ. ಮೈಸೂರು ನಗರದ ಎಲ್ಲ ಮೊಹಲ್ಲಾಗ್ಗಳಲ್ಲಿ ಬ್ರಾಹ್ಮಣೇತರ ಜಾತಿಯವರನ್ನು ಕಾಣಬಹುದು. ಬ್ರಾಹ್ಮಣರಂತೆ ಈ ಜಾತಿಯವರೂ ಕೂಡ ಒಂದು ಸ್ಥಳದಲ್ಲಿ ಕೂಡಿ ಜೀವಿಸುವ ಪ್ರವೃತ್ತಿ ತೋರಿಸುತ್ತಾರೆ. ಹೀಗೆ ಅಶೋಕಪುರ ಹಾಗೂ ಗಾಂಧಿನಗರ ಬಡಾವಣೆಗಳಲ್ಲಿ ಅಸ್ಪೃಶ್ಯ ಜಾತಿಯವರೇ ವಿಶೇಷವಾಗಿ ಪ್ರಬಲವಾಗಿರುವುದನ್ನು ನಾವು ಕಂಡೆವು. ಎಷ್ಟೋ ಮೊಹಲ್ಲಾಗ್ಗಳಲ್ಲಿ ದೊಡ್ಡ ಒಕ್ಕಲಿಗರ (ಒಕ್ಕಲಿಗ ಜಾತಿಯವರು ವಾಸಿಸುವ ಪ್ರದೇಶ), ಕುಂಬಾರಗೇರಿ (ಕುಂಬಾರರು ವಾಸಿಸುವ ಪ್ರದೇಶ), ಎಂದು ಮುಂತಾಗಿ ಇದ್ದ ಪ್ರದೇಶಗಳನ್ನು ನೋಡಿದೆವು. ಆದಾಗ್ಯೂ ಸಜಾತಿಗಳ ಪ್ರದೇಶಗಳ ಸಂಖ್ಯೆ ತೀರ ಕಡಿಮೆ. ಮೊಹಲ್ಲಾಗ್ಗಳಲ್ಲಿ ವೈವಿಧ್ಯಮಯ ಜಾತಿಯ ಜನರುಳ್ಳ ಪ್ರದೇಶಗಳೂ ಇವೆ. ಆದರೂ ಸಹ ಈ ಸಣ್ಣ ಪ್ರದೇಶದಲ್ಲಿರುವ ಜನರಿಗೆ ಏಕತ್ವದ ಭಾವನೆಯಿದೆ. ಅಲ್ಲಿದ್ದವರಿಗೆ ಈ ಪ್ರದೇಶಗಳ ಎಲ್ಲೆಗಳು ಖಚಿತವಾಗಿ ಗೊತ್ತಿವೆ. ಮೊಹಲ್ಲಾದೊಳಗಿನ ಮೊಹಲ್ಲಾದಂತಿರುವ ಈ ಸಣ್ಣ ಪ್ರದೇಶಗಳು ಎಲ್ಲ ಕಾರ್ಯೋದ್ದೇಶಗಳಿಗಾಗಿ ಗ್ರಾಮ ಸಮುದಾಯದಂತಿವೆ.

ಮೈಸೂರು ನಗರದಲ್ಲಿರುವ ಕೋಟೆ (ಫೋರ್ಟ್) ಮೊಹಲ್ಲಾ ಹೊರತುಪಡಿಸಿ ಉಳಿದೆಲ್ಲಾ ಮೊಹಲ್ಲಾಗ್ಗಳಲ್ಲಿ ಚಾಮುಂಡೇಶ್ವರಿಯೊಬ್ಬಳ ಇಲ್ಲವೆ ಚಾಮುಂಡೇಶ್ವರಿ ಯೊಡನೆ ಸ್ಥಾನಿಕ ದೇವತೆಯ ಪೂಜೆ ನೆರವೇರಿಸುವ ಪದ್ಧತಿಯಿರುವುದನ್ನು ಗಮನಿಸಿದೆವು. ಆದರೆ ದೊಡ್ಡ ಮೊಹಲ್ಲಾಗ್ಗಳಲ್ಲಿ ನಗರದ ಆಧುನಿಕ ಬಡಾವಣೆಗಳಾದ ಜಯಲಕ್ಷ್ಮಿಪುರಂ ಮತ್ತು ಬ್ರಾಹ್ಮಣ, ಲಿಂಗಾಯಿತ ಇಲ್ಲವೆ ಉಳಿದ ಸಸ್ಯಾಹಾರಿ ಜಾತಿಯ ಜನರು ಬಹು ಸಂಖ್ಯೆಯಲ್ಲಿ ವಾಸಿಸುವ ಸ್ಥಳಗಳಲ್ಲಿ ಈ ಪೂಜೆಗಳು ನಡೆಯುವುದಿಲ್ಲ.

ಈ ಎಲ್ಲಾ ಮೊಹಲ್ಲಾಗ್ಗಳಲ್ಲಿ ಚಾಮುಂಡೇಶ್ವರಿಯ ಸಮುದಾಯ[1] ಪೂಜೆ ಯನ್ನು ವಿವಿಧ ವಿಧಾನಗಳಿಂದ ಮಾಡಲಾಗುತ್ತದೆ. ಕೆಲವು ಪ್ರದೇಶಗಳಲ್ಲಿ ವಿಶೇಷವಾಗಿ ಚಾಮುಂಡೇಶ್ವರಿ ದೇವಿಯೊಬ್ಬಳನ್ನೇ ವರ್ಷಕ್ಕೊಮ್ಮೆ ಪೂಜಿಸಲಾಗುವುದು. ಬೇರೆ ಕೆಲವು ಪ್ರದೇಶಗಳಲ್ಲಿ ಚಾಮುಂಡೇಶ್ವರಿಯು ಇತರ ಸ್ತ್ರೀ ದೇವತೆಗಳ ಹಿರಿಯ ಸಹೋದರಿಯೆಂದು ಪರಿಗಣಿಸುವುದರಿಂದ ಇತರ ಸ್ಥಾನಿಕ ದೇವತೆಗಳೊಂದಿಗೆ ಪೂಜಿಸಲಾಗುವುದು. ಇನ್ನು ಕೆಲವು

1. ಈ ಸಮುದಾಯ ಪೂಜೆಯು ವೈಯಕ್ತಿಕ ಕುಟುಂಬಗಳು ದೇವಸ್ಥಾನ ಸಂದರ್ಶಿಸುವ ಪದ್ಧತಿಯಿಂದ ವ್ಯತ್ಯಾಸ ಉಳ್ಳದ್ದಾಗಿದೆ. ಸಮುದಾಯದಿಂದ ಪೂಜಿಸಲಾಗುವ ಈ ವಿಧಾನಕ್ಕೆ ನಾವು 'ಚಾಮುಂಡೇಶ್ವರಿ ಸಮುದಾಯ ಪೂಜೆ' ಎಂದು ಕರೆಯಬಹುದು. (ಗ್ರಾಮ ಸಮುದಾಯ ಹಬ್ಬಗಳ ಅಧ್ಯಾಯ ನೋಡಿ).

ಪ್ರದೇಶಗಳಲ್ಲಿ ಸ್ಥಾನಿಕ ದೇವತೆಯ ಪೂಜೆ ಇದ್ದಾಗ ಚಾಮುಂಡೇಶ್ವರಿಯನ್ನು ಕೂಡ ಅವರು ಪೂಜಿಸುತ್ತಾರೆ. ಏಕೆಂದರೆ ಚಾಮುಂಡಿಯು ಎಲ್ಲ ದೇವತೆಗಳಲ್ಲಿ ಪರಮೋಚ್ಚಳಾದುದರಿಂದ ಅವಳು ಯಾವಾಗಲೂ ಪೂಜಿಸಲ್ಪಡಬೇಕು ಎಂದು ಪೂಜಿಸುವವರು ನಂಬಿದ್ದಾರೆ.

ಯಾವುದೇ ಒಂದು ಜಾತಿಯವರು ಚಾಮುಂಡೇಶ್ವರಿ ಪೂಜೆಯನ್ನು ವ್ಯವಸ್ಥೆಗೊಳಿಸಿದಾಗ ಅದರ ಪುನರಾವರ್ತನೆ ಒಂದೇ ರೀತಿಯಾಗಿರುತ್ತದೆ. ಅಂದರೆ ವರ್ಷಕ್ಕೊಮ್ಮೆ ಆಚರಿಸಲಾಗುತ್ತದೆ ಎಂಬುದನ್ನು ಗಮನಿಸಲಾಯಿತು. ಉದಾಹರಣೆ ಯಾಗಿ : ಒಕ್ಕಲಿಗ, ಆದಿಕರ್ನಾಟಕ ಹಾಗೂ ಕುಂಬಾರರು ಪ್ರಾರಂಭದಿಂದಲೂ ವರ್ಷಕ್ಕೊಮ್ಮೆ ಪೂಜೆ ನೆರವೇರಿಸುತ್ತಿದ್ದಾರೆ. ಕೊನೆಗೆ ಹೆಸರಿಸಿದ ಕುಂಬಾರ ಜಾತಿಯವರು ತಮ್ಮ ಪ್ರದೇಶದಲ್ಲಿ ಕಳೆದ 45 ವರ್ಷಗಳಿಂದ ಪೂಜೆಯನ್ನು ನೆರವೇರಿಸುತ್ತಿದ್ದಾರೆ. ಬೇರೆ ಸಂದರ್ಭಗಳಲ್ಲಿ ಒಂದು ಜಾತಿಯವರು ವಿಶಿಷ್ಟ ದಿನದಂದು ತಮ್ಮ ಕುಲದೇವತೆಗಳ ಪೂಜೆಯೊಂದಿಗೆ ಚಾಮುಂಡೇಶ್ವರಿ ದೇವಿಯನ್ನು ಪೂಜಿಸುವುದರ ಏಕರೂಪತೆಯನ್ನು ಗಮನಿಸಲಾಯಿತು. ಅವಶ್ಯಕವೆನಿಸಿದಾಗ ಚಾಮುಂಡೇಶ್ವರಿಯನ್ನು ಪೂಜಿಸುವ ರೂಢಿಯುಳ್ಳ ಬೇರೆ ಕೆಲವು ಪ್ರದೇಶಗಳೂ ಇವೆ. ಉದಾಹರಣೆಗಾಗಿ : ರೋಗ ಬಂದರೆ ಇಲ್ಲವೆ ಬರಗಾಲ ಕಾಣಿಸಿಕೊಂಡರೆ ಆ ಪ್ರದೇಶದವರು ಪೂಜೆ ಏರ್ಪಡಿಸುತ್ತಾರೆ. ಬಿಕ್ಕಟ್ಟಿನ ಸ್ಥಿತಿ ಮುಗಿದ ನಂತರ ಅವರು ಮರುವರ್ಷ ಪೂಜೆಯನ್ನು ಪುನರಾವರ್ತಿಸಲಿಕ್ಕಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕೆಲವು ಸರಕಾರಿ ನೌಕರರ ಅಧಿವೇಶನದವರು ದೇವತೆಯ ಪೂಜೆಯನ್ನು ಏರ್ಪಡಿಸಿದ್ದರೆಂಬುದನ್ನು ಗಮನಿಸಲಾಗಿದೆ. ಈ ಸಂದರ್ಭದಲ್ಲಿಯೂ ಸಹಿತ ಪೂಜೆಯನ್ನು ಏರ್ಪಡಿಸುವ ಉದ್ದೇಶವು ಸಂದಿಗ್ಧ ಸ್ಥಿತಿಯಿಂದ ಪಾರಾಗುವುದಾಗಿತ್ತು. ಇಂತಹ ಉದ್ದೇಶಗಳಿಗಾಗಿ ಆ ಪ್ರದೇಶದಲ್ಲಿರುವ ಸಜಾತಿಯವರಲ್ಲದೆ ಬೇರೆ ಧರ್ಮದವರೂ ಹಣಕಾಸಿನ ಸಹಾಯ ನೀಡುತ್ತಾರೆಂದು ಖಾತ್ರಿ ಪಡಿಸಲಾಯಿತು.

ಚಾಮುಂಡೇಶ್ವರಿಯು ಸ್ತ್ರೀ ದೇವತೆಯಾದ್ದರಿಂದ ಮಂಗಳವಾರ ಹಾಗೂ ಶುಕ್ರವಾರ ಪೂಜಿಸಲಾಗುತ್ತದೆ. ಇತರ ವೈದಿಕ ದೇವರಾದ ಗಣೇಶ ಮುಂತಾದವರಿಗೆ ವಾರ್ಷಿಕ ಪೂಜೆಗಳಿಗೆ ನಿಶ್ಚಿತ ದಿನಾಂಕವಿರುವಂತೆ ಚಾಮುಂಡೇಶ್ವರಿಗೆ ವಾರ್ಷಿಕ ಪೂಜೆಗೆ ನಿಶ್ಚಿತ ದಿನಾಂಕವಿಲ್ಲ. ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ಪೂಜೆಯ ದಿನಾಂಕಗಳು ಪ್ರಥಮವಾಗಿ ಜನರ ಅನುಕೂಲತೆ ಹಾಗೂ ಸ್ಥಳೀಯ ಸಂಪ್ರದಾಯಗಳನ್ನು ಆಧರಿಸಿರುತ್ತವೆ. ನಗರದ ಎಷ್ಟೋ ಸ್ಥಳಗಳಲ್ಲಿ ಬೇಸಿಗೆಯ ತಿಂಗಳುಗಳಲ್ಲಿ ದೇವತೆಯನ್ನು ಪೂಜಿಸಲಾಗುತ್ತದೆ. ಆದರೆ ಕುಂಬಾರಗೇರಿ ಪ್ರದೇಶದಲ್ಲಿ ದಸರಾ ಪ್ರಾರಂಭದ 15 ದಿನ ಮೊದಲೇ ಉತ್ಸವವನ್ನು ನೆರವೇರಿಸ ಲಾಗುವುದು. ಈ ಸ್ಥಿತ್ಯಂತರದ ಕಾರಣವು ಉತ್ಸವದ ಇತಿಹಾಸದಲ್ಲಿಯೇ ಅಡಗಿದೆ. ಮೈಸೂರು ಮಹಾರಾಜರೊಂದಿಗೆ ನಿಕಟಸಂಬಂಧ ಹೊಂದಿದ ಅರಸು (ಕ್ಷತ್ರಿಯ) ಕುಟುಂಬದ ಸೂಚನೆಯಂತೆ ಸುಮಾರು 50 ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಹರಡಿದ ಪ್ಲೇಗಿನ ರಕ್ಷಣೆಗಾಗಿ ಉತ್ಸವವನ್ನು ಈ ಪ್ರದೇಶದ ಜನರು ಪ್ರಾರಂಭಿಸಿದರೆಂದು ಹೇಳಲಾಗುತ್ತದೆ. ಆಗಿನಿಂದಲೂ ದೇವಿಯನ್ನು ಪೂಜಿಸುವ ಸಂಪ್ರದಾಯವು ಮುಂದುವರೆದಿದೆ.



ಎಷ್ಟೋ ಗ್ರಾಮಗಳಲ್ಲಿ ನಾವು ನೋಡಿದಂತೆ, ಬ್ರಾಹ್ಮಣೇತರ ಜಾತಿಯವರು ಪೂಜಾರಿಗಳಂತೆ ಪೌರೋಹಿತ್ಯ ನಡೆಸುತ್ತಾರೆ. ಆದರೆ ಮೈಸೂರು ನಗರದಲ್ಲಿ ಪೂಜೆಯ ವಿವಿಧ ಹಂತಗಳಲ್ಲಿ ಬ್ರಾಹ್ಮಣರು ಪಾಲ್ಗೊಳ್ಳುವುದನ್ನು ಗಮನಿಸಿದೆವು. ಒಬ್ಬ ಮೊದಲಿಯಾರ ಕಂಟ್ರಾಕ್ಟರನು ಚಾಮುಂಡೇಶ್ವರಿ ದೇವಾಲಯ ಕಟ್ಟಿಸಿದ್ದಾನೆ. ಮೈಸೂರು ಮಹಾರಾಜರು ದೇವಾಲಯವನ್ನು ಉದ್ಘಾಟಿಸಿದರು. ಎರಡು ಅರಸು ಕುಟುಂಬಗಳು ದೇವಾಲಯದ ನಿವೇಶನವನ್ನು ದೇಣಿಗೆಗಾಗಿ ಕೊಟ್ಟಿದ್ದರು. ಇದನ್ನು ಕಟ್ಟಿಸಿದ ಕಂಟ್ರಾಕ್ಟರನು ಒಬ್ಬ ಬ್ರಾಹ್ಮಣರನ್ನು ಪುರೋಹಿತನನ್ನಾಗಿ ನಿಯಮಿಸಿದ್ದಾನೆ. ಕುಂಬಾರಗೇರಿಯಲ್ಲಿ ಚಾಮುಂಡೇಶ್ವರಿಯನ್ನು ಸ್ಥಾನಿಕ ರಾಮಮಂದಿರದಲ್ಲಿ ಪೂಜಿಸಲಾಗುತ್ತದೆ. ಅಲ್ಲಿ ಬ್ರಾಹ್ಮಣನು ನಿತ್ಯಪೂಜೆ ಪೂರೈಸುತ್ತಾನೆಂಬುದನ್ನು ಗಮನಿಸಬಹುದು. ಚಾಮುಂಡೇಶ್ವರಿಯ ವಾರ್ಷಿಕ ಉತ್ಸವ ಸಮಯದಲ್ಲಿ ಇದೇ ಬ್ರಾಹ್ಮಣನು ಪೌರೋಹಿತ್ಯ ವಹಿಸುತ್ತಾನೆ. ಬೇರೊಂದು ಮಿಶ್ರಜಾತಿ ಪ್ರದೇಶದಲ್ಲಿ ಸಂಪ್ರದಾಯವಾಗಿದ್ದ ರಾಚಾವರ ಜಾತಿಯ ಬ್ರಾಹ್ಮಣೇತರ ಪೂಜಾರಿಯನ್ನು ಬ್ರಾಹ್ಮಣನಿಂದ ಬದಲಾಯಿಸಲಾಯಿತು. ಹೀಗೆ ಮಾಡಲು ಕಾರಣವೇನೆಂದರೆ, ಸ್ಥಾನಿಕ ಗಂಗಮ್ಮ ದೇವಾಲಯದಲ್ಲಿ ಚಾಮುಂಡೇಶ್ವರಿಯನ್ನು ಪೂಜಿಸಲಾಗುತ್ತದೆ. ಅಲ್ಲಿ ಬ್ರಾಹ್ಮಣರೂ ಸಹಿತ ದೇವಿಯ ದರ್ಶನಕ್ಕೆ ಬರುತ್ತಾರೆ. ರಾಚಾವರ ಬ್ರಾಹ್ಮಣರು ತೀರ್ಥವನ್ನು ಸ್ವೀಕರಿಸುವುದಿಲ್ಲವಾದ್ದರಿಂದ ದೇವಸ್ಥಾನದ ಅಧಿಕಾರಿಗಳು ಈ ಬದಲಾವಣೆ ನಿರ್ಧಾರವನ್ನು ಕೈಗೊಂಡರು. ಒಕ್ಕಲಿಗ ಪ್ರದೇಶದ ಒಂದು ಸ್ಥಳದಲ್ಲಿ ಅದೇ ಜಾತಿಯವನೊಬ್ಬ ಪೌರೋಹಿತ್ಯ ವಹಿಸುತ್ತಾನೆ. ಅದೇ ಪ್ರದೇಶದ ಆ ಜಾತಿಯ ಇನ್ನೊಂದು ಸ್ಥಳದಲ್ಲಿ ಬ್ರಾಹ್ಮಣನು ಚಾಮುಂಡೇಶ್ವರಿಯ ಪೂಜೆ ಮಾಡುತ್ತಾನೆ. ಅಸ್ಪೃಶ್ಯ ಜಾತಿಯಲ್ಲಿ ದೇವತೆಯ ವಾರ್ಷಿಕ ಉತ್ಸವವನ್ನು ವೈಭವದಿಂದ ಆಚರಿಸಲಾಗುತ್ತದೆ. ಅದೇ ಜಾತಿಯವನೊಬ್ಬ ಆ ಸಂದರ್ಭದಲ್ಲಿ ಪೌರೋಹಿತ್ಯ ವಹಿಸುತತ್ನೆ. ಆದರೂ ಆದಿಜಾಂಬವ (ಕನ್ನಡ ಮಾದಿಗ) ಅಸ್ಪೃಶ್ಯ ಜಾತಿಯವನು ಕಾರಂಜಿಕೆರೆ[2] (ಬೆಟ್ಟದ ಅಡಿಯಿಂದ ಕೆಲವು ಫರ್ಲಾಂಗ್ ಅಂತರದಲ್ಲಿ ಕೆರೆ ಇದೆ)ಯ ಹತ್ತಿರ ಹೋಗಿ ಕಲಶ ಪ್ರತಿಷ್ಠಾಪಿಸಲು ಬ್ರಾಹ್ಮಣನನ್ನು ಪ್ರಾರ್ಥಿಸಿಕೊಳ್ಳುತ್ತಾನೆ ಎಂಬುದನ್ನು ಗಮನಿಸಿದೆವು. ಅವನು ಕಲಶ ಪ್ರತಿಷ್ಠಾಪಿಸಿ ಆ ಸ್ಥಳ ಬಿಟ್ಟನಂತರ ಕಲಶವನ್ನು ಅವರು ತಮ್ಮ ಪ್ರದೇಶಕ್ಕೆ ಪೂಜೆಗಾಗಿ ತರುತ್ತಾರೆ.

### ದೇವಿಯ ಸಾಂಕೇತಿಕ ರೂಪಗಳು :

ಮೈಸೂರು ನಗರದಲ್ಲಿ ಚಾಮುಂಡೇಶ್ವರಿಯನ್ನು ಪೂಜೆಯ ಕಾಲದಲ್ಲಿ ವಿವಿಧ ರೀತಿಯ

---

2. ನಂಜನಗೂಡಿನ ನಂಜುಂಡೇಶ್ವರ ಹಾಗೂ ಚಾಮುಂಡೇಶ್ವರಿಯ ಪ್ರೇಮದ ಕತೆಯನ್ನು ನಿರೂಪಿಸುವ ಜಾನಪದ ಹಾಡಿನಲ್ಲಿ ಈ ಕೆರೆಯ ಹೆಸರನ್ನು ಸೂಚಿಸಲಾಗಿದೆ. ಈ ನಿರೂಪಣೆಯ ಪ್ರಕಾರ ಚಾಮುಂಡೇಶ್ವರಿಯು ತನ್ನ ರತ್ನ ಖಚಿತವಾದ ಸೀರೆಯನ್ನು ಕೆರೆಯ ದಂಡೆಯ ಮೇಲೆ ಬಿಚ್ಚಿಟ್ಟು ಸ್ನಾನ ಮಾಡುವಾಗ, ಅಲ್ಲಿಗೆ ಹೋದ ನಂಜುಂಡೇಶ್ವರನು ಅದನ್ನು ತೆಗೆದುಕೊಂಡು ಮಾಯ ವಾಗಿದ್ದನು. ಚಾಮುಂಡೇಶ್ವರಿಯು ಬೆಟ್ಟದಲ್ಲಿಯ ತನ್ನ ಅರಮನೆಗೆ ತನ್ನ ಉದ್ದ ಕೂದಲುಗಳಿಂದ ಬೆತ್ತಲೆ ದೇಹವನ್ನು ಮುಚ್ಚಿಕೊಂಡು ಓಡಿ ಹೋದಳು. (ಓಡಿ ಬಂದಳು ಬೆಟ್ಟಕ್ಕೆ ಜಾನಪದ ಸಾಹಿತ್ಯ ಅಕಾಡೆಮಿ ಮೈಸೂರು 1965 ಮೂರನೆ ಆವೃತ್ತಿ ಪು. 70–72).

ಸಂಕೇತಗಳಲ್ಲಿ ಆರಾಧಿಸಲಾಗುವುದು. ಕಲಶ ಪೂಜೆಯು ಸಾಂಪ್ರದಾಯಿಕ ವಾಗಿ ಜನಪದ ಪದ್ಧತಿಯಾಗಿದೆ. ಚಾಮುಂಡೇಶ್ವರಿ ದೇವತೆಯನ್ನು ಇಂತಹ ಸಂಕೇತದ ಮುಖಾಂತರವೂ ಪೂಜಿಸಲಾಗುತ್ತದೆ. ಇತ್ತೀಚೆಗೆ ಕೆಲವು ಪ್ರದೇಶಗಳಲ್ಲಿ ಈ ಸಂಕೇತವನ್ನು ಭಾವಚಿತ್ರ, ವಿಗ್ರಹ ಮುಂತಾದವುಗಳು ಆಕ್ರಮಿಸಿವೆ. ಕೆಲವು ಸಂಪ್ರದಾಯಗಳು ಸಂಕೇತ ವಿಷಯದಲ್ಲಿ ಇನ್ನು ರೂಪಾಂತರದ ಸ್ಥಿತಿಯಲ್ಲಿ ಇವೆಯೆಂದು ತೋರುತ್ತದೆ. ರಾಜು ಎಂಬ ವಿಗ್ರಹ ತಯಾರಕನು ತಾನು ಪ್ರತಿವರ್ಷ ಚಾಮುಂಡೇಶ್ವರಿಯ ಮಣ್ಣಿನ ವಿಗ್ರಹಗಳನ್ನು ತಯಾರಿಸಲು ಬೇಡಿಕೆಗಳನ್ನು ಸ್ವೀಕರಿಸುತ್ತಿರುವುದಾಗಿ ಹೇಳಿದನು. ಪೂಜಾವಿಧಿ ಮುಗಿದ ನಂತರ ಈ ವಿಗ್ರಹಗಳನ್ನು ಒಗೆದುಬಿಡುತ್ತಾರೆ. ಇನ್ನು ಕೆಲವು ಸ್ಥಳಗಳಲ್ಲಿ ದೇವತೆಯ ಕಟ್ಟಿಗೆ ಹಾಗೂ ಮಣ್ಣಿನ ಮೂರ್ತಿಗಳನ್ನು ಇಡೀ ವರ್ಷ ಕಾದಿಡುತ್ತಾರೆ. ಯಾವುದೇ ಪ್ರದೇಶದವರು ಪೂಜೆಗಾಗಿ ಮೂರ್ತಿಯನ್ನು ಯಾಚಿಸಿದರೆ ಅದನ್ನು ಎರವಲಾಗಿ ಕೊಡಲಾಗುತ್ತದೆ. ಕೆಲವು ಕೇಂದ್ರಗಳು ಮೂರ್ತಿಗಳನ್ನು ಪುಕ್ಕಟ್ಟೆಯಾಗಿ ಕೊಟ್ಟರೆ ಇನ್ನು ಕೆಲವರು (ಬಣ್ಣ ಬಳಿಯುವ ಖರ್ಚಿಗಾಗಿ) ಸ್ವಲ್ಪ ಬಾಡಿಗೆಯನ್ನು ಪಡೆಯುತ್ತಾರೆ. ಉದಾಹರಣೆಗಾಗಿ : ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಳಿ ನೌಕರರ ಸಂಘದ ವ್ಯವಸ್ಥಾಪಕರು ದೇವರಾಜ ಮೊಹಲ್ಲಾದಿಂದ ಚಾಮುಂಡೇಶ್ವರಿಯ ಮೂರ್ತಿಯನ್ನು ಬಾಡಿಗೆ ಇಲ್ಲದೆ ಪಡೆದ ಸಂದರ್ಭ ಉಂಟು. ಆದರೆ ಮತ್ತೊಂದು ಮೊಹಲ್ಲಾದವರು ಬಂಡಮ್ಮ (ಸ್ಥಾನಿಕ ಅವೈದಿಕ ದೇವತೆ) ಪೂಜೆಗಾಗಿ ನೆರೆಯ ಮೊಹಲ್ಲಾದಿಂದ ಚಾಮುಂಡೇಶ್ವರಿಯ ಮೂರ್ತಿಯನ್ನು ಬಾಡಿಗೆಗೆ ತೆಗೆದುಕೊಳ್ಳಲು ಅವರೇಕೆ ಹಣಕೊಟ್ಟರೆಂದು ವಿಚಾರಿಸಲಾಗಿ, ಅವರಿಗೇನೂ ಹಣದ ಕೊರತೆಯಿಲ್ಲ ಹಾಗೂ ಅರಸು ಕುಟುಂಬಕ್ಕೆ ಹಣ ಕೊಡುವುದಕ್ಕೆ ಕೊರತೆಯಿಲ್ಲವೆಂದು ಅವರು ತಿಳಿಸಿದರು. ಈಗಾಗಲೇ ಅವರ ಬಗ್ಗೆ ಪ್ರಸ್ತಾಪಿಸಲಾಗಿದೆ. ಅವರು ಕುಂಬಾರಗೇರಿಯ ಪ್ರದೇಶದಲ್ಲಿ ಚಾಮುಂಡೇಶ್ವರಿಯ ಉತ್ಸವವನ್ನು ಪ್ರಾರಂಭಿಸಲು ಕಾರಣೀಭೂತರಾಗಿದ್ದಾರೆ. ಕಟ್ಟಿಗೆಯಿಂದ ಮಾಡಿದ ಮೂರ್ತಿಯೊಂದು ಅವರ ಹತ್ತಿರವಿದೆ. ಪ್ರತಿವರ್ಷ ಕನಿಷ್ಟ ಎರಡು ಪ್ರದೇಶಗಳಿಗಾದರೂ ಬಾಡಿಗೆಯ ರೂಪದಲ್ಲಿ ಮೂರ್ತಿಯನ್ನು ಕೊಡುತ್ತಾರೆ. ಒಬ್ಬ ಚಿತ್ರಮಂದಿರದ ಮಾಲೀಕನ ಹತ್ತಿರವೂ ಚಾಮುಂಡೇಶ್ವರಿಯ ಮೂರ್ತಿಯಿದೆ. ಅವನು ಅದನ್ನು 'ಮಹಿಷಾಸುರ ಮರ್ದಿನಿ' ಎಂಬ ಕನ್ನಡ ಚಲನ ಚಿತ್ರವು ಬಿಡುಗಡೆಯಾದಾಗ ಮಾಡಿಸಿದ್ದನು. ಅವನೂ ಸಹಿತ ವಿಗ್ರಹವನ್ನು ವಿವಿಧ ಮೊಹಲ್ಲಾಗಳಿಗೆ ಬಾಡಿಗೆಗೆ ಕೊಡುತ್ತಾನೆ.

ದೇವತೆಯ ವಾರ್ಷಿಕ ಸಮಾರಂಭದ ಅವಧಿಯು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದೆ. ಬಹಳಷ್ಟು ಸ್ಥಳಗಳಲ್ಲಿ ಉತ್ಸವವು 24 ಘಂಟೆಗಳಲ್ಲಿ ಮುಗಿಯುತ್ತದೆ. ಆದರೆ ಕೆಲವು ಕಡೆ ಇದರ ಅವಧಿಯನ್ನು 24 ಘಂಟೆಗಿಂತ ಹೆಚ್ಚು ವಿಸ್ತರಿಸಲಾಗಿದೆ. ಇಂತಹ ಸಂದರ್ಭಗಳಲ್ಲಿ ಭಜನೆ ಹರಿಕಥೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತದೆ. ವೈವಿಧ್ಯಮಯವಾದ ಈ ಉತ್ಸವ ವ್ಯಾಪ್ತಿಯಲ್ಲಿಯೇ ಕೆಲವು ಕ್ರಮಬದ್ಧ ಪದ್ಧತಿಗಳಿವೆ. ಮೊದಲನೆಯದಾಗಿ ಸಾಮಾನ್ಯವಾಗಿ ಸಮುದಾಯಿಕ ಚಾಮುಂಡೇಶ್ವರಿ ಪೂಜೆಯಲ್ಲಿ ಕಲಶ (ಇಲ್ಲವೆ ಕಲಶಗಳು–ಒಂದಕ್ಕಿಂತ ಹೆಚ್ಚು ದೇವತೆಗಳಿದ್ದರೆ) ಪೂಜೆಯನ್ನು ನೆರವೇರಿಸುವುದನ್ನು ನೋಡಿದೆವು. ಈ ಕಲಶ ಮುಖ್ಯವಾಗಿ ಚಾಮುಂಡೇಶ್ವರಿಯ ಸಂಕೇತ, ಕಲಶ ಪೂಜೆಯನ್ನು



ಚಾಮುಂಡೇಶ್ವರಿ ಬೆಟ್ಟದ ಅಡಿಯಲ್ಲಿ ನೆರವೇರಿಸುವುದು ಸಂಪ್ರದಾಯವಾಗಿದೆ. ದೇವಸ್ಥಾನದಿಂದ ತೀರ್ಥವನ್ನು ತರಲಾಗುತ್ತದೆ. ನಂತರ ಕಲಶವನ್ನು ಋತುಮತಿಯಾಗದ ಅವಿವಾಹಿತ ಹುಡುಗಿಯು ತಲೆಯ ಮೇಲೆ ಹೊತ್ತುಕೊಂಡು ಒಯ್ಯುತ್ತಾಳೆ. ಎರಡನೆಯ ಮಹತ್ವದ ಅಂಶವೆಂದರೆ ಕೆಲವು ಪ್ರದೇಶಗಳಲ್ಲಿ ನಡೆಯುವ ಪಶುಬಲಿ ದೇವತೆ ಎದುರಿಗೆ ಕನಿಷ್ಟ ಒಂದು ಪಶುವನ್ನಾದರೂ ಬಲಿ ಕೊಡುತ್ತಾರೆ. ಇದಕ್ಕೆ ಧೂಳುಮರಿ ಎಂದು ಹೆಸರು. ಪಶುಬಲಿ ಕ್ರಿಯಾವಿಧಿ ನಡೆಯುವಾಗ ಬ್ರಾಹ್ಮಣರು ಭಾಗವಹಿಸುವುದಿಲ್ಲ. ನಗರದ ಅಸ್ಪೃಶ್ಯ ಜಾತಿಯವರಾದ ಆದಿಕರ್ನಾಟಕ (ಹೊಲೆಯರು) ಆದಿಜಾಂಬವ (ಮಾದಿಗರು)ರು ತಮಟೆ ಬಾರಿಸುವ ಹಾಗೂ ಡಂಗುರ ಸಾರುವ ಕೆಲಸ ಮಾಡುತ್ತಾರೆ. ಕೊನೆಯದಾಗಿ ಪೂಜೆ ಮುಗಿದ ನಂತರ ದೇವಿಯ ವಿಸರ್ಜನೆ ಸಮಾರಂಭವನ್ನು ಏರ್ಪಡಿಸುತ್ತಾರೆ.

ಮೇಲೆ ಹೇಳಿದ ಮೂರು ಕ್ರಮಬದ್ಧ ಲಕ್ಷಣಗಳಲ್ಲಿಯ ವ್ಯತ್ಯಾಸ ವ್ಯಾಪ್ತಿಯನ್ನು ಚರ್ಚಿಸುವುದು ಸ್ವಾರಸ್ಯಕರವಾಗಿದೆ. ಋತುಮತಿಯಾಗದ ಹುಡುಗಿಯು ಕಲಶ ದೇವತೆಯನ್ನು ಹೊತ್ತುಕೊಂಡು ಒಯ್ಯುವಲ್ಲಿ ಇರುವ ಅವಳ ಅಂತಸು ಈ ಪ್ರದೇಶದ ಜಾನಪದ ಸಂಪ್ರದಾಯದ ಮಹತ್ವದ ಅಂಶವಾಗಿದೆ. ಬೆಟ್ಟದಲ್ಲಿ ನಡೆಯುವ ಕಣ್ಣಕನ್ನಡಿ ಉತ್ಸವದಲ್ಲಿ ಪ್ರಧಾನ ದೇವತೆಯನ್ನು ಋತುಮತಿಯಾಗದ ಹುಡುಗಿಯು ಕೊಂಡೊಯ್ಯುತ್ತಾಳೆಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಕಣ್ಣಕನ್ನಡಿ ಉತ್ಸವವು ದೇವತೆಯ ಬಾಲ್ಯಾವಸ್ಥೆಯನ್ನು ಸೂಚಿಸುತ್ತದೆ. ಈಗಿನ ರಥೋತ್ಸವ, ತೆಪ್ಪೋತ್ಸವಗಳೂ ಸಹಿತ ಇಂತಹವೇ ವಿಚಾರಗಳಿಂದ ಕೂಡಿವೆ. ಶಂಕರನಾರಾಯಣರು (1953 : 387) ಹೀಗೆ ಬರೆಯುತ್ತಾರೆ. "ದೇವಿಯನ್ನು ಕುಮಾರಿ ಹಾಗೂ ತಾಯಿಯ ಸ್ವರೂಪದಲ್ಲಿ ಪೂಜಿಸಲಾಗುತ್ತದೆ. ಕುಮಾರಿ ಚಾಮುಂಡೇಶ್ವರಿಗೆ 'ಬಾಲ' ಹಾಗೂ 'ಲಲಿತ' ಎಂಬ ಹೆಸರು. ಅವಳು ವಿಶ್ವದಲ್ಲೆಲ್ಲಾ ಕ್ರೀಡೆ ಆಡುತ್ತಾಳೆಂದು ಗ್ರಹಿಸಲಾಗಿದೆ.... ಅವಳು ಸ್ತ್ರೀ ಮಾತೆಯಾಗಿ ವಿಶ್ವವನ್ನು ಸೃಷ್ಟಿಸಿದ್ದಾಳೆ." ಮೈಸೂರಿನ ಜನರಿಗೆ ದೇವಿ ಬಗೆಗಿನ ಈ ವಿಚಾರವು ಎಷ್ಟರಮಟ್ಟಿಗೆ ಗ್ರಾಹ್ಯ ಎಂಬುದು ಹೆಚ್ಚಿನ ಸಂಶೋಧನೆಯಿಂದ ತಿಳಿಯಬೇಕಾದ ಅಂಶವಾಗಿದೆ. ಆದರೆ ಸಂಪ್ರದಾಯವು ಎತ್ತಿ ತೋರಿಸುವ ಅಂಶವೆಂದರೆ : ದೇವತೆಯನ್ನು ತಂದಾಗ ಅವಳು ಬಾಲ್ಯಾವಸ್ಥೆಯಲ್ಲಿದ್ದಾಳೆಂಬ ಗ್ರಹಿಕೆ; ಆ ಪ್ರದೇಶದಲ್ಲಿ ಅವಳನ್ನು ಪೂಜಿಸಿದಾಗ ಅವಳು ತಾಯಿಯ ಸ್ವರೂಪವೆಂಬ ತಿಳಿವಳಿಕೆ ಇದೆ. ಕಲಶವನ್ನು ಬೆಟ್ಟದ ಅಡಿಯಿಂದ ತರುವ ರೂಢಿಯನ್ನು ಕುಂಬಾರಗೇರಿ ಮೊಹಲ್ಲಾದ ಜನರು ಬಿಟ್ಟಿದ್ದಾರೆ. ಆದರೆ ಆ ಮೊಹಲ್ಲಾದಲ್ಲಿ ಅಲ್ಪ ವ್ಯತ್ಯಾಸವಿದೆ. ಬ್ರಾಹ್ಮಣ ಪುರೋಹಿತನು ಬೆಟ್ಟದ ಮೇಲಿದ್ದ ಚಾಮುಂಡೇಶ್ವರಿ ದೇವಸ್ಥಾನದಿಂದ ದೇವತೆಯ ತೀರ್ಥವನ್ನು ರಾಮಂದಿರಕ್ಕೆ ತಂದು ಅಲ್ಲಿ ಚಾಮುಂಡೇಶ್ವರಿಯ ಪೂಜೆ ಮುಗಿದ ನಂತರ (ಪುರೋಹಿತನು) ತೀರ್ಥವನ್ನು ಕೊಡುತ್ತಾನೆ. ಪ್ರಾರಂಭದಿಂದಲೇ ಅರಸು ಮನೆತನದ ಹಾಗೂ ರಾಮಮಂದಿರದ ಸಂಬಂಧವಿದ್ದು ಮೂಲಕ ಬ್ರಾಹ್ಮಣ ಜಾತಿಯವರು ಉಳಿದೆಲ್ಲ ಕ್ರಿಯಾವಿಧಿ ಗಳಲ್ಲಿ ಸಕ್ರಿಯ ಭಾಗವಹಿಸುತ್ತಾರೆ. ಉದಾಹರಣೆಗೆ : ದೇವತಾ ಪ್ರತಿಷ್ಠಾಪನದ ದಿನದಂದು ಅರ್ಚಕನನ್ನು ಹೊರತುಪಡಿಸಿ ಹೋಮ, ಸಹಸ್ರನಾಮ ಮುಂತಾದವುಗಳನ್ನು ಆಚರಿಸುವ ಸಲುವಾಗಿ ನಾಲ್ಕೈದು ಜನ ಬ್ರಾಹ್ಮಣರನ್ನು ಆಮಂತ್ರಿಸುತ್ತಾರೆ.

ಉತ್ಸವದಲ್ಲಿ ಬ್ರಾಹ್ಮಣರ ಪಾತ್ರ ಸಕ್ರಿಯವಾಗಿದ್ದಾಗ ಪಶುಬಲಿ ಲಹರಕೆ ಹೊತ್ತವರು ತಮ್ಮ ಮನೆಗಳಲ್ಲಿಯೇ ಹರಕೆ ಪೂರೈಸುವುದನ್ನು ಈಗಾಗಲೇ ಗಮನಿಸಿದ್ದೇವೆ. ಕುಂಬಾರ ಗಿರಿಯ ಜನರು ತಾವು ದೇವತೆಯ ಮೂರ್ತಿಯನ್ನು ತರುವ ಅರಸು ಕುಟುಂಬದ ಮನೆಯ ಸಮೀಪದಲ್ಲಿಯೇ ಕುಂಬಳಕಾಯಿಯನ್ನು ಅರ್ಪಿಸುವ ಪದ್ಧತಿ ವೈಶಿಷ್ಟ್ಯಪೂರ್ಣವಾಗಿದೆ. ಆದರೆ ನಗರದ ವಿವಿಧ ಪ್ರದೇಶಗಳಲ್ಲಿ, ಮಹತ್ವದ ಸ್ಥಳಗಳಲ್ಲಿ ಹಾಗೂ ದೇವತೆಯನ್ನು ಪ್ರತಿಷ್ಠಾಪಿಸಿದ ಸ್ಥಳಗಳಲ್ಲಿ ಪಶುಬಲಿ ನಡೆಯುತ್ತದೆ. ಪಶುಬಲಿ ಹರಕೆ ಹೊತ್ತವರು ಇಲ್ಲವೆ ವ್ಯವಸ್ಥಾಪಕ ಮಂಡಳಿಯವರು ಇದನ್ನು ಸ್ಥಾನಿಕ ಸಂಪ್ರದಾಯಕ ಅಂಗವೆಂದು ಪೂರೈಸುತ್ತಾರೆ. ಯಾವುದೇ ಸಂದರ್ಭದಲ್ಲಿ ಪಶುಬಲಿ ನಡೆಯುವಾಗ ಬ್ರಾಹ್ಮಣರು ಭಾಗವಹಿಸುವುದಿಲ್ಲ. ವಿಸರ್ಜನಾ ಸಮಾರಂಭದಲ್ಲಿ ಎಲ್ಲರೂ ಪಾಲ್ಗೊಳ್ಳುವರು. ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ಉತ್ಸವವು ನಡೆಯುವ ಸ್ಥಳಗಳಲ್ಲೆಲ್ಲಾ ಕಲಶದಲ್ಲಿ ಪೂಜೆಗಾಗಿ ಉಪಯೋಗಿಸುವ ಪವಿತ್ರ ನೀರನ್ನು ಕೆಳಗಿನ ಯಾವುದೇ ಸ್ಥಳದಿಂದ ತೆಗೆದುಕೊಳ್ಳಲಾಗುತ್ತದೆ : ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿ ಪಾದ (ಕಿಬ್ಬಿಪಾದ, ದೊಡ್ಡಕೆರೆ, ಕಾರಂಜಿಕೆರೆ ಮುಂತಾದ ಬೆಟ್ಟದಡಿಯಲ್ಲಿರುವ ಕೊಂಡಗಳು). ಪಡವಾರಹಳ್ಳಿಯ ಜನರು ಕಲಶವನ್ನು ಪೂಜಿಸುವುದಿಲ್ಲ. ಆದ್ದರಿಂದ ಅವರು ಇದಕ್ಕೆ ಹೊರತಾಗಿದ್ದಾರೆ. ಮೇಲೆ ಹೇಳಿದ ಸ್ಥಳಗಳನ್ನೆಲ್ಲಾ ಮೈಸೂರು ದೊರೆಗಳು ಕಟ್ಟಿಸಿದ್ದಾರೆ. ಇಲ್ಲವೆ ಜೀರ್ಣೋದ್ಧಾರ ಗೊಳಿಸಿದ್ದಾರೆ ಎಂಬ ಅಂಶವನ್ನು ಎತ್ತಿ ತೋರಿಸಬಹುದು. ಬ್ರಾಹ್ಮಣೇತರರು ಚಾಮುಂಡೇಶ್ವರಿ ಉತ್ಸವವನ್ನು ನಡೆಸುವ ಮೊಹಲ್ಲಾ ಒಂದರಲ್ಲಿ ಎಷ್ಟೋ ದಿನಗಳಿಂದ ಅರಮನೆಯ ಅಧಿಕಾರಿಗಳು ಓಲಗವನ್ನು ದೇವಿಯ ಗೌರವಾರ್ಥವಾಗಿ ಕಳಿಸುತ್ತಿದ್ದಾರೆ. ಮೊಹಲ್ಲಾಗಳಲ್ಲಿ ಚಾಮುಂಡೇಶ್ವರಿ ಉತ್ಸವವನ್ನು ಕೆಲವು ವಿವರಣೆಯನ್ನು 'ಬ' ಅನುಬಂಧದಲ್ಲಿ ಪವಿತ್ರ ಕ್ರಿಯಾಚರಣೆಗಳ ಎರಡು ನಿರೂಪಣೆಗಳಂತೆ ನಾವು ಕೊಟ್ಟಿದ್ದೇವೆ. ವೈಯಕ್ತಿಕ ಒಕ್ಕಲು ಕುಟುಂಬಗಳು ದೇವತೆಯ ಪೂಜೆಯನ್ನು ಮಾಡುವ ವಿಧಾನ ಮತ್ತು ಇತರ ವಿವರಗಳು ನಾವು ಈಗಾಗಲೇ ಗ್ರಾಮಗಳ ವಿಷಯಗಳಲ್ಲಿ ರೂಪಿಸಿದಂತೆ ಇವೆ.

**ಪೂಜೆಯ ಪ್ರೇರಣೆಗಳು :**

ಚಾಮುಂಡೇಶ್ವರಿ ಉತ್ಸವದ ಜನಪ್ರಿಯತೆಯು ಅವಳಿಗೆ ಸಮುದಾಯ ಪೂಜೆ ಸಲ್ಲಿಸುವಂತೆ ಮಾಡಿರುವುದೇ ನಮ್ಮ ಮುಂದಿನ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ ಉತ್ತರ ಕಾಣಲು ನಾವು ಮೈಸೂರು ನಗರದಲ್ಲಿ ವಾಸಿಸುವ ಜನರ ಸ್ವಭಾವ ಹಾಗೂ ದೇವತೆಯ ಬಗೆಗೆ ಅವರಿಗಿರುವ ತಿಳುವಳಿಕೆ–ಗ್ರಹಿಕೆಗಳನ್ನು ಲಕ್ಷ್ಯದಲ್ಲಿರಿಸಿಕೊಳ್ಳ ಬೇಕಾಗುತ್ತದೆ.

ಮೈಸೂರು ನಗರದಲ್ಲಿಯ ಮೊಹಲ್ಲಾಗಳ ಹೆಸರುಗಳು ಅಲ್ಲಿ ವಾಸಿಸುವ ಜನರ ಜಾತಿಯಿಂದ, ಇಲ್ಲವೆ ಅವರ ವೃತ್ತಿಯಿಂದ, ಇಲ್ಲವೆ ಮೈಸೂರು ರಾಜಮನೆತನದ ಪ್ರಮುಖ ವ್ಯಕ್ತಿಗಳನ್ನು ಆಧರಿಸಿವೆ. ಈ ಮೊಹಲ್ಲಾಗಳಲ್ಲಿ ವಾಸಿಸುವ ಬಹುಪಾಲು ಜನರು ಮೈಸೂರು ಅರಮನೆಯೊಡನೆ ವಿವಿಧ ರೀತಿಯಲ್ಲಿ ಸಂಬಂಧ ಹೊಂದಿದವ ರಾಗಿದ್ದಾರೆ. ಈಗಾಗಲೇ ಒಂದೆಡೆ ನಾವು ಚಾಮುಂಡೇಶ್ವರಿ ದೇವಸ್ಥಾನದ ಪೂಜೆಯ ವಿಧಾನವನ್ನು ಮಹತ್ವಪೂರ್ಣವಾಗಿ ಬದಲಿಸುವಲ್ಲಿ ರಾಜಮನೆತನವು ಎಷ್ಟರ ಮಟ್ಟಿಗೆ ಕಾರಣೀಭೂತವಾಗಿದೆ ಎಂಬುದನ್ನು ಚರ್ಚಿಸಿದ್ದೇವೆ. ಚಾಮುಂಡೇಶ್ವರಿಯ



ಪೂಜೆ–ಪುನಸ್ಕಾರಗಳೊಂದಿಗೆ ಮಹಾರಾಜರ ಸಂಬಂಧವು ಅತಿ ನಿಕಟವಾಗಿದೆ. ಕಜಿನ್ ಎಂಬುವವರು (1926) ಬರೆದ ಕಿರುಹೊತ್ತಿಗೆ "ಮೈಸೂರು ನಗರದಲ್ಲಿ ದಸರೆ' ದಿಂದ ಉದ್ಧರಿಸಿದ ಕೆಳಗಿನ ಅವತರಣಿಕೆಯು ನಾವು ಹೇಳಬೇಕಾದ ಅಂಶವನ್ನು ವಿವರಿಸುತ್ತದೆ.

ಉತ್ಸವದ ಮೊದಲ ದಿನದ ಬೆಳಿಗ್ಗೆ ಹಾಗೂ ನಿತ್ಯದ ಧಾರ್ಮಿಕ ಸಾಂಪ್ರದಾಯಕ ಕರ್ಮಾಚರಣೆಗಳ ನಂತರ ಘನತೆವೆತ್ತ ಶ್ರೀಮಾನ್ ಮಹಾರಾಜರು ಅರಮನೆಯ ಧಾರ್ಮಿಕ ಕಾರ್ಯಗಳನ್ನು ನೆರವೇರಿಸುವ 'ಚಾಮುಂಡಿ ತೊಟ್ಟಿಗೆ' ಹೋಗುವರು. ಗೃಹದೇವತೆಯ ವಿಗ್ರಹವನ್ನು ಚಾಮುಂಡಿ ತೊಟ್ಟಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ಸಂದರ್ಭದಲ್ಲಿ ಮಹಾರಾಜರು ವಿಶೇಷ ವಸ್ತ್ರಾಲಂಕೃತರಾಗಿ ಹಾಗೂ ದೇವತೆಗೆ ಪವಿತ್ರವೆನಿಸಿದ ಕಂಕಣ ತೊಟ್ಟು ದಯಮಾಡಿಸುವರು. ಉತ್ಸವದ 9ನೇ ದಿನದವರೆಗೆ ಶ್ರೀಮಾನ್ ಮಹಾರಾಜರು ಅರಮನೆ ಬಿಟ್ಟು ಹೊರಗೆ ಹೋಗುವುದಿಲ್ಲ. ಅವರ ಎಲ್ಲಾ ಶಕ್ತಿ ಹಾಗೂ ಲಕ್ಷ್ಯ ಉತ್ಸವದ ಜವಾಬ್ದಾರಿ ನೀಗಿಸುವಲ್ಲಿ ಕೇಂದ್ರಿಕೃತವಾಗಿರುತ್ತದೆ.

"ಉತ್ಸವ ಪ್ರಾರಂಭವಾಗುವುದಕ್ಕಿಂತ ಪೂರ್ವದಲ್ಲಿ ದರ್ಬಾರ್ ಹಾಲಿನಲ್ಲಿ ಮಹಾರಾಜರ ಸಿಂಹಾಸನವನ್ನು ಸ್ಥಾಪಿಸಲು ಶುಭಗಳಿಗೆಯನ್ನು ಆರಿಸುತ್ತಾರೆ. ಸಿಂಹದ ಪ್ರತಿಮೆಯನ್ನು ಆರಿಸುತ್ತಾರೆ. ಕಾಳಿಯು ರಾಕ್ಷಸರ ವಿರುದ್ಧ ಯುದ್ಧ ಮಾಡಲು ಸಿಂಹದ ಮೇಲೆಯೇ ಹೋಗಿದ್ದಳು. 'ಸಿಂಹಾಸನದ ವಿವರಣೆ ಹೀಗಿದೆ– ಸಿಂಹ ಮತ್ತು ಆಸನ. ಆಸನವೆಂದರೆ ಕೂಡ್ರ ತಕ್ಕ ರೀತಿ ಇಲ್ಲವೆ ಸ್ಥಳ ಎಂದು ಅರ್ಥ. ಆದ್ದರಿಂದಲೇ ಸಿಂಹಾಸನ ಏರುವುದೂ ಔಚಿತ್ಯಪೂರ್ಣ. ಆ ಸಂದರ್ಭದಲ್ಲಿ ಮಹಾರಾಜರು ಚಾಮುಂಡಿ ದೇವತೆಯ ಪ್ರತಿನಿಧಿಯೆಂದು ಭಾವಿಸುತ್ತಾರೆ. ದೇವತೆಯ ಆಶೀರ್ವಾದವನ್ನು ಜನತೆಗೆ ಕೋರುವ ಮಧ್ಯವರ್ತಿಯೆಂದೂ ಕೂಡ ತಿಳಿಯುತ್ತಾರೆ." ಇಂದಿನವರೆಗೆ ಅಲ್ಪ ಬದಲಾವಣೆಗಳೊಂದಿಗೆ ಮಹಾರಾಜರು ಈ ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಾರೆಂದು ಹೇಳಬಹುದು. ಉದಾಹರಣೆಗೆ : ಈ ವರ್ಷ ಕಜಿನ್ನರು ತಮ್ಮ ಕಿರುಹೊತ್ತಿಗೆಯಲ್ಲಿ ಉಲ್ಲೇಖಿಸಿದಕ್ಕಿಂತ ಭಿನ್ನವಾಗಿ ಮಹಾರಾಜರು ಸ್ಥಳೀಯ ಗೋಲ್ಡ್ ಸ್ಪರ್ಧೆಯ ವಿಜೇತರಿಗೆ ಪಾರಿತೋಷಕ ವಿತರಣೆ ಮಾಡಲು ಅರಮನೆಯ ಆವರಣ ಬಿಟ್ಟು ಹೊರಗೆ ಹೋಗಿದ್ದನ್ನು ಗಮನಿಸಿದೆವು. ದಸರಾ ಉತ್ಸವಗಳನ್ನು ಹಾಗೂ ಈ ಕಾರ್ಯಕ್ರಮಗಳನ್ನು ವೀಕ್ಷಿಸುವ ಜನರು ಸ್ವಾಭಾವಿಕ ವಾಗಿ ಮಹಾರಾಜರು ಚಾಮುಂಡೇಶ್ವರಿ ದೇವಿಗೆ ತೋರಿಸುವ ಗೌರವವನ್ನು ಅನುಕರಿಸಲು ದೇವತೆಯಾದ ಗೌರಿಯ ಸ್ಮರಣೆ ಬರುತ್ತದೆ. ಜನರು ಗೌರಿಯನ್ನು ಚಾಮುಂಡೇಶ್ವರಿಯ ರೂಪವೆಂದೇ ಅರ್ಥೈಸುತ್ತಾರೆ. ಚಾಮುಂಡೇಶ್ವರಿ ದೇವತೆಯನ್ನು ಮನೆದೇವರನ್ನಾಗಿ ಹೊಂದಿರುವ ಕೆಲವು ಜನರಿಗೆ 'ದೇವರ ಒಕ್ಕಲೆಂದು' ಹೆಸರು. ಈ ಎಲ್ಲ ಜನರು ಮೈಸೂರು ನಗರದಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಾಮುಂಡೇಶ್ವರಿಯ ಪೂಜೆ ಹಾಗೂ ಅವರ ಬಗೆಗಿದ್ದ ನಂಬಿಕೆಯನ್ನು ಪ್ರಚುರಗೊಳಿಸಲು ನೆರವಾಗಿದ್ದಾರೆ.

**ಚಾಮುಂಡೇಶ್ವರಿ ಗೃಹಿಕೆ :**

ಉತ್ಸವ ಆಚರಿಸುವ ಮೈಸೂರು ನಗರದ ಜನರೆಲ್ಲ ಚಾಮುಂಡೇಶ್ವರಿ ದೇವತೆಯು ಜನರ

ಕಲ್ಯಾಣ ಬಯಸುವ ದೇವತೆಯೆಂದು ಭಾವಿಸಿ ಅವಳನ್ನು ಗ್ರಾಮದೇವತೆಗೆ ಸಮೀಕರಿಸಿದ್ದಾರೆ. ಅವರ ದೃಷ್ಟಿಯಲ್ಲಿ ಚಾಮುಂಡೇಶ್ವರಿಯು ಮಹಿಷಾಸುರನೆಂಬ ರಾಕ್ಷಸನನ್ನು ಅಲ್ಲದೆ ರೋಗರುಜಿನಗಳನ್ನು ಹರಡುವ ಪ್ರೇತವನ್ನು ಕೊಲ್ಲುವವಳಾಗಿದ್ದಾಳೆ. ಅವಳ ಪ್ರಾಮುಖ್ಯತೆಯನ್ನು ಸ್ಥಳೀಯ ಎಲ್ಲ ದೇವತೆಗಳ ಹಿರಿಯ ಸಹೋದರಿ ಹಾಗೂ ಮೈಸೂರು ಮಹಾರಾಜರ ಮನೆ ದೇವತೆ ಎಂಬ ಎರಡು ಅಂಶಗಳಿಂದ ಎತ್ತಿ ತೋರಿಸಲಾಗಿದೆ.

ಈಗ ನಮ್ಮ ಮುಂದಿರುವ ಪ್ರಶ್ನೆಯೆಂದರೆ – ಪ್ರಮುಖ ಪರಿಣತರಾಗಿದ್ದರೂ ಚಾಮುಂಡೇಶ್ವರಿಯ ಉತ್ಸವವನ್ನು ಆಚರಿಸಿದವರು ಹಾಗೂ ಹಿಂದೂ ಸಂಪ್ರದಾಯಗಳನ್ನು ಅರ್ಥೈಸುವವರು ದೇವತೆಯ ಬಗೆಗೆ ಏನು ತಿಳಿದಿದ್ದಾರೆ? ಚಾಮುಂಡೇಶ್ವರಿ ಆರಾಧನೆಯಲ್ಲಿ ಅವರ ಪಾತ್ರವೇನು ? ಈ ಪ್ರಶ್ನೆಗಳಿಗೆಲ್ಲಾ ಉತ್ತರ ದೊರಕಿಸಲು ನಾವು ಕೆಲ ಹಿಂದೂ ಸಂಪ್ರದಾಯಗಳನ್ನು ಅರ್ಥೈಸುವ ಸುಶಿಕ್ಷಿತರನ್ನು ಸಂಪರ್ಕಿಸಿ ಅವರೊಡನೆ ವಿಷಯ ಚರ್ಚಿಸಿದೆವು. ಸಂಸ್ಕೃತ ಮಹಾವಿದ್ಯಾಲಯ, ಮಠಗಳು, ಸದಸ್ಯರು, ಹರಿಕಥೆ ಮಾಡುವವರು (ಪುರಾಣ ಪ್ರತಿಪಾದಕರು), ಧರ್ಮಾಧಿಕಾರಿಗಳು (ಅರಮನೆಯ ಧರ್ಮಕರ್ತರು), ಶಿಲ್ಪಿಗಳು, ವಿಗ್ರಹ ತಯಾರಕರು ಹಾಗೂ ಇತರ ವೃತ್ತಿಯವರನ್ನು ನಾವು ಕಂಡೆವು. ಇವರೆಲ್ಲ ಹೆಚ್ಚಾಗಿ ಬ್ರಾಹ್ಮಣ ಜಾತಿಯವರಾಗಿದ್ದರೂ ಕೆಲವರು ಬ್ರಾಹ್ಮಣೇತರರೂ ಇದ್ದರು. ನಾವು ಆರಿಸಿಕೊಂಡ ಮಾದರಿ ನಮೂನೆಯು ಸಮಗ್ರವಾಗಿರದಿದ್ದರೂ, ಈ ಚರ್ಚೆಯಿಂದ ಮೂಡಿಬಂದ ಚಿತ್ರಣವು, ನಮ್ಮ ಮಾದರಿ ನಮೂನೆಯನ್ನು ವಿಶಾಲಗೊಳಿಸಿದಾಗ ಬರಬಹುದಾದ ಚಿತ್ರಣಕ್ಕಿಂತ ಭಿನ್ನವಾಗಿರಲಾರದೆಂದು ನಾವು ಭಾವಿಸಿದ್ದೇವೆ.

ಈ ಎಲ್ಲ ಜನರನ್ನು ಜಾತಿ, ಮತ, ಪಂಥ ಇಲ್ಲವೆ ವೃತ್ತಿ ಮುಂತಾದ ದೃಷ್ಟಿಕೋನ ಗಳಿಂದ ನೋಡಿದರೂ ಸಹ ನಾವು ಕಂಡುಕೊಂಡ ಅಂಶವೆಂದರೆ – ಅವರೆಲ್ಲ ಚಾಮುಂಡೇಶ್ವರಿ ದೇವಿಯನ್ನು ಮಾರ್ಗಸಂಸ್ಕೃತಿಯ ಸ್ತ್ರೀ ದೇವತೆಯೆಂದೇ ಭಾವಿಸುತ್ತಾರೆ. ಸುಶಿಕ್ಷಿತ ಜನ ಸಂಸ್ಕೃತ ಮಂತ್ರಗಳನ್ನು ಪೌರಾಣಿಕ ಕಥೆಗಳನ್ನು ಉದಾಹರಿಸಿ ತಮ್ಮ ದೃಷ್ಟಿಕೋನವನ್ನು ಮಂಡಿಸಿದರು. ವೈಷ್ಣವ ಬ್ರಾಹ್ಮಣರು ಚಾಮುಂಡೇಶ್ವರಿಯು ಮಹಾಲಕ್ಷ್ಮಿಯ (ವಿಷ್ಣುವಿನ ಮಡದಿ) ಅವತಾರ ಎಂಬ ಅಂಶದ ಮೇಲೆ ಬೆಳಕು ಚೆಲ್ಲಿದರು. ಏಕೆಂದರೆ ತಾತ್ವಿಕವಾಗಿ ಅವರು ಶಿವನ ಮಡದಿಯನ್ನು ಪೂಜಿಸುವುದು ಅನಪೇಕ್ಷಣೀಯ. ಆದರೆ ಸ್ಮಾರ್ತ ಬ್ರಾಹ್ಮಣರು ಹಾಗೂ ಉಳಿದ ಜಾತಿ–ಮತದವರು ದೇವತೆಯನ್ನು ವಿವಿಧ ರೂಪದಲ್ಲಿ ಗ್ರಹಿಸುತ್ತಾರೆ. ಚಾಮುಂಡೇಶ್ವರಿ ದೇವತೆಯೆಂದರೆ ಪಾರ್ವತಿಯ ಅವತಾರ. ನಂಜುಡೇಶ್ವರನ ಹೃದಯ, ಶಿವಶಕ್ತಿ, ಮಹಿಷಾಸುರ ಮರ್ದಿನಿ (ದುಷ್ಟ ಶಕ್ತಿಗಳನ್ನು ಕೊಲ್ಲುವ ದಿವ್ಯಶಕ್ತಿಯ ಸಂಕೇತ) ಎಂದು ಹೇಳಲಾಗುತ್ತದೆ. ಚಾಮುಂಡೇಶ್ವರಿಯು ಮಹಿಷಾಸುರನನ್ನು ಕೊಂದ ಕತೆಯು ಎಲ್ಲರಿಗೂ ಗೊತ್ತಿದ್ದರೂ ಈ ಕಥೆಯನ್ನು ಪುಷ್ಟೀಕರಿಸಲು ವಿವಿಧ ವಿವರಣೆಗಳನ್ನು ಮುಂದಿಡಲಾಗುತ್ತದೆ. ದುಷ್ಟಶಕ್ತಿಗಳ ಮೇಲೆ ಶಿಷ್ಟಶಕ್ತಿಗಳೇ ಜಯಶಾಲಿಯಾಗುತ್ತವೆ. 'ನಿಸರ್ಗ–ದೇವತೆ–ಮಾನವ ಸಂಬಂಧ' ಮುಂತಾದ ಹಿಂದೂ ನೈತಿಕ ಸಂಪ್ರದಾಯದ ಮುಖ್ಯ ವಿಷಯಗಳನ್ನು ಸರಿಹೊಂದುವ ರೀತಿಯಲ್ಲಿ ವಿವರಣೆ ಕೊಟ್ಟರು. ಕೆಲವು ಸುಶಿಕ್ಷತ ತತ್ವಜ್ಞಾನಿಗಳು ದೇವತೆಯನ್ನು ಹಿಂದೂ ಕಾಲಚಕ್ರದ ಉಪಮೆಯನ್ನು



ಬಳಸಿ, ಚಾಮುಂಡೇಶ್ವರಿಯು ಕಲಿಯುಗದ ದೇವತೆ ಎಂಬ ಅರ್ಥ ಕೊಟ್ಟರು. ಶ್ರೀ ವೈಷ್ಣವ ಬ್ರಾಹ್ಮಣರನ್ನು ಹೊರತುಪಡಿಸಿ ಎಲ್ಲ ಜಾತಿ, ಮತ, ಪಂಥದ ಜನರು ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗುವ ಪ್ರಸಂಗ ಒದಗಿದಾಗ ದೇವತೆಯು ಮಹಾಲಕ್ಷ್ಮಿಯ ಸ್ವರೂಪವೆಂದು ತಮ್ಮ ಸಂದರ್ಶನವನ್ನು ಸಮರ್ಥಿಸಿಕೊಳ್ಳುತ್ತಾರೆ. ಇನ್ನೂ ಕೆಲವು ವೈಷ್ಣವ ಬ್ರಾಹ್ಮಣರು ತಾವು ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗುವ ಪ್ರಸಂಗ ಒದಗಿದಾಗ ದೇವತೆಯು ಮಹಾಲಕ್ಷ್ಮಿಯ ಸ್ವರೂಪವೆಂದು ತಮ್ಮ ಸಂದರ್ಶನವನ್ನು ಸಮರ್ಥಿಸಿಕೊಳ್ಳುತ್ತಾರೆ. ಇನ್ನೂ ಕೆಲವು ವೈಷ್ಣವ ಬ್ರಾಹ್ಮಣರು ತಾವು ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗುವುದು ತಮ್ಮ ಮನೋ ವೈಶಾಲ್ಯದ ಕುರುಹು ಎಂದು ಬಡಾಯಿ ಕೊಚ್ಚಿಕೊಂಡು ಹೆಮ್ಮೆ ಪಡುತ್ತಾರೆ. ಉಳಿದವರು ಅವಶ್ಯಕವೆನಿಸಿದಾಗ ದೇವಸ್ಥಾನಕ್ಕೆ ಹೋಗುತ್ತಾರೆ. ಆದರೆ ಅವರು ವಿವಿಧ ಮೊಹಲ್ಲಾಗಳಲ್ಲಿ ಏರ್ಪಡಿಸಿದ ಚಾಮುಂಡೇಶ್ವರಿಯ ಪೂಜೆಯಲ್ಲಿ ಎಂದೂ ಪಾಲ್ಗೊಳ್ಳುವುದಿಲ್ಲ.

ಶ್ರೀ ಸಾಮಾನ್ಯ ಹಾಗೂ ಪಂಡಿತ ವರ್ಗದವರು ಚಾಮುಂಡೇಶ್ವರಿಯ ಬಗ್ಗೆ ತಳೆದ ಗ್ರಹಿಕೆಯ ಭೇದ ಗಮನಾರ್ಹವಾಗಿದೆ. ಈ ಮೊದಲೇ ಹೇಳಿದಂತೆ ಬ್ರಾಹ್ಮಣೇತರರಿಂದ ಕೂಡಿದ ಶ್ರೀ ಸಾಮಾನ್ಯರ ವರ್ಗವು ಮೈಸೂರು ನಗರ ಹಾಗೂ ಅದರ ನೆರೆಹೊರೆ ಪ್ರದೇಶದ ಅಧಿ ದೇವತೆಯೆಂದರೆ ಚಾಮುಂಡೇಶ್ವರಿಯೆಂದು ಭಾವಿಸುತ್ತಾರೆ. ಆದರೆ ಹೆಚ್ಚಾಗಿ ಬ್ರಾಹ್ಮಣರಿರುವ ಪಂಡಿತ ವರ್ಗ ಚಾಮುಂಡೇಶ್ವರಿ ಯನ್ನು ಸರ್ವಶಕ್ತ ಭಗವಂತನ ಸ್ತ್ರೀ ಸ್ವರೂಪವೆಂದು ಭಾವಿಸುತ್ತಾರೆ. ಶ್ರೀಸಾಮಾನ್ಯರು ಚಾಮುಂಡೇಶ್ವರಿಯನ್ನು ನಗರ ಹಾಗೂ ನೆರ ಪ್ರದೇಶದ ದೃಷ್ಟಿ ಕೋನದಿಂದ ನೋಡುತ್ತಾರೆ. ಅವರ ವಿಚಾರಗಳು ಆ ಪ್ರದೇಶದ ಬೇರೆ ದೇವತೆಗಳ ನಂಬಿಕೆಗಳೊಂದಿಗೆ ಹೆಚ್ಚು ಹೋಲಿಕೆಯುಳ್ಳದ್ದಾಗಿದೆ. ತದ್ವಿರುದ್ಧವಾಗಿ ಪಂಡಿತ ವರ್ಗವು ಚಾಮುಂಡೇಶ್ವರಿಯನ್ನು ವೈದಿಕ ಸಂಸ್ಕೃತಿಯ ದೃಷ್ಟಿಕೋನಗಳನ್ನು ಕಟ್ಟುನಿಟ್ಟಾಗಿ ಪ್ರತ್ಯೇಕಿಸುವಂತಿಲ್ಲ , ಇದಕ್ಕೆ ವಿರುದ್ಧವಾಗಿ ಈ ವಿಚಾರಗಳನ್ನು ಅರ್ಥೈಸುವ ರೀತಿ ಎರಡೂ ಗುಂಪುಗಳ ಸಾಮಾನ್ಯ ಲಕ್ಷಣವಾಗಿದೆ. ಏಕೆಂದರೆ ಪಂಡಿತ ವರ್ಗದಲ್ಲಿ ಸಂಪ್ರದಾಯಸ್ಥ ಗ್ರಾಮ ಮೂಲದ ಎಷ್ಟೋ ಸುಶಿಕ್ಷಿತ ಜನರಿದ್ದಾರೆ ಹಾಗೂ ಶ್ರೀಸಾಮಾನ್ಯರಲ್ಲಿ ಮುಗ್ಧರಂತೆ ತೋರುವ, ಆದರೆ ಪ್ರತಿಯೊಂದನ್ನು ತಾತ್ವಿಕ ನಿಲುವಿನಿಂದ ನೋಡುವ ಎಷ್ಟೋ ಜನರಿದ್ದಾರೆ.

## ‘ಅ’ ಅನುಬಂಧ:

### ಉತ್ತನಹಳ್ಳಿ ದೇವತೆಯ ಸಮ್ಮಿಶ್ರ ಕ್ರಿಯಾವಿಧಿ :

ಉತ್ತನಹಳ್ಳಿ ದೇವತೆಯ ದೇವಾಲಯ ಉತ್ತನಹಳ್ಳಿ ಸಮೀಪದ ದಿನ್ನೆಯ ಮೇಲಿದೆ. ದಂತ ಕಥೆಗಳ ಪ್ರಕಾರ ಈ ದೇವತೆಯನ್ನು ಚಾಮುಂಡೇಶ್ವರಿಯ ತಂಗಿಯೆಂದು ತಿಳಿಯಲಾಗಿದೆ. ಬ್ರಾಹ್ಮಣರು, ಲಿಂಗಾಯಿತರು ಹಾಗೂ ಶಿವಾರ್ಚಕರು ಈ ದೇವತೆಯನ್ನು ‘ಜ್ವಾಲ ತ್ರಿಪುರ ಸುಂದರಿ’ ಎಂದು ವರ್ಣಿಸಿದರೆ, ಬೇರೆ ಜಾತಿಯ ಜನ ಅವಳನ್ನು ಗ್ರಾಮ ದೇವತೆಯಾದ ಮಾರಮ್ಮನ ರೂಪವೆಂದು ಭಾವಿಸುತ್ತಾರೆ. ಈ ದೇವಾಲಯದ ಪೂಜಾರಿಯು ಲಿಂಗಾಯಿತ. ಈ ದೇವತೆಯ ಗೌರವಾರ್ಥವಾಗಿ ನಡೆಸುವ ವಾರ್ಷಿಕ ಉತ್ಸವವೊಂದೇ ಅತಿ ಮಹತ್ವದ ಆಚರಣೆಯಾಗಿದೆ. ವಾರ್ಷಿಕ ಉತ್ಸವದಲ್ಲಿ ಮೂರು ಸಮ್ಮಿಶ್ರಿತ ಮಹತ್ವದ ಕ್ರಿಯಾವಿಧಿಗಳು ಒಳಗೊಂಡಿವೆ. ಅವು ಯಾವುವೆಂದರೆ (ಅ) ಕಣ್ಣಕನ್ನಡಿ, (ಬ) ಬಾಯಿ ಬೀಗದ ಹಬ್ಬ, (ಕ) ಮಡಿ ಹುಯ್ಯುದು. ಈ ಆಚರಣೆಯನ್ನು ಸಂಕ್ಷಿಪ್ತವಾಗಿ ವರ್ಣಿಸಲಾಗಿದೆ.

### (ಅ) ಕಣ್ಣಕನ್ನಡಿ :

ಕಣ್ಣಕನ್ನಡಿಯ ಆಚರಣೆಯು ಭಕ್ತರಿಗೆ ಉತ್ತನಹಳ್ಳಿಯಮ್ಮನನ್ನು ಸಾಂಕೇತಿಕ ರೂಪದಲ್ಲಿ ಪ್ರದರ್ಶಿಸುವುದೆಂದು ಕಾಣುತ್ತದೆ. ದೇವಾಲಯದಲ್ಲಿ ಉತ್ಸವಮೂರ್ತಿ ಇಲ್ಲದ್ದರಿಂದ ಕಣ್ಣಕನ್ನಡಿಯನ್ನು ಆ ದೇವಾಲಯದ ಲಿಂಗಾಯಿತ ಪೂಜಾರಿಯೇ ಬೆಟ್ಟದ ಶಿವಾರ್ಚಕ ಪೂಜಾರಿಗಳು ಚಾಮುಂಡೇಶ್ವರಿ ದೇವತೆಗಾಗಿ ಮಾಡಿದಂತೆ ತನ್ನ ಮನೆಯಲ್ಲಿಯೇ ಮಾಡುತ್ತಾನೆ. ಚಾಮುಂಡೇಶ್ವರಿಯ ಕಣ್ಣಕನ್ನಡಿ ಉತ್ಸವದಲ್ಲಿ ಉಪಯೋಗಿಸುತ್ತಾರೆ. ಒಂದೇ ವ್ಯತ್ಯಾಸವೆಂದರೆ ಕಣ್ಣಕನ್ನಡಿಯನ್ನು ನಿರ್ಮಿಸಿ ಪೂಜಾರಿಯ ಮನೆಯಲ್ಲಿಯೇ ಪ್ರತಿಷ್ಠಾಪಿಸಿ ಅಲ್ಲಿಯೇ ಪೂಜೆ ನೆರವೇರಿಸುತ್ತಾರೆ. ಭಕ್ತರು ಪೂಜಾಸಾಮಗ್ರಿಗಳನ್ನು ಹಾಗೂ ತಂಬಿಟ್ಟನ್ನು ಕಣ್ಣಕನ್ನಡಿಗೆ ಅರ್ಪಿಸುತ್ತಾರೆ. ಅವುಗಳನ್ನು ಪೂಜಾರಿಯು ನಿವೇದಿಸಿ ಭಕ್ತರಿಗೆ ಪ್ರಸಾದವೆಂದು ಹಿಂದಿರುಗಿಸುತ್ತಾನೆ. ಪೂಜೆಯ ಸಮಯಕ್ಕೆ ನಾವು ನಿರೀಕ್ಷಿಸಿದಂತೆ ಅವನು ಯಾವುದೇ ಸಂಸ್ಕೃತ ಮಂತ್ರವನ್ನಾಗಲೀ, ಸ್ತೋತ್ರಗಳನ್ನಾಗಲೀ ಪಠಿಸಲಿಲ್ಲ. ನಾವು ಅವನೊಂದಿಗೆ ಮಂತ್ರ ಪಠಣದ ವಿಷಯವಾಗಿ ವಿಚಾರಿಸಿದಾಗ ಅವನು ಕೊಟ್ಟ ಉತ್ತರ ಇದು : “ನಮ್ಮದು ಗ್ರಾಮ್ಯ ಪದ್ಧತಿಯ ಮೌನರೂಪದ ಪೂಜೆಯಾಗಿದೆ”.

ಕಣ್ಣಕನ್ನಡಿ ಪೂಜೆಯಾದ ನಂತರ ಗ್ರಾಮದಲ್ಲಿ ಅದರ ಮೆರವಣಿಗೆ ತೆಗೆಯುತ್ತಾರೆ. ಋತುಮತಿಯಾಗದ, ಅವಿವಾಹಿತ ಹುಡುಗಿಯರು ಕಣ್ಣಕನ್ನಡಿಯನ್ನು ಕೊಂಡೊಯ್ಯುತ್ತಾರೆ. ದೇವಾಲಯಕ್ಕೆ ಸಂಬಂಧಿಸಿದ ಅಗಸನು ಹಾಸಿಗೆ ನಾಡಮಡಿ (ಹಡದಿ) ಬಟ್ಟೆಯ ಮೇಲೆ ಕಣ್ಣಕನ್ನಡಿಯನ್ನು ಹೊತ್ತುಕೊಂಡು ಹುಡುಗಿಯು ನಡೆಯುತ್ತಾಳೆ. ಮೈಸೂರು ಮಹಾರಾಜರ ಅರಮನೆಯ ಅಧಿಕಾರಿಗಳು ಚಾಮುಂಡೇಶ್ವರಿಯ ಸಹೋದರಿಗೆ ಗೌರವ ತೋರಲು ಡೈನಮೊ,



ಗ್ಯಾಸುಗಳು, ಬ್ಯಾಂಡ್‌ಸೆಟ್ ಹಾಗೂ ಗೌರವಸೂಚಕ ಪತಾಕೆ ಮುಂತಾದವುಗಳನ್ನು ಕಳಿಸುತ್ತಾರೆ. ಕಣ್ಣಕನ್ನಡಿ ದೇವತೆಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಓಲಗ, ಸಂಗೀತ, ದೀಪಗಳೊಂದಿಗೆ ಮೆರವಣಿಗೆ ಮಾಡುತ್ತಾರೆ. ಇವುಗಳನ್ನು ಪೂಜಾರಿಯು ಉಚಿತ ರೀತಿಯಲ್ಲಿ ನಿವೇದಿಸಿ ಪ್ರಸಾದವನ್ನು ಹಿಂದಿರುಗಿಸುತ್ತಾನೆ. ಈ ಕ್ರಿಯಾವಿಧಿಯ ಆಚರಣೆಯು ರಾತ್ರಿ ಸುಮಾರು ಹತ್ತು ಗಂಟೆಗೆ ಪ್ರಾರಂಭವಾಗಿ ಬೆಳಗಿನಲ್ಲಿ ಮುಕ್ತಾಯ ವಾಗುವುದು. ಕಣ್ಣಕನ್ನಡಿ ದೇವತೆಯನ್ನು ಮೆರವಣಿಗೆಯ ನಂತರ ಉತ್ತನಹಳ್ಳಿ ಯಮ್ಮನ ದೇವಾಲಯಕ್ಕೆ ಒಯ್ದು ಕೂಡಲೇ ಕ್ರಿಯಾವಿಧಿ ಮುಗಿಯಿತೆಂದು ಅರ್ಥ.

### (ಬ) ಬಾಯಿಬೀಗದ ಹಬ್ಬ:

ಕಣ್ಣಕನ್ನಡಿ ಆಚರಣೆಯ ಮರುದಿನ ಬೆಳಿಗ್ಗೆ ಉತ್ತನಹಳ್ಳಿಯಮ್ಮನ ದೇವಾಲಯದ ಪ್ರಾಕಾರದಲ್ಲೇ ಬಾಯಿಬೀಗದ ಹಬ್ಬದ ಆಚರಣೆ ನಡೆಯುತ್ತದೆ. ಬಾಯಿ ಬೀಗದ ಹಬ್ಬವೆಂದರೆ ಬಾಯಿಗೆ ಬೀಗ ಹಾಕುವುದು ಹಾಗೂ ತೆಗೆಯುವುದು. ಎಷ್ಟೋ ಜನ ಭಕ್ತರು ಉತ್ತನಹಳ್ಳಿಯಮ್ಮನಲ್ಲಿ ತಮ್ಮ ಕಷ್ಟಗಳನ್ನು ನಿವಾರಿಸುವಂತೆ ಹರಕೆ ಹೊತ್ತಿರುತ್ತಾರೆ. ಕಷ್ಟ ಪರಿಹಾರವಾದ ಸಂದರ್ಭದಲ್ಲಿ ಅವರು ಬಾಯಿಗೆ ಬೀಗ ಹಾಕಿಕೊಳ್ಳುವ ಹರಕೆಯನ್ನು ಪೂರೈಸುವುದು ಕಂಡುಬರುತ್ತದೆ. ಆ ದಿನದಂದು ಎಷ್ಟೋ ಭಕ್ತರು ಈ ಹರಕೆ ಪೂರೈಸುವುದು ಕಂಡುಬರುತ್ತದೆ. ಉತ್ತನಹಳ್ಳಿಯಮ್ಮ ದೇವತೆಯು ಅತ್ಯಂತ ಜಾಗೃತ ದೇವತೆಯೆಂದು ಪರಿಗಣಿಸಲಾಗುತ್ತದೆ. ಅವಳಿಗೆ ಹೊತ್ತ ಹರಕೆಗಳು ಹುಸಿಹೋಗುವುದಿಲ್ಲವೆಂಬ ಭಾವನೆಯಿದೆ. ನೆರೆಯ ಗ್ರಾಮಗಳ ಭಕ್ತರು ಕೂಡ ಉತ್ತನಹಳ್ಳಿಯಮ್ಮನಿಗೆ ಹರಕೆ ಹೊರುತ್ತಾರೆ.

ಬಾಯಿಗೆ ಬೀಗ ಹಾಕುವ ಕ್ರಿಯಾವಿಧಿ ಪೂರೈಸುವ ಭಕ್ತರು ನಸುಕಿನಲ್ಲಿಯೇ ಸ್ನಾನಮಾಡಿ ದೇವಾಲಯದಲ್ಲಿದ್ದ ಲಿಂಗಾಯಿತ ಪೂಜಾರಿಯಲ್ಲಿಗೆ ಬರುತ್ತಾರೆ. ಅವನು ವಿಶೇಷ ಪ್ರಕಾರದ ಬೀಗಗಳನ್ನು ಉಪಯೋಗಿಸುತ್ತಾನೆ. ಬೆಳ್ಳಿಯ ತಂತಿಯಿಂದ ಚಚೌಕ ಬೀಗ ಮಾಡಲಾಗಿರುತ್ತದೆ. ಇದರ ಒಂದು ತುದಿಯು ತೆಳ್ಳಗಿದ್ದು ಚೂಪಾಗಿರುತ್ತದೆ. ಇನ್ನೊಂದು ತುದಿಯು ಕೊಂಡಿಯಂತಿದ್ದು ಬಾಗಿರುತ್ತದೆ. ಈ ಕ್ರಿಯಾವಿಧಿಯನ್ನು ಪೂಜಾರಿಯು ಚೂಪಾದ ತುದಿಯಿಂದ ಭಕ್ತದ ಗಲ್ಲಕ್ಕೆ ಚುಚ್ಚಿ ಕೊಂಡಿಯಿದ್ದ ಇನ್ನೊಂದು ತುದಿಯಿಂದ ಬೀಗ ಹಾಕುತ್ತಾನೆ.ಇದು ಬೀಗದಂತೆ ಭದ್ರವಾಗಿರುವುದರಿಂದ ಭಕ್ತರಿಗೆ ಬಾಯಿ ತೆಗೆಯಲು ಬರುವುದಿಲ್ಲ. ಹೀಗೆ ಬೀಗ ಹಾಕಿಸಿಕೊಂಡ ಭಕ್ತರು ದೇವಾಲಯಕ್ಕೆ ಹೋಗಿ ತಮ್ಮ ಪೂಜಾ ಸಾಮಗ್ರಿಗಳನ್ನು ದೇವತೆಗೆ ಅರ್ಪಿಸುತ್ತಾರೆ. ದೇವತೆಯ ಪೂಜೆ ಮುಗಿದ ಲನಂತರ ಪೂಜಾರಿಯು ಕೊಂಡಿಯನ್ನು ಕಳಚುವುದರಿಂದ ಬಾಯಿಬೀಗ ತೆಗೆಯುತ್ತಾನೆ. ಈ ಪವಿತ್ರವಾದ ಬಾಯಿಬೀಗ ಹಾಕುವ ಹಾಗೂ ತೆಗೆಯುವ ಸೇವೆಗೆ ಪೂಜಾರಿಯು ಐವತ್ತು ಪೈಸೆ ದಕ್ಷಿಣೆ ಪಡೆಯುತ್ತಾನೆ. ಈ ಬೀಗಗಳನ್ನು ಒದಗಿಸುವವನು ಪೂಜಾರಿಯೇ. ಅವು ಅವನ ಹತ್ತಿರ ಖಾಯಂ ಆಗಿ ಇದ್ದು ಪ್ರತಿವರ್ಷ ಅವುಗಳನ್ನು ಬಳಸುತ್ತಾನೆ.

### (ಕ) ಮಡಿ ಹುಯ್ಯುವುದು :

ಮಡಿ ಹುಯ್ಯುವುದು ಇಲ್ಲವೆ ವಿಧಿವಿಹಿತ ಅಡಿಗೆ ಮಾಡುವುದು ವಾರ್ಷಿಕ ಉತ್ಸವದ

ಮಹತ್ವದ ಅಂಗವಾಗಿದೆ. ನರೆಯ ಹಳ್ಳಿಗಳ, ಚಾಮುಂಡಿ ಬೆಟ್ಟದ, ಉತ್ತನಹಳ್ಳಿ ಗ್ರಾಮಗಳನ್ನೊಳಗೊಂಡ ಬ್ರಾಹ್ಮಣೇತರ ಭಕ್ತರು ಹೆಚ್ಚಾಗಿ ಈ ಕ್ರಿಯಾವಿಧಿ ಗಳನ್ನು ಆಚರಿಸುತ್ತಾರೆ. ಬ್ರಾಹ್ಮಣೇತರರಲ್ಲಿಯೂ ಸಾಮಾನ್ಯವಾಗಿ ಶಿವಾರ್ಚಕ ಹಾಗೂ ಲಿಂಗಾಯಿತರು ಈ ಕ್ರಿಯಾವಿಧಿಯನ್ನು ಆಚರಿಸುವುದಿಲ್ಲ. ಕಣ್ಣಕನ್ನಡಿ ಉತ್ಸವದ ಮರುದಿನ ಬೆಳಿಗ್ಗೆ ವಿಧಿವಿಹಿತ ಅಡಿಗೆ ಮಾಡುವ ಕ್ರಿಯಾವಿಧಿ ಕೆಳಗೆ ಹೇಳಿದಂತೆ ನಡೆಯುವುವು. ದೇವಾಲಯದ ಹೊರಭಾಗದ ಪ್ರಶಸ್ತವಾದ ದಿಣ್ಣೆಯ ಮೇಲೆ ಒಲೆಗಳನ್ನು ಸಾಲುಸಾಲಾಗಿ ಅಗೆಯುತ್ತಾರೆ. ಸಾಮಾನ್ಯವಾಗಿ ಒಂದು ಗ್ರಾಮದ ಪ್ರತಿಯೊಂದು ಜಾತಿಗೆ ಪ್ರತ್ಯೇಕ ಸಾಲುಗಳನ್ನು ತೋಡುವುದು ಕಂಡುಬಂದಿತು. ಅಂತಹ ಸಾಲುಗಳು ಸಾಕಷ್ಟು ಇರುತ್ತವೆ. ಮಹಿಳಾ ಭಕ್ತರು ಅಡಿಗೆ ಮಾಡಬೇಕಾಗುವುದು. ಅಡಿಗೆಯೆಂದರೆ ಹೆಸರು ಬೇಳೆಯೊಂದಿಗೆ ಬೇಯಿಸಿದ ಅಕ್ಕಿ. ಸಾಮಾನ್ಯವಾಗಿ ಎಲ್ಲರೂ ಈ ಸಂದರ್ಭದಲ್ಲಿ ಐದು ಸೇರು ಅಕ್ಕಿಯನ್ನು ಬೇಯಿಸುತ್ತಾರೆಂದು ಹೇಳುತ್ತಾರೆ. ಈ ಕಾರ್ಯ ಮಾಡುವ ಮಹಿಳೆಯರು ಶುಚಿ ರ್ಭೂತರಾಗಿರಬೇಕು. ಅಂದರೆ ಸ್ನಾನ, ಮಡಿ, ಮಡಿ ಬಟ್ಟೆ ಧರಿಸಬೇಕು. ಆ ದಿನ ಗ್ರಾಮಗಳಲ್ಲಿ ಮನೆಗಳನ್ನು ಸಾರಿಸಿ ಸುಣ್ಣ ಬಳೆಯುತ್ತಾರೆ. ಹಳೆಯ ಮಣ್ಣಿನ ಪಾತ್ರೆಗಳನ್ನು ಎಸೆಯುತ್ತಾರೆ. ಮೇಲೆ ಹೇಳಿದ ಕರ್ಮ ಪದ್ಧತಿಯಂತೆ ಪವಿತ್ರರಾಗುವಲ್ಲಿ ಏನಾದರೂ ತಪ್ಪಾದರೆ ಒಲೆಯ ಮೇಲಿಟ್ಟ ಅಕ್ಕಿಯು ಸರಿಯಾಗಿ ಕುದಿಯಲಾರದೆಂಬ ನಂಬಿಕೆಯಿದೆ. ಮಹಿಳೆಯರು ಅಡಿಗೆ ಮಾಡುವಲ್ಲಿ ತೊಡಗಿದಾಗ ಪುರುಷರು ಉತ್ತನಹಳ್ಳಿಯಮ್ಮನ ದೇವಾಲಯಕ್ಕೆ ಪೂಜಾ ಸಾಮಗ್ರಿಗಳೊಂದಿಗೆ ಹೋಗಿ ಪೂಜೆ ಪೂರೈಸಿ ದೇವಿಯ ತೀರ್ಥಪ್ರಸಾದಗಳೊಂದಿಗೆ ಮರಳಿ ಬರುತ್ತಾರೆ. ಅಡಿಗೆಯು ಸಿದ್ಧವಾದೊಡನೆ ಅದಕ್ಕೆ ತೀರ್ಥವನ್ನು ಪ್ರೋಕ್ಷಿಸುತ್ತಾರೆ. ಈ ಕ್ರಿಯಾವಿಧಿಗೆ ಮಡಿಹುಯ್ಯುವುದು ಅಥವಾ ವಿಧಿವಹಿತ ಅಡಿಗೆ ಮಾಡುವುದು ಎಂಬ ಹೆಸರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಾಂಸಾಹಾರಿ ಆಹಾರವನ್ನು ಅಲ್ಲಿ ಬೇಯಿಸುವುದಿಲ್ಲ. ಮಡಿಹೊಯ್ಯುವ ಕ್ರಿಯಾವಿಧಿ ಪೂರೈಸಿದ ನಂತರ ಮಹಿಳಾಭಕ್ತರು ಆಹಾರದೊಡಗೂಡಿದ ಪಾತ್ರೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ತಮ್ಮ ಗ್ರಾಮಗಳಿಗೆ ವಿದ್ಯುಕ್ತವಾಗಿ ಹಿಂದಿರುಗುತ್ತಾರೆ. ನಂತರ ತಮ್ಮ ಮನೆಗಳಲ್ಲಿ ಉತ್ತನಹಳ್ಳಿಯಮ್ಮನ ಹೆಸರಿನಲ್ಲಿ ಪಶುಬಲಿ ಕೊಡುತ್ತಾರೆಂದು ಹೇಳಲಾಗುತ್ತದೆ. ಬಲಿಪಶುವಿನ ಮಾಂಸವನ್ನು ಬೇಯಿಸಿದ ನಂತರ ಎಲ್ಲರೂ ಊಟ ಮಾಡುವುದು.

ನಾವು ಈಗಾಗಲೇ ಹೇಳಿದಂತೆ ಚಾಮುಂಡಿ ಬೆಟ್ಟ ಗ್ರಾಮದ ಕೀಳುಜಾತಿ ಯವರಿಗೆ ವಿಶೇಷತಃ ರಾಜಪರಿವಾರದವರಿಗೆ ಉತ್ತನಹಳ್ಳಿಯಮ್ಮನ ಉತ್ಸವವು ಮಹತ್ವದ್ದು. ಉತ್ತನಹಳ್ಳಿಯಮ್ಮನ ದೇವಾಲಯದ ಸಮೀಪದಲ್ಲಿರುವ ದಿನ್ನೆಯ ಮೇಲೆ ವಿದ್ಯುಕ್ತವಾಗಿ ಅಡಿಗೆ ಮಾಡದೆ ಬೆಟ್ಟದ ಗ್ರಾಮದಲ್ಲಿ ಅಡಿಗೆ ಮಾಡುವ ಪದ್ಧತಿಯೊಂದನ್ನು ಹೊರತುಪಡಿಸಿ ಈ ಕ್ರಿಯಾವಿಧಿಯ ಉಳಿದೆಲ್ಲ ವಿವರಗಳೊಂದಿಗೆ ನೆರವೇರಿಸಲಾಗುತ್ತದೆ. ವಾಸ್ತವಿಕವಾಗಿ ಜನರು ವೈಭವ ಹಾಗೂ ಔಚಿತ್ಯಪೂರ್ಣವಾಗಿ ಆಚರಿಸುವ ಹಬ್ಬವೆಂದರೆ ಇದೊಂದೇ. ಈ ಉತ್ಸವದಲ್ಲಿ ಬಟ್ಟೆ, ಆಹಾರ ಹಾಗೂ ಪಶುಬಲಿಗಳಿಗಾಗಿ ದೊಡ್ಡ ಮೊತ್ತದಲ್ಲಿ ಹಣ ಖರ್ಚು ಮಾಡುತ್ತಾರೆ.



# 'ಬ' ಅನುಬಂಧ:

## ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ಉತ್ಸವದ ಆಚರಣೆ :

ಮೈಸೂರು ನಗರದ ಎರಡು ಮೊಹಲ್ಲಾಗಳಲ್ಲಿ ಆಚರಿಸುವ ಚಾಮುಂಡೇಶ್ವರಿ ಉತ್ಸವವನ್ನು ಇಲ್ಲಿ ವರ್ಣಿಸಿದ್ದೇವೆ. ಒಂದು ಮೊಹಲ್ಲಾದಲ್ಲಿ ಒಂದೇ ಜಾತಿಯವರಿದ್ದು ಇನ್ನೊಂದರಲ್ಲಿ ವಿವಿಧ ಜಾತಿಯ ಜನರಿದ್ದಾರೆ. ಇವೆರಡೂ ಉದಾಹರಣೆಗಳು ಚಾಮುಂಡೇಶ್ವರಿಯ ಗೌರವಾರ್ಥವಾಗಿ ನಡೆಯುವ ವಾರ್ಷಿಕ ಕ್ರಿಯಾಚರಣೆ ಗಳು ವಿವಿಧ ಮೊಹಲ್ಲಾದಲ್ಲಿ ಯಾವ ರೀತಿ ಆಚರಿಸಲ್ಪಡುತ್ತವೆ ಎಂಬುದನ್ನು ವಿವರಿಸುತ್ತವೆ.

## ದೇವರಾಜ ಮೊಹಲ್ಲಾ :

ದೇವರಾಜ ಮೊಹಲ್ಲಾದಲ್ಲಿ ಮಹಾಕಾಳಿ ಕ್ಷೇತ್ರ ಇದೆ. ದೇವಾಲಯದ ಬೇಡರ ಜಾತಿಯ ಪೂಜಾರಿಯು ತನ್ನ ಪ್ರದೇಶದಲ್ಲಿ ಪ್ರತಿವರ್ಷ ಚಾಮುಂಡೇಶ್ವರಿ ಉತ್ಸವವನ್ನು ಆಚರಿಸುತ್ತಾನೆ. ಈ ಪ್ರದೇಶವು ಐದು ಓಣಿಗಳನ್ನೊಳಗೊಂಡಿದ್ದು, ನಿಶ್ಚಿತವಾದ ಮೇರೆಯನ್ನು ಹೊಂದಿದೆ. ಉತ್ಸವದ ಕಾಲಕ್ಕೆ ಪ್ರದೇಶದ ಜನರು ಪರಸ್ಪರ ಸಹಕಾರ ತೋರಿಸುತ್ತಾರೆ. ಗಮನಾರ್ಹವಾದ ಅಂಶವೆಂದರೆ ನೆರೆಹೊರೆಯ ಓಣಿಗಳ ಜನರು (ನಿಶ್ಚಿತವಾದ ಮೇರೆಯಿಂದ ಬೇರೆಯವರೆಂದು ಗುರುತಿಸಲ್ಪಟ್ಟವರು) ಈ ಕ್ರಿಯಾವಿಧಿಯಲ್ಲಿ ಭಾಗವಹಿಸುವುದಿಲ್ಲ.

ಮಹಾಕಾಳಿ ಪ್ರದೇಶದ ಜಾತಿ ಸಂಯೋಜನೆಯನ್ನು ನಾವು ವೈವಿಧ್ಯಮಯ ವೆಂದು ಕರೆಯಬಹುದು. ದೇವಸ್ಥಾನದ ಪೂಜಾರಿಯು ಪೂಜೆಯನ್ನು ಸಂಘಟಿಸುವಲ್ಲಿ ಮುಂದಾದರೂ, ಆ ಪ್ರದೇಶದ ಜನ ಅವನಿಗೆ ಸಹಾಯ ಮಾಡುತ್ತಾರೆ. ಅಲ್ಲಿಯ ಪ್ರತಿಯೊಂದು ಮನೆಯಿಂದ ದೇಣಿಗೆಗಳನ್ನು ಸಂಗ್ರಹಿಸ ಲಾಗುವುದಿಲ್ಲ. ಉತ್ಸವ ಆಚರಣೆಯ ದಿನಾಂಕ ನಿಶ್ಚಿತವಾಗಿರದಿದ್ದರೂ, ಸಾಮಾನ್ಯವಾಗಿ ಫೆಬ್ರವರಿ ತಿಂಗಳ ಯಾವುದೇ ಮಂಗಳವಾರ ಆಚರಿಸಲಾಗುವುದು.

ಖಚಿತಪಡಿಸಿದ ಮಂಗಳವಾರ ಮಹಾಕಾಳಿ ಕ್ಷೇತ್ರದ ಬಳಿ ಬೃಹತ್ ಮಂಟಪವನ್ನು ಕಟ್ಟಲಾಗುವುದು. ಸಾಯಂಕಾಲ ಅಸ್ಪೃಶ್ಯ ವಾದ್ಯಗಾರರು, ಬ್ಯಾಂಡ್‌ಸೆಟ್, ದೀಪ ಗಳೊಂದಿಗೆ ದೊಡ್ಡಕೆರೆಗೆ ಹೋಗುವರು. ಕಲಶವನ್ನು ಪ್ರತಿಷ್ಠಾಪಿಸುವ ಕ್ರಿಯಾವಿಧಿ ಪೌರೋಹಿತ್ಯ ವಹಿಸಲು ಒಬ್ಬ ಸ್ಮಾರ್ತ ಬ್ರಾಹ್ಮಣನನ್ನು ಆಮಂತ್ರಿಸುತ್ತಾರೆ. ಅವನು ದೊಡ್ಡಕೆರೆ ಸಮೀಪದ ಬಾವಿಯಿಂದ ನೀರನ್ನು ತಂದು ಎರಡು ಕಲಶಗಳನ್ನು ನಿರ್ಮಿಸುತ್ತಾನೆ. ಒಂದು ಚಾಮುಂಡೇಶ್ವರಿಗಾಗಿ, ಇನ್ನೊಂದು ಮಹಾಕಾಳಿಗಾಗಿ. ಲೋಹದ ಪಾತ್ರೆಗಳನ್ನೆ ಕಲಶದಂತೆ ಉಪಯೋಗಿಸುವುದುಂಟು. ಬ್ರಾಹ್ಮಣ ಪುರೋಹಿತನು ಕಲಶಗಳಲ್ಲಿ ನೀರು ತುಂಬಿ, ಅಡಿಕೆ ಹೂಗಳನ್ನಿಟ್ಟು, ಕುಂಕುಮ ಹಚ್ಚಿ, ಗಂಧ ಲೇಪಿಸಿ, ಕಲಶಗಳನ್ನು ಪವಿತ್ರಗೊಳಿಸಿ ಪ್ರತಿಷ್ಠಾಪಿಸುವನು. ಇದಲ್ಲದೆ ತೆಂಗಿನ ಕಾಯಿ ಹಾಗೂ

ವೀಳ್ಯದೆಲೆಗಳನ್ನು ಇಡಲಾಗುವುದು. ಋತುಮತಿಯಾಗದಿರುವ, ಅವಿವಾಹಿತ ಹುಡುಗಿಯರು ಮಹಾಕಾಳಿ ಪ್ರದೇಶವನ್ನು ಪ್ರವೇಶಿಸಿದೊಡನೆ ಒಂದು ಹೋತವನ್ನು ಬಲಿ ಕೊಡಲಾಗುತ್ತದೆ. 'ಧೂಳುಮರಿ' ಎಂದು ಇದಕ್ಕೆ ವಾಡಿಕೆಯ ಹೆಸರು. ನಂತರ ಹಂದರದಲ್ಲಿ ಕಲಶವನ್ನು ಪ್ರತಿಷ್ಠಾಪಿಸುವರು. ಭಕ್ತರು ಪೂಜಾ ಸಾಮಾಗ್ರಿಗಳನ್ನು ಹಾಗೂ ತಂಬಿಟ್ಟನ್ನು ಕಲಶ ದೇವತೆಗೆ ಅರ್ಪಿಸುವರು. ಬ್ರಾಹ್ಮಣ ಪುರೋಹಿತನು ಕಲಶಗಳನ್ನು ಮಂಟಪದಲ್ಲಿ ಪ್ರತಿಷ್ಠಾಪಿಸಿದೊಡನೆ ಹೊರಟು ಹೋಗುತ್ತಾನೆ. ಆದ್ದರಿಂದ ಬೇಡರ ಜಾತಿಯ ಮಹಾಕಾಳಿ ಅರ್ಚಕನು ಆ ಸಮಯದಲ್ಲಿ ಪುರೋಹಿತನಾಗಿ ಕಾರ್ಯ ನಿರ್ವಹಿಸುತ್ತಾನೆ. ಪೂಜಾ ಸಾಮಗ್ರಿ ಗಳನ್ನು ಹಾಗೂ ತಂಬಿಟ್ಟನ್ನು ಪೂಜಾರಿಯು ನಿವೇದಿಸಿದ ನಂತರ ಭಕ್ತರಿಗೆ ಪ್ರಸಾದ ವೆಂದು ಹಿಂದಿರುಗಿಸುವನು.

ರಾತ್ರಿ 9.30 ಸುಮಾರಿಗೆ ಕಲಶ ದೇವತೆಗಳನ್ನು ಆ ಕ್ಷೇತ್ರದಲ್ಲಿಯೇ ಮೆರವಣಿಗೆ ಗಾಗಿ ಕೊಂಡೊಯ್ಯುತ್ತಾರೆ. ರಾತ್ರಿ ಒಂದು ಗಂಟೆ ಸುಮಾರಿಗೆ ಮೆರವಣಿಗೆಯು ಹಂದರಕ್ಕೆ ಮರಳಿ ಬರುವುದು. ಆ ಸಮಯದಲ್ಲಿ ಪಶುಬಲಿ ನಡೆಯುತ್ತದೆ. ಬಲಿಪಶುವಿನ ಮಾಂಸವನ್ನು ವಂತಿಗೆದಾರರಿಗೆ ಪ್ರಸಾದವೆಂದು ಹಂಚಲಾಗುವುದು. ಈ ಪ್ರದೇಶದಲ್ಲಿ ಕಲಶ ದೇವತೆಗಳನ್ನು ಬುಧವಾರ ಹಾಗೂ ಗುರುವಾರ, ಎರಡು ದಿನಗಳವರೆಗೆ ಮಂಟಪದಲ್ಲಿಯೇ ಇಡಲಾಗುವುದು, ಆಗ ಅಲ್ಲಿಯ ಭಕ್ತರು ಪೂಜಾ ಸಾಮಾಗ್ರಿಗಳನ್ನು ದೇವತೆಗೆ ಅರ್ಪಿಸುವುದುಂಟು. ಅದೇ ಅರ್ಚಕನು ಬುಧವಾರ ಹಾಗೂ ಗುರುವಾರದಂದು ಪೌರೋಹಿತ್ಯ ವಹಿಸುವನು. ಗುರುವಾರ ಸಾಯಂಕಾಲ ದಂದು ವಿಸರ್ಜನ ಕ್ರಿಯಾವಿಧಿ ನಡೆಯುತ್ತದೆ. ಭಕ್ತರ ಸಹಾಯದಿಂದ ಪೂಜಾರಿಯು ಕಲಶ ದೇವತೆಗಳನ್ನು ಸಮೀಪದ ಬಾವಿಗೆ ಕೊಂಡೊಯ್ಯುತ್ತಾನೆ. ಕಲಶದಲ್ಲಿದ್ದ ಹೂ, ಅಡಿಕೆ ಹೂವು, ವೀಳ್ಯದೆಲೆ ಮುಂತಾದವುಗಳನ್ನು ವಿಧಿಯುಕ್ತವಾಗಿ ನೀರಿನಲ್ಲಿ ವಿಸರ್ಜಿಸುತ್ತಾರೆ. ಇದು ಉತ್ಸವದ ಕೊನೆ ಹಂತ.

**ಗಾಂಧಿನಗರ :**

ಮೈಸೂರು ನಗರದ ಗಾಂಧಿನಗರ ಬಡಾವಣೆಯಲ್ಲಿ ಆದಿಜಾಂಬವ (ಕನ್ನಡ ಮಾದಿಗ) ಹಾಗೂ ಆದಿಕರ್ನಾಟಕ (ಹೊಲೆಯ) ರೆಂಬ ಅಸ್ಪೃಶ್ಯ ಜಾತಿಯವರೇ ಹೆಚ್ಚಾಗಿದ್ದಾರೆ. ಎರಡೂ ಜಾತಿಯ ಜನರು ಸ್ವಪಂಗಡಗಳಲ್ಲಿ ಸೌಹಾರ್ದತೆಯಿಂದ ಇದ್ದಾರೆ. ಆದಿಜಾಂಬವ ಜಾತಿಯವರು ಆಚರಿಸುವ ಚಾಮುಂಡೇಶ್ವರಿ ಉತ್ಸವ ವನ್ನಷ್ಟೇ ಇಲ್ಲಿ ವರ್ಣಿಸಲಾಗಿದೆ.

ಆದಿಜಾಂಬವರಿರುವ ಪ್ರದೇಶವು ನಿರ್ದಿಷ್ಟಮೇರೆಯುಳ್ಳದ್ದಾಗಿದೆ. ಇಲ್ಲಿ ಚಾಮುಂಡೇಶ್ವರಿ ದೇವತೆಯ ಕ್ಷೇತ್ರವೊಂದಿದೆ. ಇಲ್ಲಿಯೂ ಕೂಡ ಉತ್ಸವದ ದಿನವನ್ನು ನಿಶ್ಚಿತಪಡಿಸಿರುವುದಿಲ್ಲ. ಆದರೆ ಸಾಮಾನ್ಯವಾಗಿ ಚಾಮುಂಡೇಶ್ವರಿಯ ಉತ್ಸವವು ಫೆಬ್ರುವರಿ ತಿಂಗಳಲ್ಲಿ ಬರುತ್ತದೆ. ಮಂಗಳವಾರವೇ ಉತ್ಸವವನ್ನು ಆಚರಿಸಲಾಗುತ್ತದೆ. ಆ ಪ್ರದೇಶದಲ್ಲಿರುವ ಚಾಮುಂಡಿ ಕ್ಷೇತ್ರದ ಅರ್ಚಕನು ಹಾಗೂ ಪೂಜೆಯನ್ನು ಸಂಘಟಿಸುವ ವಯೋವೃದ್ಧ ಸದಸ್ಯರು ಸ್ವಜಾತಿಯವರಿಂದ ವಂತಿಗೆಗಳನ್ನು ಪಡೆಯುತ್ತಾರೆ.



ಖಚಿತಪಡಿಸಿದ ದಿನ ಅಲ್ಲಿಯ ಜನರು ಕಾರಂಜಿ ಕೆರೆಗೆ ಹೋಗುತ್ತಾರೆ. ಕಲಶವನ್ನು ಪ್ರತಿಷ್ಠಾಪಿಸುವ ವಿಶೇಷ ಕ್ರಿಯಾವಿಧಿ ಪೂರೈಸುವುದರ ಸಲುವಾಗಿ ಬ್ರಾಹ್ಮಣನನ್ನು ಆಮಂತ್ರಿಸಲಾಗುವುದು. ಬ್ರಾಹ್ಮಣ ಪುರೋಹಿತನು ಕಲಶವನ್ನು ವಿಧಿಯುಕ್ತವಾಗಿ ಪ್ರತಿಷ್ಠಾಪಿಸುವನು. ಈ ಕಲಶದಲ್ಲಿಡುವ ವಸ್ತುಗಳು ದೇವರಾಜ ಮೊಹಲ್ಲಾದಲ್ಲಿ ಇಡುವ ವಸ್ತುಗಳು ಒಂದೇ ಆಗಿವೆ. ಚಾಮುಂಡೇಶ್ವರಿಯ ಕಲಶವನ್ನು ಪ್ರತಿಷ್ಠಾಪಿಸಿದ ನಂತರ ಬ್ರಾಹ್ಮಣ ಪುರೋಹಿತನು ಹೊರಟು ಹೋಗುವನು. ಗಾಂಧಿನಗರದಲ್ಲಿ ಕಲಶವು ಮಣ್ಣಿನ ಪಾತ್ರೆಯದಾಗಿರುತ್ತದೆ. ಉಳಿದ ಮೊಹಲ್ಲಾಗಳಲ್ಲಿ ಸಾಮಾನ್ಯವಾಗಿ ಲೋಹದ ಪಾತ್ರೆಗಳನ್ನು ಉದ್ದೇಶಕ್ಕಾಗಿ ಬಳಸುವುದುಂಟು. ಚಾಮುಂಡಿ ಕ್ಷೇತ್ರದ ಲಾಂಛನವುಳ್ಳ ಹಳೆಯ ಚರ್ಮದ ಪತಾಕೆಯನ್ನು ತ್ಯಜಿಸಿ, ಅದರ ಬದಲು ಜನರು ಕಾಣಿಕೆಯಾಗಿ ಕೊಟ್ಟ ಹೊಸ ಪತಾಕೆಯನ್ನು ಹಾರಿಸುತ್ತಾರೆ. ಕಲಶವನ್ನು ಋತುಮತಿಯಾಗದ ಅವಿವಾಹಿತ ಹುಡುಗಿಯು ಒಯ್ಯುವಳು. ಕಲಶದ ಜೊತೆ ಮಂಗಳವಾದ್ಯ, ಬ್ಯಾಂಡ್‌ಸೆಟ್, ದೀಪ ಮುಂತಾದವುಗಳಿರುವುವು. ಗಾಂಧಿನಗರ ಸೀಮೆಯನ್ನು ಪ್ರವೇಶಿಸಿದ ತಕ್ಷಣ ಒಂದು ಹೋತವನ್ನು ಬಲಿ ಕೊಡುತ್ತಾರೆ. ಇದಕ್ಕೆ 'ಧೂಳುಮರಿ' ಎಂದು ಹೆಸರು. ಚಾಮುಂಡಿ ಕ್ಷೇತ್ರದ ಎದುರು ನಿರ್ಮಿಸಿದ ಮಂಟಪದಲ್ಲಿ ಕಲಶ ದೇವತೆಯನ್ನು ಮೆರವಣಿಗೆಯ ನಂತರ ತಂದು ಪ್ರತಿಷ್ಠಾಪಿಸುತ್ತಾರೆ. ಆ ಕ್ಷೇತ್ರದ ಅನುವಂಶಿಕ ಪೂಜಾರಿಯು ಕ್ರಿಯಾವಿಧಿ ನೆರವೇರಿಸಲು ಪೌರೋಹಿತ್ಯ ವಹಿಸುತ್ತಾನೆ. ಭಕ್ತರು ಕಲಶ ದೇವತೆಗೆ ಪೂಜಾ ಸಾಮಾಗ್ರಿ ಹಾಗೂ ತಂಬಿಟ್ಟನ್ನು ಅರ್ಪಿಸುತ್ತಾರೆ. ಪೂಜಾರಿ ನಿವೇದಿಸಿ ಭಕ್ತರಿಗೆ ಪ್ರಸಾದವೆಂದು ಅವುಗಳನ್ನು ಹಿಂದಿರುಗಿಸುತ್ತಾನೆ. ಮಧ್ಯರಾತ್ರಿಯ ಸಮಯದಲ್ಲಿ ಕಲಶ ದೇವತೆಗೆ ಪಶುಬಲಿ ಕೊಡುತ್ತಾನೆ. ಇಲ್ಲಿ ಬಲಿಪಶುವಿನ ರಕ್ತ–ಮಾಂಸ–ಕರುಳು ಮುಂತಾದವುಗಳನ್ನು ಅನ್ನದಲ್ಲಿ ಬೆರೆಸಿ ಆ ಪ್ರದೇಶದ ಮಹತ್ವದ ದಿಕ್ಕುಗಳಿಗೆ ಅದನ್ನು ಎಸೆಯುತ್ತಾರೆ. ಈ ಕ್ರಿಯಾವಿಧಿಯನ್ನು ಮುಖ್ಯತಃ ಅಲ್ಲಿಯ ಜನರಿಗೆ ಕಿರುಕುಳ ಕೊಡುವ ವಿವಿಧ ಭೂತ ಪಿಶಾಚಿಗಳನ್ನು ತೃಪ್ತಿಗೊಳಿಸಲು ಆಚರಿಸುತ್ತಾರೆ. ಬಲಿಪಶುವಿನ ಮಾಂಸವನ್ನು ವಂತಿಗೆದಾರರಿಗೆ ಹಂಚಲಾಗುತ್ತದೆ.

ಕುಲದೇವತೆಯನ್ನು ಮೂರು ಮಂಗಳವಾರದವರೆಗೆ ಮಂಟಪದಲ್ಲಿಡುತ್ತಾರೆ. ಆ ದಿವಸ ಅಲ್ಲಿಯ ಜನರು 'ಚಿಕ್ಕಪೂಜೆ' ಎಂಬ ಕ್ರಿಯಾವಿಧಿಯನ್ನು ಆಚರಿಸುತ್ತಾರೆ. ಚಿಕ್ಕಪೂಜೆಯಂತಹ ವಿಶೇಷ ಸಮಾರಂಭವನ್ನು ಈ ಪ್ರದೇಶದಲ್ಲಿ ಮಾತ್ರ ಆಚರಿಸುತ್ತಾರೆ. ಇನ್ನುಳಿದ ಮೊಹಲ್ಲಾಗಳಲ್ಲಿ ಇದನ್ನು ಆಚರಿಸುವುದಿಲ್ಲ. ಆ ದಿನದಂದು ಎಷ್ಟೋ ಕುಟುಂಬಗಳು ಮೊಸರು, ಅನ್ನ, ಹೆಂಡ, ಮುಂತಾದವುಗಳನ್ನು ದೇವತೆಗೆ ಅರ್ಪಿಸುತ್ತಾರೆ. ಪೂಜಾರಿಯು ಇವುಗಳನ್ನು ನಿವೇದಿಸಿ ಪ್ರಸಾದವೆಂದು ಭಕ್ತರಿಗೆ ಹಿಂತಿರುಗಿಸುತ್ತಾನೆ. ಚಿಕ್ಕಪೂಜೆಯ ನಂತರ ವಿಸರ್ಜನಾ ಸಮಾರಂಭ ನೆರವೇರುತ್ತದೆ. ಕಲಶವನ್ನು ಕ್ಷೇತ್ರದ ಸಮೀಪದಲ್ಲಿರುವ ಬೇವಿನಮರದಡಿಯಲ್ಲಿ ವಿಧಿಯುಕ್ತವಾಗಿ ವಿಸರ್ಜಿಸುತ್ತಾರೆ. ಈ ಆಚರಣೆಯೊಂದಿಗೆ ಗಾಂಧಿನಗರದ ವಾರ್ಷಿಕ ಉತ್ಸವವು ಮುಕ್ತಾಯಗೊಳ್ಳುತ್ತದೆ.

**REFERENCES:**


| | | |
|---|---|---|
| BANARJEE/BHAVANI(MRS) | 1966 | Marriage and Kinship of the Gangadikara Vokkaliga of Mysore, Deccan College Post-Graduate and Research Institute, Poona |
| COUSIN, JAMES, H. | 1926 | Dasara in Mysore |
| GOSWAMI, B.B. AND MORAB, S.C. | 1868 | A note on the occupational changes in a Priestly Caste of Mysore, (Unpublished) |
| HASTINGS, JAMES (ED) | 1960 | Encycolpaeia of Religion and Etics. Vol. V. Fourth Impression Edinburgh. |
| KRISHNA SWAMI, K.R. (ED) | 1965 | Old Bandalu Bettakke, (In) Janapada Prema Geetegalu (Kannada) Janapada Sahitya Academy, Mysore, Third Edition. |
| NANJUNDAYYA, H.V. and L.K.A. IYER | 1928 | The Mysore Tribes and Castes. The Mysore University, Mysore Vol.II |
| | 1931 | The Mysore Tribes and Castes. The Mysore University, Mysore Vol.IV |
| REDFIELD, R | 1961 | The Presant Society and Culture The University of Chicago Press Second Impression, Paper Back Edition. |
| RICE, B.L. | 1897 | Mysore District Gazetteer Vol. II |
| SHANKARARAYANAN, P. | 1953 | Mother Worship or Sakti Puja the philosophy, Vedanta kesari, Madras |
| SINGER, M. | 1965 | The Cultural pattern of Indian Civilization. The Far Estern Quartely. Vol. XV, No. 1. |
| SINHA, S. | 1967 | Introducing the Seminar, (In) Seminar on Research Programme in Cultural Anthropology and Allied Disciplines. Anthropological Survey of India |
| VIDYARGHI, L.P. | 1961 | The Sacred Complex of Hindu Gaya, Bombay. |
| | 1934 | The Mysore Muzrai Manual, Revised Edition, Bangalore. |